ಭಾನುವಾರ, ಮೇ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 136 | ಪುಟ 12 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕೊರೊನೋತ್ತರ ಶಕೆಯ
ಅಳುವ ಕಡಲೊಳು
ತೇಲಿಬಂದ ನಗೆಯ
ಹಾಯಿದೋಣಿ



ಕೋವಿಡ್: 6 ಲಕ್ಷ ದಾಟಿದ ಸಕ್ರಿಯ ಪ್ರಕರಣ 5
ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞರೂ ಇಲ್ಲ, ತಂತ್ರಜ್ಞರೂ ಇಲ್ಲ
26ರಂದು ರೈತರಿಂದ ಕರಾಳ ದಿನ 7
ಬಳಕೆಯಾಗದ 25 ವೆಂಟಿಲೇಟರ್! 5

ಕಳೆದ ವರ್ಷದ ಲಾಕ್‌ಡೌನ್ ಕಲಿಸಿದ ಪಾಠದಿಂದ ಹೊಸ ದಾರಿಗಳ ಅನ್ವೇಷಣೆ

ಕೋವಿಡ್ ನಡುವೆ ರೈತರ ಯಶೋಗಾಥೆ

• ವಿಶಾಖ ಎನ್.

ದಾವಣಗೆರೆ: ಕೋವಿಡ್ ನೆರಳಲ್ಲಿ 'ಭೂಮಿಪುತ್ರ'ರ ಅಳಲಿನ ಕಡಲಿನಲ್ಲಿ ನಗೆಯ ಹಾಯಿದೋಣಿಗಳೂ ಕಾಣುತ್ತಿವೆ.

ಕಳೆದ ವರ್ಷ ಸಂಪೂರ್ಣ ಲಾಕ್‌ಡೌನ್ ಆದಾಗ ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ದಾಳಿಂಬೆ ತರಹದ ಹಣ್ಣುಗಳ ಫಸಲು ತುಂಬಾ ಚೆನ್ನಾಗಿತ್ತು. ರಫ್ತಾಗುವ ಬಣ್ಣದ ಕ್ಯಾಪ್ಸಿಕಂನಿಂದ ಹಿಡಿದು ಬ್ರೊಕೋಲಿ, ಲೆಟ್ಯೂಸ್ ಮೊದಲಾವುಗಳೂ ಕಣ್ಣುಕೋರೈಸುವಂತಿದ್ದವು. ಮಾರುಕಟ್ಟೆ ಪೂರ್ಣ ಬಂದ್ ಆದದ್ದೇ ರೈತರು ಹತಾಶರಾಗಿದ್ದರು. ಬೆಳೆಯನ್ನೆಲ್ಲ ಬೀದಿಗೆ ಸುರಿದು ಪ್ರತಿಭಟಿಸಿದರು. ಈಗ ಟೊಮೆಟೊ ಹಾಗೂ ಹೂ ಬೆಳೆಗಾರರ ಸ್ಥಿತಿ ಹಲವೆಡೆ ಹೀಗೆಯೇ ಇದೆ. ಉಳಿದಂತೆ ಕಳೆದ ಸಲದಷ್ಟು ಆರ್ತನಾದ ಕೇಳಿಬರುತ್ತಿಲ್ಲ.

ಹೋದ ವರ್ಷ ಆಯಾ ಜಿಲ್ಲಾಡಳಿತಗಳು ಎಚ್ಚೆತ್ತುಕೊಂಡು, ಸ್ಥಳೀಯ ರೈತ ಉತ್ಪಾದಕ ಕಂಪನಿ(ಎಫ್‌ಪಿಒ)ಗಳನ್ನು ಬಳಸಿಕೊಂಡು, ಎಲ್ಲ ರೈತರಿಂದ ಫಸಲು ಖರೀದಿಸಿ, ಗ್ರಾಹಕರ ಮನೆ ಮನೆಗಳಿಗೆ ತಲುಪಿಸುವ ಕೆಲಸ ಮಾಡಿದವು. ಅಲ್ಲೇ ಬೆಳೆದ ಹಣ್ಣು–ತರಕಾರಿ ಆ ಜಿಲ್ಲೆ ಬಿಟ್ಟು ಆಚೆಗೆ ಹೋಗದಂತೆ ಕಡಿವಾಣ ಹಾಕಿದ ಪ್ರಯೋಗ ಕೊಪ್ಪಳದಲ್ಲಿ ಯಶಸ್ವಿಯಾಗಿತ್ತು. ಕೊಡಗು, ಮೈಸೂರಿನ ಕೆಲವು ಭಾಗಗಳಲ್ಲೂ ಈ ಮಾರುಕಟ್ಟೆ ವಿಧಾನಗಳನ್ನು ಅಳವಡಿಕೊಂಡು ಗೆದ್ದ ಕಥನಗಳು ವರದಿಯಾದವು. ಮುಳಬಾಗಿಲು ತಾಲ್ಲೂಕು ಗ್ರಾಮ ವಿಕಾಸ ಸಂಸ್ಥೆ ಟೊಮೆಟೊವನ್ನು ಹೆಚ್ಚಿ, ಒಣಗಿಸಿ, ಆರು ತಿಂಗಳು ಇಟ್ಟು ಬಳಸುವಂತಹ ವಿಧಾನವನ್ನು ಗ್ರಾಮಸ್ಥರ ಸಹಯೋಗದಲ್ಲಿ ಕಂಡುಕೊಂಡಿತ್ತು. ತೀರ್ಥಹಳ್ಳಿಯಲ್ಲಿ ಕುಂಬಳ ಬೆಳೆದವರು ಆಗ್ರಾ ಪೇಟಾ ಮಾಡುವ ವಿಧಾನ ಅಳವಡಿಸಿಕೊಂಡು ಭರವಸೆ ಮೂಡಿಸಿದ್ದರು. ಉಡುಪಿಯ ಸುರೇಶ್ ನಾಯಕ್ ಹರಿವೆ ದೊಡ್ಡ ಪ್ರಮಾಣದಲ್ಲಿ ಬೆಳೆದ ತರಕಾರಿಗೆ ತಮ್ಮ ಹೊಲದ ಬದಿಯಲ್ಲೇ ಮಾರುಕಟ್ಟೆ ಸೃಷ್ಟಿಸಿಕೊಂಡ ಯಶೋಕಥನದ ಮಾದರಿ ಈಗಲೂ ಮುಂದುವರಿದಿದೆ.

ಬೆಂಗಳೂರಿನಲ್ಲಿ ಅಪಾರ್ಟ್‌ಮೆಂಟ್‌ಗಳ ಬಳಿಯೇ ಸಂತೆ ನಡೆಸಲು ಅವಕಾಶ ನೀಡಿದ್ದೂ ಫಲ ಕೊಟ್ಟಿತ್ತು. ರಾಜ್ಯದ ಏಳೆಂಟು ಜಿಲ್ಲೆಗಳಲ್ಲಿ ರೈತ ಉತ್ಪಾದಕ ಕಂಪನಿಗಳು ರೈತರಿಂದ ಬೆಳೆ ಖರೀದಿಸಿ, ಗ್ರಾಹಕರಿಗೆ ತಲುಪಿಸುವ ಮೂಲಕ ಉತ್ತಮ ಮಾರುಕಟ್ಟೆ ವಿಧಾನ ಅನುಸರಿಸಿದವು.

ಕೊಡಗಿನಲ್ಲಿ ಬೆಣ್ಣೆಹಣ್ಣು, ಗೆಣಸು ಬೆಳೆದವರು, ಮಂಡ್ಯದಲ್ಲಿ ಏಲಕ್ಕಿ ಬಾಳೆ ಬೆಳೆಗಾರರು ನಿರ್ದಿಷ್ಟ ಮಾರುಕಟ್ಟೆ ಇಲ್ಲದ ಕಾರಣ ಕಂಗಾಲಾಗಿದ್ದಾರೆ. ಹೀಗಿದ್ದೂ ಮಧ್ಯಾಹ್ನ 12ರವರೆಗೆ ಸ್ಥಳೀಯ ಮಾರುಕಟ್ಟೆ ತೆರೆಯಲು ಅವಕಾಶ ನೀಡಿರುವುದರಿಂದ ಸ್ಥಳೀಯವಾಗಿ ಸೊಪ್ಪು, ತರಕಾರಿ ಬೆಳೆಯುವವರಿಗೆ ಅನುಕೂಲವಾಗಿದೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಕೂಡ್ಲಹಳ್ಳಿಯ ರೈತ ಮಹಿಳೆ ಲಕ್ಷ್ಮಕ್ಕ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದು, ತಮ್ಮ ಈರುಳ್ಳಿ ಬೆಳೆಯನ್ನು ರಕ್ಷಿಸುವಂತೆ ಮೊರೆಯಿಟ್ಟ ಸಂಗತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದನ್ನು 'ಪ್ರಜಾವಾಣಿ'ಯೂ ವರದಿ ಮಾಡಿತು. ಈ ವರದಿ ಬಂದಮೇಲೆ ಏಳೆಂಟು ಜನರಿಂದ ಅವರಿಗೆ ಪ್ರತಿಕ್ರಿಯೆ ಬಂದಿದೆ. ಕೆಲವರು ಬಂದು ಬೆಳೆಯನ್ನು ನೋಡಿಕೊಂಡು, ಮಾರುಕಟ್ಟೆ ಒದಗಿಸುವ ಭರವಸೆಯನ್ನೂ ಅವರಿಗೆ ನೀಡಿ ಹೋಗಿದ್ದಾರೆ.

ಚಿತ್ರದುರ್ಗದ ಸಿರಿಗೆರೆ ಮಾರ್ಗದ ಚಿಕ್ಕಬೆನ್ನೂರು ಗಡಿಯಲ್ಲಿ 13 ಎಕರೆಯಲ್ಲಿ ಮಾವಿನ ತೋಟ ಮಾಡಿರುವ ಮಹಾವೀರ್, ಆರು ಎಕರೆಯಲ್ಲಿ ಅವರು ಆಲ್ಫಾನ್ಸೊ ತಳಿಯ ಮಾವನ್ನು ಜೈವಿಕ ಪದ್ಧತಿಯಲ್ಲಿ ಬೆಳೆದಿದ್ದಾರೆ. ಹದಿನೈದು ವರ್ಷಗಳಿಂದ ಅವರು ಸತತವಾಗಿ ಪ್ರಯತ್ನ ಪಟ್ಟು, ತಮ್ಮ ಗ್ರಾಹಕರನ್ನು ತಾವೇ ಕಂಡುಕೊಂಡಿದ್ದಾರೆ. 'ನ್ಯಾಚುರಲ್ ಫಾರ್ಮ್' ಹೆಸರಿನ ಅವರ ಮಾಲಿಗೆ ಮುಂಬೈ, ಪುಣೆ, ಕೊಯಮತ್ತೂರು, ಚೆನ್ನೈ, ದೆಹಲಿ ಎಲ್ಲೆಡೆಯೂ ಗ್ರಾಹಕರು. ಕರ್ನಾಟಕದಲ್ಲಂತೂ ಹಲವೆಡೆಗಳಿಂದ ಅವರ ಮಾವಿಗೆ ಕಾಯಂ ಗಿರಾಕಿಗಳು ಬರುತ್ತಾರೆ.

'ರೈಲಿನ ಮೂಲಕ ಸಾಗಣೆ ಸಾಧ್ಯವಿದೆ. ರೈತರೆಲ್ಲ ಹೀಗೆ ನೇರ ಮಾರುಕಟ್ಟೆ ಕಂಡುಕೊಂಡರೆ ಸಮಸ್ಯೆ ಇರುವುದಿಲ್ಲ. ಐದೂವರೆ ಕೆ.ಜಿ. ತೂಕದ ಸುಮಾರು 200 ಬಾಕ್ಸ್‌ಗಳಷ್ಟು ಮಾವು ಈ ಫಸಲಿನಿಂದ ಬಂದಿದೆ. ಎಲ್ಲವೂ ಮಾರಾಟವಾಗುವುದರಲ್ಲಿ ನನಗೇನೂ ಅನುಮಾನವಿಲ್ಲ' ಎಂದು ಅವರು ಆಶಾವಾದಿಯಾಗುತ್ತಾರೆ.

ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರು, ಬಸವಾಪಟ್ಟಣ ಸೇರಿ ಹಲವೆಡೆ ಮಾವು ಬೆಳೆಗೆ ಮಾರುಕಟ್ಟೆ ಇಲ್ಲದೇ ಮನೆಯಲ್ಲೇ ಕೊಳೆಯುತ್ತಿದೆ. ರೈತರಿಂದ ಮಾವು ತೋಪು ಗುತ್ತಿಗೆ ಪಡೆದ ವ್ಯಾಪಾರಿಗಳು ನಷ್ಟ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮಹಾವೀರ್ ಅವರ ಮಾದರಿ ಪರ್ಯಾಯವಾಗಿ ಕಾಣುತ್ತಿದೆ.

6ನೇ ಪುಟ ನೋಡಿ

ಒಳನೋಟ

ಮಾರಾಟದ ವಿವಿಧ ಮಾರ್ಗ

ಪ್ರತಿಕ್ರಿಯಿಸಿ: 9606038256
feedback@prajavani.co.in

ಈ ಸಲ ಮಾರುಕಟ್ಟೆ ಸಿಗದೆ ಬೆಳೆ ಹಾನಿಯಾದವರಿಗೆ ಪರಿಹಾರ ನೀಡುವ ಕುರಿತು ಸರ್ಕಾರ ಯಾವುದೇ ಯೋಜನೆಯನ್ನು ಇನ್ನೂ ಜಾರಿಗೆ ತಂದಿಲ್ಲ. ಹಾನಿಯ ಪ್ರಮಾಣ ನೋಡಿಕೊಂಡು ಮುಂದೆ ನಿರ್ಧರಿಸಬಹುದು

ಲಕ್ಷ್ಮೀಕಾಂತ ಬೋಮ್ಮನ್ನರ್, ಉಪನಿರ್ದೇಶಕ, ದಾವಣಗೆರೆ ತೋಟಗಾರಿಕಾ ಇಲಾಖೆ



ಸಾವಯವ ಮಾವಿನ ಜತೆ ಮಹಾವೀರ್

ಅಪಾರ್ಟ್‌ಮೆಂಟ್‌ಗೇ ಮಾರುಕಟ್ಟೆ

ಬೆಂಗಳೂರಿನ ವೈಟ್‌ಫೀಲ್ಡ್, ಸರ್ಜಾಪುರ ರಸ್ತೆ, ಬಾಗರಬಾವಿ ಕಡೆಗಳ 150–200 ಅಪಾರ್ಟ್‌ಮೆಂಟ್‌ಗಳ ಬಳಿ ಕಳೆದ ವರ್ಷದ ಲಾಕ್‌ಡೌನ್‌ನಲ್ಲಿ ರೈತರಿಂದ ನೇರವಾಗಿ ಮಾವು–ದ್ರಾಕ್ಷಿ ಮಾರಾಟ ಮಾಡಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದವರು ವ್ಯವಸ್ಥೆ ಮಾಡಿಕೊಟ್ಟಿದ್ದರು. ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಕೋಲಾರ, ರಾಣೆಬೆನ್ನೂರು, ಗದಗ, ಚಿತ್ರದುರ್ಗ, ಹಿರಿಯೂರಿನ ರೈತರು ನೇರವಾಗಿ ಮಾರಾಟ ಮಾಡಿ, ಎಂದಿಗಿಂತ ಹೆಚ್ಚು ಲಾಭವನ್ನು ಆಗ ಗಳಿಸಿದ್ದರು. ಈ ಸಲವೂ ಮಾವು ಮಾರಲು ಆಸಕ್ತಿ ಇರುವವರಿಂದ ಸಂಘ ಅರ್ಜಿ ಆಹ್ವಾನಿಸಿದೆ. ಇದುವರೆಗೆ 20 ರೈತರು ಅರ್ಜಿ ಹಾಕಿದ್ದಾರೆ.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಬಿ.ಎನ್. ಅಂಬರೀಷ್ ಈ ಯಶಸ್ವಿ ಮಾದರಿಯನ್ನು ಈ ಬಾರಿಯೂ ಜಾರಿಗೆ ತರಲು ಉತ್ಸುಕರಾಗಿದ್ದಾರೆ. 'ಕೋವಿಡ್ ಎರಡನೇ ಅಲೆಗೆ ಹೆದರಿ ಕೆಲವು ರೈತರು ಹಳ್ಳಿಗಳಿಂದ ಆಚೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಜತೆಗೆ ಈ ಸಲ ಕೇರಳ, ತಮಿಳುನಾಡಿನಿಂದ ದ್ರಾಕ್ಷಿಗೆ ಬೇಡಿಕೆ ಬಂದಿದ್ದರಿಂದ ಈ ಮಾರುಕಟ್ಟೆ ಬಗ್ಗೆ ಕೆಲವರು ಉದಾಸೀನ ತೋರಿದರು' ಎಂದು ಅವರು ಹೇಳಿದರು.



ಅಂಬರೀಷ್

ಅಪಾರ್ಟ್‌ಮೆಂಟ್‌ಗಳಿಗೆ ವರ್ಷಪೂರ್ತಿ ತರಕಾರಿ ಪೂರೈಸುವ ವ್ಯವಸ್ಥೆ ಮಾಡುವಂತೆ ಬೇಡಿಕೆ ಬಂದಿದ್ದು, ಒಂದೇ ಕಡೆ ವಿವಿಧ ತರಕಾರಿಗಳನ್ನು ಬೆಳೆಯುವ ಕುರಿತು ತರಬೇತಿಯನ್ನೂ ಅವರು ನೀಡಲು ಯೋಜಿಸುತ್ತಿದ್ದಾರೆ.

ಇನ್ನಷ್ಟು ಸುದ್ದಿಗಳು 6



ಕೇರಳದ ತಿರುವನಂತಪುರದಲ್ಲಿ 'ತೌಕ್ತೆ' ಚಂಡಮಾರುತದ ಪರಿಣಾಮ ಶನಿವಾರ ಅರಬ್ಬಿ ಸಮುದ್ರದ ದೈತ್ಯ ಅಲೆಗಳು ದಡಕ್ಕೆ ಅಪ್ಪಳಿಸಿದವು —ಪಿಟಿಐ ಚಿತ್ರ

ಕೇರಳ, ಕರ್ನಾಟಕ ಕರಾವಳಿಯಲ್ಲಿ ಭಾರಿ ಮಳೆ

'ತೌಕ್ತೆ' ತೀವ್ರ: ಹಾನಿ ತಡೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾಗಿರುವ ತೀವ್ರ ವಾಯು ಭಾರ ಕುಸಿತವು 'ತೌಕ್ತೆ' ಚಂಡಮಾರುತವಾಗಿ ಪರಿವರ್ತನೆಯಾಗಿದೆ. ಇದು ಮಂಗಳವಾರದ ಹೊತ್ತಿಗೆ ಪೋರ್ ಬಂದರ್ ಮತ್ತು ನಲಿಯಾ ನಡುವೆ ಗುಜರಾತ್ ಕರಾವಳಿ, ಕೇಂದ್ರಾಡಳಿತ ಪ್ರದೇಶಗಳಾದ ದಮನ್–ದಿಯು ಮತ್ತು ದಾದ್ರಾ–ನಗರ್‌ಹವೇಲಿಯನ್ನು ಹಾದು ಹೋಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ತಿಳಿಸಿದೆ.

ಚಂಡಮಾರುತದಿಂದಾಗಿ ಮುಂಬೈ ಸುತ್ತಮುತ್ತ ಮಳೆಯಾಗುವ ಸಾಧ್ಯತೆ ಇದೆ. ಆದರೆ, ನಗರಕ್ಕೆ ಹೆಚ್ಚಿನ ಸಮಸ್ಯೆ ಆಗದು ಎಂದು ಇಲಾಖೆ ಹೇಳಿದೆ.

4ನೇ ಪುಟ ನೋಡಿ

ಕರಾವಳಿಯಲ್ಲಿ 'ರೆಡ್ ಅಲರ್ಟ್'

ಬೆಂಗಳೂರು: 'ತೌಕ್ತೆ' ಚಂಡಮಾರುತದ ಪ್ರಭಾವದಿಂದ ರಾಜ್ಯದ ಕರಾವಳಿ ಹಾಗೂ ಒಳನಾಡು ಭಾಗಗಳಲ್ಲಿ ಮೇ 20ರವರೆಗೆ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ರಾಜ್ಯದ ಕರಾವಳಿ ಭಾಗದಲ್ಲಿ ಹೆಚ್ಚು ಮಳೆಯಾಗಲಿದೆ. ಒಳನಾಡಿನಲ್ಲೂ ಮುಂದಿನ ಐದು ದಿನ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮೇ 16ರಂದು 'ರೆಡ್ ಅಲರ್ಟ್' ಘೋಷಿಸಲಾಗಿದೆ' ಎಂದು ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್.ಪಾಟೀಲ ತಿಳಿಸಿದರು.

4ನೇ ಪುಟ ನೋಡಿ

'ಚಂಡಮಾರುತ: 8 ಪರಿಹಾರ ಶಿಬಿರ'

ಬೆಂಗಳೂರು: 'ತೌಕ್ತೆ' ಚಂಡಮಾರುತ ಎದುರಿಸಲು ಸರ್ಕಾರ ಸನ್ನದ್ಧವಾಗಿದ್ದು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಂಟು ಪರಿಹಾರ ಶಿಬಿರಗಳನ್ನು ತೆರೆಯಲಾಗಿದೆ' ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು. 4

ಅಧಿಕಾರಿಗಳೊಂದಿಗೆ ಪ್ರಧಾನಿ ಮೋದಿ ಸಭೆ

ಮನೆಮನೆಗೆ ತೆರಳಿ ಪರೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊರೊನಾ ಸೋಂಕು ದೃಢ ಪ್ರಮಾಣ ಹೆಚ್ಚು ವರದಿಯಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ ಪರೀಕ್ಷೆಗಳನ್ನು ಹೆಚ್ಚಿಸಬೇಕು. ಮನೆಮನೆಗೆ ತೆರಳಿ ಪರೀಕ್ಷೆಗಳನ್ನು ನಡೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅಧಿಕಾರಿಗಳಿಗೆ ಶನಿವಾರ ಸೂಚಿಸಿದರು.



ದೇಶದಲ್ಲಿನ ಕೋವಿಡ್–19 ಪರಿಸ್ಥಿತಿ ಕುರಿತು ಅವಲೋಕಿಸಲು ಅವರು ಉನ್ನತ ಮಟ್ಟದ ಸಭೆ ನಡೆಸಿದರು.

ಕೋವಿಡ್–19 ಪ್ರಕರಣಗಳು, ಕೋವಿಡ್‌ನಿಂದಾಗಿ ಮೃತಪಟ್ಟವರಿಗೆ ಸಂಬಂಧಿಸಿದಂತೆ ವಾಸ್ತವ ಅಂಕಿ–ಅಂಶಗಳನ್ನು ಮರೆಮಾಚಲಾಗುತ್ತಿದೆ ಎಂಬ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿದ ಅವರು, 'ಎಲ್ಲ ರಾಜ್ಯಗಳು ತಮ್ಮಲ್ಲಿನ ಪ್ರಕರಣಗಳ ಕುರಿತು ಪಾರದರ್ಶಕ ವರದಿ ನೀಡಬೇಕು. ಅಗಾಧ ಪ್ರಯತ್ನಗಳ ನಡುವೆಯೂ ತಮ್ಮ ರಾಜ್ಯದಲ್ಲಿ ಪ್ರಕರಣಗಳು, ಸಾವಿನ ಸಂಖ್ಯೆ ಅಧಿಕವಾಗಿದೆ ಎಂಬ ಒತ್ತಡಕ್ಕೆ ಒಳಗಾಗಿ ವಾಸ್ತವಾಂಶ ನೀಡದೇ ಇರಬಾರದು' ಎಂದರು.

ಲಸಿಕೆ ಕಾರ್ಯಕ್ರಮಕ್ಕೆ ವೇಗ ನೀಡಬೇಕು. ಈ ಸಂಬಂಧ ಎಲ್ಲ ರಾಜ್ಯಗಳೊಂದಿಗೆ ಸಮನ್ವಯ ಸಾಧಿಸಿ, ಕಾರ್ಯಗತಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು ಎಂದು ಪ್ರಧಾನ ಮಂತ್ರಿಗಳ ಕಚೇರಿ (ಪಿಎಂಒ) ಪ್ರಕಟಣೆ ತಿಳಿಸಿದೆ.

5ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

21,71,931 ▲ ಒಟ್ಟು ಸೋಂಕಿತರು (21,30,267 ನಿನ್ನೆಯ ವಿವರ)

6,05,494 ▲ ಸಕ್ರಿಯ ಪ್ರಕರಣಗಳು

15,44,982 ▲ ಗುಣಮುಖರಾದವರು

21,434 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	41,664	▼
ಗುಣಮುಖ	34,425	▼
ಸಾವು	349	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲಸಿಕೆ ಖರೀದಿಗೆ ₹ 843 ಕೋಟಿ • ಆಸ್ಪತ್ರೆ ಹೊರಗೆ ಲಸಿಕೆ ನೀಡಿಕೆ

ಹೋಮ್ ಐಸೋಲೇಷನ್ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳ್ಳಿಗಳು ಮತ್ತು ಕೊಳೆಗೇರಿಗಳಲ್ಲಿ ಕೋವಿಡ್ ಪೀಡಿತರಿಗೆ ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ (ಹೋಮ್ ಐಸೋಲೇಷನ್) ಅವಕಾಶ ಕಲ್ಪಿಸದೇ ಇರಲು ಸರ್ಕಾರ ನಿರ್ಧರಿಸಿದೆ. ಅಂಥ ಪ್ರದೇಶಗಳ ಸೋಂಕಿತರನ್ನು ಕೋವಿಡ್ ಕೇರ್ ಕೇಂದ್ರಗಳಿಗೆ ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ.

ರಾಜ್ಯ ಕೋವಿಡ್ ಕಾರ್ಯಪಡೆಯ ಸಭೆಯ ಬಳಿಕ ಅದರ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಈ ವಿಷಯ ತಿಳಿಸಿದರು. ಹಳ್ಳಿಗಳಲ್ಲಿ ಮತ್ತು ಕೊಳೆಗೇರಿಗಳಲ್ಲಿ ಸೋಂಕು ಹರಡದಂತೆ ನೋಡಿಕೊಳ್ಳಲು ಹಾಗೂ ಗುಣಮಟ್ಟದ ಚಿಕಿತ್ಸೆ, ಆಹಾರ, ಔಷಧಿ ನೀಡಲು ಇದರಿಂದ ಸುಲಭವಾಗಲಿದೆ' ಎಂದರು.

'ಗ್ರಾಮೀಣ ಭಾಗ ಹಾಗೂ ಕೊಳೆಗೇರಿಗಳಿಗೆ ಆರೋಗ್ಯ ಸಿಬ್ಬಂದಿ ತೆರಳಿ ಪರೀಕ್ಷೆ ಮಾಡಬೇಕು. ಪ್ರತಿ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸುತ್ತಿದೆ. ಜಿಲ್ಲಾಧಿಕಾರಿಗಳಿಗೆ ಈ ಹೊಣೆ ನೀಡಲಾಗಿದೆ' ಎಂದರು.

ಶಾಲೆ, ಮೈದಾನದಲ್ಲಿ ಲಸಿಕೆ: ಆಸ್ಪತ್ರೆಯಲ್ಲಿ ಲಸಿಕೆ ನೀಡುವ ಬದಲು ಶಾಲಾ ಕಟ್ಟಡ, ಮೈದಾನ, ಕ್ರೀಡಾಂಗಣಗಳಲ್ಲಿ ವ್ಯವಸ್ಥೆ ಮಾಡಲಾಗುವುದು. ಸೋಂಕು ಹರಡುವಿಕೆ ತಪ್ಪಿಸಲು ಈ ಚಿಂತನೆ ನಡೆಸಲಾಗಿದೆ ಎಂದು ಅವರು ಹೇಳಿದರು.

ಮೊದಲ ಡೋಸ್ ಕೋವ್ಯಾಕ್ಸಿನ್ ನೀಡಲಾಗದು. 2ನೇ ಡೋಸ್ ಮಾತ್ರ ಕೋವ್ಯಾಕ್ಸಿನ್ ನೀಡಲಾಗುವುದು. ಮೊದಲ ಡೋಸ್ ಪಡೆದು 6 ವಾರದ ನಂತರ 2ನೇ ಡೋಸ್ ಪಡೆಯಲು ಅರ್ಹರು. 45 ದಾಟಿದವರಿಗೆ ಮೊದಲನೇ ಡೋಸ್ ಕೋವಿಶೀಲ್ಡ್ ನೀಡಲಾಗುವುದು, ಮೊದಲ ಡೋಸ್ ಪಡೆದು 12 ವಾರ ಆದವರಿಗಷ್ಟೆ ಎರಡನೇ ಡೋಸ್ ನೀಡಲಾಗುವುದು' ಎಂದರು.

ಅಂಚೆ ಇಲಾಖೆ, ಕೃಷಿ ಇಲಾಖೆ, ಡೆಲಿವರಿ ಬಾಯ್ಸ್, ಬ್ಯಾಂಕ್ ಸಿಬ್ಬಂದಿ, ಇಂಟರ್‌ನೆಟ್ ಪ್ರೊವೈಡರ್ಸ್ ಹೀಗೆ ಅಗತ್ಯ ವಲಯಗಳಲ್ಲಿ ಇರುವವರಿಗೆ ಆದ್ಯತೆಯಲ್ಲಿ ಲಸಿಕೆ ನೀಡಲಾಗುವುದು. ಲಸಿಕೆ ದಾಸ್ತಾನು ನೋಡಿಕೊಂಡು 18-44 ವರ್ಷದವರಿಗೆ ಲಸಿಕೆ ಕೊಡಲಾಗುವುದು. ಇದಕ್ಕಾಗಿ ಪ್ರತ್ಯೇಕ ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದ್ದು, ಅದನ್ನು ಕೋವಿನ್ ಪೋರ್ಟಲ್‌ಗೆ ಜೋಡಣೆ ಮಾಡಿಸಿದ ಬಳಿಕ ಲಸಿಕೆ ಕೊಡುವುದನ್ನು ಆರಂಭಿಸಲಾಗುವುದು' ಎಂದರು.

ಟೆಂಡರ್ ಅಂತಿಮ: '2 ಕೋಟಿ ಡೋಸ್ ಲಸಿಕೆ ಖರೀದಿಗೆ ಜಾಗತಿಕ ಟೆಂಡರ್ ಅಂತಿಮಗೊಳಿಸಲಾಗಿದೆ. ತಲಾ 50 ಲಕ್ಷ ಡೋಸ್‌ನಂತೆ ನಾಲ್ಕು ಕಂಪನಿಗಳಿಂದ ಖರೀದಿಸಲಾಗುವುದು ಎಂದರು.

ಲಸಿಕೆ ಖರೀದಿಗಾಗಿ ₹ 843 ಕೋಟಿ ಬೇಕಾಗಲಿದ್ದು, ಕಾರ್ಯಪಡೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಪ್ರತಿ ವಾರ 400 ಜನರಿಗೆ ಶಿಲೀಂಧ್ರ ಸೋಂಕು

ರಾಜ್ಯದಲ್ಲಿ ಪ್ರತಿವಾರ ಸುಮಾರು 400 ಜನರಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ತಾಂತ್ರಿಕ ತಜ್ಞರ ಸಮಿತಿ ಅಂದಾಜಿಸಿದೆ.

ಈ ಕುರಿತು ವಿವರ ನೀಡಿದ ಕಾರ್ಯಪಡೆ ಅಧ್ಯಕ್ಷ ಅಶ್ವತ್ಥನಾರಾಯಣ ಅವರು, 'ಕೋವಿಡ್‌ನಿಂದ ಗುಣಮುಖರಾದವರಲ್ಲಿ, ಮುಖ್ಯವಾಗಿ ಮಧುಮೇಹಿಗಳಲ್ಲಿ ಈ ಶಿಲೀಂಧ್ರ ಸೋಂಕು (ಬ್ಲ್ಯಾಕ್ ಫಂಗಸ್) ಕಾಣಿಸಿಕೊಳ್ಳುತ್ತಿದೆ. ಈ ರೋಗಿಗಳಿಗೆ ಚಿಕಿತ್ಸೆ ನೀಡಲು ವಾರಕ್ಕೆ 'ಲಿಪೋಸೋಮಲ್ ಆಂಫೊಟೆರಿಸಿನ್ ಬಿ ಔಷಧಿಯ 20 ಸಾವಿರ ವೈಲ್ಸ್ ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ' ಎಂದರು.

ರೋಗಿಗಳ ಸಂಖ್ಯೆ ದಿಢೀರ್ ಹೆಚ್ಚಳವಾಗಿದ್ದರಿಂದಾಗಿ ಔಷಧಕ್ಕೂ ಬೇಡಿಕೆ ಹೆಚ್ಚಾಗಿದೆ. ಇದರಿಂದಾಗಿ ಔಷಧ ಕೊರತೆ ಉಂಟಾಗಿದೆ ಎಂದೂ ಹೇಳಿದರು.



ಆಮ್ಲಜನಕ ಬಳಕೆ, ತಯಾರಿಕೆ, ಘಟಕಗಳ ಸ್ಥಾಪನೆ, ಮೂಲಸೌಕರ್ಯ ಸ್ಥಾಪನೆ, ನಿರ್ವಹಣೆ ಅಂಶಗಳ ಬಗ್ಗೆ 3-4 ದಿನಗಳಲ್ಲಿ ನೂತನ ಆಮ್ಲಜನಕ ನೀತಿ ರೂಪಿಸಲಾಗುವುದು

ಡಾ. ಸಿ.ಎನ್. ಅಶ್ವತ್ಥನಾರಾಯಣ
ರಾಜ್ಯ ಕೋವಿಡ್ ಕಾರ್ಯಪಡೆಯ ಅಧ್ಯಕ್ಷ

'ಸುಪ್ರೀಂ' ಆದೇಶ ಕೊಟ್ಟರೂ ರಾಜ್ಯಕ್ಕೆ ಸಿಕ್ಕಿಲ್ಲ 'ಆಮ್ಲಜನಕ'

ಹಂಚಿಕೆ 1,015 ಟನ್; ಸಿಕ್ಕಿದ್ದು 765 ಟನ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ರಾಜ್ಯಕ್ಕೆ ಪ್ರತಿದಿನ ಅಗತ್ಯ ಇರುವ 1,200 ಟನ್ ಆಮ್ಲಜನಕವನ್ನು ಹಂಚಿಕೆ ಮಾಡುವಂತೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದ್ದರೂ ಕೇಂದ್ರ ಸರ್ಕಾರ 1,015 ಟನ್ ಹಂಚಿಕೆ ಮಾಡಿದೆ. ಆದರೆ, ಅದರಲ್ಲೂ ಲಭ್ಯವಾಗುತ್ತಿರುವುದು 765 ಟನ್ ಮಾತ್ರ!

ಮೇ 11ರಿಂದ ಅನ್ವಯವಾಗುವಂತೆ ರಾಜ್ಯಕ್ಕೆ ಕೇಂದ್ರ 1,015 ಟನ್ ಹಂಚಿಕೆ ಮಾಡಿದೆ. ಈ ಪೈಕಿ, ರಾಜ್ಯದಲ್ಲಿರುವ ಏಳು ಆಮ್ಲಜನಕ ಉತ್ಪಾದನಾ ಘಟಕಗಳಿಂದ 765 ಟನ್, ರಾಜ್ಯದಲ್ಲಿಯೇ ಇರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಂದ (ಎಂಎಸ್‌ಎಂಇ) 60 ಟನ್, ಹೊರರಾಜ್ಯಗಳಿಂದ 190 ಟನ್ (ಒಡಿಶಾದಿಂದ 160, ವಿಶಾಖಪಟ್ಟಣದಿಂದ 30) ಹಂಚಿಕೆ ಆಗಿದೆ. ಹಂಚಿಕೆಯ ಪಾಲಿನಲ್ಲಿ ರಾಜ್ಯದ ಏಳು ಘಟಕಗಳಿಂದ ಮಾತ್ರ ಆಮ್ಲಜನಕ ಸಿಗುತ್ತಿದ್ದು, ಎಂಎಸ್‌ಎಂಇ ಘಟಕಗಳು ಉತ್ಪಾದನೆ ಆರಂಭಿಸಿಲ್ಲ.

ಜಿಲ್ಲೆಗಳಿಂದ ಲಭ್ಯ ಮಾಹಿತಿ ಅನ್ವಯ ರಾಜ್ಯದಲ್ಲಿ ಗುರುವಾರ (ಮೇ 13) 817.25 ಟನ್ ಆಮ್ಲಜನಕ ಬಳಕೆ ಆಗಿದೆ. ಶುಕ್ರವಾರ (ಮೇ 14) ಈ ಪ್ರಮಾಣ 828.25 ಟನ್‌ಗೆ ಏರಿಕೆ ಆಗಿದೆ. ಬೆಂಗಳೂರಿನಲ್ಲಿ ಅತೀ ಹೆಚ್ಚು 285 ಟನ್ ಬಳಕೆ ಆಗಿದೆ. ಕೋವಿಡ್ ಪ್ರಕರಣಗಳು ಹೆಚ್ಚು ದೃಢಪಟ್ಟಿರುವ ಮೈಸೂರು, ಬಳ್ಳಾರಿ, ಕಲಬುರ್ಗಿ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ 30 ರಿಂದ 50 ಟನ್‌ಗಳಂತೆ ಬಳಕೆ ಆಗಿದೆ.

'ಹಂಚಿಕೆಯಾದ ಆಮ್ಲಜನಕದಲ್ಲಿ ರಾಜ್ಯಕ್ಕೆ ಒಡಿಶಾದಲ್ಲಿರುವ ಉತ್ಪಾದನಾ ಘಟಕಗಳಿಂದ ಹಂಚಿಕೆಯಾಗಿರುವುದು ಈವರೆಗೂ ಬಂದಿಲ್ಲ. ಅಲ್ಲಿಂದ ತರಲು ರಾಜ್ಯ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ, ಸಾಧ್ಯವಾಗುತ್ತಿಲ್ಲ' ಎಂದು ಆಮ್ಲಜನಕ ವ್ಯವಸ್ಥೆಯ ರಾಜ್ಯ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್ ಹೇಳಿದರು.

ಪ್ರಜಾವಾಣಿ ವಿಶೇಷ

'ಸದ್ಯದ ಸ್ಥಿತಿಯಲ್ಲಿ ನಮಗೆ 1,200 ಟನ್ ಬೇಕೇಬೇಕು. ಹೀಗಾಗಿ ಕೊರತೆ ಇದೆ. ಪರ್ಯಾಯ ವ್ಯವಸ್ಥೆ ಕೂಡಾ ಏನೂ ಆಗಿಲ್ಲ. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಹಂಚಿಕೆ ಮಾಡಬೇಕು' ಎಂದು ಅವರು ಹೇಳಿದರು.

'ರಾಜ್ಯಕ್ಕೆ 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲಿನ ಮೂಲಕ ಮೇ 12ರಂದು ಟಾಟಾ ನಗರದಿಂದ (ಜಮ್‌ಶೆಡ್‌ಪುರ) 120 ಟನ್, ಶನಿವಾರ (ಮೇ 15) ಬೆಳಿಗ್ಗೆ ಒಡಿಶಾದ ಕಳಿಂಗನಗರ, ಸಂಜೆ ಟಾಟಾನಗರದಿಂದ ತಲಾ 120 ಟನ್ ಆಮ್ಲಜನಕ ಬಂದಿದೆ. ಇದು ಕೇಂದ್ರದ ಹಂಚಿಕೆ ಪಾಲು ಅಲ್ಲ. ಆಮ್ಲಜನಕಕ್ಕಾಗಿ ರಾಜ್ಯ ಸರ್ಕಾರ ಮಾಡಿದ್ದ ಮನವಿಯಂತೆ ಅಲ್ಲಿನ ಘಟಕಗಳು ಪೂರೈಸಿವೆ' ಎಂದು ಆಮ್ಲಜನಕ ಸರಬರಾಜು ಸಮಿತಿಯ ನೇತೃತ್ವ ವಹಿಸಿರುವ ಐಪಿಎಸ್ ಅಧಿಕಾರಿ ಪ್ರತಾಪ್ ರೆಡ್ಡಿ ಹೇಳಿದರು.

'ಆಮ್ಲಜನಕ ಸಾಗಣೆ ಮಾಡುವಂತೆ ರಾಜ್ಯ ಸರ್ಕಾರ ರೈಲ್ವೆಗೆ ಮಾಡಿದ ಮನವಿಯಂತೆ 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲಿನಲ್ಲಿ ಟಾಟಾನಗರ (ಜಾರ್ಖಂಡ್) ಮತ್ತು ಕಳಿಂಗನಗರದಿಂದ (ಒಡಿಶಾ) ಆರು ಕಂಟೇನರ್‌ಗಳಲ್ಲಿ (ತಲಾ 120 ಟನ್) ಮೂರು ಬಾರಿ ವೈಟ್‌ಫೀಲ್ಡ್‌ನಲ್ಲಿರುವ ಇನ್‌ಲ್ಯಾಂಡ್ ಕಂಟೇನರ್ ಡಿಪೋಗೆ (ಐಸಿಡಿ) ಆಮ್ಲಜನಕ ಬಂದಿದೆ. ಇದು ಕೇಂದ್ರ ಹಂಚಿಕೆ ಮಾಡಿದ ಆಮ್ಲಜನಕದಲ್ಲಿನ ಪಾಲೊ ಎಂಬುವುದನ್ನು ರಾಜ್ಯ ಸರ್ಕಾರ ಹೇಳಬೇಕು. ಸಾಗಣೆಯಷ್ಟೆ ರೈಲ್ವೆಯ ಕೆಲಸ' ಎಂದು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನೀಶ್ ಹೆಗಡೆ ತಿಳಿಸಿದರು.

'ಲೋಡಿಂಗ್‌ಗಾಗಿ ಟ್ಯಾಂಕರ್‌ಗಳು ಕಾಯುತ್ತಿವೆ'

'ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಹಂಚಿಕೆಯಾದ ಆಮ್ಲಜನಕದ ಪಾಲಿನಲ್ಲಿ 15 ದಿನದ ಹಿಂದೆ ಒಮ್ಮೆ ಒಡಿಶಾದಿಂದ ಎರಡು ಟ್ಯಾಂಕರ್‌ಗಳಲ್ಲಿ 30 ಟನ್ ತರಲಾಗಿದೆ. ಅಲ್ಲಿಗೇ ಮತ್ತೆ ಎರಡು ಟ್ಯಾಂಕರ್ ಕಳುಹಿಸಿದ್ದು, ಲೋಡಿಂಗ್‌ಗಾಗಿ ಮೂರು ದಿನಗಳಿಂದ ಅಲ್ಲಿ ಕಾಯುತ್ತಿವೆ' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ರಾಜ್ಯದ ಆಮ್ಲಜನಕ ಸೌಲಭ್ಯದ ಹಾಸಿಗೆಗಳ ಸಾಮರ್ಥ್ಯದ ಪ್ರಕಾರ 1,200 ಟನ್ ಅಗತ್ಯವಿದೆ. ಸದ್ಯ ಸಿಗುವಷ್ಟು ಪ್ರಮಾಣವನ್ನು ಬೇಡಿಕೆ ಆಧರಿಸಿ ಜಿಲ್ಲೆಗಳಿಗೆ ಹಂಚಿಕೆ ಮಾಡುತ್ತಿದ್ದೇವೆ. ರಾಜ್ಯದಲ್ಲಿರುವ ಆಮ್ಲಜನಕ ಘಟಕಗಳು ಸ್ವಲ್ಪ ಹೆಚ್ಚು ಉತ್ಪಾದನೆ ಮಾಡಿ ಕೊಡುತ್ತಿರುವುದರಿಂದ ಕೇಂದ್ರದ ಹಂಚಿಕೆಯ ಪಾಲಿಗಿಂತ (765 ಟನ್) ಹೆಚ್ಚು ಪ್ರಮಾಣ ಜಿಲ್ಲೆಗಳಿಗೆ ಹಂಚಲು ಸಾಧ್ಯವಾಗಿದೆ' ಎಂದರು.

ದೇವನಹಳ್ಳಿಯಲ್ಲಿ ನಾಯಿಗಳ ಹಾವಳಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ರಸ್ತೆಯಲ್ಲಿ ಸಂಚರಿಸುತ್ತಿರುವ ಸಾರ್ವಜನಿಕರ ಮೇಲೆ ಸಾಕು ನಾಯಿಗಳು ದಾಳಿ ಮಾಡುತ್ತಿದ್ದು, ಇದರಿಂದ ಹಲವು ಮಂದಿ ಗಾಯಗೊಂಡಿದ್ದಾರೆ.

ಪಟ್ಟಣದ 23ನೇ ವಾರ್ಡ್‌ನಲ್ಲಿ ಸಾಕು ನಾಯಿಗಳನ್ನು ಮನೆ ಆವರಣದಲ್ಲಿ ಕಟ್ಟಿಹಾಕುವುದರ ಬದಲಿಗೆ ಬೀದಿಗೆ ಬಿಟ್ಟಿರುವ ಕಾರಣ ರಸ್ತೆಯಲ್ಲಿ ಸಂಚರಿಸುವ ಜನರ ಮೇಲೆ ಏಕಾಏಕಿ ದಾಳಿ ಮಾಡುತ್ತಿವೆ.

ಸಾರ್ವಜನಿಕರು ಬೆಳಿಗ್ಗೆ ಹಾಗೂ ಸಂಜೆ ವೇಳೆ ವಾಯುವಿಹಾರಕ್ಕೆ ತೆರಳುವಾಗ ರಸ್ತೆಗೆ ಬರುವ ನಾಯಿಗಳು ಜನರ ಮೇಲೆ ದಾಳಿ ನಡೆಸುತ್ತಿವೆ. ಇದರಿಂದ ತಪ್ಪಿಸಿಕೊಳ್ಳಲಾಗದ ಜನರು ಭಯಭೀತರಾಗಿ ಓಡುವಾಗ ಹಿಂಬಾಲಿಸಿ ಕಚ್ಚುತ್ತಿವೆ. ಮಕ್ಕಳು ಸೇರಿದಂತೆ 10ಕ್ಕೂ ಹೆಚ್ಚು ಮಂದಿಯನ್ನು ಕಚ್ಚಿ ಗಾಯಗೊಳಿಸುತ್ತಿರುವ ನಾಯಿಗಳನ್ನು ಪುರಸಭೆಯವರು ಹಿಡಿದು ಊರಿನಿಂದ ಹೊರಗೆ ಬಿಡಬೇಕು. ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ಕ್ರಮಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ವಾಯುವಿಹಾರ ಮುಗಿಸಿ ವಾಪಸು ಬರುವಾಗ ನಾಯಿಗಳು ಅಟ್ಟಾಡಿಸಿಕೊಂಡು ಬಂದು ಕಚ್ಚಿ ಗಾಯಗೊಳಿಸಿವೆ. ತಪ್ಪಿಸಿಕೊಳ್ಳಲು ಹೋಗಿ ಕೈ ಮತ್ತು ಕಾಲಿಗೆ ಪೆಟ್ಟಾಗಿದೆ. ಮಾಲೀಕರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ರಮೇಶ್ ದೂರಿದ್ದಾರೆ.

ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಘಟನೆ • ಬೀದಿ ನಾಯಿಗಳ ಸ್ಥಳಾಂತರಕ್ಕೆ ಒತ್ತಾಯ

ವೃದ್ಧೆಯನ್ನು ಎಳೆದಾಡಿ ಕೊಂದ ನಾಯಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೀದಿನಾಯಿಗಳ ಹಾವಳಿ ಮತ್ತೇ ಶುರುವಾಗಿದ್ದು, ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ವೃದ್ಧೆಯೊಬ್ಬರನ್ನು ನಾಯಿಗಳು ಕಚ್ಚಿ ಕೊಂದಿವೆ.

'ಶುಕ್ರವಾರ ರಾತ್ರಿ ಈ ಘಟನೆ ನಡೆದಿದೆ. ಮೃತ ವೃದ್ಧೆಯ ಹೆಸರು ಗೊತ್ತಾಗಿಲ್ಲ. ವಯಸ್ಸು ಅಂದಾಜು 60 ವರ್ಷ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ನಿರ್ಗತಿಕರಾಗಿದ್ದ ವೃದ್ಧೆ, ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದರು. ರಸ್ತೆ ಪಕ್ಕದಲ್ಲಿ ಹಾಗೂ ಪಾಳು ಬಿದ್ದ ಜಾಗಗಳಲ್ಲಿ ಮಲಗುತ್ತಿದ್ದರು ಎಂಬುದು ಗೊತ್ತಾಗಿದೆ. ಅವರ ಸಂಬಂಧಿಕರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದ್ದು, ಸದ್ಯಕ್ಕೆ ಯಾವುದೇ ಮಾಹಿತಿ ಸಿಕ್ಕಿಲ್ಲ' ಎಂದೂ ತಿಳಿಸಿದರು.

ಬೆನ್ನಟ್ಟಿದ್ದ ನಾಯಿಗಳು: 'ರಾತ್ರಿ 9.30ರ ಸುಮಾರಿಗೆ ವೃದ್ಧೆಯು ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅದೇ ಸಂದರ್ಭದಲ್ಲೇ ಬೊಗಳುತ್ತಿದ್ದ ಬೀದಿನಾಯಿಗಳ ಗುಂಪು, ವೃದ್ಧೆಯನ್ನು ಬೆನ್ನಟ್ಟಿತ್ತು. ಅದನ್ನು ನೋಡಿದ್ದ ಸ್ಥಳೀಯರು, ನಾಯಿಗಳಿಗೆ ಹೊಡೆದು ಓಡಿಸಿದ್ದರು. ನಾಯಿಗಳಿಂದ ಪಾರಾದ ವೃದ್ಧೆ, ಅಲ್ಲಿಂದ ಹೊರಟು ಹೋಗಿದ್ದರು' ಎಂದೂ ಪೊಲೀಸರು ಹೇಳಿದರು.

'ರಾತ್ರಿ 11.30ರ ಸುಮಾರಿಗೆ ಶಶಿಧರ್ ಲೇಔಟ್‌ನ ದ್ವಾರಕಾನಗರದಲ್ಲಿ ವೃದ್ಧೆ ಮಲಗಿದ್ದರು. ಅದೇ ಸಂದರ್ಭದಲ್ಲೇ ದಾಳಿ ಮಾಡಿ ಕಚ್ಚಿದ್ದ ಎಂಟು ನಾಯಿಗಳು, ವೃದ್ಧೆಯನ್ನು ರಸ್ತೆಯುದ್ದಕ್ಕೂ ಎಳೆದೊಯ್ದಿದ್ದವು. ದೇಹದ ತುಂಬೆಲ್ಲ ಕಚ್ಚಿ ಗಾಯಗೊಳಿಸಿ ಕೊಂದಿದ್ದವು. ರಾತ್ರಿ ಹೊತ್ತು ರಸ್ತೆಯಲ್ಲಿ ಯಾರೂ ಇರಲಿಲ್ಲ' ಎಂದೂ ತಿಳಿಸಿದರು.

'ರಸ್ತೆಯಲ್ಲೇ ವೃದ್ಧೆ ಪ್ರಾಣ ಬಿಟ್ಟಿದ್ದರು. ತಡರಾತ್ರಿ ಅದೇ ಮಾರ್ಗವಾಗಿ ಹೊರಟಿದ್ದ ಸ್ಥಳೀಯರೊಬ್ಬರು ವೃದ್ಧೆಯನ್ನು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಸಿಬ್ಬಂದಿ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದ್ದಾರೆ' ಎಂದೂ ಹೇಳಿದರು.

ರಕ್ತಸಿಕ್ತವಾಗಿದ್ದ ದೇಹ: 'ವೃದ್ಧೆಯ ತಲೆ, ಮುಖ, ಕೈ-ಕಾಲುಗಳು, ತೊಡೆ.. ಹೀಗೆ ಹಲವು ಭಾಗಗಳಿಗೆ ನಾಯಿಗಳು ಕಚ್ಚಿವೆ. ಇಡೀ ದೇಹ ರಕ್ತಸಿಕ್ತವಾಗಿತ್ತು. ಮೈ ಮೇಲಿನ ಬಟ್ಟೆಗಳೂ ಹರಿದು ಚಿಂದಿಯಾಗಿದ್ದವು' ಎಂದೂ ಪೊಲೀಸರು ತಿಳಿಸಿದರು.

'ಬೀದಿನಾಯಿ ಕಾಟ ಹೆಚ್ಚಳ'



–ಸಾಂದರ್ಭಿಕ ಚಿತ್ರ

ರಾಜರಾಜೇಶ್ವರಿನಗರ, ತಲಘಟ್ಟಪುರ, ಸುಬ್ರಹ್ಮಣ್ಯಪುರ, ಕೆಂಗೇರಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗಿದೆ. ಮಕ್ಕಳು, ವೃದ್ಧರು ರಸ್ತೆಯಲ್ಲಿ ಓಡಾಡದ ಸ್ಥಿತಿ ಇದೆ. ಇದಕ್ಕೆ ಕಡಿವಾಣ ಹಾಕಬೇಕಾದ ಬಿಬಿಎಂಪಿ ಮೌನವಾಗಿದ್ದು, ಇದರ ಪರಿಣಾಮವೇ ಇದೀಗ ವೃದ್ಧೆ ಮೃತಪಟ್ಟಿದ್ದಾರೆ' ಎಂದು ಸ್ಥಳೀಯರು ದೂರಿದರು.

'ರಸ್ತೆಯಲ್ಲಿ ನಾಯಿಗಳು ಗುಂಪು ಗುಂಪಾಗಿ ನಿಲ್ಲುತ್ತಿವೆ. ಯಾರೇ ನಡೆದುಕೊಂಡು ಹೊರಟರೂ ಬೊಗಳಿ ದಾಳಿ ಮಾಡುತ್ತಿವೆ. ವಾಹನಗಳನ್ನು ಬೆನ್ನಟ್ಟಿ ಅಪಘಾತಕ್ಕೂ ಕಾರಣವಾಗುತ್ತಿವೆ. ಇಂಥ ನಾಯಿಗಳ ಸ್ಥಳಾಂತರಕ್ಕೆ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ನಾಯಿಗಳಿಂದ ಆಗುವ ಅನಾಹುತಗಳಿಗೆ ಬಿಬಿಎಂಪಿ ಹೊಣೆಯಾಗುತ್ತದೆ' ಎಂದೂ ಹೇಳಿದರು.

'ಘಟನೆ ನಡೆದ ಸ್ಥಳಕ್ಕೆ ತೆರಳಿ ಮಹಜರು ನಡೆಸಿದ್ದೇವೆ. ಈ ಪ್ರದೇಶದ 10 ನಾಯಿಗಳನ್ನು ಹಿಡಿದು ಪರಿವೀಕ್ಷಣೆಯಲ್ಲಿಟ್ಟಿದ್ದೇವೆ. ಈ ಪ್ರದೇಶದಲ್ಲಿರುವ ಇನ್ನಷ್ಟು ಬೀದಿನಾಯಿಗಳನ್ನು ಹಿಡಿದು ಪರಿವೀಕ್ಷಣೆಯಲ್ಲಿಡುತ್ತೇವೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

'ಬೀದಿನಾಯಿ ಕಚ್ಚಿ ಮಕ್ಕಳು ಸತ್ತರೆ ಚಿಕಿತ್ಸಾ ವೆಚ್ಚದ ಜೊತೆ ₹ 50 ಸಾವಿರ ಪರಿಹಾರ ಹಾಗೂ ದೊಡ್ಡವರು ಸತ್ತರೆ ಚಿಕಿತ್ಸಾ ವೆಚ್ಚದ ಜೊತೆ ₹ 1ಲಕ್ಷ ಪರಿಹಾರ ನೀಡಲಾಗುತ್ತದೆ. ಆರ್.ಆರ್.ನಗರದಲ್ಲಿ ಬೀದಿ ನಾಯಿ ಕಚ್ಚಿ ಮೃತಪಟ್ಟ ಮಹಿಳೆಯ ವಾರಸುದಾರರು ಇನ್ನೂ ಪತ್ತೆಯಾಗಿಲ್ಲ' ಎಂದು ಬಿಬಿಎಂಪಿ ಅಧಿಕಾರಿ ಮಾಹಿತಿ ನೀಡಿದರು.

ಸಾಕು ನಾಯಿ ಕಚ್ಚಿ ಮೃತಪಟ್ಟಿದ್ದ ಕಾರ್ಮಿಕ

ಯಲಹಂಕ ಉಪನಗರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗಷ್ಟೇ 'ಪಿಟ್ ಬುಲ್' ತಳಿಯ ಸಾಕು ನಾಯಿ ಕಚ್ಚಿ ಕಾರ್ಮಿಕ ನರಸಿಂಹ (36) ಎಂಬುವರು ಮೃತಪಟ್ಟಿದ್ದರು. ಈ ಸಂಬಂಧ ಎಫ್‌ಐಆರ್ ಸಹ ದಾಖಲಾಗಿತ್ತು.

'ವಸ್ತ್ರ ವಿನ್ಯಾಸಕರಾದ ಅಟ್ಟೂರು ಲೇಔಟ್ ನಿವಾಸಿ ಕೃಷಿ ಎಂಬುವರು ಸಾಕಿದ್ದ ನಾಯಿ, ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿದ್ದ ಕಾರ್ಮಿಕ ನರಸಿಂಹ ಮೇಲೆ ದಾಳಿ ಮಾಡಿ ಕಚ್ಚಿತ್ತು. ತೀವ್ರ ರಕ್ತಸ್ರಾವದಿಂದ ಕಾರ್ಮಿಕ ಮೃತಪಟ್ಟಿದ್ದರು. ಸಾಕು ನಾಯಿ ಮಾಲೀಕ ಕೃಷಿ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಾಯಿಯನ್ನು ಪರಿವೀಕ್ಷಣೆಯಲ್ಲಿಡಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಪ್ರಗತಿ ಸಿಂಡಿಕೇಟ್‌ನಿಂದ ಮಧ್ಯಾಹ್ನದ ಊಟ

ಬೆಂಗಳೂರು:ಮಲ್ಲೇಶ್ವರದ ಪ್ರಗತಿ ಸಿಂಡಿಕೇಟ್ ಮಲ್ಟಿ ಪರ್ಪಸ್ ಸಹಕಾರ ಸಂಘವು ನಿರಾಶ್ರಿತರು ಹಾಗೂ ಕರ್ತವ್ಯ ನಿರತ ಪೊಲೀಸರಿಗೆ ಮಧ್ಯಾಹ್ನ ಊಟ ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಲಾಕ್‌ಡೌನ್‌ನಿಂದ ಬಡಜನರಿಗೆ ಆಹಾರಕ್ಕೆ ಸಮಸ್ಯೆಯಾಗಿದೆ. ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ತರಲು ಪೊಲೀಸರು ಶ್ರಮಿಸುತ್ತಿದ್ದಾರೆ. ಹಾಗಾಗಿ, ಲಾಕ್‌ಡೌನ್ ಮುಗಿಯುವವರೆಗೆ ಇಬ್ಬರಿಗೂ ಮಧ್ಯಾಹ್ನದ ಊಟ ಹಾಗೂ ಕುಡಿಯುವ ನೀರನ್ನು ಉಚಿತವಾಗಿ ವಿತರಿಸಲಾಗುತ್ತಿದೆ' ಎಂದು ಸಂಘದ ಶ್ರೀನಿವಾಸಮೂರ್ತಿ ತಿಳಿಸಿದರು.

'ಆಹಾರ ವಿತರಣೆಗೆ ಪೊಲೀಸರ ಅನುಮತಿಯೂ ಪಡೆಯಲಾಗಿದೆ. ಮಲ್ಲೇಶ್ವರ, ರಾಜರಾಜೇಶ್ವರಿ ನಗರ ಹಾಗೂ ಸೋಪ್ ಫ್ಯಾಕ್ಟರಿವರೆಗೆ ಕಂಡುಬರುವ ನಿರಾಶ್ರಿತರಿಗೆ ಪ್ರತಿದಿನ ಆಹಾರ ವಿತರಣೆ ನಡೆಯಲಿದೆ' ಎಂದೂ ಹೇಳಿದರು.

ಹೊಸ ರೂಪ ಪಡೆಯಲಿದೆ ಕೆ.ಆರ್. ವೃತ್ತ



ಬೆಂಗಳೂರು: ನಗರದ ಕೃಷ್ಣರಾಜ ವೃತ್ತ (ಕೆ.ಆರ್. ಸರ್ಕಲ್) ಒಂದು ವಾರದಲ್ಲಿ ಹೊಸ ರೂಪ ಪಡೆಯಲಿದೆ. ವೃತ್ತದ ಮಧ್ಯಭಾಗದಲ್ಲಿ ಕಾಬೂಲ್ ಶಿಲೆಗಳ ಮೂಲಕ ಆಕರ್ಷಕವಾಗಿ ಕಾಣುವಂತೆ ವಿನ್ಯಾಸಗೊಳಿಸಲಾಗುತ್ತಿದ್ದು, ಈ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶನಿವಾರ ಈ ಕಾಮಗಾರಿಯ ಪರಿಶೀಲನೆ ನಡೆಸಿದರು.

'ಈ ವೃತ್ತದಲ್ಲಿ ವಿದ್ಯುತ್ ದೀಪ ಅಳವಡಿಕೆ, ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಭೂದೃಶ್ಯ ಅಲಂಕಾರ ಹಾಗೂ ಡಾಂಬರೀಕರಣ ಸೇರಿದಂತೆ ವಿವಿಧ ಕಾಮಗಾರಿ ಈ ತಿಂಗಳ ಕೊನೆಗೆ ಮುಗಿಯಲಿದೆ' ಎಂದು ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಮಾಹಿತಿ ನೀಡಿದರು.

'ನಗರದ ವಿವಿಧ ವೃತ್ತ, ಜಂಕ್ಷನ್‌ಗಳನ್ನು ಅಭಿವೃದ್ಧಿಗೊಳಿಸುವ ಸಂದರ್ಭದಲ್ಲಿ ವಾಹನ ಸವಾರರಿಗೆ ಯಾವುದೇ ಅನಾನುಕೂಲವಾಗದಂತೆ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ಗೌರವ್ ಗುಪ್ತ ಸೂಚನೆ ನೀಡಿದರು. ನಗರದಲ್ಲಿ ಬಿಬಿಎಂಪಿ ವತಿಯಿಂದ ಜಂಕ್ಷನ್‌ಗಳ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿದ್ದು, ಈಗಾಗಲೇ ಗಂಗಾನಗರ, ಸದಾಶಿವನಗರ, ದೊಮ್ಮಲೂರು, ಮತ್ತಿಕೆರೆ, ವಿಜಯನಗರ ಜಂಕ್ಷನ್ ಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಅಯೋಧ್ಯೆ ತೀರ್ಪು ಕೊಟ್ಟವರು ಸರ್ವಜ್ಞರಾಗಿರಲಿಲ್ಲವೇ?'

ಪ್ರಜಾವಾಣಿ ವಾರ್ತೆ



ಬಿ.ಕೆ. ಚಂದ್ರಶೇಖರ್

ಬೆಂಗಳೂರು: 'ಅಯೋಧ್ಯೆ–ಬಾಬರಿ ಮಸೀದಿ ವಿವಾದದ ತೀರ್ಪು ಕೊಟ್ಟ ನ್ಯಾಯಮೂರ್ತಿಗಳು ಸರ್ವಜ್ಞರಾಗಿರಲಿಲ್ಲವೇ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಬಿ.ಕೆ. ಚಂದ್ರಶೇಖರ್ ಅವರು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಪ್ರಶ್ನಿಸಿದ್ದಾರೆ.

'ನ್ಯಾಯಾಧೀಶರೇನು ಸರ್ವಜ್ಞರೇ' ಎಂಬ ರವಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಅವರು, '₹20,000 ಕೋಟಿ ವೆಚ್ಚದಲ್ಲಿ ಭವ್ಯವಾದ ಬಂಗಲೆಗಳನ್ನೊಳಗೊಂಡ 'ಸೆಂಟ್ರಲ್ ವಿಸ್ಟಾ' ಯೋಜನೆಗೆ ತಡೆಯಾಜ್ಞೆ ನಿರಾಕರಿಸಿದ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಸರ್ವಜ್ಞರಲ್ಲವೇ' ಎಂದೂ ಅವರು ಕೇಳಿದ್ದಾರೆ.

'ವಿಶೇಷವಾಗಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಶಾಹಿನ್‌ಬಾಗ್ ಪ್ರತಿಭಟನೆಯನ್ನು ತೆರವುಗೊಳಿಸಿದ ನ್ಯಾಯಾಧೀಶರು, ಬ್ರಿಟಿಷರ ಕಾಲದ 'ದೇಶದ್ರೋಹ' ಮತ್ತಿತರ ಕ್ರಿಮಿನಲ್ ಕಾಯ್ದೆಯಡಿ ನಾನಾ ಆಪಾದನೆಗಳನ್ನು ಹೇರಿ ಜೈಲಿಗೆ ಅಟ್ಟಿದ್ದ, ಈಗಲೂ ಅಲ್ಲೇ ಇರುವ ಸಾಮಾಜಿಕ ಕಾರ್ಯಕರ್ತರಿಗೆ ಜಾಮೀನು ನಿರಾಕರಿಸಿದ ನ್ಯಾಯಾಧೀಶರುಗಳು ರವಿಯವರ ದೃಷ್ಟಿಯಲ್ಲಿ ಸರ್ವಜ್ಞರೇನೋ' ಎಂದೂ ಅವರು ವ್ಯಂಗ್ಯವಾಡಿದ್ದಾರೆ.

'ನಾಲ್ಕು ತಿಂಗಳ ಹಿಂದೆಯೆ ಭಾರತದ ವಿಜ್ಞಾನಿಗಳು, ವೈರಾಣು ತಜ್ಞರು, ವೈದ್ಯರು ಕೋವಿಡ್ ಎರಡನೆಯ ಅಲೆಯ ಬಗ್ಗೆ ಸಾಕಷ್ಟು ಎಚ್ಚರಿಕೆ ಕೊಟ್ಟಿದ್ದನ್ನು ವಿಜ್ಞಾನಿಗಳೇ ಬಹಿರಂಗಪಡಿಸಿದ್ದರು. ಕಾರ್ಯಾಂಗ ಇತ್ತೀಚೆಗೆ 15 ದಿನಗಳಿಂದ ತೆಗೆದುಕೊಂಡ ಕ್ರಮಗಳನ್ನು 3 ತಿಂಗಳ ಹಿಂದೆ ಜಾರಿಗೆ ತರಲು ಯಾವುದೇ ಅಡಚಣೆ ಇರಲಿಲ್ಲ' ಎಂದೂ ಅವರು ಹೇಳಿದ್ದಾರೆ.

'ಲಕ್ಷಾಂತರ ಜನರ ಸಾವಿಗೆ ಕಾರಣವಾದ ಗಂಭೀರ ಪರಿಸ್ಥಿತಿಯನ್ನು ಹಗುರವಾಗಿ ಪರಿಗಣಿಸಿ ಅಸಂಖ್ಯಾತ ಚುನಾವಣಾ ಪ್ರಚಾರ ಸಭೆಗಳು, ಕುಂಭಮೇಳದಂತಹ 'ಸೂಪರ್ ಸ್ಪ್ರೆಡರ್' ಕಾರ್ಯಕ್ರಮಗಳಲ್ಲಿ ಭಾಗಿಯಾದ ಕೇಂದ್ರದ ಪ್ರಮುಖ ನಾಯಕರನ್ನು ಉದ್ದೇಶಿಸಿ ಆದೇಶಗಳನ್ನು ಕೊಡುತ್ತಿರುವ, ಜನಪರ ಕಾಳಜಿಯುಳ್ಳ, ದೇಶದ ಪ್ರಜೆಗಳ ಜೀವಿಸುವ ಹಕ್ಕನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು 'ಅಜ್ಞಾನಿ'ಗಳೇನು' ಎಂದೂ ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

ಬಿಜೆಪಿ ಮುಖಂಡರ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಂಗದ ಕುರಿತು ಮಾತನಾಡಿರುವ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಹಾಗೂ ಬಿಜೆಪಿ ರಾಷ್ಟ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಹೇಳಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಶನಿವಾರ ಮೌನ ಪ್ರತಿಭಟನೆ ನಡೆಸಿದರು.

ಆನಂದರಾವ್ ವೃತ್ತದ ಕಾಂಗ್ರೆಸ್ ಕಚೇರಿ ಎದುರು ಅಂತರ ಕಾಯ್ದುಕೊಂಡು ಸೇರಿದ್ದ ಕಾರ್ಯಕರ್ತರು, ಡಿ.ವಿ. ಸದಾನಂದಗೌಡ ಹಾಗೂ ಸಿ.ಟಿ. ರವಿ ಮುಖವಾಡ ಧರಿಸಿ ಅವರಿಬ್ಬರ ಹೇಳಿಕೆಯನ್ನು ಖಂಡಿಸಿದರು.



ಪ್ರತಿಭಟನೆಯಲ್ಲಿ ಡಿ.ವಿ. ಸದಾನಂದಗೌಡ ಹಾಗೂ ಸಿ.ಟಿ. ರವಿ ಮುಖವಾಡ ಧರಿಸಿ ಕುಳಿತಿದ್ದ ಕಾಂಗ್ರೆಸ್ ಕಾರ್ಯಕರ್ತರು

'ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಮ್ಮ ವೈಫಲ್ಯವನ್ನು ಮರೆಮಾಚಿಕೊಳ್ಳಲು ನ್ಯಾಯಾಂಗದ ತೀರ್ಮಾನಗಳನ್ನೇ ಟೀಕಿಸುವ ಕೀಳುಮಟ್ಟಕ್ಕೆ ಇಳಿದಿವೆ' ಎಂದೂ ಕಾರ್ಯಕರ್ತರು ದೂರಿದರು.

'ಕೋವಿಡ್ ಲಸಿಕೆ ಅಭಿಯಾನ ನಡೆಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಅಭಿಯಾನದ ಬಗ್ಗೆ ಸ್ಪಷ್ಟ ಮಾಹಿತಿ ನೀಡದೆ ಜನರನ್ನು ಗೊಂದಲದಲ್ಲಿ ಸಿಲುಕಿಸಿವೆ. ಕೋವಿಡ್‌ನಿಂದ ಇಡೀ ದೇಶ ನಲುಗುತ್ತಿರುವುದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತ ವೈಫಲ್ಯವೇ ಮುಖ್ಯ ಕಾರಣ' ಎಂದೂ ಹೇಳಿದರು.

'ಸರ್ಕಾರಗಳ ವೈಫಲ್ಯವನ್ನು ಎತ್ತಿ ತೋರಿಸಿದ ನ್ಯಾಯಮೂರ್ತಿಗಳನ್ನೇ, 'ಅವರೇನು ಸರ್ವಜ್ಞರಾ' ಎಂದು ಸಿ.ಟಿ. ರವಿ ಪ್ರಶ್ನಿಸಿದ್ದಾರೆ. 'ಆಮ್ಲಜನಕ ದೊರಕದಿದ್ದರೆ ನೇಣು ಹಾಕಿಕೊಳ್ಳಬೇಕಾ ನಾನು' ಎಂದು ಡಿ.ವಿ. ಸದಾನಂದ ಗೌಡ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಇವರಿಬ್ಬರ ಹೇಳಿಕೆಗಳು ನ್ಯಾಯಾಂಗ ನಿಂದನೆಯಾಗುತ್ತವೆ. ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು' ಎಂದೂ ಒತ್ತಾಯಿಸಿದರು

'ಮುಂದಿನ ಶೈಕ್ಷಣಿಕ ವರ್ಷದ ನಿಖರ ಮಾಹಿತಿ ತಕ್ಷಣ ನೀಡಿ'

ಬೆಂಗಳೂರು: 'ರಾಜ್ಯ ಸರ್ಕಾರ 2021–22ನೇ ಸಾಲಿನ ಶೈಕ್ಷಣಿಕ ವರ್ಷದ ಬಗ್ಗೆ ನಿಖರ ಮತ್ತು ಸ್ಥೂಲ ಚಿತ್ರಣವನ್ನು ತಕ್ಷಣ ನೀಡಬೇಕು' ಎಂದು ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ ಆಗ್ರಹಿಸಿದ್ದಾರೆ.

'ಮುಂದಿನ ಶಿಕ್ಷಣದ ಗತಿ ಏನು, ಶಾಲೆಗಳು ಯಾವಾಗ ಆರಂಭವಾಗುತ್ತವೆ, ಮುಂದಿನ ಶೈಕ್ಷಣಿಕ ವರ್ಷ ಯಾವ ರೀತಿಯಲ್ಲಿರುತ್ತದೆ ಎಂಬ ಗೊಂದಲದಲ್ಲಿ ಸರ್ಕಾರಿ ಶಾಲೆಗಳ ಪೋಷಕರು ಮತ್ತು ಮಕ್ಕಳು ಇದ್ದಾರೆ. ಈ ಪ್ರಶ್ನೆಗಳಿಗೆ ಶಿಕ್ಷಣ ಸಚಿವರು ಮತ್ತು ಶಿಕ್ಷಣ ಇಲಾಖೆ ಉತ್ತರ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಪ್ರಾಥಮಿಕ ಶಾಲೆಗಳು ಜೂನ್ 15ರಿಂದ, ಪ್ರೌಢ ಶಾಲೆಗಳು ಜುಲೈ 15ರಿಂದ ಆರಂಭವಾಗಲಿದೆ ಎಂದು ಶಿಕ್ಷಣ ಇಲಾಖೆ ಈಗಾಗಲೇ ತಿಳಿಸಿದೆ. ಆದರೆ, ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಈ ಸುತ್ತೋಲೆಯನ್ನು ಧಿಕ್ಕರಿಸಿ, ಶಾಲೆಗಳನ್ನು ಮತ್ತು ಆನ್‌ಲೈನ್ ತರಗತಿಗಳನ್ನು ಆರಂಭಿಸುವುದಾಗಿ ಹೇಳಿಕೆ ನೀಡುತ್ತಿವೆ. ಸರ್ಕಾರದ ಆದೇಶಗಳನ್ನು ಪಾಲಿಸದೆ ಪಾಲಕರು ಮತ್ತು ಮಕ್ಕಳಲ್ಲಿ ಅನಗತ್ಯ ಗೊಂದಲ ಮೂಡಿಸುವ ಇಂಥ ಶಾಲೆಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದೂ ಒತ್ತಾಯಿಸಿದ್ದಾರೆ.

'ಮಾರ್ಚ್-ಏಪ್ರಿಲ್ ವೇಳೆಗೆ ಕೋವಿಡ್ ನಿಯಂತ್ರಣಕ್ಕೆ ಬಂದು 2021–22ನೇ ಸಾಲಿನ ಶೈಕ್ಷಣಿಕ ವರ್ಷ ಮಾಮೂಲಿನಂತೆ ಆರಂಭ ಆಗಬಹುದೆಂದು ನಿರೀಕ್ಷಿಸಿದ್ದ ಪಾಲಕರಿಗೆ ಮತ್ತು ಮಕ್ಕಳಿಗೆ ಆಘಾತವಾಗಿದೆ. ಈ ಮಧ್ಯೆ, ಮೂರನೇ ಅಲೆಯ ಬಗೆಗಿನ ಊಹಾಪೋಹಗಳು ದಿಕ್ಕುತೋಚದಂತೆ ಮಾಡಿದೆ. ಈ ಸಂದರ್ಭದಲ್ಲಿ ಮುಂದಿನ ಸಾಲಿನ ಶಿಕ್ಷಣ, ಕಲಿಕೆಯ ಬಗ್ಗೆ ಆಯ್ಕೆಗಳೇನು ಎಂಬ ಬಗ್ಗೆ ಶಿಕ್ಷಣ ಇಲಾಖೆ ಯೋಜನೆ –ಎ, ಯೋಜನೆ –ಬಿ, ಯೋಜನೆ-ಸಿ ರೂಪಿಸಿ, ಈ ಎಲ್ಲವನ್ನು ನಿಭಾಯಿಸುವುದು ಹೇಗೆ ಎಂಬ ಸ್ಪಷ್ಟತೆ ನೀಡಬೇಕು. ಈ ಬಗ್ಗೆ ಚರ್ಚಿಸಿ ಸೂಕ್ತ ಯೋಜನೆ ರೂಪಿಸಬೇಕು' ಎಂದೂ ಹೇಳಿದ್ದಾರೆ.

ರೆಮ್‌ಡಿಸಿವಿರ್: ಶುಶ್ರೂಷಕ ಸೆರೆ

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ದುಬಾರಿ ಬೆಲೆಗೆ ಮಾರುತ್ತಿದ್ದ ಆರೋಪದಡಿ ಮಾರುತಿ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.



ಮಾರುತಿ

'ಆರೋಪಿ ಮಾರುತಿ, ಜಯನಗರದ ಜನರಲ್ ಆಸ್ಪತ್ರೆಯಲ್ಲಿ ಶುಶ್ರೂಷಕನಾಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಆತನ ವಿರುದ್ಧ ತಿಲಕ್‌ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಸ್ಪತ್ರೆಗೆ ಬರುತ್ತಿದ್ದ ಚುಚ್ಚುಮದ್ದುಗಳನ್ನು ತನ್ನ ಬಳಿ ಅಕ್ರಮವಾಗಿ ಇಟ್ಟುಕೊಳ್ಳುತ್ತಿದ್ದ ಆರೋಪಿ, ಕೊರೊನಾ ಸೋಂಕಿತರು ಹಾಗೂ ಅವರ ಸಂಬಂಧಿಕರಿಗೆ ದುಬಾರಿ ಬೆಲೆಗೆ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದ್ದು, ರೆಮ್‌ಡಿಸಿವಿರ್ ಚುಚ್ಚುಮದ್ದಿನ 9 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

₹3 ಲಕ್ಷ ಮನೆಗೆ ಕಳುಹಿಸಿದ್ದ: 'ಗೋಕಾಕ್‌ನ ಆರೋಪಿ, ಇದುವರೆಗೂ ₹ 3 ಲಕ್ಷವನ್ನು ಕುಟುಂಬದವರಿಗೆ ಕಳುಹಿಸಿರುವ ದಾಖಲೆ ಸಿಕ್ಕಿದೆ' ಎಂದೂ ಸಿಸಿಬಿ ಪೊಲೀಸರು ಹೇಳಿದರು.

ಆರೋಗ್ಯ ಇಲಾಖೆ ಆಯುಕ್ತ ಡಾ. ಕೆ.ವಿ. ತ್ರಿಲೋಕ್ ಚಂದ್ರ ಮಾಹಿತಿ

‘ಕೋವಿಡ್: ಮೌಲ್ಯಮಾಪನ ನಡೆಸಿ ದಾಖಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪೀಡಿತರಲ್ಲಿ ಕೆಲವರು ಭಯಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಪರಿಣಾಮ ತುರ್ತಾಗಿ ಆಸ್ಪತ್ರೆ ಚಿಕಿತ್ಸೆ ಅಗತ್ಯ ಇರುವವರಿಗೆ ಹಾಸಿಗೆ ದೊರೆಯದ ಸಮಸ್ಯೆಯಾಗಲಿದೆ. ಹಾಗಾಗಿ, ವ್ಯಕ್ತಿಯನ್ನು ದಾಖಲಿಸಿಕೊಳ್ಳುವ ಮೊದಲು ಮೌಲ್ಯಮಾಪನ ನಡೆಸಲು ಆಸ್ಪತ್ರೆಗಳಿಗೆ ಸೂಚಿಸಲಾಗಿದೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ ತಿಳಿಸಿದರು.

ಕೋವಿಡ್ ನಿರ್ವಹಣೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ‘ಸದ್ಯದ ಪರಿಸ್ಥಿತಿಯಲ್ಲಿ ಶೇ 85ರಷ್ಟು ಮಂದಿ ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಸೋಂಕಿತರಲ್ಲಿ ಬಹುತೇಕರಿಗೆ ಲಕ್ಷಣಗಳು ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿ, ಅಗತ್ಯ ಆರೈಕೆ ಮಾಡಿಕೊಂಡಲ್ಲಿ ವಿಶೇಷ ಚಿಕಿತ್ಸೆ ಅಗತ್ಯ ಇರುವುದಿಲ್ಲ. ಹಾಗಾಗಿ, ಚಿಕಿತ್ಸೆ ಸಂಬಂಧ ಆಸ್ಪತ್ರೆಗೆ ಬರುವವರನ್ನು ದಾಖಲಿಸಿಕೊಳ್ಳುವ ಮುನ್ನವೇ ತಪಾಸಣೆ ನಡೆಸಿ, ಆಸ್ಪತ್ರೆ ಚಿಕಿತ್ಸೆ ಅಗತ್ಯವಿರದಿದ್ದರೆ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾಗಲು ಸೂಚಿಸಲಾಗುತ್ತದೆ’ ಎಂದು ಹೇಳಿದರು.


ತ್ರಿಲೋಕ್ ಚಂದ್ರ

‘ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಕೂಡ ಆಮ್ಲಜನಕ ಸಾಂದ್ರಕವನ್ನು ಒದಗಿಸಿ, ಚಿಕಿತ್ಸೆ ನೀಡಲಾಗುತ್ತದೆ. ಆಸ್ಪತ್ರೆಯಲ್ಲಿ ಚೇತರಿಸಿಕೊಂಡವರನ್ನು ಸ್ಟೆಪ್‌ಡೌನ್ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗುತ್ತದೆ. ‘ರೆಮ್‌ಡಿಸಿವಿರ್’ ಹಾಗೂ ಆಮ್ಲಜನಕವು ಸಮರ್ಪಕವಾಗಿ ಬಳಕೆಯಾಗಬೇಕೆಂಬ ಉದ್ದೇಶದಿಂದ ಕೆಪಿಎಂಇ ಪೋರ್ಟಲ್‌ನಲ್ಲಿ ರೋಗಿಯ ವಿವರ ಸಹಿತ ವಿವಿಧ ಮಾಹಿತಿಗಳನ್ನು ನಮೂದಿಸುವ ವ್ಯವಸ್ಥೆ ತರಲಾಗಿದೆ’ ಎಂದು ತಿಳಿಸಿದರು.


‘ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಕುಷ್ಠರೋಗ ಆಸ್ಪತ್ರೆಯಲ್ಲಿ ಸುಮಾರು 125 ಐಸಿಯು ಹಾಸಿಗೆ ನಿರ್ಮಿಸಲು ಎನ್‌ಡಿಸಿಪಿ ಮತ್ತು ಸಿಐಎ ಕಂಪನಿ ಮುಂದೆ ಬಂದಿದೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ ವಿವಿಧ ಕಂಪನಿಗಳು ಆಸ್ಪತ್ರೆಗಳಿಗೆ ಅಗತ್ಯವಿರುವ ಮಾಡ್ಯುಲಾರ್ ಐಸಿಯು, ಆಮ್ಲಜನಕ ಜನರೇಟರ್ ಮತ್ತು ಆಮ್ಲಜನಕ ಸಾಂದ್ರಕ ಒದಗಿಸಲು ಮುಂದೆಬರಬೇಕು’ ಎಂದು ಮನವಿ ಮಾಡಿಕೊಂಡರು.

ಆಮ್ಲಜನಕ ಸಾಂದ್ರಕ ಪೂರೈಕೆ

‘ಆಮ್ಲಜನಕದ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ 10ರಿಂದ 15 ಲೀ. ವೈದ್ಯಕೀಯ ಆಮ್ಲಜನಕ ಅಗತ್ಯ ಇರುವವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಂತದಲ್ಲಿಯೇ ಆಮ್ಲಜನಕ ಸಾಂದ್ರಕವನ್ನು ಒದಗಿಸುವ ಯೋಜನೆ ರೂಪಿಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ 40 ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಪ್ರಾರಂಭಮಾಡಲು ಕಾರ್ಯಾದೇಶ ನೀಡಲಾಗಿದೆ. ಕೇಂದ್ರ ಸರ್ಕಾರದಿಂದ 28 ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಿಂದ (ಡಿಆರ್‌ಡಿಒ) 20 ಕಡೆ ಇಂತಹ ಘಟಕ ಅಳವಡಿಕೆ ಮಾಡಲಾಗುತ್ತದೆ’ ಎಂದು ಡಾ.ಕೆ.ವಿ. ತ್ರಿಲೋಕ್ ಚಂದ್ರ ಮಾಹಿತಿ ನೀಡಿದರು.

‘ಜನ್ಮದಿನ ಆಚರಣೆ ಬೇಡ’

ಪ್ರಜಾವಾಣಿ ವಾರ್ತೆ


ದೇವೇಗೌಡ

ಹಾಸನ: ತಮ್ಮ ಜನ್ಮದಿನವಾದ ಮೇ 18ರಂದು ಸಂಭ್ರಮದ ಕಾರ್ಯಕ್ರಮಗಳನ್ನು ಆಯೋಜಿಸದೇ, ಕೋವಿಡ್‌ನಿಂದ ಸಂಕಷ್ಟದಲ್ಲಿರುವವರಿಗೆ ನೆರವಾಗಬೇಕು ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ, ಅಭಿಮಾನಿಗಳು ಹಾಗೂ ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ.

‘ಈಗ ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯತೆಯನ್ನು ಮೆರೆಯುವ ಸಮಯದಲ್ಲಿದ್ದೇವೆ. ಆದ್ದರಿಂದ, ಹುಟ್ಟುಹಬ್ಬದ ನಿಮಿತ್ತ ಹಾರ– ತುರಾಯಿ, ಕೇಕ್–ಸಿಹಿ ಎಂದು ಅನಗತ್ಯವಾಗಿ ವೆಚ್ಚ ಮಾಡುವ ಬದಲಿಗೆ ಅದನ್ನೇ ಕೋವಿಡ್ ಸಂತ್ರಸ್ತರಿಗೆ ನೆರವಿನ ರೂಪದಲ್ಲಿ ನೀಡಿದಲ್ಲಿ, ಅದು ನಿಜಕ್ಕೂ ಸದುಪಯೋಗವಾಗುತ್ತದೆ. ದೇವರು ಮೆಚ್ಚುತ್ತಾನೆ. ಅಭಿಮಾನಿಗಳ ಈ ಸೇವಾ ಕಾರ್ಯ ನನಗೂ ಸಂತೋಷ ನೀಡುತ್ತದೆ. ಅಭಿಮಾನಿಗಳು ಮತ್ತು ಕಾರ್ಯಕರ್ತರು ನನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು’ ಎಂದು ಕೋರಿದ್ದಾರೆ.

‘ನಿಮ್ಮ ಅಭಿಮಾನವು, ಹಾರೈಕೆ ರೂಪದಲ್ಲಿ ನೀವಿರುವಲ್ಲಿಂದಲೇ ವ್ಯಕ್ತವಾಗಲಿ’ ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

‘ಅಗತ್ಯವಾದರೆ ಲಾಕ್‌ಡೌನ್ ವಿಸ್ತರಣೆ ನಿಶ್ಚಿತ’

ನಂದಿನಿ ಬಡಾವಣೆಯಲ್ಲಿ ಆರೈಕೆ ಕೇಂದ್ರ ಉದ್ಘಾಟಿಸಿದ ಡಿ.ವಿ. ಸದಾನಂದಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಜಾರಿಗೆ ತಂದಿರುವ ಲಾಕ್‌ಡೌನ್ ಯಶಸ್ವಿಯಾಗಿದೆ. ಮೇ 24ರವರೆಗೆ ಇನ್ನೂ ಸಾಕಷ್ಟು ಸುಧಾರಣೆ ಆಗಬಹುದು. 24ರ ನಂತರವೂ ಪ್ರಕರಣಗಳು ಕಡಿಮೆಯಾಗದಿದ್ದರೆ ನಿರ್ದಾಕ್ಷಿಣ್ಯವಾಗಿ ಲಾಕ್‌ಡೌನ್ ಮಾಡಬೇಕು’ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಸಲಹೆ ನೀಡಿದರು.

ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ನಂದಿನಿ ಬಡಾವಣೆಯ ಕೆಂಪೇಗೌಡ ಸಮುದಾಯ ಭವನದಲ್ಲಿ ಶನಿವಾರ 46 ಆಮ್ಲಜನಕ ಹಾಸಿಗೆ ಸೌಲಭ್ಯದ ಕೋವಿಡ್ ಆರೈಕೆ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

‘ಮುಂಬೈ, ದೆಹಲಿ ಸೇರಿದಂತೆ ಹಲವೆಡೆ ಲಾಕ್‌ಡೌನ್ ಪರಿಣಾಮ ಬೀರಿದೆ. ನಗರದಲ್ಲಿಯೂ ಲಾಕ್‌ಡೌನ್‌ನಿಂದ ಕೋವಿಡ್ ಪ್ರಕರಣಗಳು ಕಡಿಮೆಯಾಗಿವೆ. ಲಾಕ್‌ಡೌನ್‌ನಿಂದ ಕೆಲವರಿಗೆ ಕಷ್ಟವಾಗಬಹುದು. ಅವರ ಜೀವನವನ್ನು ಮತ್ತೆ ರೂಪಿಸುವ ಕೆಲಸವನ್ನು ಸರ್ಕಾರ ಮಾಡಲಿದೆ’ ಎಂದೂ ಹೇಳಿದರು.

‘ಕೋವಿಡ್ ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ಎಲ್ಲ ಕ್ರಮಗಳನ್ನೂ ಕೈಗೊಂಡಿವೆ. ಆದರೂ, ಕೆಲವು ಟೀಕೆ–ಟಿಪ್ಪಣಿಗಳು, ಬೈಗುಳಗಳನ್ನು ಮಾಧ್ಯಮಗಳಲ್ಲಿ ಕೇಳಬೇಕಾಗಿದೆ. ಇಂತಹ ವಿಮರ್ಶೆಗಳಿಂದ ಧೃತಿಗೆಡುವುದಿಲ್ಲ' ಎಂದೂ ಅವರು ಹೇಳಿದರು.

‘ಅಗತ್ಯವಿರುವಷ್ಟು ಲಸಿಕೆ ಸಂಗ್ರಹ ಇಲ್ಲದಿದ್ದ ಮೇಲೆ ಲಸಿಕೆ ಅಭಿಯಾನ ಏಕೆ ಆರಂಭಿಸಬೇಕು ಎಂದು ಹಲವರು ಪ್ರಶ್ನಿಸುತ್ತಾರೆ. 45 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಲಸಿಕೆ ಹಾಕಲು ಆರಂಭಿಸಿದಾಗ ಶೇ 42ರಷ್ಟು ಮಂದಿ ಮಾತ್ರ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬಂದಿದ್ದರು. ಎರಡನೇ ಅಲೆ ತೀವ್ರವಾದ ನಂತರ 18 ವರ್ಷ ಮೇಲ್ಪಟ್ಟವರೂ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬಂದರು. ಹೀಗಾಗಿ, ನಮ್ಮ ನಿರೀಕ್ಷೆಯ ಕ್ರಿಯಾ ಯೋಜನೆಯಲ್ಲಿ ವ್ಯತ್ಯಾಸವಾಯಿತು. ಎಲ್ಲರಿಗೂ ಲಸಿಕೆ ವಿತರಿಸಲಾಗುವುದು’ ಎಂದೂ ಹೇಳಿದರು.

ಮನೆ ಮನೆಗೆ ಆಮ್ಲಜನಕ: ‘ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿ ಸಚಿವ ಕೆ. ಗೋಪಾಲಯ್ಯ ಅವರು ಉತ್ತಮವಾಗಿ ಕೋವಿಡ್ ಪರಿಹಾರ ಕ್ರಮಗಳನ್ನು ಕೈಗೊಂಡಿದ್ದಾರೆ. ಎರಡು ವಾಹನಗಳ ಮೂಲಕ ಮನೆ ಮನೆಗೆ ಆಮ್ಲಜನಕ ಪೂರೈಸುತ್ತಿದ್ದಾರೆ. ಸರ್ಕಾರದ ಮೇಲೆ ಅವಲಂಬಿತರಾಗದೆ ಸಾರ್ವಜನಿಕರೂ ಇಂತಹ ಕಾರ್ಯಗಳಿಗೆ ಕೈಜೋಡಿಸಿದರೆ ಕೋವಿಡ್ ನಿರ್ವಹಣೆ ಸುಲಭವಾಗುತ್ತದೆ’ ಎಂದು ಸದಾನಂದ ಗೌಡ ಹೇಳಿದರು.

ಲಕ್ಷಣ ಹೊಂದಿರುವವರಿಗೆ ಪರೀಕ್ಷೆ: ‘ಲಾಕ್‌ಡೌನ್‌ನ ಪರಿಣಾಮ ಹತ್ತು ದಿನಗಳ ನಂತರ ಗೊತ್ತಾಗಲಿದೆ. ಈಗಾಗಲೇ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

‘ಪರೀಕ್ಷೆಗಳ ಸಂಖ್ಯೆ ಕಡಿಮೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ನಾವು ಸೋಂಕಿನ ಲಕ್ಷಣ ಹೊಂದಿರುವವರಿಗೆ ಮತ್ತು ಹೆಚ್ಚು ಪ್ರಕರಣಗಳು ವರದಿಯಾಗಿರುವ ಪ್ರದೇಶಗಳಲ್ಲಿ ಮಾತ್ರ ಹೆಚ್ಚು ಪರೀಕ್ಷೆ ನಡೆಸುತ್ತಿದ್ದೇವೆ’ ಎಂದೂ ಅವರು ಹೇಳಿದರು.

‘45 ವರ್ಷ ಮೇಲ್ಪಟ್ಟವರಿಗೆ ಕೋವಿಶೀಲ್ಡ್ ಎರಡನೇ ಡೋಸ್ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದೂ ತಿಳಿಸಿದರು.

ಸಚಿವ ಕೆ.ಗೋಪಾಲಯ್ಯ, ವಲಯ ಆಯುಕ್ತ ಬಸವರಾಜು, ವಲಯ ಸಂಯೋಜಕ ಉಜ್ವಲ್ ಘೋಷ್, ವಲಯ ಜಂಟಿ ಆಯುಕ್ತ ಶಿವಸ್ವಾಮಿ ಉಪಸ್ಥಿತರಿದ್ದರು.


ನಗರದ ನಂದಿನಿ ಬಡಾವಣೆಯಲ್ಲಿರುವ ಕೆಂಪೇಗೌಡ ಸಮುದಾಯ ಭವನದಲ್ಲಿ ಶನಿವಾರ ಉಚಿತ ಕೋವಿಡ್ ಆರೈಕೆ ಕೇಂದ್ರವನ್ನು ಡಿ.ವಿ. ಸದಾನಂದ ಗೌಡ ಉದ್ಘಾಟಿಸಿದರು. ಸಚಿವ ಕೆ.ಗೋಪಾಲಯ್ಯ ಇದ್ದರು ಪ್ರಜಾವಾಣಿ ಚಿತ್ರ

ಎಚ್‌ಡಿಕೆ ಮನೆಗೆ ಗಿರ್ ತಳಿ ಗೋವು ಆಗಮನ

ಪ್ರಜಾವಾಣಿ ವಾರ್ತೆ

ಬಿಡದಿ: ಹೋಬಳಿಯ ಕೇತಗಾನಹಳ್ಳಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ತೋಟದ ಮನೆಗೆ ಹೊಸ ಅತಿಥಿಗಳ ಆಗಮನವಾಗಿದೆ.

ಶುಕ್ರವಾರ ಬಸವ ಜಯಂತಿಯಂದು ಕಪಿಲ, ಸ್ವರ್ಣ ಕಪಿಲ, ಗಿರ್ ತಳಿಯ ನಾಲ್ಕು ಗೋವುಗಳನ್ನು ಎಚ್‌ಡಿಕೆ ಪೂಜೆ ಸಲ್ಲಿಸುವ ಮೂಲಕ ಮನೆಗೆ ಬರಮಾಡಿಕೊಂಡರು. ಶಾಸಕಿ ಅನಿತಾ, ಪುತ್ರ ನಿಖಿಲ್ ಹಾಗೂ ಸೊಸೆ ರೇವತಿ ಇದ್ದರು.

ತೋಟಕ್ಕೆ ಗೋವುಗಳನ್ನು ಕುಮಾರಸ್ವಾಮಿ ತರಿಸಿದ್ದು, ಅವುಗಳ ಪೋಷಣೆ ಮಾಡುತ್ತಾ, ವ್ಯವಸಾಯಕ್ಕೆ ಒತ್ತು ಕೊಟ್ಟು ಸಮಯ ಕಳೆಯುತ್ತಿದ್ದಾರೆ. ಲಾಕ್‌ಡೌನ್ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಕುಟುಂಬ ಸಮೇತರಾಗಿ ಬಂದು ತೋಟದ ಮನೆಯಲ್ಲಿ ವಾಸ್ತವ್ಯ ಹೂಡಿದ್ದಾರೆ.

ರಾಜ್ಯ ಕೋವಿಡ್ ಕಾರ್ಯಪಡೆ ಸಭೆಯಲ್ಲಿ ಚರ್ಚೆ

ರಾಜಧಾನಿಯ ಆರೋಗ್ಯ ವ್ಯವಸ್ಥೆಗೆ ಹೊಸ ರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಕಟ್ಟಕಡೆಯ ವ್ಯಕ್ತಿಗೂ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಇರುವ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಸುಧಾರಿಸುವ ಕುರಿತು ತಜ್ಞರಿಂದ ವರದಿ ಪಡೆಯಲು ರಾಜ್ಯ ಕೋವಿಡ್ ಕಾರ್ಯಪಡೆ ನಿರ್ಧರಿಸಿದೆ.

ಕಾರ್ಯಪಡೆಯ ಸಭೆಯ ಬಳಿಕ ಅದರ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ‘ಬೆಂಗಳೂರು ನಗರದ ಆರೋಗ್ಯ ವ್ಯವಸ್ಥೆಯನ್ನು ಬಿಬಿಎಂಪಿ ವ್ಯಾಪ್ತಿಯಿಂದ ತೆಗೆದು ಆರೋಗ್ಯ ಇಲಾಖೆಯ ಅಧೀನಕ್ಕೆ ತರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ನಗರದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ 100 ಹಾಸಿಗೆಯ ಸುಸಜ್ಜಿತ ಸೆಕೆಂಡರಿ ಆಸ್ಪತ್ರೆ, ನಾಲ್ಕು ವಿಧಾನಸಭೆ ಕ್ಷೇತ್ರಗಳಿಗೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸುವ ಬಗ್ಗೆ ಚರ್ಚೆ ನಡೆಯಿತು’ ಎಂದರು.

ನಗರದಲ್ಲಿ ಸರ್ಕಾರದ ಉಸ್ತುವಾರಿಯಲ್ಲಿ ಹಲವು ಆಸ್ಪತ್ರೆಗಳಿವೆ. ಈ ಪೈಕಿ, ಕೆಲವು ವೈದ್ಯ ಶಿಕ್ಷಣ ಇಲಾಖೆ, ಇನ್ನು ಕೆಲವು ಆರೋಗ್ಯ ಇಲಾಖೆ, ಕೆಲವು ಬಿಬಿಎಂಪಿ ಅಧೀನದಲ್ಲಿವೆ. ಸರಿಯಾದ ಸಮನ್ವಯತೆ ಇಲ್ಲ, ಹೊಂದಾಣಿಕೆಯೂ ಕಾಣುತ್ತಿಲ್ಲ. ಹೀಗಾಗಿ, ಜನರು ಸಂಕಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಎಲ್ಲ ಆಸ್ಪತ್ರೆಗಳನ್ನು ಆರೋಗ್ಯ ಇಲಾಖೆಯ ಅಧೀನಕ್ಕೆ ತಂದು ಅದಕ್ಕೊಂದು ಪ್ರತ್ಯೇಕ ವ್ಯವಸ್ಥೆ ಮಾಡುವುದು ಒಳ್ಳೆಯದು. ಬೆಂಗಳೂರಿನ ಆರೋಗ್ಯ ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳಲು ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಬೇಕು ಎಂದು ಸಭೆಯಲ್ಲಿ ಅಶ್ವತ್ಥನಾರಾಯಣ ಪ್ರಸ್ತಾಪಿಸಿದರು.

ಈ ಬಗ್ಗೆ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು.ಸಭೆಯಲ್ಲಿದ್ದ ಸಚಿವರಾದ ಡಾ. ಸುಧಾಕರ್, ಎಸ್. ಸುರೇಶ್ ಕುಮಾರ್, ‘ಬೆಂಗಳೂರು ನಗರದಲ್ಲಿ ಇಂಥ ವ್ಯವಸ್ಥೆ ಅಗತ್ಯವಿದೆ. ಈ ಬಗ್ಗೆ ಶೀಘ್ರದಲ್ಲಿಯೇ ತಜ್ಞರ ವರದಿ ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಒಳ್ಳೆಯದು’ ಎಂದು ಸಲಹೆ ನೀಡಿದರು.

‘ಬಿಬಿಎಂಪಿಗೆ ಇತರೆ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸ ಇರುವುದರಿಂದ ಆರೋಗ್ಯ ಕ್ಷೇತ್ರಕ್ಕೆ ವಿಶೇಷ ಗಮನ ಕೊಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ತಾಂತ್ರಿಕ, ಆಡಳಿತಾತ್ಮಕ ಸೇರಿದಂತೆ ಎಲ್ಲ ಅಂಶಗಳ ಬಗ್ಗೆ ಅಧ್ಯಯನ ಮಾಡಿ ವರದಿ ಕೊಡುವಂತೆ ತಜ್ಞರನ್ನು ಕೋರಲು ಸಭೆಯಲ್ಲಿ ನಿರ್ಧರಿಸಲಾಯಿತು’ ಎಂದು ಅಶ್ವತ್ಥನಾರಾಯಣ ಹೇಳಿದರು.

ಯೋಗಿನಾರೇಯಣ ಮಠದಲ್ಲಿ ಡಿಕೆಶಿ ವಿಶೇಷ ಪೂಜೆ

ಚಿಂತಾಮಣಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ಹುಟ್ಟುಹಬ್ಬದ ಅಂಗವಾಗಿ ತಾಲ್ಲೂಕಿನ ಕೈವಾರಕ್ಕೆ ಭೇಟಿ ನೀಡಿ ಯೋಗಿನಾರೇಯಣ ಮಠದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಮೇ 15ಕ್ಕೆ 59ನೇ ವರ್ಷಕ್ಕೆ ಕಾಲಿಡುತ್ತಿರುವ ಶಿವಕುಮಾರ್ ಶನಿವಾರ ಮಧ್ಯಾಹ್ನ 12 ಗಂಟೆಗೆ ಪತ್ನಿ ಸಮೇತ ಬಂದರು. ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಂ ಅವರನ್ನು ಬರಮಾಡಿಕೊಂಡರು. ಕೇವಲ 4-5 ಜನರು ಮಾತ್ರ ದೇವಾಲಯ ಪ್ರವೇಶಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡರು.

‘ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ತಾಂಡವವಾಡುತ್ತಿದೆ. ಜನರು ಸಂಕಷ್ಟದಲ್ಲಿದ್ದಾರೆ. ಈ ಬಾರಿ ಸಂಭ್ರಮ ಆಚರಿಸಕೊಳ್ಳುವುದು ಉಚಿತವಲ್ಲ. ಯಾರು ಶುಭಾಶಯ ಕೋರಲು ಬರಬಾರದು. ನಾನು ಊರಿನಲ್ಲಿ ಇರುವುದಿಲ್ಲ. ಬಹಿರಂಗವಾಗಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವುದಿಲ್ಲ. ಯಾರು ನನ್ನ ಜನ್ಮ ದಿನವನ್ನು ಆಚರಿಸಬಾರದು‘ ಎಂದು ಮನವಿ ಮಾಡಿದರು.

ಆನವಟ್ಟಿ: ಆಂಬುಲೆನ್ಸ್ ಸಿಗದೆ ಸೋಂಕಿತ ಸಾವು

ಪ್ರಜಾವಾಣಿ ವಾರ್ತೆ

ಆನವಟ್ಟಿ (ಶಿವಮೊಗ್ಗ ಜಿಲ್ಲೆ): ಸಮೀಪದ ತಿಮ್ಮಾಪುರ ಗ್ರಾಮದಲ್ಲಿ ಕೊರೊನಾ ಸೋಂಕಿತರೊಬ್ಬರಿಗೆ ತೀವ್ರ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಆಂಬುಲೆನ್ಸ್ ಸಿಗದೆ ಆಸ್ಪತ್ರೆಗೆ ಸಾಗಿಸುವುದು ವಿಳಂಬವಾಗಿ ಮೃತಪಟ್ಟಿದ್ದಾರೆ.

ಗ್ರಾಮದ ದಿನೇಶ್ (38) ಅವರಿಗೆ ಕೊರೊನಾ ಸೋಂಕು ತಗುಲಿತ್ತು. ಶುಕ್ರವಾರ ರಾತ್ರಿ ತೀವ್ರ ಉಸಿರಾಟದ ತೊಂದರೆ ಕಾಣಿಸಿಕೊಂಡಿತ್ತು. ತಕ್ಷಣ ಆಂಬುಲೆನ್ಸ್‌ಗೆ ಕರೆ ಮಾಡಿದರೂ ಸಕಾಲಕ್ಕೆ ಸಿಗಲಿಲ್ಲ. ಬಳಿಕ ಆಂಬುಲೆನ್ಸ್ ಬಂದು ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ. ಈ ಬಗ್ಗೆ ಮಾಹಿತಿ ಪಡೆಯಲು ತಾಲ್ಲೂಕು ಆರೋಗ್ಯ ಅಧಿಕಾರಿಗೆ ಕರೆ ಮಾಡಿದರೂ ಸಂಪರ್ಕಕ್ಕೆ ಸಿಗಲಿಲ್ಲ.

ಅಗತ್ಯ ವ್ಯವಸ್ಥೆ ಮಾಡಿ: ಆನವಟ್ಟಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕೋವಿಡ್ ಸಂಬಂಧಿಸಿದ ರೋಗಿಗಳಿಗಾಗಿ ಒಂದು ಆಂಬುಲೆನ್ಸ್ ಮಾತ್ರ ಇದ್ದು, ತೀವ್ರ ಉಸಿರಾಟದ ತೊಂದರೆ ಇರುವವರಿಗೆ ಜಿಲ್ಲಾ ಆಸ್ಪತ್ರೆಗೆ ಸಕಾಲಕ್ಕೆ ತಲುಪಿಸಲು ಸಾಧ್ಯವಾಗುತ್ತಿಲ್ಲ. ಆನವಟ್ಟಿ ಭಾಗಕ್ಕೆ ಇನ್ನೂ ಎರಡು ಆಂಬುಲೆನ್ಸ್‌ಗಳನ್ನು ನೀಡಬೇಕು. ಕ್ಷೇತ್ರದ ಶಾಸಕರು ಹಾಗೂ ಸಂಸದರು ಹೆಚ್ಚಿನ ಒತ್ತು ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ಅನೀಶ್ ಪಾಟೀಲ್ ಮನವಿ ಮಾಡಿದ್ದಾರೆ.

ಕೋವಿಡ್-19: 120 ಹಾಸಿಗೆಗಳ ಕೇಂದ್ರ

ಆರೈಕೆ ಕೇಂದ್ರವಾದ ಕೆನಡಿಯನ್ ಶಾಲೆ

ಪ್ರಜಾವಾಣಿ ವಾರ್ತೆ


ಯಲಹಂಕ: ಯಲಹಂಕದಲ್ಲಿರುವ ಕೆನಡಿಯನ್ ವಸತಿ ಶಾಲೆಯನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಲಾಗಿದೆ.

120 ಹಾಸಿಗೆಗಳ ಈ ಕೇಂದ್ರವನ್ನು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ ಅವರ ಮೂಲಕ ಶಾಲೆಯ ಮುಖ್ಯಸ್ಥರಾದ ರಮಣಿ ಶಾಸ್ತ್ರಿಯವರು ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರಿಗೆ ಶನಿವಾರ ಹಸ್ತಾಂತರಿಸಿದರು.

‘ಇಡೀ ಪ್ರಪಂಚವೇ ಸಂಕಷ್ಟದಲ್ಲಿ ಸಿಲುಕಿರುವ ಈ ಸಂದರ್ಭದಲ್ಲಿ ಕೆನಡಿಯನ್ ಶಾಲೆಯ ರೀತಿಯಲ್ಲಿ ಖಾಸಗಿ ಸಂಘ ಸಂಸ್ಥೆಗಳು ಸರ್ಕಾರದೊಂದಿಗೆ ಕೈಜೋಡಿಸಿ ಕೋವಿಡ್ ವಿರುದ್ಧದ ಹೋರಾಟಕ್ಕೆ ಕೈ ಜೋಡಿಸಬೇಕು’ ಎಂದು ವಿಶ್ವನಾಥ್ ಕೋರಿದರು.

‘ಈ ಶಾಲೆ 60 ಕೊಠಡಿಗಳನ್ನು ಹೊಂದಿದ್ದು, ಪ್ರತಿ ಕೊಠಡಿಯಲ್ಲಿ ಎರಡು ಹಾಸಿಗೆಗಳು ಇವೆ. ಪ್ರತಿಯೊಂದಕ್ಕೂ ಆಮ್ಲಜನಕ ಪೂರೈಸುವ ಸಾಧನಗಳನ್ನು ಅಳವಡಿಸಲಾಗಿದೆ’ ಎಂದರು.

ರಮಣಿ ಶಾಸ್ತ್ರಿ, ‘ಸಾಮಾಜಿಕ ಕಳಕಳಿಯ ಉದ್ದೇಶದಿಂದ ನಾವು ನಮ್ಮ ಶಾಲೆಯನ್ನು ಕೇವಲ 15 ದಿನಗಳಲ್ಲಿ ತಾತ್ಕಾಲಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಿದ್ದೇವೆ. ಇಲ್ಲಿ ಸೈಟ್ ಕೇರ್ ಆಸ್ಪತ್ರೆಯ ವೈದ್ಯರು, ಶುಶ್ರೂಷಕರು ದಿನದ 24 ಗಂಟೆಯೂ ಸೋಂಕಿತರಿಗೆ ಚಿಕಿತ್ಸೆ ನೀಡಿ ಆರೈಕೆ ಮಾಡಲಿದ್ದಾರೆ’ ಎಂದರು.


ಕೆನಡಿಯನ್ ವಸತಿ ಶಾಲೆಯನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಲಾಗಿದೆ

ವಕೀಲರು ಮುಂಚೂಣಿ ಯೋಧರೆಂದು ಪರಿಗಣಿಸಲು ಮನವಿ

ಬೆಂಗಳೂರು: ವಕೀಲರನ್ನು ಕೋವಿಡ್ ಮುಂಚೂಣಿ ಯೋಧರೆಂದು ಪರಿಗಣಿಸುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಬೆಂಗಳೂರು ವಕೀಲರ ಸಂಘ ಮನವಿ ಸಲ್ಲಿಸಿದೆ. ಕೋವಿಡ್‌ನಿಂದ ಮೃತಪಟ್ಟ ವಕೀಲರಿಗೆ ₹30 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆ.


'ನ್ಯಾಯಾಂಗದ ಕಾರ್ಯ ಕಲಾಪಗಳು ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲು ವಕೀಲರು ಸಾಕಷ್ಟು ಶ್ರಮಿಸಿದ್ದಾರೆ. ನಿಸ್ವಾರ್ಥ ಸೇವೆ ನೀಡುತ್ತಿದ್ದ ಅನೇಕ ವಕೀಲರು ಕೋವಿಡ್‌ಗೆ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ' ಎಂದು ಹೇಳಿದೆ.

'ಅನೇಕ ವಕೀಲರು ಈಗ ಆರ್ಥಿಕ ಬಿಕ್ಕಟ್ಟಿನಲ್ಲಿದ್ದಾರೆ. ಜೀವನ ನಡೆಸಲೂ ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ. ಎಲ್ಲ ಆಸ್ಪತ್ರೆಗಳಲ್ಲಿ ವಕೀಲರಿಗೆ ಉಚಿತಚಿಕಿತ್ಸೆ ದೊರೆಕಿಸಬೇಕು' ಎಂದು ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಕೋರಿದ್ದಾರೆ.

50 ಎಚ್‌ಡಿಯು, 50 ಐಸಿಯು ಹಾಸಿಗೆ ವ್ಯವಸ್ಥೆ: ಕಂದಾಯ ಸಚಿವ ಆರ್. ಅಶೋಕ

ಹಜ್ ಭವನ: ಆಮ್ಲಜನಕ ಸಹಿತ ಹಾಸಿಗೆ

ಪ್ರಜಾವಾಣಿ ವಾರ್ತೆ



ಹಜ್ ಭವನದಲ್ಲಿ ಆಮ್ಲಜನಕ ಸಹಿತ ಹಾಸಿಗೆ ವ್ಯವಸ್ಥೆ ಮಾಡಿರುವುದು –ಪ್ರಜಾವಾಣಿ ಚಿತ್ರ

ಬೆಂಗಳೂರು: ನಾಗವಾರ–ಥಣಿಸಂದ್ರ ಮುಖ್ಯ ರಸ್ತೆಯಲ್ಲಿರುವ ಹಜ್ ಭವನದಲ್ಲಿ 100 ಆಮ್ಲಜನಕ ಯುಕ್ತ ಹಾಸಿಗೆ ವ್ಯವಸ್ಥೆ ಮಾಡಲಾಗಿದ್ದು, ಸದ್ಯದಲ್ಲೇ 50 ಎಚ್‌ಡಿಯು ಮತ್ತು 50 ಐಸಿಯು ಆಸ್ಪತ್ರೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಹಜ್ ಭವನವನ್ನು 400 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಲಾಗಿದ್ದು, ಮೊದಲ ಹಂತದಲ್ಲಿ ಆಮ್ಲಜನಕ ಯುಕ್ತಗೊಳಿಸಿರುವ 100 ಹಾಸಿಗೆಗಳನ್ನು ಸಾರ್ವಜನಿಕ ಸೇವೆಗೆ ಲಭ್ಯಗೊಳಿಸಿ ಅವರು ಮಾತನಾಡಿದರು.

ಎಚ್‌ಡಿಯು ಮತ್ತು ಐಸಿಯು ಹಾಸಿಗೆಗಳನ್ನಾಗಿ ಪರಿವರ್ತಿಸಲು ಬೇಕಾದ ಸಲಕರಣೆಗಳು ಈಗಾಗಲೇ ಬಂದಿವೆ. ಅವುಗಳ ಜೋಡಣೆ ಕಾರ್ಯವೂ ವೇಗವಾಗಿ ನಡೆಯುತ್ತಿದೆ. ಇದರಿಂದ ಸುತ್ತಮುತ್ತಲ ಜನರಿಗೆ ಅನುಕೂಲ ಆಗಲಿದೆ ಎಂದರು.

'ತುರ್ತು ಸೇವೆಗಾಗಿ ಎರಡು ಆಂಬ್ಯುಲೆನ್ಸ್‌ಗಳು ದಿನ 24 ಗಂಟೆಯೂ ಲಭ್ಯವಿರುತ್ತವೆ. ರೋಗ ಲಕ್ಷಣಗಳಿಲ್ಲದೆ ಮತ್ತು ತೀವ್ರ ತರನಾದ ರೋಗ ಲಕ್ಷಣಗಳಿಲ್ಲದ ರೋಗಿಗಳಿಗೆ ಇಲ್ಲಿ ಆರೈಕೆ ಮಾಡಲಾಗುವುದು. ರೋಗಿಗಳ ಮೇಲ್ವಿಚಾರಣೆ ಮತ್ತು ಆರೈಕೆಗಾಗಿ ನುರಿತ ವೈದ್ಯರು ಹಾಗೂ ಸಿಬ್ಬಂದಿಗಳು ಲಭ್ಯವಿದ್ದಾರೆ' ಎಂದು ವಿವರಿಸಿದರು.

ಸೋಂಕಿತರಿಗೆ ಔಷಧ ಮತ್ತು ಊಟ–ಉಪಾಹಾರ ವ್ಯವಸ್ಥೆ ಮಾಡಲಾಗುವುದು. ಸಾರ್ವಜನಿಕರ ಅನುಕೂಲಕ್ಕಾಗಿ ದಿನ 24 ಗಂಟೆಯೂ ಕಾರ್ಯನಿರ್ವಹಿಸುವ ಟ್ರಯಾಜ್ ಕೇಂದ್ರ ತೆರೆಯಲಾಗಿದೆ.

ಸಾಜನಿಕರ ಅನುಕೂಲಕ್ಕೆ 24 × 7 ಟ್ರಯಾಜ್ ಸೆಂಟರ್ ಆವರಣದಲ್ಲಿ ರಚಿಸಲಾಗಿದ್ದು, ಸೋಂಕಿತರು ಮತ್ತು ಶಂಕಿತ ಸೋಂಕಿತರು ಇದರ ಅನುಕೂಲವನ್ನು ಉಪಯೋಗಿಸಬಹುದಾಗಿದೆ. ತಪಾಸಣೆಯ ನಂತರ ವೈದ್ಯರ ಸಲಹೆಯ ಮೇರೆಗೆ ಸೋಂಕಿತರಿಗೆ ಹೋಮ್ ಕ್ವಾರಂಟೈನ್, ಕೋವಿಡ್ ಆರೈಕೆ ಕೇಂದ್ರ ಅಥವಾ ಆಸ್ಪತ್ರೆಗೆ ದಾಖಲಾತಿ ಮಾಡಲಾಗುತ್ತದೆ ಎಂದರು.

'ನಗರದಲ್ಲಿ ಸೋಂಕಿತರಿಗೆ ಆಮ್ಲಜನಕ ಕೊರತೆ ನೀಗಿಸುವ ನಿಟ್ಟಿನಲ್ಲಿ ಎಲ್ಲ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಆಮ್ಲಜನಕ ವ್ಯವಸ್ಥೆ ಮಾಡಲಾಗುತ್ತಿದೆ. 800ಕ್ಕೂ ಹೆಚ್ಚು ಆಮ್ಲಜನಕ ಸಾಂದ್ರಕಗಳನ್ನು ಎಲ್ಲ ಕೋವಿಡ್ ಆರೈಕೆ ಕೇಂದ್ರಗಳಿಗೆ ನೀಡಲಾಗಿದೆ. ಜತೆಗೆ ಬಸ್‌ಗಳಲ್ಲು ಸಹ ಆಮ್ಲಜನಕ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತಿನಿತ್ಯ 100ಕ್ಕೂ ಹೆಚ್ಚು ಆಮ್ಲಜನಕ ಹಾಸಿಗೆಗಳ ಸಂಖ್ಯೆ ಹೆಚ್ಚಳ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯಾವ ರೋಗಿಗೂ ಆಮ್ಲಜನಕ ಸಮಸ್ಯೆ ಆಗದಂತೆ ಸೂಕ್ತ ಕ್ರಮವಹಿಸಲಾಗುವುದು' ಎಂದು ಅವರು ಹೇಳಿದರು.

ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಶಾಸಕ ಕೃಷ್ಣ ಬೈರೇಗೌಡ, ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ವಲಯ ಆಯುಕ್ತ ವಿ.ಅನ್ಬುಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ, ಜಂಟಿ ಆಯುಕ್ತ ಸರ್ಫರಾಜ್ ಖಾನ್, ವಲಯ ಜಂಟಿ ಆಯುಕ್ತ ಅಶೋಕ್ ಇದ್ದರು.

ಅಂಕಿ-ಅಂಶಗಳು

- **400** ಹಜ್ ಭವನದಲ್ಲಿ ಒಟ್ಟು ಹಾಸಿಗೆಗಳು
- **100** ಆಮ್ಲಜನಕ ಸಹಿತ ಹಾಸಿಗೆಗಳು
- **8** ವೈದ್ಯರು
- **12** ದಾದಿಯರು
- **12** ಸ್ವಚ್ಛತಾ ಸಿಬ್ಬಂದಿ

ಸುದ್ದಿ 2 ನಿಮಿಷ

ಐಎಎಸ್ ಅಧಿಕಾರಿ ವಂದಿತಾ ಶರ್ಮಗೆ ಲಸಿಕೆ ಉಸ್ತುವಾರಿ

ಬೆಂಗಳೂರು: ರಾಜ್ಯದಲ್ಲಿ ಲಸಿಕೆ ಉಸ್ತುವಾರಿ ಅಧಿಕಾರಿಯಾಗಿ ಹಿರಿಯ ಐಎಎಸ್ ಅಧಿಕಾರಿ ವಂದಿತಾ ಶರ್ಮ ಅವರನ್ನು ನೇಮಿಸಲಾಗಿದೆ.

ಹಿರಿಯ ತಜ್ಞ ವೈದ್ಯ ಡಾ. ರಾಘವೇಂದ್ರ ರಾವ್ ಅವರನ್ನು ಸರ್ಕಾರದ ಆಮ್ಲಜನಕ ನಿರ್ವಹಣಾ ಸಲಹೆಗಾರರನ್ನಾಗಿ ನೇಮಿಸಲು ರಾಜ್ಯ ಕೋವಿಡ್ ಕಾರ್ಯಪಡೆ ಶಿಫಾರಸು ಮಾಡಿದೆ. ಆಮ್ಲಜನಕದ ವೈಜ್ಞಾನಿಕ ಬಳಕೆ, ನಿರ್ವಹಣೆ, ಹಂಚಿಕೆ ಇತ್ಯಾದಿ ಅಂಶಗಳ ಬಗ್ಗೆ ಅವರು ಸಲಹೆ ನೀಡಲಿದ್ದಾರೆ.

ರಾಘವೇಂದ್ರ ರಾವ್ ಅವರು ಜಯನಗರ ಸಾರ್ವಜನಿಕ ಆಸ್ಪತ್ರೆಯ ಹಿರಿಯ ಅರಿವಳಿಕೆ ತಜ್ಞ ವೈದ್ಯರಾಗಿ ಕರ್ತವ್ಯ ಸಲ್ಲಿಸಿ ನಿವೃತ್ತರಾಗಿದ್ದಾರೆ. ಆದರೆ, ಈಗಲೂ ಅವರು ಅಲ್ಲಿ ವೈದ್ಯ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದಾರೆ.



ಸೋಂಕಿತರ ನೆರವಿಗೆ 'ವೀ ವೈಶ್ಯ' ಸಂಸ್ಥೆ

ಬೆಂಗಳೂರು: ಮನೆ ಆರೈಕೆಯಲ್ಲಿರುವ ಸೋಂಕಿತರ ಚಿಕಿತ್ಸೆಗಾಗಿ ಬೆಂಗಳೂರಿನ 'ವೀ ವೈಶ್ಯ' ಸಂಸ್ಥೆ ಸುಮಾರು ₹70 ಲಕ್ಷ ಮೌಲ್ಯದ 15 ಸಾವಿರ ಔಷಧ ಕಿಟ್‌ಗಳನ್ನು ಒದಗಿಸಿದೆ.

ಆರ್ಯ ವೈಶ್ಯ ವ್ಯಾಪಾರಿಗಳ ಸಂಸ್ಥೆ ಇದಾಗಿದ್ದು, ಕೋವಿಡ್ ಉಲ್ಬಣಗೊಂಡಿರುವ ಸಂದರ್ಭದಲ್ಲಿ ಸೋಂಕಿತರ ನೆರವಿಗೆ ಧಾವಿಸಿ ಮಾನವೀಯತೆ ಮೆರೆದಿದೆ.

ಕೋವಿಡ್ ಸೋಂಕಿತರ ಸಂಖ್ಯೆ ರಾಜ್ಯದಲ್ಲಿ, ವಿಶೇಷವಾಗಿ ಬೆಂಗಳೂರಿನಲ್ಲಿ ಹೆಚ್ಚಾಗುತ್ತಿದೆ. ಗೃಹ ಆರೈಕೆಯಲ್ಲಿ ಇರುವವರ ಜೀವ ಮತ್ತು ಜೀವನ ರಕ್ಷಣೆಯಲ್ಲಿ ಐಸೋಲೇಷನ್ ಕಿಟ್ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ ಅವರಿಗೆ ಈ ಕಿಟ್‌ಗಳನ್ನು ಹಸ್ತಾಂತರಿಸಲಾಗಿದೆ ಎಂದು 'ವೀ ವೈಶ್ಯ' ಸಂಸ್ಥೆಯ ಸಂಸ್ಥಾಪಕ ಅನಿಲ್ ಗುಪ್ತಾ ಮಾಹಿತಿ ನೀಡಿದರು.

'ಆರೋಗ್ಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜನರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಬೆಂಗಳೂರಿನಲ್ಲಿ ಆರೋಗ್ಯ, ನೆಮ್ಮದಿಯ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಸದಾ ಆರ್ಯ ವೈಶ್ಯರ ಸಮುದಾಯ ಮಂಚೂಣಿಯಲ್ಲಿರುತ್ತದೆ' ಎಂದು ಹೇಳಿದರು.

'ಸೋಂಕಿತರಿಗೆ ಇನ್ನಷ್ಟು ನೆರವಾಗಲು ಆಮ್ಲಜನಕ ನಿಧಿ ತೆರೆಯಲಾಗುತ್ತಿದೆ. ಬೆಂಗಳೂರು, ಹೈದರಾಬಾದ್, ವಿಶಾಖಪಟ್ಟಣ, ಕೊಯಮತ್ತೂರಿನಲ್ಲಿ ಆಕ್ಸಿಜನ್ ಬ್ಯಾಂಕ್ ಪ್ರಾರಂಭಿಸಲು ಉದ್ದೇಶಿಸಲಾಗಿದೆ' ಎಂದು ಸಂಸ್ಥೆಯ ಅಧ್ಯಕ್ಷೆ ಭಾವನಾ ತಿಳಿಸಿದರು.

ಪತ್ರಕರ್ತರ ಕುಟುಂಬಕ್ಕೂ ಲಸಿಕೆ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತರನ್ನು ಕೋವಿಡ್ ಯೋಧರೆಂದು ಪರಿಗಣಿಸಿರುವ ಸರ್ಕಾರಕ್ಕೆ ಧನ್ಯವಾದ ಸಲ್ಲಿಸಿರುವ ಬೆಂಗಳೂರು ಪ್ರೆಸ್ ಕ್ಲಬ್, ಅವರ ಕುಟುಂಬ ಸದಸ್ಯರಿಗೂ ಆದ್ಯತೆ ಮೇರೆಗೆ ಲಸಿಕೆ ನೀಡಬೇಕು ಎಂದು ಮನವಿ ಮಾಡಿದೆ.

ಪ್ರೆಸ್ ಕ್ಲಬ್‌ನಲ್ಲಿ ಎರಡು ಬಾರಿ ಲಸಿಕೆ ಅಭಿಯಾನ ಆಯೋಜಿಸಲಾಗಿತ್ತು. 45 ವರ್ಷ ಮೇಲ್ಪಟ್ಟ 283 ಪತ್ರಕರ್ತರಿಗೆ ಕಳೆದ ತಿಂಗಳು ಲಸಿಕೆ ನೀಡಲಾಗಿದ್ದು, ಎರಡನೇ ಬಾರಿಗೆ 18 ವರ್ಷ ಮೇಲ್ಪಟ್ಟ 612 ಪತ್ರಕರ್ತರಿಗೆ ಲಸಿಕೆ ನೀಡಲಾಗಿದೆ ಎಂದು ಪ್ರೆಸ್ ಕ್ಲಬ್ ತಿಳಿಸಿದೆ.

'ಪತ್ರಕರ್ತರ ಕುಟುಂಬ ಸದಸ್ಯರೂ ಸೋಂಕಿನ ಅಪಾಯದಲ್ಲಿದ್ದು, ಹೆಂಡತಿ ಮತ್ತು ಮಕ್ಕಳಿಗೂ ಆದ್ಯತೆ ಮೇರೆಗೆ ಲಸಿಕೆ ನೀಡಬೇಕು. ಪತ್ರಕರ್ತರಿಗೆ ನಗರದ ಆಸ್ಪತ್ರೆಗಳಲ್ಲಿ ಆಮ್ಲಜನಕ ಹಾಸಿಗೆ ಮತ್ತು ಐಸಿಯು ಹಾಸಿಗೆಗಳನ್ನು ಮೀಸಲಿಡಬೇಕು' ಎಂದು ಪ್ರೆಸ್ ಕ್ಲಬ್ ಅಧ್ಯಕ್ಷ ಕೆ. ಸದಾಶಿವ ಶೆಣೈ, ಪ್ರಧಾನ ಕಾರ್ಯದರ್ಶಿ ಎಚ್.ವಿ. ಕಿರಣ್ ಮನವಿ ಮಾಡಿದ್ದಾರೆ.

ಈದ್: 5 ಸಾವಿರ ಮಂದಿಗೆ ಬಿರಿಯಾನಿ ವಿತರಣೆ

ಪ್ರಜಾವಾಣಿ ವಾರ್ತೆ



ಬಿರಿಯಾನಿ ಪೊಟ್ಟಣಗಳನ್ನು ತಯಾರಿಸುವುದರಲ್ಲಿ ನಿರತಾಗಿರುವ ಸ್ವಯಂಸೇವಕರು

ಬೆಂಗಳೂರು: ಬೆಂಗಳೂರಿನ ಮುಸ್ಲಿಂ ಯುವಕರು ಕೊರೊನಾ ಸಂಕಷ್ಟದ ಸಂದರ್ಭದಲ್ಲಿ 5 ಸಾವಿರಕ್ಕೂ ಅಧಿಕ ಮಂದಿಗೆ ಬಿರಿಯಾನಿ ಹಂಚುವ ಮೂಲಕ ಈದ್ ಉಲ್ ಫಿತ್ರ್ ಹಬ್ಬವನ್ನು ಆಚರಿಸಿದ್ದಾರೆ.

ಮುಸ್ಲಿಂ ಯುವಕರಾದ ಹಫೀಜ್ ಸೇಠ್, ಉಸ್ಮಾನ್ ಷರೀಫ್, ಇಬ್ರಾಹಿಂ ಅಕ್ರಂ ಹಾಗೂ ಇತರ ಸ್ವಯಂಸೇವಕರು ಸೇರಿ ಕರೋಲ್ ಫೌಂಡೇಷನ್ ಆಶ್ರಯದಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ ಕೊರೊನಾ ಯೋಧರಿಗೆ ಹಾಗೂ ಬಡವರಿಗೆ ಬಿರಿಯಾನಿ ಹಾಗೂ ಹಣ್ಣಿನ ರಸದ ಪೊಟ್ಟಣಗಳನ್ನು ಜಾತಿ, ಧರ್ಮದ ಭೇದ ಮಾಡದೇ ಹಂಚಿದರು.

'ಕೋವಿಡ್ ಯೋಧರು, ಈ ಸೋಂಕು ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿರುವ ಪೊಲೀಸರು, ಬಿಬಿಎಂಪಿ ನೌಕರರು, ಸರ್ಕಾರಿ ಆಸ್ಪತ್ರೆಗಳ ಸಿಬ್ಬಂದಿ ಹಾಗೂ ವಲಸೆ ಕಾರ್ಮಿಕರಿಗೆ ಬಿರಿಯಾನಿ ಹಂಚುವ ಮೂಲಕ ಹಬ್ಬ ಆಚರಿಸಿದ್ದೇವೆ. ದೇಶದ ಏಕತೆ, ಕೋಮು ಸಾಮರಸ್ಯ ಮತ್ತು ಜಾತ್ಯತೀತತೆ ಎತ್ತಿ ಹಿಡಿಯುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದು ಉಸ್ಮಾನ್ ಷರೀಫ್ ತಿಳಿಸಿದರು.

'ಅವಕಾಶ ವಂಚಿತರಿಗೆ ಹಾಗೂ ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ತಮ್ಮ ಖುಷಿಯನ್ನೆಲ್ಲ ಮರೆತು ಇತರರ ಸೇವೆಗಾಗಿ ಪಣ ತೊಟ್ಟವರಿಗೂ ಹಬ್ಬದ ಖುಷಿ ಸಿಗಬೇಕು ಎಂಬುದು ನಮ್ಮ ಆಶಯ' ಎಂದೂ ಉಸ್ಮಾನ್ ಅವರು ಹೇಳಿದರು.

ಕಾಡಂಚಿನ 200 ಕುಟುಂಬಕ್ಕೆ ಆಹಾರದ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಕನಕಪುರ: ಲಾಕ್‌ಡೌನ್‌ನಿಂದ ತೊಂದರೆಗೆ ಒಳಗಾಗಿದ್ದ ಅರಣ್ಯದ ಅಂಚಿನಲ್ಲಿ ಕೂಲಿ ಮಾಡಿ ಬದುಕುತ್ತಿದ್ದ ಬಡ ಕುಟುಂಬಗಳಿಗೆ ಅನುಕೂಲ ಕಲ್ಪಿಸಲು ಆಹಾರ ಕಿಟ್ ವಿತರಣೆ ಮಾಡಲಾಗುತ್ತಿದೆ ಎಂದು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್ ತಿಳಿಸಿದರು.

ತಾಲ್ಲೂಕಿನ ಮರಳವಾಡಿ ಹೋಬಳಿಯ ಯಲಚವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಿಣಿಗನದೊಡ್ಡಿ ಮತ್ತು ಬೆಂಚಕಲ್‌ದೊಡ್ಡಿ ಗ್ರಾಮಗಳಲ್ಲಿ ಶನಿವಾರ ಜನರಿಗೆ ದಿನಸಿ ಕಿಟ್ ವಿತರಣೆ ಮಾಡಿ ಮಾತನಾಡಿದರು.

ಕೊರೊನಾ ದೇಶದಲ್ಲಿ ಎಲ್ಲರ ಬದುಕನ್ನು ನಾಶಗೊಳಿಸಿದೆ. ರಾಜ್ಯದ ಗಡಿಪ್ರದೇಶದ ಕಾಡಂಚಿನಲ್ಲಿ ಇರುವ ಈ ಗ್ರಾಮಗಳಲ್ಲಿನ ಜನತೆ ಕೂಲಿಯನ್ನೇ ನಂಬಿ ಬದುಕುತ್ತಿರುವ ಬಡವರಾಗಿದ್ದಾರೆ. ಆ ಕಾರಣದಿಂದ ಹಾರೋಹಳ್ಳಿ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ರಾಮಪ್ಪ ಗುತ್ತೇರ್ ಮತ್ತು ಸಬ್ ಇನ್‌ಸ್ಪೆಕ್ಟರ್ ಟಿ. ಮುರಳಿ ತೊಂದರೆಯಲ್ಲಿ ಇರುವ ಜನರಿಗೆ ಏನಾದರೂ ಸಹಾಯ ಮಾಡಬೇಕೆಂಬ ಕಾರಣದಿಂದ ಊಟದ ವ್ಯವಸ್ಥೆ ಮತ್ತು ಆಹಾರದ ಕಿಟ್ ಹಂಚುವ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತೀರ ಹಿಂದುಳಿದ ಹಾಗೂ ಗಿರಿಜನರೇ ವಾಸಿಸುವ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಕಷ್ಟದಲ್ಲಿ ಇರುವಂತಹ ಸುಮಾರು 200 ಕುಟುಂಬಕ್ಕೆ ಆಹಾರದ ಕಿಟ್ ವಿತರಣೆ ಮಾಡುತ್ತಿದ್ದಾರೆ. ಇದು ಪ್ರಶಂಸನೀಯ ಕೆಲಸ ಎಂದರು.

'ವೈದ್ಯರನ್ನು ಅವಲಂಬಿಸದೆ ಕೊರೊನಾ ಗೆಲ್ಲಿರಿ'

ಪ್ರಜಾವಾಣಿ ವಾರ್ತೆ



ಎಸ್.ಉಮೇಶ್

ಕೋವಿಡ್ ಗೆದ್ದವರ ಕಥೆ

ಬೆಂಗಳೂರು:'ಕೊರೊನಾ ಸೋಂಕಿನ ಬಗ್ಗೆ ಹೆದರಿಕೆಯೇ ಬೇಡ. ಸೋಂಕಿನ ಲಕ್ಷಣಗಳು ಎಷ್ಟು ಬೇಗ ಪತ್ತೆಯಾಗುತ್ತವೆಯೋ, ಅಷ್ಟೇ ಶೀಘ್ರವಾಗಿ ಚಿಕಿತ್ಸೆಗೆ ಒಳಪಡಬೇಕು. ಕೊರೊನಾ ಸಹ ಅದೇ ವೇಗದಲ್ಲಿ ನಮ್ಮಿಂದ ದೂರವಾಗುತ್ತದೆ'.

ಇದು ಕೊರೊನಾ ಗೆದ್ದು ಬಂದ ಹಿರಿಯ ವಕೀಲ ಹಾಗೂ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ಅವರ ಕಿವಿಮಾತು.

'ಸೋಂಕಿತರು ಹೆಚ್ಚಾಗಲು ಪ್ರಮುಖ ಕಾರಣವೆಂದರೆ, ಸೋಂಕು ತಗುಲಿದಾಗ ಅದರ ಅರಿವು ಇಲ್ಲದಿರುವುದು, ತೀವ್ರಗೊಳ್ಳುವ ತನಕ ನಿರ್ಲಕ್ಷ್ಯ ತೋರುವುದು. ತೀವ್ರ ಹಂತದಲ್ಲಿದ್ದಾಗ ದೇಹದಲ್ಲಿ ರೋಗ ನಿರೋಧಕ ಶಕ್ತಿ ಕುಂದಿರುತ್ತದೆ. ಇದರಿಂದಾಗಿ ರೋಗ ವಾಸಿಯಾಗುವುದೂ ವಿಳಂಬವಾಗುತ್ತದೆ'.

'ಸೋಂಕಿನ ಲಕ್ಷಣಗಳು ಹೇಗಿರುತ್ತವೆ ಎಂದು ವೈದ್ಯರು ಹೇಳುತ್ತಲೇ ಬಂದಿದ್ದಾರೆ. ನಿಮ್ಮಲ್ಲಿ ಉಸಿರಾಟ ಸಮಸ್ಯೆ, ಕೆಮ್ಮು, ನೆಗಡಿ, ಜ್ವರ ಸೇರಿ ದಂತೆ ಆರೋಗ್ಯದಲ್ಲಿ ಏರುಪೇರು ಕಾಣಿಸಿ ಕೊಂಡ ಕೂಡಲೇ ಕೊರೊನಾ ತಪಾಸಣೆ ಮಾಡಿಸಿಕೊಳ್ಳುವುದು ಸೂಕ್ತ. 'ವರದಿ ಏನೇ ಬರಲಿ' ಎಂಬ ಧೈರ್ಯ ನಿಮ್ಮ ಜೊತೆಗಿರಲಿ'.

'ಕಳೆದ ತಿಂಗಳು ನನ್ನಲ್ಲಿ ಸುಸ್ತು ಕಾಣಿಸಿಕೊಂಡಿತು. ಯಾರ ಮಾತಿಗೂ ಕಾಯದೆ, ನೇರವಾಗಿ ಸಮೀಪದ ಆರೋಗ್ಯ ಕೇಂದ್ರದಲ್ಲಿ ಕೊರೊನಾ ತಪಾಸಣೆ ಮಾಡಿಸಿಕೊಂಡೆ. ನಿರೀಕ್ಷೆಯಂತೆ ಕೊರೊನಾ ದೃಢಪಟ್ಟ ವರದಿ ಬಂತು. ಇದನ್ನು ಕಂಡು ಹೆದರಲಿಲ್ಲ. ಚಿಕಿತ್ಸೆ ಪಡೆಯಲು ಕೂಡಲೇ ಕಿಮ್ಸ್ ಆಸ್ಪತ್ರೆಗೆ ದಾಖಲಾದೆ'.

'ನನಗಿಂತ ಮೊದಲೇ ದಾಖಲಾಗಿದ್ದ ಸೋಂಕಿತರು ತುಸು ಭಯಭೀತರಾಗಿದ್ದರು. ಕೆಲವರು ಮನೆಯಲ್ಲೇ ಕ್ವಾರಂಟೈನ್ ಆಗುವುದಾಗಿ ಆಸ್ಪತ್ರೆಯಿಂದ ತೆರಳುತ್ತಿದ್ದರು. ಒಬ್ಬ ರೋಗಿ ಭಯ ಪಡುವುದನ್ನು ಕಂಡು ಇತರರೂ ಹೆದರುತ್ತಿದ್ದರು. ನನ್ನ ವಾರ್ಡ್‌ನಲ್ಲಿದ್ದ ಎಲ್ಲರನ್ನೂ ಪರಿಚಯಿಸಿಕೊಂಡೆ. ಸಮಯ ಸಿಕ್ಕಾಗಲೆಲ್ಲ ಸೋಂಕು ವಿಚಾರ ಹೊರತುಪಡಿಸಿ, ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದೆವು. ವೈದ್ಯರು ಹೇಳುವ ಸೂಚನೆಗಳನ್ನು ತಪ್ಪದೇ ಪಾಲಿಸುತ್ತಿದ್ದೆವು. ಅಲ್ಲಿದ್ದ 22 ದಿನವೂ ಇದೇ ನನ್ನ ದಿನಚರಿ'.

'ಆಸ್ಪತ್ರೆಯಲ್ಲಿದ್ದಾಗ ನನ್ನ ಅನುಭವಕ್ಕೆ ಬಂದಿದ್ದು, ಬಹುತೇಕರು ತಮಗೆ ಸೋಂಕು ಬಂದಿದೆ ಎಂಬ ಭೀತಿಗಿಂತ ಕುಟುಂಬದಿಂದ ದೂರವಿದ್ದೇವೆ ಎಂಬ ಆತಂಕದಲ್ಲೇ ಮುಳುಗಿರುತ್ತಾರೆ. ಇದೇ ಅವರ ಆರೋಗ್ಯಮಟ್ಟದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಸೋಂಕಿನ ಲಕ್ಷಣಗಳು ಪತ್ತೆಯಾಗಿ, ಪಾಸಿಟಿವ್ ವರದಿ ಬಂದರೂ ಹೆದರಬಾರದು'.

'ಆಸ್ಪತ್ರೆಗೆ ಹೋಗಲೇ ಬೇಕು ಎನ್ನುವ ಅನಿವಾರ್ಯ ಇಲ್ಲ. ಮನೆಯಲ್ಲೇ ಪ್ರತ್ಯೇಕಗೊಂಡು ಎಲ್ಲ ಔಷಧಗಳನ್ನು ತಪ್ಪದೇ ತೆಗೆದುಕೊಳ್ಳಿ. ಎಲ್ಲ ರೋಗಿಗಳೂ ವೈದ್ಯರ ಮೇಲೆ ಅವಲಂಬನೆಯಾಗಬೇಕೆಂದಿಲ್ಲ. ಮನೆಯಿಂದಲೇ ಕೊರೊನಾ ಓಡಿಸಬಹುದು. ಕುಟುಂಬ ಜೊತೆಯಿರುವಾಗ ಮನೆ ಊಟವೂ ನಿಮಗೆ ಬಲ ನೀಡುವ ಮದ್ದು. ಅವರಿಗೆ ಮಾತನಾಡಿ, ಧೈರ್ಯ ತುಂಬುತ್ತಿರಿ. ವ್ಯಾಯಾಮ, ಯೋಗವೂ ಇರಲಿ'.

ಆಶಾ, ನರ್ಸ್‌ಗಳಿಗೆ ₹ 5 ಸಾವಿರ ಮೊತ್ತದ ಸ್ಮಾರ್ಟ್‌ಕಾರ್ಡ್ ಕೊಡುಗೆ



ಬಸನಗೌಡ ಪಾಟೀಲ

ವಿಜಯಪುರ: ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ₹ 5 ಸಾವಿರ ಮೊತ್ತದ ಉಚಿತ ಸ್ಮಾರ್ಟ್‌ಕಾರ್ಡ್ ಅನ್ನು ನೀಡುವುದಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಘೋಷಿಸಿದ್ದಾರೆ.

ಕೋವಿಡ್ ಎರಡನೇ ಅಲೆಯಲ್ಲಿ ಜನರ ಪ್ರಾಣ ಉಳಿಸಲು ತಮ್ಮ ಜೀವದ ಭಯ ತೊರೆದು ನಗರ ಪ್ರದೇಶದಲ್ಲಿ ಚಿಕಿತ್ಸೆ, ಲಸಿಕೆ ನೀಡುತ್ತಿರುವ 53 ಆಶಾ ಕಾರ್ಯಕರ್ತೆಯರು ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ 92 ಜನ ನರ್ಸ್ ಹಾಗೂ ವಾಹನ ಚಾಲಕರು ಸೇರಿದಂತೆ ಒಟ್ಟು 145 ಸಿಬ್ಬಂದಿಗೆ ಉತ್ತೇಜನ ನೀಡುವ ಸಲುವಾಗಿ ಸ್ಮಾರ್ಟ್ ಕಾರ್ಡ್ ನೀಡುತ್ತಿರುವುದಾಗಿ ತಿಳಿಸಿದ್ದಾರೆ.

₹ 5 ಸಾವಿರ ಮೊತ್ತದ ಈ ಸ್ಮಾರ್ಟ್ ಕಾರ್ಡ್ ಬಳಸಿ, ಶ್ರೀ ಸಿದ್ಧೇಶ್ವರ ಸೂಪರ್ ಬಜಾರ್ ಅಥವಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಎಸ್ ಹೈಪರ್ ಮಾರ್ಟ್‌ನಲ್ಲಿ (ಶಾಸಕರ ಮಾಲೀಕತ್ವ) ಏನನ್ನಾದರೂ ಖರೀದಿಸಬಹುದಾಗಿದೆ ಎಂದು ಹೇಳಿದ್ದಾರೆ.

ಈ ಸ್ಮಾರ್ಟ್‌ಕಾರ್ಡ್ ಅನ್ನು ಶೀಘ್ರವೇ ಅವರವರ ಹೆಸರಿಗೆ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರಗಳ್ಳತನ: ಆರೋಪಿಗೆ ಜಾಮೀನು ನೀಡಲು ನಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲಸಿಕೆ ತೆಗೆದುಕೊಂಡು ಮನೆಗೆ ಹಿಂದಿರುಗಿದ ಮಹಿಳೆಯೊಬ್ಬರನ್ನು ಹಿಂಬಾಲಿಸಿಕೊಂಡು ಬಂದು ಸರಗಳ್ಳತನ ಮಾಡಿದ ಆರೋಪಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಜಗದಾಂಬ ಎಂಬ ವೃದ್ಧೆಯೊಬ್ಬರು ಮಾರ್ಚ್ 16ರಂದು ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಲಸಿಕೆ ಪಡೆದು ಮಧ್ಯಾಹ್ನ 12.45ರ ಸುಮಾರಿನಲ್ಲಿ ಮನೆಗೆ ಮರಳಿದ್ದರು. ಅವರನ್ನು ಹಿಂಬಾಲಿಸಿಕೊಂಡು ಬಂದ ನಾಗೇಂದ್ರ ಬಾಬು ಎಂಬ ಆರೋಪಿ ಮನೆಗೆ ನುಗ್ಗಿ ಮಾಂಗಲ್ಯ ಸರ ಕಸಿದುಕೊಂಡು ಪರಾರಿಯಾಗಿದ್ದ.

ವೃದ್ಧೆ ಕಿರುಚಿಕೊಂಡಾಗ ಅವರ ಸಹೋದರ ಮತ್ತು ಗ್ರಾಮದ ಜನ ಅಟ್ಟಿಸಿಕೊಂಡು ಹೋದರೂ ಆರೋಪಿ ಸಿಕ್ಕಿರಲಿಲ್ಲ. ಅರಸೀಕೆರೆ ಠಾಣೆಗೆ ಜಗದಾಂಬ ದೂರು ನೀಡಿದ್ದರು.

ಅದೇ ದಿನ ಸಂಜೆ 5 ಗಂಟೆಗೆ ಆರೋಪಿಯನ್ನು ಬಂಧಿಸಿದ ಪೊಲೀಸರು, ಮಾಂಗಲ್ಯ ಸರ ವಶಕ್ಕೆ ಪಡೆದಿದ್ದರು.

ಆರೋಪಿಯ ನಾಗೇಂದ್ರ ಬಾಬು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ನಾಗೇಂದ್ರ ಬಾಬು ಹೈಕೋರ್ಟ್ ಮೆಟ್ಟಿಲೇರಿದ್ದರು. ಸುಳ್ಳು ಆರೋಪ ಹೊರಿಸಿ ಬಂಧಿಸಲಾಗಿದೆ ಎಂದು ಅರ್ಜಿದಾರರ ಪರ ವಕೀಲರ ವಾದಿಸಿದರು.

'ಈ ಅಪರಾಧವನ್ನು ಸಣ್ಣದೆಂದು ಪರಿಗಣಿಸಲು ಆಗುವುದಿಲ್ಲ. ಮಹಿಳೆಯ ಸುರಕ್ಷತೆಯೂ ಇದರಲ್ಲಿ ಒಳಗೊಂಡಿದೆ. ಹೀಗಾಗಿ, ಅರ್ಜಿದಾರ ಜಾಮೀನು ಪಡೆಯಲು ಅರ್ಹರಲ್ಲ' ಎಂದು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

'ಆಹಾರ–ಜೀವನಶೈಲಿಯ ಸಮ್ಮಿಶ್ರಣ ಹೊಸ ವೈರಸ್'

ಪ್ರಜಾವಾಣಿ ವಾರ್ತೆ



ಡಾ.ಶ್ರೀನಿವಾಸ ಕಕ್ಕಿಲ್ಲಾಯ

ಬೆಂಗಳೂರು:'ಇತ್ತೀಚಿನ ಹೊಸ ಆಹಾರ ಪದ್ಧತಿ ಹಾಗೂ ಹೊಸ ಜೀವನಶೈಲಿಯ ಸಮ್ಮಿಶ್ರಣವೇ ಈಗ ಬಿಗಡಾಯಿಸಿರುವ ಹೊಸ ವೈರಸ್' ಎಂದು ಖ್ಯಾತ ವೈದ್ಯ ಶ್ರೀನಿವಾಸ ಕಕ್ಕಿಲ್ಲಾಯ ತಿಳಿಸಿದರು.

ಎಂ.ಎಸ್.ಕಣ್ಣನ್ ಸ್ಮಾರಕ ಟ್ರಸ್ಟ್, ನವಕರ್ನಾಟಕ ಪ್ರಕಾಶನ ಹಾಗೂ ಹೊಸತು ವತಿಯಿಂದ ಆನ್‌ಲೈನ್ ಮೂಲಕ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಕೊರೊನಾ ಹೆದರದಿರೋಣ' ಕುರಿತು ಉಪನ್ಯಾಸ ನೀಡಿದರು.

'ಸಣ್ಣ ವಯಸ್ಸಿನವರು, ಯಾವುದೇ ಕಾಯಿಲೆ ಇಲ್ಲದಿರುವವರು ಮೃತಪಡುತ್ತಿದ್ದಾರೆ. ಅವರ ಆಧುನಿಕ ಆಹಾರ ಕ್ರಮ ದಿಂದಲೂ ಈ ಪರಿಸ್ಥಿತಿ ಎದುರಾಗಿರಬಹುದು. ಒಳ್ಳೆಯ ಜೀವನಶೈಲಿ ಹಾಗೂ ಆಹಾರ ಪದ್ಧತಿಯಲ್ಲಿ ಸೋಂಕು ವಿರಳ. ಅನಾರೋಗ್ಯ ಜೀವನಶೈಲಿಯಿಂದ ದುಸ್ಥಿತಿ ಎದುರಾಗಿದೆ' ಎಂದರು.

'ಕೊರೊನಾ ಸೋಂಕು ಬಾವಲಿಯಿಂದ ಹರಡಿದೆ ಎನ್ನಲಾಗಿದೆ. ಚರಕ ಸಂಹಿತೆಯ ವೈದ್ಯಕೀಯ ಶಾಸ್ತ್ರದಲ್ಲಿ ಆರೋಗ್ಯಕ್ಕೆ ಹಲವು ವನ್ಯಜೀವಿಗಳ ಮಾಂಸ, ಮೊಟ್ಟೆ ಸೇವನೆಯ ಉಲ್ಲೇಖ ಇದೆ. ಇದಾದ ಸಾವಿರಾರು ವರ್ಷಗಳಲ್ಲಿ ಆಹಾರ ಕ್ರಮ ಬದಲಾಗಿದೆ. ಆದರೆ, ವನ್ಯಜೀವಿ ಆಹಾರ ಹುಡುಕುವ ಪ್ರವೃತ್ತಿ ಇನ್ನೂ ಇದೆ' ಎಂದು ಹೇಳಿದರು.

'ದೇಶದ ಅಂಕಿ ಅಂಶಗಳನ್ನು ಗಮನಿಸಿದಾಗ ಕೊರೊನಾದಿಂದ ಹೆಚ್ಚು ಸಮಸ್ಯೆಗೆ ಒಳಗಾದವರು ಆರ್ಥಿಕ ಸ್ಥಿತಿವಂತರು, ಮಧ್ಯಮ ವರ್ಗ ಹಾಗೂ ದೇಹದ ತೂಕ ಹೆಚ್ಚು ಇರುವವರು. ಮೊದಲೆಲ್ಲ ಮಾಂಸಗಳನ್ನೇ ಯಥೇಚ್ಛವಾಗಿ ಸೇವಿಸಲಾಗುತ್ತಿತ್ತು. ಕೆಲ ಶತಮಾನಗಳಿಂದ ಧಾನ್ಯಗಳನ್ನು ತಿನ್ನುತ್ತಿದ್ದೇವೆ'.

'ಈ ಬಳಿಕವೇ ದೇಹದ ತೂಕ ಹೆಚ್ಚುವುದು, ಬೊಜ್ಜು ಸೇರಿದಂತೆ ಹೊಸ ಸಮಸ್ಯೆಗಳು ಕಾಣಿಸಿಕೊಂಡಿವೆ. ಧಾನ್ಯಗಳನ್ನು ಅವಲಂಬಿಸಿ ಅನೇಕ ನಾಗರೀಕತೆಗಳು ಹುಟ್ಟಿಕೊಂಡವು. ಈಗ ಆಧುನಿಕ ಕಾಯಿಲೆಗಳು ಹುಟ್ಟಿಕೊಂಡಿವೆ' ಎಂದರು.

ಚಿತ್ರಾವಳಿ



ಕೆನರಾ ಬ್ಯಾಂಕ್ ವತಿಯಿಂದ ಕೋವಿಡ್ ರೋಗಿಗಳ ಸೇವೆಗಾಗಿ ಆಂಬುಲೆನ್ಸ್ ವಾಹನವನ್ನು ಸ್ವಾಮಿ ದ್ವಾರಕಾನಾಥ್ ತೀರ್ಥ ಟ್ರಸ್ಟ್‌ಗೆ ಹಸ್ತಾಂತರಿಸಲಾಯಿತು. ಕೆನರಾ ಬ್ಯಾಂಕ್‌ನ ಹಿರಿಯ ಅಧಿಕಾರಿಗಳಾದ ಎಂ.ಜಿ.ಪಂಡಿತ್, ಕೆ.ಎ.ಸಿಂಧು, ಎ.ರಾಮಲಿಂಗಂ ಹಾಗೂ ಇತರರು ಇದ್ದರು.



ಚಲನಚಿತ್ರ ನಟ ಸಂತೋಷ್ ಆರ್ಯನ್ ಮತ್ತು ಕೆಪಿಸಿಸಿ ಸಾಮಾಜಿಕ ಜಾಲತಾಣ ಕಾರ್ಯದರ್ಶಿ ಗಗನ್ ಯಾದವ್ ಮತ್ತವರ ತಂಡ ಇಂದಿರಾ ನಗರದ ಚಿನ್ಮಯ ಮಿಷನ್ ಆಸ್ಪತ್ರೆಯ ವೈದ್ಯರಿಗೆ ಪೌಷ್ಟಿಕಾಂಶವುಳ್ಳ ಧಾನ್ಯಗಳ ಕಿಟ್‌ಗಳನ್ನು ವಿತರಿಸಿದರು.



ವಚನ ಜ್ಯೋತಿ ಬಳಗವು ತನ್ನ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಪುತ್ಥಳಿಗೆ ಪೂಜೆ ಸಲ್ಲಿಸಲಾಯಿತು. ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಪದಾಧಿಕಾರಿಗಳಾದ ರಾಜಾ ಗುರುಪ್ರಸಾದ್, ಚನ್ನಬಸವಯ್ಯ ತಿಪ್ಪೂರು, ರತ್ನವಚನ, ವನಜಾ ರಮೇಶ್, ಯಮುನಾ ದೇವಿ, ಬಿಜೆಪಿ ಮುಖಂಡ ಗೋಪಿನಾಥ್ ರಾಜು ಹಾಗೂ ಇತರರು ಇದ್ದರು.


ವನ್ಯಪ್ರಾಣಿಗಳಿಗೆ ಸೋಂಕು ತಗುಲದಂತೆ ಕ್ರಮ: ಸಿಬ್ಬಂದಿಗಿಲ್ಲ ರಜೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಟ್ಟೆಚ್ಚರ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅರಣ್ಯ ಇಲಾಖೆ ನೌಕರರಿಗೆ ಲಸಿಕೆ
- ಕಳ್ಳ ಬೇಟೆ ತಡೆ ಶಿಬಿರದಿಂದ ಹೊರಬರದಂತೆ ಸೂಚನೆ
- ವಾರಕ್ಕೊಮ್ಮೆ ಪರೀಕ್ಷೆ ಕಡ್ಡಾಯ



ರಸ್ತೆ ದಾಟುತ್ತಿರುವ ಜಿಂಕೆಗಳು

ಗುಂಡ್ಲುಪೇಟೆ (ಚಾಮರಾಜನಗರ): ಕೋವಿಡ್ ಕಾರಣದಿಂದ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿ ಅರಣ್ಯ ಬಿಟ್ಟು ಹೊರಬರದಂತೆ ಇಲಾಖೆ ಸೂಚನೆ ನೀಡಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 52ಕ್ಕೂ ಹೆಚ್ಚು ಕಳ್ಳ ಬೇಟೆ ತಡೆ ಶಿಬಿರಗಳಿದ್ದು, ಒಂದು ಕ್ಯಾಂಪ್‌ನಲ್ಲಿ ಐದು ಜನ ಇದ್ದಾರೆ. ಕ್ಯಾಂಪ್‌ನಲ್ಲಿರುವ ಸಿಬ್ಬಂದಿ ಊರಿಗೆ ಹೋಗುವಂತಿಲ್ಲ. ರಜೆ ಮೇಲೆ ತೆರಳಿದ ಸಿಬ್ಬಂದಿಯೂ ಊರಿಂದ ಕ್ಯಾಂಪಿಗೆ ಬರುವಂತಿಲ್ಲ. ಹಳ್ಳಿಗಳಲ್ಲೂ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಅರಣ್ಯ ಇಲಾಖೆ ಈ ಕ್ರಮ ಕೈಗೊಂಡಿದೆ. ವನ್ಯಜೀವಿಗಳಿಗೂ ಕೊರೊನಾ ಹರಡುವ ಭೀತಿ ಎದುರಾಗಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ತಿಳಿಸಿದರು.

'ಕೋವಿಡ್–19 ನಿಯಂತ್ರಣಕ್ಕೆ ಬರದ ಹಿನ್ನೆಲೆಯಲ್ಲಿ ಹಾಗೂ ಪ್ರಾಣಿಗಳಿಗೆ ಕೊರೊನಾ ಸೋಂಕು ತಗುಲಬಾರದು ಎಂಬ ಉದ್ದೇಶದಿಂದ, ಅರಣ್ಯ ಬಿಟ್ಟು ಹೋಗದಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ತೀರಾ ಅನಿವಾರ್ಯ ಸಂದರ್ಭದಲ್ಲಷ್ಟೇ ಅವರು ಹೊರ ಬರಬಹುದು., ಮನೆಗೆ ತೆರಳಬಹುದು' ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ನಟೇಶ್ ಪ್ರತಿಕ್ರಿಯಿಸಿದರು.

'ಬಂಡೀಪುರ ಸಫಾರಿ ಹಾಗೂ ಗೋಪಾಲಸ್ವಾಮಿ ಬೆಟ್ಟದ ದೇವಸ್ಥಾನಕ್ಕೆ ನಿರ್ಬಂಧ ಹೇರಲಾಗಿರುವ ಕಾರಣ ಅರಣ್ಯ ಪ್ರದೇಶಕ್ಕೆ ಜನ ಸಂಪರ್ಕ ತೀರಾ ಕಡಿಮೆ. ಕಳ್ಳ ಬೇಟೆ ತಡೆ ಶಿಬಿರಗಳಲ್ಲಿರುವವರು ಊರಿಗೆ ತೆರಳಿ ಅಲ್ಲಿಂದ ಸೋಂಕು ಅಂಟಿಸಿಕೊಂಡು ಬಂದರೆ ಕಷ್ಟ ಎಂಬ ಕಾರಣದಿಂದ ರಜೆ ನೀಡಿಲ್ಲ' ಎಂದು ಅವರು ತಿಳಿಸಿದರು.

'ಅರಣ್ಯ ಇಲಾಖೆ ನೌಕರರು ಹಾಗೂ ಸಿಬ್ಬಂದಿ ಕೊರೊನಾ ಲಸಿಕೆ ಪಡೆದಿದ್ದಾರೆ. ಇಲಾಖೆಯಲ್ಲಿ ಕೊರೊನಾ ಸೋಂಕು ತಗುಲಿದವರ ಸಂಖ್ಯೆಯೂ ಕಡಿಮೆ. ವಾರಕ್ಕೊಮ್ಮೆ ಸಿಬ್ಬಂದಿಗೆ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ' ಎಂದರು.

'ತೀರ ಅವಶ್ಯಕತೆ ಇದ್ದ ಸಿಬ್ಬಂದಿಗೆ ಮಾತ್ರ ರಜೆ ನೀಡಲಾಗುತ್ತಿದ್ದು, ಅವರು ಮರಳಿ ಕೆಲಸಕ್ಕೆ ಬಂದರೂ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ' ಎಂದು ನಟೇಶ್ ಅವರು ಮಾಹಿತಿ ನೀಡಿದರು.

'ಐಸಿಯು ಬೆಡ್ ಸಂಖ್ಯೆ ಹೆಚ್ಚಿಸಿ'

ಮಾಗಡಿ: 'ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ತಾಲ್ಲೂಕಿನ ಕೋವಿಡ್ ಸೋಂಕಿತರಿಗೆ ಉತ್ತಮ ಚಿಕಿತ್ಸೆ ನೀಡಬೇಕು. ಚಿಕಿತ್ಸೆಗೆ ಬೇಕಾದ ಅನುಕೂಲ ಮಾಡಿಕೊಡುತ್ತೇವೆ' ಎಂದು ಮಾಜಿ ಸಚಿವ ಎಚ್.ಎಂ. ರೇವಣ್ಣ ತಿಳಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿ ಸೋಂಕಿತರಿಗೆ ಧೈರ್ಯ ತುಂಬಿದ ನಂತರ ವೈದ್ಯಾಧಿಕಾರಿಗಳೊಂದಿಗೆ ಸಮಸ್ಯೆ ಬಗ್ಗೆ ಚರ್ಚಿಸಿದ ಬಳಿಕ ಅವರು ಮಾತನಾಡಿದರು.


ಮಾಗಡಿಯಿಂದ ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಗೆ ಸೋಂಕಿತರನ್ನು ಕಳುಹಿಸಲಾಗುತ್ತಿದೆ. ಅಲ್ಲಿ ಗುಣಮುಖರಾದವರ ಸಂಖ್ಯೆ ಕಡಿಮೆಯಿದೆ. ಅಲ್ಲಿಗೆ ಹೆಚ್ಚಿನ ಸೋಂಕಿತರನ್ನು ಕಳುಹಿಸುವುದು ಬೇಡ. ನಿರ್ಲಕ್ಷ್ಯ ಮಾಡದೆ ಮುಂಚಿತವಾಗಿಯೇ ಸೋಂಕಿತರನ್ನು, ರಾಮ ನಗರದ ಕಂದಾಯ ಭವನದಲ್ಲಿ ಇರುವ ಜಿಲ್ಲಾ ಕೋವಿಡ್ ಆಸ್ಪತ್ರೆಗೆ ಸೇರಿಸಬೇಕು ಎಂದರು.

ಕೋವಿಡ್ ಕೇರ್ ಸೆಂಟರ್‌ಗೆ ಒತ್ತಾಯ

ಬಿಡದಿ: 'ರಾಜಧಾನಿಗೆ ಸಮೀಪದ ಬಿಡದಿಯಲ್ಲಿ ಕೋವಿಡ್ ಸೋಂಕು ತಗುಲಿ ಹಲವು ಮಂದಿ ಸಾವಿಗೀಡಾಗಿದ್ದಾರೆ. ಜನಸಂಖ್ಯೆಯಲ್ಲಿ ತಾಲ್ಲೂಕು ಕೇಂದ್ರವನ್ನೇ ಮೀರಿಸುವಂತೆ ಬೆಳೆಯುತ್ತಿರುವ ಪಟ್ಟಣದಲ್ಲಿ ಇಂದಿಗೂ ಕೋವಿಡ್ ಕೇರ್ ಸೆಂಟರ್ ತೆರೆದಿಲ್ಲ. ಕೂಡಲೇ, ಜನ ಪ್ರತಿನಿಧಿಗಳು, ಜಿಲ್ಲಾಧಿಕಾರಿ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು' ಎಂದು ಸಾಮಾಜಿಕ ಹೋರಾಟಗಾರ ಮುತ್ತಣ್ಣ ಒತ್ತಾಯಿಸಿದ್ದಾರೆ.

ನಿಧನ ವಾರ್ತೆ

ಅಶೋಕ್‌ಕುಮಾರ್



ಬೆಂಗಳೂರು: ರಾಮಕೃಷ್ಣನಗರ ಮಕ್ಕಳ ಆಟದ ಮೈದಾನ ಹೋರಾಟ ಸಮಿತಿ ಸದಸ್ಯರೂ ಆಗಿದ್ದ ಕಂಠೀರವ ನಗರದ ನಿವಾಸಿ ಅಶೋಕ್ ಕುಮಾರ್ (52) ಅವರು ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಬಿಬಿಎಂಪಿ: ಕೊರೊನಾ ಯೋಧರಲ್ಲಿ ಕಳವಳ ● ಕೋವಿಡ್ ನಿಯಂತ್ರಣ ಕಾರ್ಯದ ಮೇಲೂ ಹೆಚ್ಚುತ್ತಿದೆ ಒತ್ತಡ

ಆರೋಗ್ಯ ಸಿಬ್ಬಂದಿಯಲ್ಲಿ ಸೋಂಕು ಹೆಚ್ಚಳ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಈ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವಲ್ಲಿ ಮುಂಚೂಣಿ ಯೋಧರಾಗಿ ಕಾರ್ಯನಿರ್ವಹಿಸುತ್ತಿರುವ ಬಿಬಿಎಂಪಿ ಆರೋಗ್ಯ ವಿಭಾಗದ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿಗೆ ಒಳಗಾಗುತ್ತಿದ್ದಾರೆ. ಇದರಿಂದಾಗಿ ಕೋವಿಡ್ ಪರೀಕ್ಷೆ, ಲಸಿಕೆ ಅಭಿಯಾನ, ಸೋಂಕಿತರ ಜೊತೆ ಸಂಪರ್ಕ ಹೊಂದಿದವರ ಪತ್ತೆ ಕಾರ್ಯ ಮುಂತಾದ ಕೋವಿಡ್ ನಿಯಂತ್ರಣ ಚಟುವಟಿಕೆ ಸವಾಲಾಗಿ ಪರಿಣಮಿಸಿದೆ.

ಬಿಬಿಎಂಪಿ ವ್ಯಾಪ್ತಿಯ ವಿವಿಧ ವಲಯಗಳಲ್ಲಿ 25 ವೈದ್ಯರು ಸೇರಿದಂತೆ 150 ಅಧಿಕ ಆರೋಗ್ಯ ಸಿಬ್ಬಂದಿಗೆ ಕೋವಿಡ್ ಕಾಣಿಸಿಕೊಂಡಿದೆ. ಒಂದೇ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಾಲ್ಕೈದು ಮಂದಿಗೆ ಒಮ್ಮೆಲೇ ಸೋಂಕು ಕಾಣಿಸಿಕೊಂಡ ಉದಾಹರಣೆಗಳೂ ಇವೆ. ಆರೋಗ್ಯ ಸಿಬ್ಬಂದಿ ಸೋಂಕಿಗೆ ಒಳಗಾದಾಗ ಅಲ್ಲಿನ ಇತರ ಆರೋಗ್ಯ ಸಿಬ್ಬಂದಿ ಮೇಲೆ ವಿಪರೀತ ಕೆಲಸದೊತ್ತಡ ಸೃಷ್ಟಿಯಾಗುತ್ತಿದೆ.

'ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಸಂಪರ್ಕ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಹಾಯಕಿಯರು ಸೇರಿ ಐದು ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿತು. ಆದರೆ, ನಿತ್ಯ ನಡೆಸಬೇಕಾದ ಕೋವಿಡ್ ಪರೀಕ್ಷೆಗಳ ಗುರಿಯನ್ನು ನಾವು ಸಾಧಿಸಲೇ ಬೇಕಿತ್ತು. ಜತೆಗೆ ಕೋವಿಡ್ ಲಸಿಕೆ ಅಭಿಯಾನವನ್ನೂ ನಡೆಸಬೇಕಿತ್ತು. ಇಂತಹ ಪರಿಸ್ಥಿತಿ ನಿಭಾಯಿಸುವುದು ನಿಜಕ್ಕೂ ಕಷ್ಟದ ಕೆಲಸ' ಎಂದು ಪಶ್ಚಿಮ ವಲಯದ ಪ್ರಾಥಮಿಕ ಆರೋಗ್ಯ ಕೇಂದ್ರವೊಂದರ ಸಿಬ್ಬಂದಿ 'ಪ್ರಜಾವಾಣಿ'ಗೆ ತಿಳಿಸಿದರು.



ಪ್ರಜಾವಾಣಿ ವಿಶೇಷ

'ನಮ್ಮ ವಲಯದಲ್ಲಿ ಏನಿಲ್ಲವೆಂದರೂ 35ಕ್ಕೂ ಅಧಿಕ ಆರೋಗ್ಯ ಸಿಬ್ಬಂದಿ ಹಾಗೂ 12 ವೈದ್ಯರು ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ. ಸೊಂಕು ತಗುಲಿದ್ದ ವೈದ್ಯರೊಬ್ಬರ ತಾಯಿಯು ಕೋವಿಡ್‌ನಿಂದ ಕೊನೆಯುಸಿರೆಳೆದರು. ಶ್ರೀರಾಂಪುರದ ಹೆರಿಗೆ ಆಸ್ಪತ್ರೆಯೊಂದರ ಮೇಲ್ವಿಚಾರಕ ವೈದ್ಯೆಯೊಬ್ಬರಿಗೆ ಕೊರೊನಾ ಸೋಂಕು ತಗುಲಿತ್ತು. ಅವರ ಪತಿ ಕೋವಿಡ್‌ನಿಂದ ಮೃತಪಟ್ಟರು' ಎಂದು ಪಶ್ಚಿಮ ವಲಯದ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ನಮ್ಮ ವಲಯದಲ್ಲಿ ಆರೋಗ್ಯ ವಿಭಾಗದ ಶೇ 40ಕ್ಕೂ ಅಧಿಕ ಸಿಬ್ಬಂದಿಗೆ ಕೋವಿಡ್ ಕಾಣಿಸಿಕೊಂಡಿದೆ. ಒಬ್ಬರು ಸೋಂಕಿನಿಂದ ಗುಣಮುಖವಾಗಿ ಬರುತ್ತಿರುವಾಗ ಮತ್ತೊಬ್ಬರಿಗೆ ಸೋಂಕು ಕಾಣಿಸಿಕೊಳ್ಳುತ್ತಿದೆ. ಇರುವ ಸಿಬ್ಬಂದಿಯೇ ಕರ್ತವ್ಯದ ಹೊಣೆಯನ್ನು ಹಂಚಿಕೊಂಡು ಕೋವಿಡ್ ನಿಯಂತ್ರಣ ಕಾರ್ಯಕ್ಕೆ ಅಡ್ಡಿ ಆಗದಂತೆ ನೋಡಿಕೊಳ್ಳುತ್ತಿದ್ದೇವೆ' ಎಂದು ಪೂರ್ವ ವಲಯದ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಡ್ ಪರೀಕ್ಷೆಗಾಗಿ ಗಂಟಲ ದ್ರವ ಸಂಗ್ರಹಿಸುವ ಸಂಪರ್ಕ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು, ದತ್ತಾಂಶ ನೋಂದಣಿ ಸಿಬ್ಬಂದಿ, ವೈದ್ಯರು ಸೋಂಕಿತರ ಜೊತೆ ನಿತ್ಯ ವ್ಯವಹರಿಸಬೇಕಾಗುತ್ತದೆ. ಹಾಗಾಗಿ ಆರೋಗ್ಯ ಸಿಬ್ಬಂದಿಗೆ ಸೋಂಕು ತಗಲುವ ಅಪಾಯ ಜಾಸ್ತಿ. ನಮ್ಮ ವಲಯದಲ್ಲೂ ಐವರು ವೈದ್ಯರು ಹಾಗೂ 20ಕ್ಕೂ ಅಧಿಕ ಆರೋಗ್ಯ ಸಿಬ್ಬಂದಿಯಲ್ಲಿ ಕೋವಿಡ್ ಕಾಣಿಸಿಕೊಂಡಿದೆ' ಎಂದು ದಕ್ಷಿಣ ವಲಯದ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ನಮ್ಮ ವಲಯದಲ್ಲಿ ಸೋಂಕು ಕಾಣಿಸಿಕೊಂಡವರ ಸಂಖ್ಯೆ ಕಡಿಮೆ. ಎರಡನೇ ಅಲೆಯಲ್ಲಿ ಒಬ್ಬರು ಸಂಪರ್ಕ ಕಾರ್ಯಕರ್ತೆಯಲ್ಲಿ ಮಾತ್ರ ಕೊರೊನಾ ಸೋಂಕು ಕಾಣಿಸಿಕೊಂಡಿದೆ' ಎಂದು ಯಲಹಂಕ ವಲಯದ ಆರೋಗ್ಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ನಮ್ಮ ವಲಯದಲ್ಲಿ ಬಾಗಲಗುಂಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಕೆಲ ಸಿಬ್ಬಂದಿಯಲ್ಲಿ ಸೋಂಕು ಕಾಣಿಸಿಕೊಂಡಿತ್ತು' ಎಂದು ದಾಸರಹಳ್ಳಿ ವಲಯದ ಅಧಿಕಾರಿಯೊಬ್ಬರು ಹೇಳಿದರು.

'ಪ್ರತಿ 15 ದಿನಕ್ಕೊಮ್ಮೆ ಕೋವಿಡ್ ಪರೀಕ್ಷೆ'

'ಕೊರೊನಾ ನಿಯಂತ್ರಣ ಕರ್ತವ್ಯ ನಿರ್ವಹಿಸುವ ಆರೋಗ್ಯ ಸಿಬ್ಬಂದಿಗೆ ಪ್ರತಿ 15 ದಿನಗಳಿಗೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸುತ್ತೇವೆ. ಹಾಗಾಗಿ ಸೋಂಕಿನ ಲಕ್ಷಣ ಕಂಡುಬಂದರೆ ಅವರು ತಕ್ಷಣವೇ ಮತ್ತೆ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ' ಎಂದು ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಬಹುತೇಕ ಎಲ್ಲ ಆರೋಗ್ಯ ಸಿಬ್ಬಂದಿಗೂ ಕೋವಿಡ್ ಲಸಿಕೆ ಹಾಕಿಸಿದ್ದೇವೆ. ಹಾಗಾಗಿ ಎರಡನೇ ಅಲೆಯಲ್ಲಿ ಅನೇಕ ಸಿಬ್ಬಂದಿಗೆ ಸೋಂಕು ಕಾಣಿಸಿಕೊಂಡಿದೆಯಾದರೂ ಅವರು ಗಂಭೀರ ಆರೋಗ್ಯ ಸಮಸ್ಯೆ ಎದುರಿಸಿಲ್ಲ. ಸೋಂಕು ದೃಢಪಟ್ಟ ಏಳು ದಿನಗಳ ಬಳಿಕ ಅವರನ್ನು ಮತ್ತೆ ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತೇವೆ. ರೋಗ ವಾಸಿಯಾದ ಬಳಿಕ ಅವರು ಮತ್ತೆ ಕರ್ತವ್ಯಕ್ಕೆ ಹಾಜರಾಗುತ್ತಾರೆ' ಎಂದರು.

'ವೈಯಕ್ತಿಕ ಸುರಕ್ಷತೆಗೆ ಆದ್ಯತೆ ನೀಡಬೇಕು'

'ಕೋವಿಡ್‌ನಂತಹ ಸಾಂಕ್ರಾಮಿಕ ನಿಯಂತ್ರಣ ಮಾಡುವಾಗ ಆರೋಗ್ಯ ವಿಭಾಗದ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿಗೆ ಒಳಗಾಗುತ್ತಿರುವುದು ಕಳವಳಕಾರಿ ಸಂಗತಿ. ಈ ಬಿಕ್ಕಟ್ಟಿನ ನಡುವೆಯೂ ಧೃತಿಗೆಡದೇ ಕರ್ತವ್ಯ ನಿರ್ವಹಿಸುವುದು ಅನಿವಾರ್ಯ. ಆರೋಗ್ಯ ಸಿಬ್ಬಂದಿ ಮಾಸ್ಕ್ ಹಾಗೂ ಮುಖ ಕವಚಗಳನ್ನು ಧರಿಸುವ ಮೂಲಕ ವೈಯಕ್ತಿಕ ಸುರಕ್ಷತೆಗೆ ಹೆಚ್ಚಿನ ಆಸ್ಥೆ ವಹಿಸಬೇಕು. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ ತಿಳಿಸಿದರು.

'ನಮ್ಮವರಿಗೂ ಹಾಸಿಗೆ ಸಿಗುವ ಖಾತರಿ ಇಲ್ಲ'

'ಕೊರೊನಾ ನಿಯಂತ್ರಣಕ್ಕೆ ಬಿಬಿಎಂಪಿಯ ಆರೋಗ್ಯ ಸಿಬ್ಬಂದಿ ಜೀವ ಪಣಕ್ಕಿಟ್ಟು ಶ್ರಮಿಸುತ್ತಿದ್ದಾರೆ. ಬೇಸರದ ಸಂಗತಿ ಎಂದರೆ ಅವರಿಗೆ ಕೋವಿಡ್ ಬಂದು ಆರೋಗ್ಯ ಸ್ಥಿತಿ ಉಲ್ಬಣಗೊಂಡರೆ ಚಿಕಿತ್ಸೆಗೆ ಐಸಿಯು ಅಥವಾ ವೆಂಟಿಲೇಟರ್ ವ್ಯವಸ್ಥೆಯ ಹಾಸಿಗೆ ಸಿಗುತ್ತದೆ ಎಂಬ ಖಾತರಿ ಇಲ್ಲ. ಆರೋಗ್ಯ ಸಿಬ್ಬಂದಿಯಿಂದಾಗಿ ಅವರ ಮನೆಯವರಿಗೂ ಕೋವಿಡ್ ಸೋಂಕು ತಗಲುತ್ತಿದೆ. ಇಂತಹ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಹಾಸಿಗೆ ಪಡೆಯಲು ಸಾಧ್ಯವಾಗದ ಸ್ಥಿತಿ ಇದೆ. ಇದು ಆರೋಗ್ಯ ಸಿಬ್ಬಂದಿ ಧೃತಿಗೆಡುವಂತೆ ಮಾಡುತ್ತಿದೆ' ಎಂದು ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ವೈದ್ಯರೊಬ್ಬರು ಕಳವಳ ವ್ಯಕ್ತಪಡಿಸಿದರು.



ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಹಾಗೂ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಕೊರೊನಾ ಆರೈಕೆ ಕೇಂದ್ರದ ಪರಿಶೀಲನೆ ನಡೆಸಿದರು. ವಲಯ ವೈದ್ಯಾಧಿಕಾರಿಗಳು ಹಾಗೂ ಪಾಲಿಕೆ ಸಿಬ್ಬಂದಿ ಇದ್ದರು.

'ಆಸ್ಪತ್ರೆಗಳಿಗೆ ಶಾಶ್ವತ ಸೌಕರ್ಯಗಳಿಗೆ ಚಿಂತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ವಿಧಾನಸಭಾ ಕ್ಷೇತ್ರ ಹಾಗೂ ರಾಜರಾಜೇಶ್ವರಿ ನಗರ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಆಮ್ಲಜನಕ ಸಹಿತ ಹಾಸಿಗೆಗಳು, ಆಮ್ಲಜನಕ ಸಾಂದ್ರಕಗಳು, ವೈದ್ಯಕೀಯ ಕಿಟ್ ಸೇರಿದಂತೆ ಮೂಲ ಸೌಕರ್ಯಗಳನ್ನು ಶಾಶ್ವತವಾಗಿ ಒದಗಿಸುವ ಕುರಿತು ಸರ್ಕಾರದೊಂದಿಗೆ ಚರ್ಚಿಸಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಅವರೊಂದಿಗೆ ಯಶವಂತಪುರ ವಿಧಾನಸಭಾ ಕ್ಷೇತ್ರ ಹಾಗೂ ರಾಜರಾಜೇಶ್ವರಿ ನಗರ ವಲಯದ ಕೋವಿಡ್ ಆರೈಕೆ ಕೇಂದ್ರಗಳಿಗೆ ಶನಿವಾರ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳ ಪರಿಶೀಲನೆ ನಡೆಸಿದರು.

'ಈ ವಲಯದ ಆಸ್ಪತ್ರೆಗಳಿಗೆ ಕೊರೊನಾ ಉದ್ದೇಶಕ್ಕೆ ಮಾತ್ರವಲ್ಲದೆ, ದೀರ್ಘಕಾಲಕ್ಕೆ ಹಾಗೂ ಶಾಶ್ವತವಾಗಿ ಎಲ್ಲ ವ್ಯವಸ್ಥೆಗಳನ್ನು ಒದಗಿಸುವ ಉದ್ದೇಶವಿದೆ. ಈ ಕುರಿತು ಸರ್ಕಾರದೊಂದಿಗೆ ಚರ್ಚಿಸಿ, ಮುಂಬರುವ ದಿನಗಳಲ್ಲಿ ಈ ವ್ಯವಸ್ಥೆ ಮಾಡಲಾಗುವುದು' ಎಂದು ಅವರು ಹೇಳಿದರು.

ಜನಸೇವಾ ವಿದ್ಯಾ ಕೇಂದ್ರದಲ್ಲಿ ನೂತನವಾಗಿ ಪ್ರಾರಂಭವಾಗಿರುವ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರಕ್ಕೆ ಭೇಟಿ ನೀಡಿ, ಪಾಲಿಕೆಯಿಂದ ಸಚಿವ ಸೋಮಶೇಖರ್ ಅವರು ಈ ಕೇಂದ್ರದ 16 ಹಾಸಿಗೆಗಳಿಗೆ ಆಮ್ಲಜನಕ ಸಾಂದ್ರಕಗಳ ವ್ಯವಸ್ಥೆ ಮಾಡಿರುವ ಕುರಿತು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಶ್ಲಾಘನೆ ವ್ಯಕ್ತಪಡಿಸಿದರು.

ನಗರದ ಕೋವಿಡ್ ಅಂಕಿ–ಅಂಶ

10,42,714 ▲ ಒಟ್ಟು ಪ್ರಕರಣಗಳು (10,29,312 ನಿನ್ನೆಯ ವಿವರ)

3,66,791 ▲ ಸಕ್ರಿಯ ಪ್ರಕರಣಗಳು

6,66,582 ▲ ಗುಣಮುಖರಾದವರು

9,340 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	13,402	▼
ಗುಣಮುಖ	7,379	▼
ಸಾವು	94	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್



ವ್ಯಾಪಾರಿಗಳ ಅಳಲು

ತಳ್ಳುಗಾಡಿಗಳಲ್ಲಿ ವ್ಯಾಪಾರ ಮಾಡಲು ನಿಯಮಾವಳಿಗಳಲ್ಲಿ ಅವಕಾಶ ನೀಡಿದರೂ ಪುರಭವನ ಎದುರು ಸಂಚಾರ ಪೊಲೀಸರು ಮಹಿಳಾ ವ್ಯಾಪಾರಿಯೊಬ್ಬರ ತಕ್ಕಡಿ ಕಿತ್ತುಕೊಂಡು ದಂಡ ವಿಧಿಸುವುದಾಗಿ ಶನಿವಾರ ಎಚ್ಚರಿಕೆ ನೀಡಿದರು - ಪ್ರಜಾವಾಣಿ ಚಿತ್ರ

ಮುಸ್ಲಿಂ ಯುವಕರಿಂದ ಹಿಂದೂಗಳ ಅಂತ್ಯಸಂಸ್ಕಾರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕೊರೊನಾ ಎರಡನೇ ಅಲೆಯಲ್ಲಿ ಮೃತಪಟ್ಟ 14 ಹಿಂದೂಗಳ ಶವಸಂಸ್ಕಾರ ನೆರವೇರಿಸುವ ಮೂಲಕ ಶಿವಮೊಗ್ಗದ ಮುಸ್ಲಿಂ ಯುವಕರು ಮಾನವೀಯತೆ ತೋರಿದ್ದಾರೆ.

ಪ್ಯಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಜಿಲ್ಲಾ ಘಟಕದ ಅಧ್ಯಕ್ಷ ಸಲೀಂ ಖಾನ್ ಮತ್ತು ಅವರ ತಂಡದ ಯುವಕರು ಜಾತಿ, ಧರ್ಮ ಮೀರಿ ಶವ ಸಂಸ್ಕಾರ ನೆರವೇರಿಸಿದ್ದಾರೆ. ಶಿವಮೊಗ್ಗ ಮಾತ್ರವಲ್ಲದೆ ಚನ್ನಗಿರಿ, ಹೊನ್ನಾಳಿ, ತರೀಕೆರೆ ಭಾಗಗಳಿಗೂ ತೆರಳಿ ಅವರ ಊರುಗಳಲ್ಲೇ ಅಂತ್ಯಸಂಸ್ಕಾರ ನೆರವೇರಿಸಿ ಬಂದಿದ್ದಾರೆ. ಕೋವಿಡ್‌ನಿಂದ ಮೃತಪಟ್ಟ ಮುಸ್ಲಿಂ ಸಮುದಾಯದ 50ಕ್ಕೂ ಹೆಚ್ಚು ಶವಗಳ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ.

'ಎರಡನೇ ಅಲೆ ಆರಂಭವಾದ ನಂತರ ಇಲ್ಲಿಯವರೆಗೂ 64 ಶವಗಳ ಅಂತ್ಯಸಂಸ್ಕಾರ ನೆರವೇರಿಸಿದ್ದೇವೆ. ಮಾನವೀಯ ಕಾರ್ಯ ಮುಂದುವರಿಸಿದ್ದೇವೆ' ಎನ್ನುತ್ತಾರೆ ಸಲೀಂ ಖಾನ್.



ಅಂತ್ಯಸಂಸ್ಕಾರದಲ್ಲಿ ನಿರತರಾದ ಸಲೀಂ ಖಾನ್ ತಂಡ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.29 ಕೋಟಿ ▲	2.46 ಕೋಟಿ ▲
ಸಕ್ರಿಯ ಪ್ರಕರಣ	1.86 ಕೋಟಿ ▲	36.73 ಲಕ್ಷ ▲
ಗುಣಮುಖ	14.09 ಕೋಟಿ ▲	2.07ಕೋಟಿ ▲
ಸಾವು	33.78 ಲಕ್ಷ ▲	2.70 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	6.98 ಲಕ್ಷ ▼	3.18 ಲಕ್ಷ ▲
ಗುಣಮುಖ	8.11 ಲಕ್ಷ ▼	3.74 ಲಕ್ಷ ▲
ಸಾವು	13,427 ▲	4,231 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

84,486 ▲ ಬ್ರೆಜಿಲ್ | 39,825 ▲ ಅಮೆರಿಕ | 19,416 ▲ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

63.60 ▲ ಅಮೆರಿಕ | 10.60 ▲ ಬ್ರೆಜಿಲ್ | 6.72 ▼ ಫ್ರಾನ್ಸ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

80,512 ▲ ಮಹಾರಾಷ್ಟ್ರ

17,359 ▲ ತಮಿಳುನಾಡು

21,244 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

53.44 ಮಹಾರಾಷ್ಟ್ರ ▲

20.88 ಕೇರಳ ▲

16.09 ಉತ್ತರ ಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್



ಕೋವಿಡ್ ಲಸಿಕೆ ಪಡೆಯಲು ಬಂದ 84 ವರ್ಷದ ನಾಗವೇಣಿ ಎಂಬುವರಿಗೆ ಕೆ.ಸಿ. ಜನರಲ್ ಆಸ್ಪತ್ರೆಯ ಶುಶ್ರೂಷಕರು ಆಟೊ ರಿಕ್ಷಾದಲ್ಲಿಯೇ ಲಸಿಕೆ ನೀಡಿದರು – ಪ್ರಜಾವಾಣಿ ಚಿತ್ರ

ಹೂ ಕೀಳದೇ ಹೊಲದಲ್ಲಿಯೇ ಬಿಟ್ಟ ರೈತರು

ಮುಳಬಾಗಿಲು: ನಗರದಲ್ಲಿ ಸುಮಾರು 40ಕ್ಕೂ ಹೆಚ್ಚು ಹೂವಿನ ಅಂಗಡಿಗಳು, ಮಳಿಗೆಗಳು ಇವೆ. ಈಚೆಗೆ ವ್ಯಾಪಾರವಿಲ್ಲದೇ ಅವರ ಬದುಕು ಬೀದಿಗೆ ಬೀಳುವಂತಾಗಿದೆ.

ನೆರೆಯ ಆಂಧ್ರಪ್ರದೇಶದ ಕುಪ್ಪಂನ ಹೂವು ಮಾರುಕಟ್ಟೆಯಿಂದ ಪ್ರತಿ ದಿನ ಕನಕಾಂಬರ, ಮಲ್ಲಿಗೆ, ಕಾಕಡ ತರಿಸಲಾಗುತ್ತದೆ. ಇದನ್ನು ಒಪ್ಪಮಾಡಿ ಹೂವುಗಳನ್ನು ಮನೆಯಲ್ಲಿ ಕಟ್ಟುವುದು ಗೃಹಿಣಿಯರ ದಿನ ನಿತ್ಯದ ಕೆಲಸ. ಲಾಕ್‌ಡೌನ್ ಕಾರಣದಿಂದ ಹತ್ತು ಗಂಟೆಯ ಒಳಗೆ ಮಾರಾಟ ಮಾಡಬೇಕಾಗುತ್ತದೆ.

ಇನ್ನು ಹೂವು ಬೆಳೆದ ರೈತರ ಪಾಡು ಹೇಳತೀರದಾಗಿದೆ. ನಗರದ ಹೊರ ವಲಯದಲ್ಲಿ ಚೆಂಡು ಹೂವನ್ನು ಬೆಳೆದ ರೈತರೊಬ್ಬರು ಬೆಳೆಯನ್ನು ತಮ್ಮ ತೋಟದಲ್ಲಿ ಕೊಯಿಲು ಮಾಡದೇ ಹಾಗೇ ಬಿಟ್ಟಿದ್ದಾರೆ. ಕೊರೊನಾ ಕಾರಣ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಹಾಗಾಗಿ ಚೆಂಡು ಹೂವನ್ನು ಕೇಳುವವರಿಲ್ಲ. ಹೂವು ಮಾರಾಟಗಾರರಿಗೆ ಮತ್ತು ಬೆಳೆಗಾರರಿಗೆ ಸರ್ಕಾರ ಪರಿಹಾರ ಒದಗಿಸಬೇಕು ಎಂದು ತಾಲ್ಲೂಕು ವಕೀಲರ ಸಂಘದ ಗೌರವಾಧ್ಯಕ್ಷ ಗೊಲ್ಲಹಳ್ಳಿ ಸದಾಶಿವಯ್ಯ ಒತ್ತಾಯಿಸಿದರು.



ಕೇಂಬ್ರಿಡ್ಜ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಿ.ಕೆ.ಮೋಹನ್ ಕೂಲಿ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ವಿತರಿಸಿದರು

ಆಹಾರ ಸಾಮಗ್ರಿ ಕಿಟ್ ವಿತರಣೆ

ಕೆ.ಆರ್.ಪುರ: ಲಾಕ್ ಡೌನ್ ನಿಂದಾಗಿ ತೊಂದರೆಯಲ್ಲಿರುವ ಕೂಲಿ ಕಾರ್ಮಿಕರು, ಆಟೋಚಾಲಕರು, ಪೌರ ಕಾರ್ಮಿಕರು ಸೇರಿದಂತೆ ಇನ್ನಿತರ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ಕೇಂಬ್ರಿಡ್ಜ್ ಸಮೂಹ ಶಿಕ್ಷಣ ಸಂಸ್ಥೆ ವಿತರಿಸಿದೆ.

ಕೆ.ಆರ್.ಪುರ ಸಮೀಪದ ಪ್ರಿಯಾಂಕನಗರದ ಕೊಳೆಗೇರಿಯಲ್ಲಿ ವಾಸಿಸುತ್ತಿರುವ ಐನೂರಕ್ಕೂ ಹೆಚ್ಚು ಕುಟುಂಬಗಳಿಗೆ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಡಿ.ಕೆ.ಮೋಹನ್, 'ಸಂಕಷ್ಟದ ಸಮಯದಲ್ಲಿ ಪರಸ್ಪರ ನೆರವಾಗುವ ಗುಣವನ್ನು ಪ್ರತಿಯೊಬ್ಬರು ಹೊಂದಿರಬೇಕು. ಇಂತಹ ವೇಳೆಯಲ್ಲಿ ಎರಡು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಹದಿನೈದು ದಿನಗಳಿಗೆ ಆಗುವಷ್ಟು ದಿನಸಿಗಳನ್ನು ಸಂಸ್ಥೆಯಿಂದ ನೀಡಲಾಗಿದೆ' ಎಂದು ಹೇಳಿದರು.

ಆಹಾರ ಸಾಮಾಗ್ರಿಗಳ ಕಿಟ್ ನಲ್ಲಿ ಅಕ್ಕಿ, ಬೇಳೆ, ಉಪ್ಪು, ಸಕ್ಕರೆ, ಅಡುಗೆ ಎಣ್ಣೆ ಮಸಾಲೆ ಪದಾರ್ಥಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

ಒಂದೇ ಮುಹೂರ್ತದಲ್ಲಿ ಅಕ್ಕ–ತಂಗಿ ವರಿಸಿದ ಭೂಪ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವೇಗಮಡುಗು ಗ್ರಾಮದಲ್ಲಿ ವರನೊಬ್ಬ ಒಂದೇ ಮುಹೂರ್ತದಲ್ಲಿ ಅಕ್ಕ–ತಂಗಿಯನ್ನು ಒಟ್ಟಿಗೆ ಮದುವೆಯಾಗಿದ್ದು, ನವ ದಂಪತಿಯ ಮದುವೆ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಮುಳಬಾಗಿಲು ತಾಲ್ಲೂಕು ಚಿನ್ನಬಾಲೇಪಲ್ಲಿ ಗ್ರಾಮದ ಉಮಾಪತಿ ಅವರು ವೇಗಮಡುಗು ಗ್ರಾಮದ ಸುಪ್ರಿಯಾ ಮತ್ತು ಲಲಿತಾ ಸಹೋದರಿಯರ ಜತೆ ಮೇ 7ರಂದು ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದಾರೆ.

ಸುಪ್ರಿಯಾ ಅವರಿಗೆ ಮಾತು ಬರುವುದಿಲ್ಲ. ಹಿರಿಯ ಮಗಳು ಸುಪ್ರಿಯಾ ಮದುವೆಯಾಗದಿದ್ದರೆ ಲಲಿತಾಗೂ ಮದುವೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ಪೋಷಕರು ಚಿಂತಿತರಾಗಿದ್ದರು. ಹೀಗಾಗಿ ಪೋಷಕರು ತಮ್ಮ ಮೊದಲ ಮಗಳನ್ನು ವಿವಾಹವಾದರೆ ಮಾತ್ರ 2ನೇ ಮಗಳು ಲಲಿತಾಳನ್ನು ಕೊಟ್ಟು ಮದುವೆ ಮಾಡುವುದಾಗಿ ವರ ಉಮಾಪತಿಗೆ ಷರತ್ತು ವಿಧಿಸಿದ್ದರು.

ಜೀವನವಿಡೀ ಅಕ್ಕನಿಗೆ ಮದುವೆ ಆಗುವುದಿಲ್ಲ ಎಂದು ಯೋಚಿಸಿದ ಲಲಿತಾ ಸಹ ಈ ವಿವಾಹಕ್ಕೆ ಒಪ್ಪಿಗೆ ಸೂಚಿಸಿದ್ದರು. ಸುಪ್ರಿಯಾ ಪೋಷಕರ ಷರತ್ತಿಗೆ ಸಮ್ಮತಿಸಿದ ಉಮಾಪತಿ ಅವರು ಸುಪ್ರಿಯಾ ಸಹೋದರಿಯರ ಜತೆ ಒಟ್ಟಿಗೆ ಹಸೆಮಣೆ ಏರಿದ್ದಾರೆ. ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಮದುವೆಯ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಜನರು ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಮೊದಲಲ್ಲ: ಸುಪ್ರಿಯಾ ಅವರ ಕುಟುಂಬದಲ್ಲಿ ಈ ರೀತಿಯ ಮದುವೆ ಇದೇ ಮೊದಲಲ್ಲ. ಅವರ ತಂದೆ ನಾಗರಜಪ್ಪ ಸಹ ಒಂದೇ ಮುಹೂರ್ತದಲ್ಲಿ ಅಕ್ಕ–ತಂಗಿಯನ್ನು ಮದುವೆ ಮಾಡಿಕೊಂಡಿದ್ದರು. ಆ ಸಹೋದರಿಯರಲ್ಲಿ ಒಬ್ಬರಿಗೆ ಮಾತು ಬರುವುದಿಲ್ಲ.



ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಉಮಾಪತಿ ಅವರು ಒಂದೇ ಮೂಹರ್ತದಲ್ಲಿ ಸುಪ್ರಿಯಾ ಮತ್ತು ಲಲಿತಾ ಸಹೋದರಿಯರನ್ನು ಮದುವೆಯಾಗಿರುವುದು

ಸಂಕ್ಷಿಪ್ತ ಸುದ್ದಿ

ಆಸ್ಪತ್ರೆಗೆ ಹೋಗುವ ಮಾರ್ಗಮಧ್ಯೆ ಸೋಂಕಿತ ಸಾವು

ಕನಕಪುರ: ಕೊರೊನಾ ಸೋಂಕಿಗೆ ತುತ್ತಾದ ವ್ಯಕ್ತಿಯೊಬ್ಬರು ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳದೆ ರೋಗ ಉಲ್ಬಣಗೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗಮಧ್ಯೆ ಮೃತಪಟ್ಟಿರುವ ಘಟನೆ ತಾಲ್ಲೂಕಿನಲ್ಲಿ ಶನಿವಾರ ನಡೆದಿದೆ.

ತಾಲ್ಲೂಕಿನ ನಾರಾಯಣಪುರ ಗ್ರಾಮದ ರಾಜು(30) ಮೃತಪಟ್ಟವರು.

ವಾರದ ಹಿಂದೆ ಕೆಮ್ಮು, ನೆಗಡಿ, ಜ್ವರ ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ಹೋದರೆ ಕೊರೊನಾ ಬಂದಿದೆ ಎಂದು ತಿಳಿಸುತ್ತಾರೆ ಎಂಬ ಭಯದಿಂದ ಆತ ಹೋಗಿರಲಿಲ್ಲ. ಮನೆಯಲ್ಲಿಯೇ ತಮಗೆ ತಿಳಿದ ರೀತಿಯಲ್ಲಿ ಔಷಧಿ ಪಡೆದು ಉಳಿದುಕೊಂಡಿದ್ದಾರೆ. ಮಧ್ಯಾಹ್ನ ತೀವ್ರ ಅಸ್ವಸ್ಥರಾಗಿದ್ದ ಅವರನ್ನು ಕುಟುಂಬದವರು ಕನಕಪುರದ ಸಾರ್ವಜನಿಕ ಆಸ್ಪತ್ರೆಗೆ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಮೃತಪಟ್ಟಿದ್ದಾರೆ.

ಇಲಿ ಕಾಟಕ್ಕೆ ಮಾವಿನ ಗಿಡ ಬಲಿ

ಶ್ರೀನಿವಾಸಪುರ: ತಾಲ್ಲೂಕಿನಲ್ಲಿ ಮಾವಿನ ಗಿಡಗಳಿಗೆ ಇಲಿ ಕಾಟ ಹೆಚ್ಚಿದೆ. ಬಯಲು ಇಲಿಗಳ ಹಾವಳಿಯಿಂದ ಕಷ್ಟಪಟ್ಟು ಬೆಳೆಸಿದ ಗಿಡಗಳು ಬೇರು ಕಳೆದುಕೊಂಡು ನೆಲಕ್ಕೆ ಉರುಳುತ್ತಿವೆ.

'ಗಿಡದ ಬುಡದಲ್ಲಿ ಬಿಲ ಮಾಡುವ ಇಲಿಗಳು, ನೆಲದೊಳಗಿನ ಗಿಡದ ಕಾಂಡದ ಹೊಟ್ಟು ಹಾಗೂ ಬೇರುಗಳನ್ನು ಕಚ್ಚಿ ಗಿಡ ಒಣಗುವಂತೆ ಮಾಡುತ್ತಿವೆ. ಕೆಲವು ವರ್ಷಗಳ ಕಾಲ ಕಷ್ಟಪಟ್ಟು ಕಾಪಾಡಿದ ಗಿಡಗಳು ಕಾಯಿ ಸಹಿತ ಒಣಗಿ ನೆಲ ಕಚ್ಚುತ್ತಿವೆ' ಎಂದು ಮಾವು ಬೆಳೆಗಾರ ಆರ್. ಮಂಜುನಾಥರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.



ಹಿರಿಯೂರು ತಾಲ್ಲೂಕಿನ ಗನ್ನಾಯಕನಹಳ್ಳಿ ಮೂಲದ ಡಾ. ನೇಹಾಸ್ವಾಮಿ ಶುಕ್ರವಾರ ಬೆಂಗಳೂರಿನಲ್ಲಿ ಫ್ಲೈಟ್ ಲೆಫ್ಟಿನೆಂಟ್ ಆಗಿ ಕರ್ತವ್ಯಕ್ಕೆ ಹಾಜರಾಗಿರುವುದು. ತಂದೆ ತಿಪ್ಪೇಸ್ವಾಮಿ, ತಾಯಿ ಗೀತಾಸ್ವಾಮಿ ಹಾಗೂ ವಾಯುಸೇನೆಯ ಅಧಿಕಾರಿಗಳು ಇದ್ದರು.

ಹಿರಿಯೂರು ಮೂಲದ ಯುವತಿ ಈಗ ಭಾರತೀಯ ವಾಯುಸೇನೆಯ ವೈದ್ಯೆ

ಪ್ರಜಾವಾಣಿ ವಾರ್ತೆ

ಗನ್ನಾಯಕನಹಳ್ಳಿ (ಹಿರಿಯೂರು): ವಿದ್ಯಾನಗರ ಎಂದೇ ಖ್ಯಾತಿ ಪಡೆದಿರುವ ತಾಲ್ಲೂಕಿನ ಗನ್ನಾಯಕನಹಳ್ಳಿಯ ಯುವತಿ ಪ್ರಸ್ತುತ ಭಾರತೀಯ ವಾಯುಸೇನೆಯ ವೈದ್ಯ ಹುದ್ದೆಗೆ ಆಯ್ಕೆ ಆಗಿದ್ದಾರೆ.

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಟಿ.ಎಸ್. ತಿಪ್ಪೇಸ್ವಾಮಿ ಹಾಗೂ ಗೀತಾಸ್ವಾಮಿ ದಂಪತಿಯ ಎರಡನೇ ಮಗಳು ಡಾ.ನೇಹಾಸ್ವಾಮಿ ಬೆಂಗಳೂರಿನ ವಾಯುಸೇನೆ ಕಚೇರಿಯಲ್ಲಿ ಶುಕ್ರವಾರ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಗನ್ನಾಯಕನಹಳ್ಳಿಯಲ್ಲಿ ಜನಿಸಿರುವ ನೇಹಾ 1 ಮತ್ತು 2ನೇ ತರಗತಿಯನ್ನು ಹೈದರಾಬಾದ್‌ನಲ್ಲಿ, 3ನೇ ತರಗತಿಯನ್ನು ಬಳ್ಳಾರಿಯಲ್ಲಿ, 4ರಿಂದ 7ರವರೆಗೆ ಹಿರಿಯೂರಿನಲ್ಲಿ, 8ನೇ ತರಗತಿಯನ್ನು ಚಿತ್ರದುರ್ಗದಲ್ಲಿ, ನಂತರ ದ್ವಿತೀಯ ಪಿಯುವರೆಗೆ ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿ, ಶಿವಮೊಗ್ಗದ ಸುಬ್ಬಯ್ಯ ಮೆಡಿಕಲ್ ಕಾಲೇಜಿನಲ್ಲಿ 2020ರಲ್ಲಿ ವೈದ್ಯಕೀಯ ಪದವಿ ಪಡೆದಿದ್ದಾರೆ.

'ವೈದ್ಯಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಮಾಡಬೇಕೆಂಬ ಮನಸ್ಸಿತ್ತು. ಕೋವಿಡ್ ಕಾರಣಕ್ಕೆ ಪದೇ ಪದೇ ಪರೀಕ್ಷೆಗಳು ಮುಂದೂಡಲಾದವು. 2020ರ ಜುಲೈನಲ್ಲಿ ನವದೆಹಲಿಯಿಂದ ಎಎಫ್‌ಎಂಎಸ್ (ಆರ್ಮಿ ಫೋರ್ಸ್ ಮೆಡಿಕಲ್ ಸರ್ವೀಸ್)ನಿಂದ ಖಾಲಿ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದರು. ಜುಲೈ ಕೊನೆಯ ವಾರದಲ್ಲಿ ಸಂದರ್ಶನ ನಡೆಸಿ, ನನ್ನನ್ನು ವೈದ್ಯ ಹುದ್ದೆಗೆ (ಫ್ಲೈಟ್ ಲೆಫ್ಟಿನೆಂಟ್ ಎಂದು ಕರೆಯಲಾಗುತ್ತದೆ. ಕ್ಯಾಪ್ಟನ್ ಹುದ್ದೆಗೆ ಸಮಾನವಾದುದು) ಆಯ್ಕೆ ಮಾಡಲಾಗಿದೆ' ಎಂದು ನೇಹಾ ತಿಳಿಸಿದರು.

ಡಿಎಚ್‌ಒ ವಿಜಯ್‌ಕುಮಾರ್ ಅಮಾನತು

ಆದಾಯ ಮಿತಿಗಿಂತ ಹೆಚ್ಚು ಆಸ್ತಿ ಸಂಪಾದನೆ: ಎಸಿಬಿ ತನಿಖೆಯಲ್ಲಿ ಸಾಬೀತು

ಪ್ರಜಾವಾಣಿ ವಾರ್ತೆ



ವಿಜಯ್ ಕುಮಾರ್

ಕೋಲಾರ: ಆದಾಯ ಮಿತಿಗಿಂತಲೂ ಹೆಚ್ಚಿನ ಆಸ್ತಿ ಸಂಪಾದಿಸಿದ ಆರೋಪ ಎದುರಿಸುತ್ತಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ) ಡಾ.ಎಸ್.ಎನ್.ವಿಜಯ್‌ಕುಮಾರ್ ಅವರನ್ನು ಅಮಾನತು ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳು ವಿಜಯ್‌ಕುಮಾರ್ ಅವರಿಗೆ ಸೇರಿದ ಮನೆಗಳು, ನರ್ಸಿಂಗ್ ಹೋಂ ಹಾಗೂ ಕಚೇರಿ ಮೇಲೆ ಫೆ.2ರಂದು ದಾಳಿ ನಡೆಸಿದ್ದರು. ವಿಜಯ್‌ಕುಮಾರ್ ಅವರು ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿ ಸಂಪಾದಿಸಿದ ಸಂಬಂಧ ಎಸಿಬಿಗೆ ದೂರು ಸಲ್ಲಿಕೆಯಾಗಿತ್ತು.

ಈ ದೂರು ಆಧರಿಸಿ ಎಸಿಬಿ ಅಧಿಕಾರಿಗಳು ಮುಳಬಾಗಿಲು ನಗರದಲ್ಲಿನ ವಿಜಯ್‌ಕುಮಾರ್‌ರ ಮನೆ, ನರ್ಸಿಂಗ್ ಹೋಂ, ಜಿಲ್ಲಾ ಕೇಂದ್ರದಲ್ಲಿನ ಕಚೇರಿ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯಲ್ಲಿರುವ ಮನೆ, ಬೆಂಗಳೂರಿನ ರಾಜಾಜಿನಗರ ಹಾಗೂ ಜಕ್ಕೂರು ಬಳಿಯ ಫ್ಲಾಟ್‌ಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿದ್ದರು.

ಎಸಿಬಿ ಅಧಿಕಾರಿಗಳು ವಿಸ್ತೃತ ತನಿಖೆ ನಡೆಸಿದಾಗ ವಿಜಯ್‌ಕುಮಾರ್ ಆದಾಯಕ್ಕಿಂತ ಶೇಕಡ 343ರಷ್ಟು ಹೆಚ್ಚು ಆಸ್ತಿ ಸಂಪಾದಿಸಿರುವುದು ಸಾಬೀತಾಗಿತ್ತು. ಹೀಗಾಗಿ ಎಸಿಬಿ ಅಧಿಕಾರಿಗಳು ವಿಜಯ್‌ಕುಮಾರ್‌ರನ್ನು ಸೇವೆಯಿಂದ ಅಮಾನತು ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಎಸ್ಪಿ ಪತ್ರ: ದಾಳಿ ಬಳಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪತ್ರ ಬರೆದಿದ್ದ ಎಸಿಬಿ ಎಸ್ಪಿ, ವಿಜಯ್ ಕುಮಾರ್ ಅವರು ಡಿಎಚ್‌ಒ ಹುದ್ದೆಯಲ್ಲೇ ಮುಂದುವರಿದರೆ ಪ್ರಕರಣದ ಸಾಕ್ಷ್ಯಾಧಾರ ನಾಶಪಡಿಸುವ ಅಥವಾ ತಿರುಚುವ ಸಾಧ್ಯತೆಯಿದೆ. ಹೀಗಾಗಿ ಆರೋಪಿತ ಅಧಿಕಾರಿಯನ್ನು ಅಮಾನತುಗೊಳಿಸಿ ಲೀನ್ ಬದಲಾವಣೆ ಮಾಡಬೇಕು ಮತ್ತು ಅವರ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಬೇಕೆಂದು ಶಿಫಾರಸು ಮಾಡಿದ್ದರು.

ಎಸಿಬಿ ಅಧಿಕಾರಿಗಳ ಶಿಫಾರಸು ಆಧರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ಎಂ.ಕುಮಾರಸ್ವಾಮಿ ಅವರು ವಿಜಯ್‌ಕುಮಾರ್‌ರನ್ನು ಅಮಾನತು ಮಾಡಿ ಆದೇಶ ಹೊರಡಿಸಿ ಇಲಾಖಾ ತನಿಖೆ ಬಾಕಿ ಇರಿಸಿದ್ದಾರೆ. ಜತೆಗೆ ಅವರ ಲೀನ್ ಅನ್ನು ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿಯಿರುವ ವೈದ್ಯಾಧಿಕಾರಿ ಹುದ್ದೆಗೆ ನೀಡಲಾಗಿದೆ.

ಶೇ 343ಕ್ಕೂ ಹೆಚ್ಚು ಆಸ್ತಿ: ವಿಜಯ್ ಕುಮಾರ್ ಅವರು ಮುಳಬಾಗಿಲು, ಕೋಲಾರ ಮತ್ತು ಬೆಂಗಳೂರಿನಲ್ಲಿ ತಲಾ ಒಂದು ಮನೆ, ಬೆಂಗಳೂರಿನ ವಿವಿಧೆಡೆ 3 ಫ್ಲಾಟ್, ಕೋಲಾರ ಮತ್ತು ಬೆಂಗಳೂರಿನಲ್ಲಿ 3 ನಿವೇಶನ, ಮುಳಬಾಗಿಲಿನಲ್ಲಿ ನರ್ಸಿಂಗ್ ಹೋಂ ಹೊಂದಿರುವುದು ಎಸಿಬಿ ದಾಳಿಯಿಂದ ಬಯಲಾಗಿತ್ತು.

ಅಲ್ಲದೇ, ಬೆಂಗಳೂರಿನ ಯಲಹಂಕದ ಥಣಿಸಂದ್ರ ಬಳಿ 13 ಗುಂಟೆ ಕೃಷಿ ಜಮೀನು, ಕೋಲಾರ ಹೊರವಲಯದ ರಾಷ್ಟ್ರೀಯ ಹೆದ್ದಾರಿ 75ರ ಸಮೀಪ 1 ಎಕರೆ ಕೃಷಿ ಜಮೀನು ಖರೀದಿಸಿರುವುದು ಎಸಿಬಿ ತನಿಖೆಯಿಂದ ಗೊತ್ತಾಗಿತ್ತು. ದಾಳಿ ವೇಳೆ ವಿಜಯ್‌ಕುಮಾರ್‌ರ ಮನೆಯಲ್ಲಿ ₹ 10 ಲಕ್ಷ ನಗದು ಮತ್ತು ಸುಮಾರು 300 ಗ್ರಾಂ ಚಿನ್ನಾಭರಣ, 2 ಕಾರು ಪತ್ತೆಯಾಗಿದ್ದವು.

ವಿಜಯ್‌ಕುಮಾರ್, ಪತ್ನಿ ಮತ್ತು ಇಬ್ಬರು ಮಕ್ಕಳ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ 6 ಖಾತೆ ತೆರೆದಿರುವುದು, ಹಲವು ಬ್ಯಾಂಕ್‌ಗಳಲ್ಲಿ ಸೀಕ್ರೇಟ್ ಲಾಕರ್ ಹೊಂದಿರುವುದು ಹಾಗೂ ಬ್ಯಾಂಕ್ ಖಾತೆಗಳಲ್ಲಿ ₹ 51.21 ಲಕ್ಷ ಠೇವಣಿ ಇಟ್ಟಿರುವುದನ್ನು ಅಧಿಕಾರಿಗಳು ಪತ್ತೆ ಮಾಡಿದ್ದರು.

ವಿಜಯ್‌ಕುಮಾರ್ ಸುಮಾರು ₹ 6.69 ಕೋಟಿ ಮೌಲ್ಯದ ಆಸ್ತಿ, ವಾರ್ಷಿಕ ₹ 1.26 ಕೋಟಿ ಖರ್ಚು ಹಾಗೂ ₹ 1.79 ಕೋಟಿ ಆದಾಯ ಹೊಂದಿದ್ದಾರೆ. ಅವರು ತಮ್ಮ ಆದಾಯಕ್ಕಿಂತ ಸುಮಾರು ₹ 6.15 ಕೋಟಿಯಷ್ಟು ಅಕ್ರಮ ಆಸ್ತಿ ಸಂಪಾದನೆ ಮಾಡಿದ್ದಾರೆ ಎಂದು ಎಸಿಬಿ ಅಧಿಕಾರಿಗಳು ಅಂದಾಜಿಸಿದ್ದಾರೆ.

ಕುರ್ಚಿ ಬಿಡದ ಡಿಎಚ್‌ಒ

ವಿಜಯ್‌ಕುಮಾರ್‌ರ ಅಮಾನತಿನ ಸಂಬಂಧ ಮೇ 12ರಂದೇ ಆದೇಶ ಹೊರಡಿಸಿ ತಕ್ಷಣದಿಂದಲೇ ಹುದ್ದೆ ಬಿಡುವಂತೆ ಸೂಚಿಸಲಾಗಿತ್ತು. ಅಲ್ಲದೇ, ಆದೇಶದ ಪ್ರತಿಯನ್ನು ವಿಜಯ್‌ಕುಮಾರ್ ಅವರಿಗೂ ರವಾನಿಸಲಾಗಿತ್ತು. ಆದರೆ, ಅದೇ ಹುದ್ದೆಯಲ್ಲಿ ಮುಂದುವರಿದಿರುವ ಅವರು ಇಲಾಖೆಗೆ ಸಂಬಂಧಪಟ್ಟ ಮಹತ್ವದ ಕಡತಗಳಿಗೆ ಸಹಿ ಹಾಕಿರುವ ಆರೋಪ ಕೇಳಿಬಂದಿದೆ.

ಜತೆಗೆ ಪ್ರತಿನಿತ್ಯದಂತೆ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿ ಇಲಾಖೆಯ ಕಾರ್ಯ ಚಟುವಟಿಕೆ ನಿರ್ವಹಿಸಿದ್ದಾರೆ. ಇಲಾಖೆ ಸಭೆಗಳಲ್ಲೂ ಭಾಗಿಯಾಗುತ್ತಿದ್ದಾರೆ. ಅಮಾನತಿನ ಸಂಗತಿ ಮುಚ್ಚಿಟ್ಟು ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲೂ ಭಾಗಿಯಾಗಿದ್ದರು.

ಮಂಡ್ಯದ ಕೊಮ್ಮೇರಹಳ್ಳಿಯಲ್ಲಿ ಸನ್ನಿಲಿಯೋನ್ ಫ್ಲೆಕ್ಸ್



ಮಂಡ್ಯ: ಬಾಲಿವುಡ್ ನಟಿ ಸನ್ನಿಲಿಯೋನ್ ಹುಟ್ಟು ಹಬ್ಬದ ಶುಭಾಶಯ ಕೋರಿ ರಸ್ತೆಯ ಪಕ್ಕದಲ್ಲಿ ಹಾಕಲಾಗಿದ್ದ ಫ್ಲೆಕ್ಸ್ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಅದು ತಾಲ್ಲೂಕಿನ ಕೊಮ್ಮೇರಹಳ್ಳಿಯಲ್ಲಿ ಹಾಕಲಾಗಿತ್ತು ಎನ್ನುವ ವಿಷಯ ತಡವಾಗಿ ಗೊತ್ತಾಗಿದೆ.

'ಹ್ಯಾಪಿ ಬರ್ತಡೆ ಸನ್ನಿಲಿಯೋನ್', 'ಅನಾಥ ಮಕ್ಕಳ ತಾಯಿ, ಅಭಿಮಾನಿಗಳ ದೇವತೆ' ಎಂದು ಬರೆದಿದ್ದ ಫ್ಲೆಕ್ಸ್ ಫೋಟೋ ಕಳೆದೆರಡು ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಅದು ಮಂಡ್ಯ ತಾಲ್ಲೂಕಿನ ಕೊಮ್ಮೇರಹಳ್ಳಿ ಗ್ರಾಮದಲ್ಲಿ ಹಾಕಲಾಗಿತ್ತು. ಸನ್ನಿಲಿಯೋನ್ ಅವರು ನಟನೆ ಮಾತ್ರವಲ್ಲದೆ ಹಲವಾರು ಸಾಮಾಜಿಕ, ಮಾನವೀಯ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮದ ಅಭಿಮಾನಿಗಳು ಫ್ಲೆಕ್ಸ್ ಹಾಕಿಸಿ ಅಭಿಮಾನ ಮೆರೆದಿದ್ದಾರೆ.

‘ತೌಕ್ತೆ’ ಚಂಡಮಾರುತ ಅಬ್ಬರಕ್ಕೆ ಕಡಲ್ಕೊರೆತ • ಮನೆ, ಸ್ಮಶಾನ ನೀರು ಪಾಲು • ಕರಾವಳಿಯಲ್ಲಿ ಧಾರಾಕಾರ ಮಳೆ

80ಕ್ಕೂ ಹೆಚ್ಚು ಕುಟುಂಬಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಮಂಗಳೂರು: ಅರಬ್ಬಿ ಸಮುದ್ರದಲ್ಲಿ ತೌಕ್ತೆ ಚಂಡಮಾರುತದ ಪ್ರಭಾವ ತೀವ್ರವಾಗಿದ್ದು, ಕರಾವಳಿಯಲ್ಲಿ ಭಾರಿ ಗಾಳಿಯೊಂದಿಗೆ ಮಳೆ ಸುರಿಯುತ್ತಿದೆ. ಸಮುದ್ರದಲ್ಲಿ ಅಲೆಗಳ ಅರ್ಭಟ ಹೆಚ್ಚಾಗಿದೆ. ಹಲವೆಡೆ ರಸ್ತೆ, ಶೆಡ್‌ಗಳು, ತೆಂಗಿನ ಮರಗಳು ಸಮುದ್ರಕ್ಕೆ ಸೇರಿವೆ. ಕಡಲ ತೀರದಲ್ಲಿದ್ದ 80ಕ್ಕೂ ಹೆಚ್ಚು ಕುಟುಂಬಗಳನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಗಿದೆ.

ಉಳ್ಳಾಲ ಸಮೀಪದ ಉಚ್ಚಿಲದಲ್ಲಿ ಒಂದು, ಸೋಮೇಶ್ವರದಲ್ಲಿ ಎರಡು ಮನೆಗಳು ಹಾಗೂ ಹಿಂದೂ ಸ್ಮಶಾನ ಸಂಪೂರ್ಣ ಸಮುದ್ರ ಪಾಲಾಗಿವೆ. ಉಳ್ಳಾಲದಲ್ಲಿ 15 ಮತ್ತು ಸೋಮೇಶ್ವರದಲ್ಲಿ 50 ಕುಟುಂಬಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ 66ರ ಉಚ್ಚಿಲ ಸರ್ವಿಸ್ ರಸ್ತೆ ಸಂಪೂರ್ಣ ಜಲಾವೃತವಾಗಿದೆ.

ಸಸಿಹಿತ್ಲುವಿನ ಮುಂಡ ಬೀಚ್ ಶೇ 80 ಭಾಗ ಕಡಲಿಗೆ ಸೇರಿದೆ. ಅಂಗಡಿ ಹಾಗೂ ಜೀವರಕ್ಷಕದಳದ ವಿಶ್ರಾಂತಿ ಕೊಠಡಿ ಸಮುದ್ರ ಪಾಲಾಗಿವೆ. ಬೀಚ್‌ನ ರಸ್ತೆಗೆ ನೇರವಾಗಿ ಅಲೆ ಅಪ್ಪಳಿಸುತ್ತಿದೆ. ತಣ್ಣೀರುಬಾವಿ, ಬೆಂಗ್ರೆಯಲ್ಲಿ ಕಡಲಿನ ಅಬ್ಬರ ತೀವ್ರವಾಗಿದೆ. ಈ ಪ್ರದೇಶಗಳ ಜನರಿಗೆ ಶಾಲೆಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ.

ಕಾಸರಗೋಡು ಜಿಲ್ಲೆ ಉಪ್ಪಳದ ಮುಸೋಡಿಯಲ್ಲಿ ಎರಡಂತಸ್ತಿನ ಕಟ್ಟಡ ನೀರು ಪಾಲಾಗಿದೆ. ಮುಸೋಡಿಯ ಮೂಸಾ ಅವರ ಮನೆಯವರು ಮೊದಲೇ ಬೇರೆ ಕಡೆಗೆ ಸ್ಥಳಾಂತರಗೊಂಡಿದ್ದರಿಂದ ಅನಾಹುತ ತಪ್ಪಿದೆ.

ಉಡುಪಿ ಜಿಲ್ಲೆಯ ಮರವಂತೆಯಲ್ಲಿ ಕರಾವಳಿ ಮಾರ್ಗದ ಕಾಂಕ್ರಿಟ್ ರಸ್ತೆ ತುಂಡಾಗಿದೆ. ಸಮುದ್ರಕ್ಕೆ ತಾಗಿಕೊಂಡಂತೆ 500 ಮೀಟರ್ ಉದ್ದದ ಭೂಭಾಗ ಕೊಚ್ಚಿಹೋಗಿದೆ. 2 ಮೀನುಗಾರಿಕಾ ಶೆಡ್‌ಗಳಿಗೆ ಹಾನಿಯಾಗಿದೆ. ಇಲ್ಲಿನ 10ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಕಿರಿಮಂಜೇಶ್ವರದ ಹೊಸಹಿತ್ಲು, ತಾರಾಪತಿ ಪ್ರದೇಶ, ಹೊಸಾಡಿನ ಕಂಚುಕೋಡು, ಶೀರೂರಿನ ದೊಂಬೆಯ ತೀರ, ಗಂಗೊಳ್ಳಿಯಲ್ಲಿ ಕಡಲ್ಕೊರೆತ ಉಂಟಾಗಿದೆ. ಉಪ್ಪುಂದದಲ್ಲಿ ಮನೆಯಂಗಳಕ್ಕೆ ಮಳೆಯ ನೀರಿನ ಜತೆಗೆ ಮೀನುಗಳು ಬಂದಿವೆ.

ಕಾಪು ಬೀಚ್‌ನಲ್ಲಿ ತೀರದಲ್ಲಿದ್ದ ಹಲವು ಮನೆಗಳಿಗೆ ನೀರು ನುಗ್ಗಿದ್ದು, ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಯಿತು. ಬಡಾ, ಉಚ್ಚಿಲ, ಪಡುಬಿದ್ರಿ, ನಡಿಪಟ್ನದಲ್ಲಿ ಕಡಲ್ಕೊರೆತ ಸಂಭವಿಸಿದೆ. ಉಡುಪಿಯ ಮಲ್ಪೆ ಬೀಚ್ ತೀರವನ್ನು ನೀರು ಆವರಿಸಿದೆ. ಅಲ್ಲಿದ್ದ ನಾಡದೋಣಿಗಳನ್ನು ಕ್ರೇನ್ ಬಳಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಜಿಲ್ಲೆಯಾದ್ಯಂತ ಬಿರುಸಿನ ಮಳೆ ಸುರಿಯುತ್ತಿದೆ.

ಮೀನುಗಾರರ ರಕ್ಷಣೆ: ಎಂಜಿನ್ ವೈಫಲ್ಯದಿಂದ ಕಣ್ಣೂರಿನಿಂದ 10 ನಾಟಿಕಲ್ ಮೈಲಿದೂರದಲ್ಲಿ ಸಮುದ್ರದಲ್ಲಿ ಸಿಲುಕಿದ್ದ ದೋಣಿಯಲ್ಲಿದ್ದ ಮೂವರು ಮೀನುಗಾರರನ್ನು ಕರಾವಳಿ ಕಾವಲು ಪಡೆ ವಿಕ್ರಮ್ ಹಡಗು ಬಳಸಿ ರಕ್ಷಣೆ ಮಾಡಿದೆ.

ಧಾರಾಕಾರ ಮಳೆ: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದೆ. ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು, ಕೊಪ್ಪ, ಶೃಂಗೇರಿ ಭಾಗದಲ್ಲಿ ಮಳೆಯಾಗಿದೆ. ಭದ್ರಾ, ಸೋಮವಾಹಿನಿ ಹೊಳೆಯಲ್ಲಿ ನೀರಿನ ಹರಿವು ಹೆಚ್ಚಿದೆ.

ಕಲ್ಯಾಣ ಕರ್ನಾಟಕದ ವಿವಿಧೆಡೆ ಧಾರಾಕಾರ ಮಳೆ: ಕಲ್ಯಾಣ ಕರ್ನಾಟಕದ ಕಲಬುರ್ಗಿ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ವಿವಿಧೆಡೆ ಶನಿವಾರ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆ ಸುರಿಯಿತು. ಹಲವೆಡೆ ಭಾರಿ ಗಾಳಿಯೂ ಬೀಸಿದೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಕರಡಕಲ್ಲ ಗ್ರಾಮದಲ್ಲಿ ಸಿಡಿಲು ಬಡಿದು ಮೂರು ಮೇವಿನ ಬಣವಿ ಭಸ್ಮವಾಗಿವೆ. ಕಲಬುರ್ಗಿ ಜಿಲ್ಲೆ ಶಹಾಬಾದ್‌ನಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸುಟ್ಟು ವಿದ್ಯುತ್ ಸಂಪರ್ಕ ಕಡಿತಗೊಂಡಿತು.



ಮಂಗಳೂರಿನ ಸೋಮೇಶ್ವರದಲ್ಲಿ ಅಲೆಗಳು ಅಪ್ಪಳಿಸಿದ್ದರಿಂದ ಮನೆಗಳಿಗೆ ಹಾನಿಯಾಗಿದೆ

ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಕೊಡಗಿನಲ್ಲಿ ನಿರಂತರ ಗಾಳಿ, ಮಳೆ

ಮಡಿಕೇರಿ: ಚಂಡಮಾರುತ ಪ್ರಭಾವದಿಂದ ಕೊಡಗು, ಮೈಸೂರು, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಮಳೆಯಾಗಿದೆ. ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿಯಿಂದ ನಿರಂತರ ಮಳೆಯಾಗುತ್ತಿದೆ.

ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ, ಕಕ್ಕಬ್ಬೆ, ಗೋಣಿಕೊಪ್ಪಲು ಭಾಗದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಕಾವೇರಿ ನದಿಯೂ ಸೇರಿದಂತೆ ಹಳ್ಳ–ಕೊಳ್ಳಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಕರಡಿಗೋಡು, ಗುಹ್ಯ ಭಾಗದ ನದಿ ಪಾತ್ರದ ಜನರನ್ನು ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚಿಸಲಾಗಿದೆ. ಇನ್ನೂ ಎರಡು ದಿನ ಜಾಗ್ರತೆಯಿಂದ ಇರಲು ಜಿಲ್ಲಾಡಳಿತ ಸೂಚಿಸಿದೆ.

ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತವಾಗಿದ್ದು, ಗ್ರಾಮಗಳು ಕತ್ತಲೆಯಲ್ಲಿ ಮುಳುಗಿವೆ. ಕೃಷಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಮುಂಜಾಗ್ರತೆಯಾಗಿ ಮಡಿಕೇರಿಗೆ 20 ಸದಸ್ಯರ ಎನ್‌ಡಿಆರ್‌ಎಫ್ ತಂಡವನ್ನು ಕರೆಸಿಕೊಳ್ಳಲಾಗಿದೆ.

ಮೈಸೂರು ಜಿಲ್ಲೆಯ ವಿವಿಧೆಡೆ ವಿವಿಧೆಡೆ ಗಾಳಿ ಸಹಿತ ಬಿರುಸಿನ ಮಳೆಯಾಗಿದೆ. ಮೈಸೂರು ನಗರದಲ್ಲಿ 1.6 ಸೆ.ಮೀ., ಎಚ್.ಡಿ.ಕೋಟೆ, ಹುಣಸೂರು ತಲಾ 1 ಸೆ.ಮೀ. ಪಿರಿಯಾಪಟ್ಟಣದಲ್ಲಿ 3 ಸೆ.ಮೀ. ಮಳೆ ಆಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

ಹಾಸನ, ಅರಕಲಗೂಡು, ಚನ್ನರಾಯಪಟ್ಟಣ, ಸಕಲೇಶಪುರ, ಆಲೂರು, ಬೇಲೂರಿನಲ್ಲಿ ಬಿಟ್ಟುಬಿಟ್ಟು ಮಳೆಯಾಗುತ್ತಿದ್ದು, ಚಾಮರಾಜನಗರದಲ್ಲಿ ಅಲ್ಲಲ್ಲಿ ತುಂತುರಾಗಿ ಸುರಿದಿದೆ.



ಹೊನ್ನಾವರ ತಾಲ್ಲೂಕಿನ ಹಳದೀಪುರ ಗ್ರಾಮವನ್ನು ಸಮುದ್ರದ ನೀರು ಆವರಿಸಿರುವುದು

‘ಒಂದು ಸಾವು, ಐವರು ನಾಪತ್ತೆ’

ಮಂಗಳೂರು: ಎಂಆರ್‌ಪಿಎಲ್‌ನ ನಿರ್ವಹಣೆಗೆ ಸಂಬಂಧಿತ ದೋಣಿ ಶನಿವಾರ ಸಮುದ್ರದ ಅಲೆಗೆ ಸಿಲುಕಿ ಮಗುಚಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಶಿರ್ವದ ಮಟ್ಟು ಬಳಿ ಇಬ್ಬರನ್ನು ರಕ್ಷಿಸಲಾಗಿದೆ. ದೋಣಿಯಲ್ಲಿ 8 ಜನರಿದ್ದು, 5 ಮಂದಿ ನಾಪತ್ತೆಯಾಗಿದ್ದಾರೆ.

ಕಾರವಾರ ವರದಿ: ಭಟ್ಕಳದ ಜಾಲಿಕೋಡಿಯಲ್ಲಿ ದೋಣಿಯನ್ನು ದಡಕ್ಕೆ ತರಲು ಹೋಗಿದ್ದ ಮೀನುಗಾರ ಲಕ್ಷ್ಮಣ ಈರಪ್ಪ ನಾಯ್ಕ (60), ಅಲೆ ಜೋರಾಗಿ ಅಪ್ಪಳಿಸಿದ್ದರಿಂದ ಎರಡು ದೋಣಿಗಳ ನಡುವೆ ಸಿಲುಕಿ ಮೃತಪಟ್ಟಿದ್ದಾರೆ.

ಕುಮಟಾ ಭಾಗದ ವಿವಿಧ ಗ್ರಾಮಗಳಲ್ಲಿ 30 ಮನೆಗಳಿಗೆ ನೀರು ನುಗ್ಗಿದೆ. ಹೊನ್ನಾವರ ತಾಲ್ಲೂಕಿನ ಹಳದೀಪುರದಲ್ಲಿ ಉಪ್ಪು ನೀರು ಉಕ್ಕಿ ಸಮೀಪದ ಗದ್ದೆಗಳನ್ನು ಆವರಿಸಿದೆ. ಬಾಗಲಕೋಟೆ, ವಿಜಯಪುರ, ಗದಗ, ಧಾರವಾಡ, ಬೆಳಗಾವಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಳೆ ಸುರಿದಿದೆ. ಹೊಸಪೇಟೆ ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಳೆಯಾಗಿದೆ.

‘ಎಂಟು ಪರಿಹಾರ ಶಿಬಿರ’

ಬೆಂಗಳೂರು: ‘ತೌಕ್ತೆ’ ಚಂಡಮಾರುತ ಎದುರಿಸಲು ಸರ್ಕಾರ ಸನ್ನದ್ಧವಾಗಿದ್ದು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಂಟು ಪರಿಹಾರ ಶಿಬಿರಗಳನ್ನು ತೆರೆಯಲಾಗಿದೆ. ಈ ಶಿಬಿರಗಳಲ್ಲಿ 10 ಸಾವಿರ ಜನರು ಉಳಿದುಕೊಳ್ಳಬಹುದು’ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

‘ಈ ಮೂರು ಜಿಲ್ಲೆಗಳಲ್ಲಿ ಎಲ್ಲ ಸರ್ಕಾರಿ ಅಧಿಕಾರಿಗಳ ರಜೆ ರದ್ದುಪಡಿಸಲಾಗಿದೆ. ಯಾವುದೇ ಅನಾಹುತ ಆಗದಂತೆ ತಡೆಗಟ್ಟಲು ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆ’ ಎಂದು ಶನಿವಾರ ತಿಳಿಸಿದರು.

ಮುನ್ನೆಚ್ಚರಿಕೆ ಕ್ರಮ ಕುರಿತಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಅಧಿಕಾರಿಗಳ ಜೊತೆ ತುರ್ತು ಸಭೆ ಬಳಿಕ ಮಾತನಾಡಿದ ಅವರು, ‘ಸದ್ಯ ಎರಡು ಎನ್‌ಡಿಆರ್‌ಎಫ್ ತಂಡಗಳು ದಕ್ಷಿಣ ಕನ್ನಡ ಮತ್ತು ಕೊಡಗಿಗೆ ಬಂದಿವೆ. ಪೊಲೀಸ್, ಅಗ್ನಿಶಾಮಕ ಸೇರಿದಂತೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಸಿದ್ಧವಾಗಿರುವಂತೆ ಸೂಚಿಸಲಾಗಿದೆ’ ಎಂದರು.

‘ಉಡುಪಿಯಲ್ಲಿ ₹ 23 ಕೋಟಿ, ಉತ್ತರ ಕನ್ನಡದಲ್ಲಿ ₹ 60 ಕೋಟಿ, ದಕ್ಷಿಣ ಕನ್ನಡದಲ್ಲಿ ₹ 12 ಕೋಟಿ ಆಯಾ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಮೀಸಲಿಡಲಾಗಿದೆ. ಅಗತ್ಯ ಕ್ರಮಗಳಿಗೆ ಈ ಹಣ ಬಳಸುವಂತೆ ಆದೇಶ ನೀಡಲಾಗಿದೆ’ ಎಂದೂ ತಿಳಿಸಿದರು.

‘ತೌಕ್ತೆ’ ತೀವ್ರ: ಹಾನಿ ತಡೆಗೆ ಸಿದ್ಧತೆ

ಒಂದನೇ ಪುಟದಿಂದ...

ಶನಿವಾರದಿಂದ ಮಂಗಳವಾರದ ವರೆಗೆ ‘ತೌಕ್ತೆ’ ಅತಿ ಹೆಚ್ಚಿನ ತೀವ್ರತೆ ಹೊಂದಿರುತ್ತದೆ.

ಕಳೆದ ಕೆಲವು ದಿನಗಳಿಂದ ರೂಪುಗೊಂಡ ಚಂಡಮಾರುತದ ಪರಿಣಾಮಗಳನ್ನು ಎದುರಿಸಲು ಕೇಂದ್ರ ಮತ್ತು ಕರಾವಳಿ ರಾಜ್ಯಗಳ ಸರ್ಕಾರಗಳು ಸಿದ್ಧತೆ ನಡೆಸಿವೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 53 ತಂಡಗಳನ್ನು ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಮೊದಲು ನಿಯೋಜಿಸಲಾಗಿತ್ತು. ಈ ಸಂಖ್ಯೆಯನ್ನು ಈಗ ನೂರಕ್ಕೆ ಏರಿಸಲಾಗಿದೆ. ಗುಜರಾತ್‌ನ ವಿವಿಧ ಜಿಲ್ಲೆಗಳಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕೇರಳದ ಮಧ್ಯ ಮತ್ತು ಉತ್ತರ ಭಾಗಗಳು ಮತ್ತು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಜಲ ಆಯೋಗವು ಸೂಚನೆ ನೀಡಿದೆ.

ಕೇರಳದ ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಮಧ್ಯ ಕೇರಳದ ಕೆಲವು ಜಿಲ್ಲೆಗಳಲ್ಲಿಯೂ ಸಾಧಾರಣದಿಂದ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಹಲವು ನದಿಗಳಲ್ಲಿ ನೀರಿನ ಮಟ್ಟ ಏರುತ್ತಿದ್ದು, ಸಮೀಪದಲ್ಲಿ ನೆಲೆಸಿರುವ ಜನರಿಗೆ ಎಚ್ಚರಿಕೆ ಕೊಡಲಾಗಿದೆ. ಹಲವು ಮನೆಗಳು ಹಾನಿಗೊಂಡಿವೆ, ಹತ್ತಾರು ಮರಗಳು ಉರುಳಿವೆ ಮತ್ತು ವಿದ್ಯುತ್ ಸರಬರಾಜು ವ್ಯತ್ಯಯವಾಗಿದೆ.

ಗೋವಾದಲ್ಲಿ ಕೂಡ ಪರಿಸ್ಥಿತಿ ನಿಭಾಯಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಸೂಚಿಸಿದೆ. ಕೊಂಕಣ ಮತ್ತು ಗೋವಾ ಪ್ರದೇಶದಲ್ಲಿ ಭಾನುವಾರವೂ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಗೋವಾದ ಅಗ್ನಿಶಾಮಕ ದಳವನ್ನು ಸನ್ನದ್ಧವಾಗಿ ಇರಿಸಲಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಭಾರಿ ಎಚ್ಚರಿಕೆ ವಹಿಸಬೇಕು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪಾಲ್ಘರ್ ಜಿಲ್ಲೆಯ 97 ಮೀನುಗಾರಿಕಾ ದೋಣಿಗಳು ಇನ್ನಷ್ಟೇ ದಡಕ್ಕೆ ಮರಳಬೇಕಿವೆ. ಇವು ನಡುಕಡಲಿನಲ್ಲಿ ಇವೆ ಎಂದು ಅಲ್ಲಿನ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಇಲ್ಲಿನ ಕರಾವಳಿಯಿಂದ 512 ದೋಣಿಗಳು ಮೀನುಗಾರಿಕೆಗೆ ತೆರಳಿದ್ದವು. ಅವುಗಳ ಪೈಕಿ 415 ದೋಣಿಗಳು ಮರಳಿವೆ.

ಅಣೆಕಟ್ಟೆಗಳಲ್ಲಿನ ನೀರಿನ ಮಟ್ಟದ ಮೇಲೆ ನಿಗಾ ಇರಿಸುವಂತೆ ಹಾಗೂ ಜನರ ಸುರಕ್ಷತೆಯನ್ನು ಖಾತರಿಪಡಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೇರಳದೊಂದಿಗೆ ಗಡಿ ಹಂಚಿಕೊಂಡಿರುವ ಕನ್ಯಾಕುಮಾರಿ, ತಿರುನೆಲ್ವೇಲಿ ಮತ್ತು ಪಶ್ಚಿಮ ಘಟ್ಟ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಶನಿವಾರ ಮಳೆಯಾಗಿದೆ. ಕನ್ಯಾಕುಮಾರಿ ಮತ್ತು ತಿರುನೆಲ್ವೇಲಿ ಜಿಲ್ಲೆಗಳ ಹಲವೆಡೆ ನೀರು ನಿಂತು ಸಮಸ್ಯೆಯಾಗಿದೆ.

ಉನ್ನತ ಮಟ್ಟದ ಸಭೆ ನಡೆಸಿದ ಪ್ರಧಾನಿ

ಕೋವಿಡ್ ಆಸ್ಪತ್ರೆಗಳು, ಲಸಿಕೆ ಶೀಥಲೀಕರಣ ಗೃಹಗಳು ಮತ್ತು ಅಗತ್ಯ ಔಷಧ ಸಂಗ್ರಹಕ್ಕೆ ಚಂಡಮಾರುತದಿಂದಾಗಿ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ನಿರ್ದೇಶನ ನೀಡಿದ್ದಾರೆ. ಚಂಡಮಾರುತಕ್ಕೆ ಸಂಬಂಧಿಸಿ ಉನ್ನತ ಮಟ್ಟದ ಸಭೆಯನ್ನು ಅವರು ಶನಿವಾರ ನಡೆಸಿದರು.

ತೊಂದರೆಗೆ ಒಳಗಾಗುವ ಪ್ರದೇಶಗಳ ಜನರನ್ನು ಸುರಕ್ಷಿತವಾಗಿ ತೆರವು ಮಾಡಬೇಕು, ವಿದ್ಯುತ್, ದೂರವಾಣಿ, ಆರೋಗ್ಯ ಮತ್ತು ಕುಡಿಯುವ ನೀರಿನಂತಹ ಅಗತ್ಯ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. ರಾಜ್ಯಗಳು ಮತ್ತು ಕೇಂದ್ರದ ಸಚಿವಾಲಯಗಳ ಸನ್ನದ್ಧತೆಯನ್ನು ಅವರು ಪರಿಶೀಲಿಸಿದ್ದಾರೆ.

ಕರಾವಳಿಯಲ್ಲಿ ‘ರೆಡ್ ಅಲರ್ಟ್’

ಒಂದನೇ ಪುಟದಿಂದ...

‘ಈ ಸಮಯದಲ್ಲಿ ಗರಿಷ್ಠ 20 ಸೆಂ.ಮೀ ಮಳೆಯಾಗುವ ಮುನ್ಸೂಚನೆ ಇದೆ’ ಎಂದು ವಿವರಿಸಿದರು.

ಎಲ್ಲೆಲ್ಲಿ ಅಲರ್ಟ್: ಮೇ 17ರವರೆಗೆ ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಹಾವೇರಿ, ಗದಗ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ. ಬಾಗಲಕೋಟೆ, ಕೊಪ್ಪಳ, ರಾಯಚೂರು, ವಿಜಯಪುರ, ಮಂಡ್ಯ, ಮೈಸೂರಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕರಾವಳಿಯಲ್ಲಿ ಗಂಟೆಗೆ 70 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಎತ್ತರದ ಅಲೆಗಳೂ ಏಳುತ್ತಿರುವುದರಿಂದ ಮೀನುಗಾರರ ಮುಂದಿನ ಐದೂ ದಿನ ಕಡಲಿಗೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಸಿದೆ.

ಮಳೆ–ಎಲ್ಲಿ, ಎಷ್ಟು?: ಮಂಗಳೂರಿನಲ್ಲಿ ಶನಿವಾರ ಗರಿಷ್ಠ 8 ಸೆಂ.ಮೀ ಮಳೆಯಾಗಿದೆ. ಸುಳ್ಯ 5, ಭಾಗಮಂಡಲ 4, ಮೂಡುಬಿದಿರೆ, ಪುತ್ತೂರು, ಕಾರ್ಕಳ, ವಿರಾಜಪೇಟೆ 3, ಮಡಿಕೇರಿ, ಹಾಸನ 2, ಬೆಳ್ತಂಗಡಿ, ಕುಂದಾಪುರ, ಅಂಕೋಲಾ, ಹಾಗೂ ಕಾರವಾರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಮನೆಗಳಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಸಂದರ್ಭದಲ್ಲಿ ಜನರ ಜೀವ, ಜೀವನ ಉಳಿಸಲು ರಾಜ್ಯ ಸರ್ಕಾರ ವಿಫಲವಾಗಿದೆ’ ಎಂದು ಶನಿವಾರ ಪ್ರತಿಭಟನೆ ನಡೆಸಿದ ವಿವಿಧ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು, ಸರ್ಕಾರದ ಧೋರಣೆಯನ್ನು ಖಂಡಿಸಿದರು.

ಲಾಕ್‌ಡೌನ್ ಕಾರಣ ಬಹುತೇಕರು ತಮ್ಮ ಮನೆಗಳು, ಹಾಗೂ ಮನೆ ಸಮೀಪದ ವೃತ್ತಗಳಲ್ಲಿ ಸೇರಿ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ಸಂದೇಶ ರವಾನಿಸಿದರು. ಸರ್ಕಾರದ ವಿರುದ್ಧ ಘೋಷಣೆಯುಳ್ಳ ಭಿತ್ತಿ ಪತ್ರಗಳನ್ನು ಪ್ರದರ್ಶಿಸಿದರು.

ಜನಾಗ್ರಹ ಆಂದೋಲನದ ಕರೆಯಂತೆ ನಡೆದ ಈ ಪತ್ರಿಭಟನೆಯಲ್ಲಿ ಪೌರಕಾರ್ಮಿಕರು, ರೇಸ್‌ಕೋರ್ಸ್ ಕಾರ್ಮಿಕರು, ಒಳಚರಂಡಿ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು ಸೇರಿ ಹಲವರು ಪಾಲ್ಗೊಂಡಿದ್ದರು.

‘ಸರ್ಕಾರದ ಧೋರಣೆಯಿಂದಾಗಿ ದುಡಿಯುವ ವರ್ಗ ಸಂಕಷ್ಟಕ್ಕೆ ಸಿಲುಕಿದೆ. ಈ ಬಿಕ್ಕಟ್ಟಿನ ಬಗ್ಗೆ 400ಕ್ಕೂ ಹೆಚ್ಚು ಮುಖಂಡರು, ಮುಖ್ಯಮಂತ್ರಿ ಅವರಿಗೆ ಮನವಿ ನೀಡಿದ್ದೆವು. ಅದನ್ನು ಪರಿಗಣಿಸುವಲ್ಲಿ ಸರ್ಕಾರ ವಿಫಲವಾಗಿದೆ’ ಎಂದು ದೂರಿದರು.

‘ಸೋಂಕಿತರ ಚಿಕಿತ್ಸೆಗೆ ಸಣ್ಣ ಮಟ್ಟದಲ್ಲಿ ಹಾಸಿಗೆಗಳ ಸಂಖ್ಯೆ ಏರಿಸಿದ್ದು ಬಿಟ್ಟರೆ, ಜನರಿಗೆ ನೆರವಾಗುವ ಯಾವ ಕ್ರಮಗಳನ್ನೂ ಕೈಗೊಂಡಿಲ್ಲ’ ಎಂದೂ ವಿಷಾದಿಸಿದ್ದಾರೆ.

‘ಪ್ರತಿಭಟನೆಗೆ ಸರ್ಕಾರ ಸ್ಪಂದಿಸದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು’ ಎಂದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ದೇವನೂರ ಮಹಾದೇವ, ಡಾ. ಕೆ.ಮರುಳಸಿದ್ದಪ್ಪ, ಬಿ.ಟಿ. ಲಲಿತಾ ನಾಯ್ಕ್, ಶಶಿಕಾಂತ್ ಸೆಂಥಿಲ್, ಮಾವಳ್ಳಿ ಶಂಕರ್, ಯಾಸಿನ್ ಮಲ್ಪೆ, ಸಿ.ಎಸ್. ದ್ವಾರಕಾನಾಥ್, ಬಡಗಲಪುರ ನಾಗೇಂದ್ರ, ಎಚ್. ಆರ್. ಬಸವರಾಜಪ್ಪ, ಎಸ್. ಬಾಲನ್, ಎನ್. ವೆಂಕಟೇಶ್, ಕೆ.ಎಲ್. ಅಶೋಕ್ ಹಾಗೂ ಇತರರು ಪ್ರತಿಭಟನೆಗೆ ಬೆಂಬಲ ನೀಡಿದ್ದರು.



ಪ್ರತಿಭಟನಾನಿರತ ಮಹಿಳಾ ಕಾರ್ಮಿಕರು ರಾಜ್ಯ ಸರ್ಕಾರದ ವಿರುದ್ಧ ಭಿತ್ತಿ ಪತ್ರಗಳನ್ನು ಪ್ರದರ್ಶಿಸಿದರು

ಕಟ್ಟಡ ನಿರ್ಮಾಣ ಕಾರ್ಮಿಕರ ಬೇಡಿಕೆ

'ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿ’ ನೇತೃತ್ವದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ತಮ್ಮ ಮನೆಗಳಲ್ಲಿ ಪ್ರತಿಭಟನೆ ನಡೆಸಿದರು.

‘ಕೋವಿಡ್ ಪರಿಹಾರವಾಗಿ ತಲಾ ₹10,000 ಪಾವತಿಸಬೇಕು, ಕೋವಿಡ್‌ನಿಂದ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ತಲಾ ₹ 10 ಲಕ್ಷ ಪರಿಹಾರ ನೀಡಬೇಕು, ಉಚಿತವಾಗಿ ಲಸಿಕೆ ಹಾಕಬೇಕು, ಕಟ್ಟಡ ನಿರ್ಮಾಣ ಹಾಗೂ ವಲಸೆ ಕಾರ್ಮಿಕರಿಗೆ ರೇಷನ್ ಕಿಟ್ ನೀಡಬೇಕು’ ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಆಗುತ್ತಿರುವ ಸಾವುಗಳಿಗೆ ಸರ್ಕಾರವೇ ಕಾರಣ. ಲಾಕ್‌ಡೌನ್‌ನಿಂದ ಜನಸಾಮಾನ್ಯರ ಹೊಟ್ಟೆಪಾಡಿಗೆ ಪೆಟ್ಟು ಬಿದ್ದಿದೆ.

ಎಸ್. ಬಾಲನ್, ವಕೀಲ

ನಿಧನ ವಾರ್ತೆ

ಲಕ್ಷ್ಮೀತಾತಾಚಾರ್ಯ



ಮೇಲುಕೋಟೆ (ಮಂಡ್ಯ): ಹಿರಿಯ ಸಂಸ್ಕೃತ ವಿದ್ವಾಂಸ, ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸ್ಥೆಯ ಸ್ಥಾಪಕ ಡಾ. ಎಂ.ಎ.ಲಕ್ಷ್ಮೀತಾತಾಚಾರ್ಯ (84), ಕೋವಿಡ್‌ನಿಂದ ಶನಿವಾರ ಮೃತಪಟ್ಟರು.

ಕೋವಿಡ್ ಮಾರ್ಗಸೂಚಿ ಅನ್ವಯ, ವೈಷ್ಣವ ಧಾರ್ಮಿಕ ವಿಧಾನದಂತೆ ಮೇಲುಕೋಟೆಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಅವರಿಗೆ ಮೈಸೂರಿನ ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಯ ಪ್ರೊ. ಎಂ.ಎ ಆಳ್ವಾರ್ ಸೇರಿದಂತೆ ಇಬ್ಬರು ಪುತ್ರರಿದ್ದಾರೆ. ಸಂಸ್ಕೃತ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ರಾಷ್ಟ್ರಪತಿಗಳ ಪದಕ ಪುರಸ್ಕೃತರಾಗಿದ್ದರು.

ಹುಟ್ಟಿದ ನಾಲ್ಕು ದಿನಕ್ಕೇ ಅನಾಥವಾದ ಮಗು

ನಾಗಮಂಗಲ: ತಾಲ್ಲೂಕಿನ ದೊಡ್ಡೇನಹಳ್ಳಿ ಗ್ರಾಮದ ನಂಜುಂಡೇಗೌಡ ಮತ್ತು ಮಮತಾ ದಂಪತಿ ಕೋವಿಡ್‌ನಿಂದಾಗಿ ಮೃತಪಟ್ಟಿದ್ದು, ಅವರ ಹೆಣ್ಣು ಶಿಶು ಹುಟ್ಟಿದ ನಾಲ್ಕು ದಿನಕ್ಕೇ ಅನಾಥವಾಗಿದೆ.

ದಂಪತಿ, ಕೆಲ ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯಲ್ಲಿ ನೆಲೆಸಿದ್ದರು. ನಂಜುಂಡೇಗೌಡ ಅವರಿಗೆ ಏಪ್ರಿಲ್‌ನಲ್ಲಿ ಸೋಂಕು ದೃಢಪಟ್ಟಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಬೆಂಗಳೂರಿನಲ್ಲಿ ಏ.30ರಂದು ಮೃತಪಟ್ಟಿದ್ದರು.

ಗರ್ಭಿಣಿಯಾಗಿದ್ದ ಮಮತಾ ಅವರಿಗೂ ಸೋಂಕು ದೃಢಪಟ್ಟಿತ್ತು. ಮನೆಯಲ್ಲೇ ಐಸೊಲೇಷನ್‌ಗೆ ಒಳಗಾಗಿದ್ದರು. ಉಸಿರಾಟದ ಸಮಸ್ಯೆ ಕಾಣಿಸಿದ್ದರಿಂದ ಜಿಲ್ಲೆಯ ಮಿಮ್ಸ್‌ಗೆ ದಾಖಲು ಮಾಡಲಾಗಿತ್ತು. ಮೇ 11ರಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದ ಮಮತಾ, ಮೇ 14 ರಂದು ಅಸುನೀಗಿದ್ದಾರೆ.

ದಂಪತಿಗೆ, 9 ವರ್ಷಗಳ ನಂತರ ಮಗು ಹುಟ್ಟಿತ್ತು.

ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ಶಾಸಕ ಅನ್ನದಾನಿ ಪ್ರಯತ್ನ

ಆರೈಕೆ ಕೇಂದ್ರದಲ್ಲಿ ಸಂಗೀತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಮಳವಳ್ಳಿ: ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ಸಂಗೀತ ಕಾರ್ಯಕ್ರಮ ಆಯೋಜಿಸಿದ್ದ ಶಾಸಕ ಡಾ.ಕೆ.ಅನ್ನದಾನಿ, ಸ್ವತಃ ತಾವೂ ನೃತ್ಯ ಮಾಡಿದ್ದಾರೆ.

ಪಟ್ಟಣದ ಕೆಎಸ್‌ಆರ್‌ಟಿಸಿ ತರಬೇತಿ ಕೇಂದ್ರ, ವಡ್ಡರಹಳ್ಳಿ ವಸತಿ ಶಾಲೆಯ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಸುಮಾರು 500 ಮಂದಿ ಸೋಂಕಿತರಿದ್ದಾರೆ. ಅವರಿಗೆ ಧೈರ್ಯ ತುಂಬಲು ಶಾಸಕರು ಶಿವರಗುಡ್ಡದ ಉಮೇಶ್ ಮತ್ತು ಯರಳ್ಳಿ ಪುಟ್ಟಸ್ವಾಮಿ ತಂಡದಿಂದ ಶುಕ್ರವಾರ ಸಂಗೀತ ಕಾರ್ಯಕ್ರಮ ಆಯೋಜಿಸಿದ್ದರು. ದೇವರ ಗೀತೆ ಹಾಡಿ ಕುಣಿದರು. ಸೋಂಕಿತರಿಂದಲೂ ಹೆಜ್ಜೆ ಹಾಕಿಸಿದ್ದರು.

ಆರೈಕೆ ಕೇಂದ್ರಗಳಲ್ಲಿರುವ ಹಲವರು ಮಾನಸಿಕ ಖಿನ್ನತೆಗೆ ಒಳಗಾಗಿ ಆತಂಕದಲ್ಲಿದ್ದು, ಮನರಂಜನೆ ಮೂಲಕ ಅವರ ಆತಂಕ ಹೋಗಲಾಡಿಸುವ ಪ್ರಯತ್ನ ಮಾಡಿದ್ದಾಗಿ ಡಾ.ಅನ್ನದಾನಿ ಹೇಳಿದ್ದಾರೆ.

ಪರ– ವಿರೋಧ ಚರ್ಚೆ: ಶಾಸಕರು ಸಂಗೀತ ಕಾರ್ಯಕ್ರಮ ಆಯೋಜಿಸಿ ನೃತ್ಯ ಮಾಡಿರುವ ವಿಚಾರವು, ಸಾಮಾಜಿಕ ಜಾಲತಾಣಗಳಲ್ಲಿ ಪರ– ವಿರೋಧ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ಯತ್ನಿಸಿದ್ದಾರೆ ಎಂದು ಬೆಂಬಲಿಗರು ಸಮರ್ಥಿಸಿಕೊಂಡಿದ್ದಾರೆ. ಇನ್ನೊಂದೆಡೆ, ‘ಅನೇಕರಿಗೆ ಹಾಸಿಗೆ ಸಿಗದೇ ಪ್ರಾಣ ಬಿಡುತ್ತಿದ್ದಾರೆ. ಅವರ ಬಗ್ಗೆ ಗಮನ ಹರಿಸಬೇಕಿತ್ತು’ ಎಂಬ ಆಕ್ಷೇಪ ಕೇಳಿಬಂದಿದೆ.



ಕೊರೊನಾ ಸೋಂಕಿತರಿಗಾಗಿ ಆಯೋಜಿಸಲಾಗಿದ್ದ ಸಂಗೀತ ಕಾರ್ಯಕ್ರಮ

ಸೋಂಕಿತರಿಂದ ಸಂಗೀತ ಸಂಜೆ

ಹಿರಿಯೂರು: ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಶುಕ್ರವಾರ ಸೋಂಕಿತ ಸಂಗೀತ ಶಿಕ್ಷಕರೊಬ್ಬರು ‘ಸಂಗೀತ ಸಂಜೆ’ ನಡೆಸಿ ಸೋಂಕಿತರಿಗೆ ಧೈರ್ಯ ತುಂಬಿದರು. ಹಾಡಿಗೆ ಉಳಿದ ಸೋಂಕಿತರು, ವೈದ್ಯರು, ಶುಶ್ರೂಷಕರೂ ದನಿಗೂಡಿಸಿದರು.

ಬಸವ ಜಯಂತಿ ಹಾಗೂ ಅಕ್ಷಯ ತೃತೀಯದ ಅಂಗವಾಗಿ ಸಂಗೀತ ಶಿಕ್ಷಕ ರವಿಶಂಕರ್ ಅವರು ಈ ಕಾರ್ಯಕ್ರಮ ನಡೆಸಿಕೊಟ್ಟರು. ಮೇ 11ರಂದು ಇವರು ಚಿಕಿತ್ಸೆಗೆ ದಾಖಲಾಗಿದ್ದರು. ಮಾನಸಿಕ ಒತ್ತಡಕ್ಕೆ ಸಿಲುಕಿದ ಸೋಂಕಿತರನ್ನು ರಂಜಿಸಿ, ಧೈರ್ಯ ತುಂಬಲು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

ಹತ್ತಕ್ಕೂ ಹೆಚ್ಚು ಸೋಂಕಿತರು ಇರುವ ವಾರ್ಡ್‌ಗೆ ಕೀಬೋರ್ಡ್ ತರಿಸಿಕೊಂಡು ಹಾಸಿಗೆಯ ಮೇಲೆಯೇ ಕುಳಿತು ರವಿಶಂಕರ್ ನುಡಿಸಿದರು. ವಚನಗಳು, ‘ರಾಜಕುಮಾರ’ ಚಿತ್ರದ ‘ಗೊಂಬೆ ಹೇಳುತೈತೆ ಮತ್ತೆ ಹೇಳುತೈತೆ’ ಹಾಡು ಹೇಳಿದರು. ಸೋಂಕಿತರೂ ಚಪ್ಪಾಳೆ ತಟ್ಟುತ್ತ ಸಾಥ್ ನೀಡಿದರು.

ರಾಜ್ಯ ಸರ್ಕಾರದ ಅಸಂಬದ್ಧ ಆದೇಶ, ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞರಿಲ್ಲ, ತಂತ್ರಜ್ಞರೂ ಇಲ್ಲ

ಬಳಕೆಯಾಗದ 25 ವೆಂಟಿಲೇಟರ್!

● ಸಂತೋಷ ಈ ಚಿನಗುಡಿ



ವೆಂಟಿಲೇಟರ್ ಸಾಂದರ್ಭಿಕ ಚಿತ್ರ

ಕಲಬುರ್ಗಿ: ಜಿಲ್ಲೆಯ ತಾಲ್ಲೂಕು ಆಸ್ಪತ್ರೆಗಳಲ್ಲಿ 25 ವೆಂಟಿಲೇಟರ್‌ಗಳು ಇದ್ದರೂ ತುರ್ತು ಬಳಕೆಗೆ ಅವುಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಸ್ಥಳಾಂತರಿಸಲು ಸರ್ಕಾರದ ಆದೇಶವೇ ಅಡ್ಡಿಯಾಗಿದೆ.

'ತಾಲ್ಲೂಕು ಆಸ್ಪತ್ರೆಗೆ ಮಂಜೂರು ಮಾಡಿದ ವೆಂಟಿಲೇಟರ್‌ಗಳು ಅಲ್ಲಿಯೇ ಬಳಕೆಯಾಗಬೇಕು. ಅವುಗಳನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸುವಂತಿಲ್ಲ' ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಂದಲೇ ಕಟ್ಟುನಿಟ್ಟಿನ ನಿರ್ದೇಶನ ಬಂದಿದೆ. ಆದರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞವೈದ್ಯರು, ತಂತ್ರಜ್ಞರು ಇಲ್ಲದ ಕಾರಣ ಅವು ಅಲ್ಲಿ ಬಳಕೆಯಾಗುತ್ತಿಲ್ಲ.

ಪ್ರಜಾವಾಣಿ ವಿಶೇಷ

ಗಂಭೀರ ಲಕ್ಷಣಗಳನ್ನು ಹೊಂದಿ ರುವ ಕೋವಿಡ್ ರೋಗಿಗಳ ಸಂಖ್ಯೆ ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದರಲ್ಲಿ ಹಲವರಿಗೆ ವೆಂಟಿ ಲೇಟರ್ ನೆರವು ಅನಿವಾರ್ಯ. ಯಾವುದೇ ಚಿಕಿತ್ಸೆಗೆ ದೇಹ ಸ್ಪಂದಿಸದೇ ಇದ್ದಾಗ ವೈದ್ಯರು ಅಂತಿಮವಾಗಿ ಮೊರೆ ಹೋಗುವುದೇ ವೆಂಟಿಲೇಟರ್‌ಗೆ. ಜೀವರಕ್ಷಕ ಎಂದೇ ಪರಿಗಣಿಸುವ ಈ ಸಾಧನಗಳು ಸಾಕಷ್ಟಿದ್ದರೂ ಸರ್ಕಾರದ ಆದೇಶವನ್ನು ಪಾಲಿಸುವ ಭರದಲ್ಲಿ ಅಧಿಕಾರಿಗಳು ಅವುಗಳನ್ನು ಮುಟ್ಟಿಲ್ಲ.

ಬಳಕೆಯಾಗದಿರಲು ಕಾರಣವೇನು?: ರೋಗಿಗೆ ವೆಂಟಿಲೇಟರ್ ಬಳಸಿ ಚಿಕಿತ್ಸೆ ನೀಡಬೇಕಾದರೆ ದಿನದ 24 ಗಂಟೆ ಪರಿಶೀಲನೆ ಮಾಡುವ ತಂಡ ಬೇಕಾಗುತ್ತದೆ. ಅದರಲ್ಲೂ ಜನರಲ್ ಫಿಜಿಷಿಯನ್ ಹಾಗೂ ಅರಿವಳಿಕೆ ತಜ್ಞರು ಕಡ್ಡಾಯವಾಗಿ ಇರಬೇಕು. ಆದರೆ, ಜಿಲ್ಲೆಯ ಯಾವುದೇ ತಾಲ್ಲೂಕು ಆಸ್ಪತ್ರೆಯಲ್ಲೂ ವೆಂಟಿಲೇಟರ್ ಬಳಕೆ ಮಾಡುವ ಪ್ರತ್ಯೇಕ ವೈದ್ಯರು, ತಂತ್ರಜ್ಞರು ಇಲ್ಲ.

ಈಚೆಗಷ್ಟೇ ಅಫಜಲಪುರ ತಾಲ್ಲೂಕು ಆಸ್ಪತ್ರೆಯಲ್ಲಿದ್ದ ಏಳು ವೆಂಟಿಲೇಟರ್‌ಗಳನ್ನು ತರಿಸಿಕೊಂಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು, ಅವುಗಳನ್ನು ಜಿಲ್ಲಾ ಆಸ್ಪತ್ರೆಗೆ ನೀಡಿದ್ದರು. ಆದರೆ, ಅವುಗಳನ್ನು ಮರಳಿ ತಾಲ್ಲೂಕು ಆಸ್ಪತ್ರೆಗೇ ನೀಡಬೇಕು ಎಂದು ಅಲ್ಲಿನ ಜನರು ಪ್ರತಿಭಟನೆ ಮಾಡಿದರು. ಆಸ್ಪತ್ರೆಗೆ ಭೇಟಿ ನೀಡಿದ್ದ ಸಂಸದ ಡಾ.ಉಮೇಶ ಜಾಧವ, ವಿಧಾನ ಪರಿಷತ್ ಸದಸ್ಯ ಬಿ.ಜಿ.ಪಾಟೀಲ ಅವರ ಮುಂದೆಯೇ ಜನರು ಈ ವಿಷಯಕ್ಕೆ ಪಟ್ಟು ಹಿಡಿದರು.

ಸಂಸದರು, ಜಿಲ್ಲಾಮಟ್ಟದ ಅಧಿಕಾರಿಗಳ ಜೊತೆ ಚರ್ಚಿಸಿ ಮರುದಿನವೇ ವೆಂಟಿಲೇಟರ್‌ಗಳನ್ನು ಅಫಜಲಪುರಕ್ಕೆ ಸಾಗಿಸಲು ಕ್ರಮವಹಿಸಿದರು. ಆ ಘಟನೆ ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲ್ಲೂಕು ಆಸ್ಪತ್ರೆಗಳ ವೆಂಟಿಲೇಟರ್ ವಿಚಾರವನ್ನೇ ಬಿಟ್ಟುಬಿಟ್ಟಿದ್ದಾರೆ.

ಸದ್ಯಕ್ಕೆ ಕೊರತೆ ಇಲ್ಲ: 'ಜಿಲ್ಲಾ ಆಸ್ಪತ್ರೆಯಲ್ಲಿ 40 ವೆಂಟಿಲೇಟರ್‌ಗಳು ಸುಸ್ಥಿತಿಯಲ್ಲಿವೆ. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾದ ಮೇಲೆ 10 ವೆಂಟಿಲೇಟರ್‌ಗಳನ್ನು ಎರವಲು ಪಡೆದಿದ್ದೇವೆ. ಮುಂದಿನ ವಾರ ಇನ್ನೂ 10 ಬರುತ್ತಿವೆ. ಒಟ್ಟಾರೆ ಕೋವಿಡ್ ಹಾಗೂ ಸಾಮಾನ್ಯ ರೋಗಿಗಳ ವಾರ್ಡ್ ಸೇರಿ 60 ಬಳಕೆಯಲ್ಲಿವೆ' ಎನ್ನುತ್ತಾರೆ ಜಿಮ್ಸ್ ಅಧಿಕಾರಿಗಳು.

ಸದ್ಯಕ್ಕೆ ಎಲ್ಲ ವೆಂಟಿಲೇಟರ್‌ಗಳನ್ನೂ ಬಳಕೆ ಮಾಡಲಾಗುತ್ತಿದೆ. ಮೇ ಕೊನೆಯ ವಾರದಲ್ಲಿ ಸೋಂಕಿನ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದ್ದು, ವೆಂಟಿಲೇಟರ್‌ಗಳ ಕೊರತೆ ಕಾಡಬಹುದು ಎನ್ನುವುದು ಜಿಮ್ಸ್ ವೈದ್ಯರ ಹೇಳಿಕೆ.

> ತಾಲ್ಲೂಕು ಆಸ್ಪತ್ರೆಗಳಲ್ಲೂ ಕೋವಿಡ್ ಚಿಕಿತ್ಸೆ ಆರಂಭಿಸಿದ್ದು, ಅಲ್ಲೂ ವೆಂಟಿಲೇಟರ್ ಅನಿವಾರ್ಯವಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಈ ಬಗ್ಗೆ ಜನರಿಗೆ ತಿಳಿವಳಿಕೆ ನೀಡಿ ಜಿಲ್ಲಾಸ್ಪತ್ರೆಗೆ ಕಳುಹಿಸಲಾಗುವುದು
> **ಡಾ.ಉಮೇಶ ಜಾಧವ,** ಸಂಸದ

> ಸರ್ಕಾರದ ನಿರ್ದೇಶನದ ಪ್ರಕಾರ ತಾಲ್ಲೂಕು ಆಸ್ಪತ್ರೆಗಳ ವೆಂಟಿಲೇಟರ್‌ಗಳನ್ನು ಅಲ್ಲಿಯೇ ಬಿಡಲಾಗಿದೆ. ತೀರ ಅನಿವಾರ್ಯವಾದಾಗ ಸರ್ಕಾರದ ಗಮನಕ್ಕೆ ತಂದು ಅವುಗಳನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗುವುದು
> **ವಿ.ವಿ.ಜ್ಯೋತ್ಸ್ನಾ,** ಜಿಲ್ಲಾಧಿಕಾರಿ

ಸರ್ಕಾರ, ಜನರ ನಿರ್ಲಕ್ಷ್ಯ ಕೋವಿಡ್ ದುರಂತಕ್ಕೆ ಕಾರಣ: ಭಾಗವತ್

ಪ್ರಜಾವಾಣಿ ವಾರ್ತೆ


ನವದೆಹಲಿ: ಕೊರೊನಾ ವಿರುದ್ಧದ ಹೋರಾಟ ನಿರಂತರವಾಗಿರಬೇಕು. ಸರ್ಕಾರ ಅಥವಾ ಆಡಳಿತ ಮತ್ತು ಜನರು... ಎಲ್ಲರೂ ಕೋವಿಡ್ ಮೊದಲ ಅಲೆಯ ಬಳಿಕ ನಿರ್ಲಕ್ಷ್ಯ ತಾಳಿದ್ದೇ ಈಗಿನ ಪರಿಸ್ಥಿತಿಗೆ ಕಾರಣ. ವೈದ್ಯರು ಎಚ್ಚರಿಕೆ ಕೊಡುತ್ತಿದ್ದರು. ಆದರೂ ನಾವು ನಿರ್ಲಕ್ಷ್ಯ ತಾಳಿದೆವು. ಹಾಗಾಗಿಯೇ ಇಷ್ಟು ದೊಡ್ಡ ಬಿಕ್ಕಟ್ಟು ಉಂಟಾಯಿತು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

'ಸಕಾರಾತ್ಮಕತೆಯ ಬಗ್ಗೆ ಮಾತನಾಡಲು ನನಗೆ ತಿಳಿಸಿದ್ದಾರೆ. ಅದು ಕಷ್ಟ ಏಕೆಂದರೆ, ಬಹಳ ಸಂಕಷ್ಟದ ಸಮಯದಲ್ಲಿ ನಾವು ಇದ್ದೇವೆ. ಹಲವು ಕುಟುಂಬಗಳು ತಮ್ಮ ಆತ್ಮೀಯರನ್ನು ಕಳೆದುಕೊಂಡಿವೆ. ಹಲವು ಕುಟುಂಬಗಳಲ್ಲಿ ಜೀವನಾಧಾರ ಆಗಿದ್ದವರೇ ದಿಢೀರ್ ಮೃತಪಟ್ಟಿದ್ದಾರೆ' ಎಂದು ಆರ್‌ಎಸ್‌ಎಸ್‌ನ 'ಕೋವಿಡ್ ರೆಸ್ಪಾನ್ಸ್ ಟೀಮ್' ಆಯೋಜಿಸಿದ್ದ 'ಪಾಸಿಟಿವಿಟಿ ಅನ್‌ಲಿಮಿಟೆಡ್' ಎಂಬ ಉಪನ್ಯಾಸ ಮಾಲಿಕೆಯ ಕೊನೆಯ ದಿನ ಅವರು ಹೇಳಿದ್ದಾರೆ.

ವಾಸ್ತವವನ್ನು ಅಲ್ಲಗಳೆಯುವುದರ ವಿರುದ್ಧವೂ ಅವರು ಎಚ್ಚರಿಕೆ ನೀಡಿದ್ದಾರೆ. 'ನಕಾರಾತ್ಮಕತೆ ಬೇಡ. ಏನೂ ಆಗಿಯೇ ಇಲ್ಲ, ಎಲ್ಲವೂ ಸರಿ ಇದೆ ಎಂದೂ ಹೇಳಲಾಗದು. ಪರಿಸ್ಥಿತಿಯು ಕಠಿಣವಾಗಿದೆ. ಅದು ಜನರ ದಿಕ್ಕುಗೆಡಿಸಿದೆ, ಅವರಲ್ಲಿ ನಿರಾಶೆ ಮೂಡಿಸಿದೆ ಎಂಬುದು ಬೇಸರ ಉಂಟು ಮಾಡುತ್ತದೆ. ಆದರೆ ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಈ ಪರಿಸ್ಥಿತಿಯನ್ನು ನಾವು ಎದುರಿಸಬೇಕು ಅಷ್ಟೇ' ಎಂದು ಭಾಗವತ್ ಹೇಳಿದ್ದಾರೆ.

ಸದ್ಯದ ಮಟ್ಟಿಗೆ ತಪ್ಪು ಹುಡುಕುವ ಕೆಲಸ ಮಾಡಬಾರದು. ಎಲ್ಲರೂ ಒಂದು ತಂಡವಾಗಿ ಪಿಡುಗನ್ನು ಎದುರಿಸಬೇಕು ಎಂದು ಭಾಗವತ್ ಸಲಹೆ ಕೊಟ್ಟಿದ್ದಾರೆ. ಕೊರೊನಾ ಬಿಕ್ಕಟ್ಟನ್ನು ನಿಭಾಯಿಸಿದ ರೀತಿ ಸರಿ ಇಲ್ಲ ಎಂದು ವಿರೋಧ ಪಕ್ಷಗಳೆಲ್ಲ ಸರ್ಕಾರದ ಮೇಲೆ ಮುಗಿಬೀಳುತ್ತಿರುವ ಸಂದರ್ಭದಲ್ಲಿಯೇ ಅವರು ಹೀಗೆ ಹೇಳಿದ್ದಾರೆ.

'ವೈಜ್ಞಾನಿಕ ಮನೋಭಾವ ಇರಲಿ'



ಮೋಹನ್ ಭಾಗವತ್

'ಜಾಗರೂಕತೆ ಮತ್ತು ಸಕ್ರಿಯತೆ ಇವೆರಡೂ ಬಹಳ ಮುಖ್ಯ. ಯೋಗ, ಪ್ರಾಣಾಯಾಮ, ಓಂಕಾರ ಇವನ್ನೆಲ್ಲ ಅಭ್ಯಾಸ ಮಾಡುತ್ತಾ ನಮ್ಮನ್ನು ನಾವು ದೃಢವಾಗಿಟ್ಟುಕೊಳ್ಳಬೇಕು' ಎಂದು ಮೋಹನ್ ಭಾಗವತ್ ಅವರು ಕರೆ ಕೊಟ್ಟಿದ್ದಾರೆ.

ವೈಜ್ಞಾನಿಕ ಮನೋಭಾವವೂ ಬೇಕು. ಯಾವುದೇ ಔಷಧಿ ತೆಗೆದುಕೊಳ್ಳುವ ಮುನ್ನ ಅದರ ಬಗ್ಗೆ ತಜ್ಞರನ್ನು ಕೇಳಿ ತಿಳಿದು ನಿರ್ಧಾರಕ್ಕೆ ಬರಬೇಕು. ಸುಮ್ಮನೆ ಯಾರೋ ಹೇಳಿದರು ಎಂದು ಪರಾಮರ್ಶೆ ಮಾಡದೇ ತೆಗೆದುಕೊಳ್ಳಬಾರದು. ಹಳೆಯದೆಲ್ಲ ಒಳ್ಳೆಯದು, ಹೊಸದೆಲ್ಲ ಕೆಟ್ಟದ್ದು ಎಂಬುದೂ ಸರಿಯಲ್ಲ. ಅಥವಾ ಹೊಸದನ್ನು ಸ್ವೀಕರಿಸುತ್ತಾ, ಹಳೆಯದನ್ನು ತ್ಯಜಿಸುವುದೂ ಸರಿಯಲ್ಲ ಎಂದು ಭಾಗವತ್ ಪ್ರತಿಪಾದಿಸಿದ್ದಾರೆ.

ದೆಹಲಿಯಲ್ಲಿ ಆಮ್ಲಜನಕ ಸಂಗ್ರಹ ಬ್ಯಾಂಕ್: ಕೇಜ್ರಿವಾಲ್

ನವದೆಹಲಿ: ಕೋವಿಡ್ ಪರಿಸ್ಥಿತಿ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರರಾಜಧಾನಿಯಲ್ಲಿ ಆಮ್ಲಜನಕ ಸಂಗ್ರಹ ಬ್ಯಾಂಕ್ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.

ಪ್ರತಿ ಜಿಲ್ಲೆಗಳಲ್ಲಿಯೂ ಒಳಗೊಂಡಂತೆ ಕನಿಷ್ಠ 200 ಆಮ್ಲಜನಕ ಸಂಗ್ರಹ ಬ್ಯಾಂಕ್‌ಗಳನ್ನು ಇಂದಿನಿಂದಲೇ ಸ್ಥಾಪಿಸಲಾಗುವುದು. ಮನೆಯಲ್ಲೇ ಆರೈಕೆ ಪಡೆಯುತ್ತಿರುವ ಸೋಂಕಿತರ ಮನೆಬಾಗಿಲಿಗೆ ಆಮ್ಲಜನಕ ಸಿಲಿಂಡರ್‌ಗಳನ್ನು ನಮ್ಮ ತಂಡವು ತಲುಪಿಸಲಿದೆ ಎಂದು ಅವರು ಹೇಳಿದ್ದಾರೆ.

ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರನ್ನು ಗಮನದಲ್ಲಿಟ್ಟುಕೊಂಡು ಈ ಬ್ಯಾಂಕುಗಳನ್ನು ಸ್ಥಾಪಿಸಲಾಗುತ್ತಿದೆ. ಸೋಂಕಿತರು ಅಗತ್ಯವಿದೆ ಎಂದು ತಿಳಿಸಿದ 2 ಗಂಟೆಗಳ ಒಳಗಾಗಿ ಅವರ ಮನೆಗೆ ಆಮ್ಲಜನಕ ಪೂರೈಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.



ಔಷಧಿಗಾಗಿ... ಕೋವಿಡ್–19 ರೋಗಿಗಳಿಗೆ ನೀಡಲಾಗುವ ರೆಮ್‌ಡಿಸಿವಿರ್ ಔಷಧಿ ಖರೀದಿಗಾಗಿ ಜನರು ವೈಯಕ್ತಿಕ ಅಂತರ ಮರೆತು ಚೆನ್ನೈನ ನೆಹರು ಕ್ರೀಡಾಂಗಣದ ಹೊರಗಡೆ ಶನಿವಾರ ಸೇರಿದ್ದರು –ಪಿಟಿಐ ಚಿತ್ರ

ಕೋವಿಡ್: 6 ಲಕ್ಷ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 41,664 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 6 ಲಕ್ಷದ ಗಡಿ ದಾಟಿದೆ.

ಈ ವರ್ಷ ಫೆಬ್ರವರಿ ಅಂತ್ಯಕ್ಕೆ 5,804 ಸಕ್ರಿಯ ಪ್ರಕರಣಗಳಿದ್ದವು. ಬಳಿಕ ಸೋಂಕಿತರ ಸಂಖ್ಯೆ ಏರಿಕೆ ಕಂಡ ಪರಿಣಾಮ ಸಕ್ರಿಯ ಪ್ರಕರಣಗಳು ಕೂಡ ಹೆಚ್ಚಳವಾಗಿದೆ. ಈ ತಿಂಗಳು 15 ದಿನಗಳಲ್ಲಿಯೇ 6.48 ಲಕ್ಷ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 1.18 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಮಾತ್ರ ಶೇ 35.20ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 94 ಮಂದಿ ಸೇರಿದಂತೆ ರಾಜ್ಯದಲ್ಲಿ 349 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬಳ್ಳಾರಿಯಲ್ಲಿ 24 ಮಂದಿ, ಕಲಬುರ್ಗಿಯಲ್ಲಿ 21 ಮಂದಿ, ತುಮಕೂರಿನಲ್ಲಿ 18 ಮಂದಿ, ಶಿವಮೊಗ್ಗ ಹಾಗೂ ಮೈಸೂರಿನಲ್ಲಿ ತಲಾ 15 ಮಂದಿ, ಬಾಗಲಕೋಟೆಯಲ್ಲಿ 24 ಮಂದಿ, ಹಾಸನದಲ್ಲಿ 11 ಮಂದಿ, ಬೆಂಗಳೂರು ಗ್ರಾಮಾಂತರ, ಕೊಪ್ಪಳ, ಮಂಡ್ಯದಲ್ಲಿ ತಲಾ 10 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 21,434ಕ್ಕೆ ಏರಿಕೆಯಾಗಿದೆ.

13 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಇಳಿಮುಖ ಕಂಡಿದೆ. 13,402 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ.

ಮೈಸೂರು (2,489), ಹಾಸನ (2,443), ತುಮ ಕೂರು (2,302), ದಕ್ಷಿಣ ಕನ್ನಡ (1,787), ಬಳ್ಳಾರಿ (1,622), ಬೆಳಗಾವಿ (1,502) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪೀಡಿತರಲ್ಲಿ 34,425 ಮಂದಿ ಚೇತರಿಸಿಕೊಂಡಿದ್ದಾರೆ. ಇದುವರೆಗೆ ಗುಣಮುಖರಾದವರ ಸಂಖ್ಯೆ 15.44 ಲಕ್ಷ ದಾಟಿದೆ.

ಜೂನ್ 10ಕ್ಕೆ 30 ಲಕ್ಷಕ್ಕೆ ಏರಿಕೆ

ರಾಜ್ಯದಲ್ಲಿ ಜೂನ್ 10ರ ವೇಳೆಗೆ ಕೊರೊನಾ ಸೋಂಕಿತರ ಸಂಖ್ಯೆ 30ಲಕ್ಷಕ್ಕೆ ಏರಿಕೆಯಾಗಲಿದೆ. ಮೃತರ ಸಂಖ್ಯೆ 35,000ಕ್ಕೆ ತಲುಪಲಿದೆ ಎಂದು ತಜ್ಞರ ನೆರವಿನಿಂದ ನಡೆಸಲಾದ ಅಧ್ಯಯನದಿಂದ ಸರ್ಕಾರೇತರ ಸಂಸ್ಥೆಯೊಂದು ಅಂದಾಜಿಸಿ. ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ವರದಿಯಾಗುತ್ತಿರುವ ಪ್ರಕರಣ ಹಾಗೂ ಸೋಂಕು ದೃಢ ಪ್ರಮಾಣವನ್ನು ಆಧರಿಸಿ ಸರ್ಕಾರೇತರ ಸಂಸ್ಥೆಯಾದ ಪ್ರಾಕ್ಸಿಮಾ 'ಜೀವನ್ ರಕ್ಷಾ' ಯೋಜನೆಯಡಿ ಅಧ್ಯಯನ ನಡೆಸಿದೆ. ಇದಕ್ಕೆ ಭಾರತೀಯ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನವು ತಾಂತ್ರಿಕ ಸಹಕಾರ ನೀಡಿದೆ.

ಮೇ 10ರಿಂದ ಜೂನ್ 10ರ ಅವಧಿಯಲ್ಲಿ 10 ಲಕ್ಷ ಪ್ರಕರಣಗಳು ದೃಢಪಡಲಿವೆ. ಅದೇ ರೀತಿ, ಈ ಅವಧಿಯಲ್ಲಿ 15 ಸಾವಿರ ಮರಣ ಪ್ರಕರಣಗಳು ವರದಿಯಾಗಲಿವೆ. ಕೋವಿಡ್ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ಪರೀಕ್ಷೆ, ಸಂಪರ್ಕ ಪತ್ತೆ ನಡೆಸಬೇಕು. ವೈದ್ಯಕೀಯ ವ್ಯವಸ್ಥೆಯನ್ನು ಬಲಗೊಳಿಸಿ, ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಇಬ್ಬರ ಸಾವು: ಬ್ಲ್ಯಾಕ್ ಫಂಗಸ್ ಶಂಕೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಜಿಲ್ಲೆಯ ಇಬ್ಬರು ಕೊರೊನಾ ಸೋಂಕಿನಿಂದ ಗುಣಮುಖರಾದ ಬಳಿಕ ಬಹುಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಅವರಿಗೆ ಚಿಕಿತ್ಸೆ ನೀಡಿದ ವೈದ್ಯರು ಬ್ಲ್ಯಾಕ್ ಫಂಗಸ್ ಇರಬಹುದು ಎಂದು ಶಂಕಿಸಿದ್ದಾರೆ.

ಕಾನ್‌ಸ್ಟೆಬಲ್‌ವೊಬ್ಬರು ಕಲಬುರ್ಗಿಯಲ್ಲಿ ಹಾಗೂ ಯಾದಗಿರಿಯಲ್ಲಿ ಉಪನ್ಯಾಸಕರಾಗಿದ್ದ ಇನ್ನೊಬ್ಬರು ಸೊಲ್ಲಾಪುರದ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

'ಈ ಸಾವುಗಳಿಗೆ ಬ್ಲ್ಯಾಕ್ ಫಂಗಸ್ ಕಾರಣ ಎಂಬುದು ಖಚಿತವಾಗಿಲ್ಲ. ಪ್ರಯೋಗಾಲಯದ ವರದಿ ನಿರೀಕ್ಷಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಗಣಜಲಖೇಡ ಪ್ರತಿಕ್ರಿಯಿಸಿದ್ದಾರೆ.

ಹುಬ್ಬಳ್ಳಿಯಲ್ಲಿ 12 ಮಂದಿಗೆ ಬ್ಲ್ಯಾಕ್ ಫಂಗಸ್

ಹುಬ್ಬಳ್ಳಿ: ಕೋವಿಡ್‌ನಿಂದ ಚೇತರಿಸಿಕೊಂಡ 12 ಜನರಲ್ಲಿ ಶಿಲೀಂಧ್ರ ಸೋಂಕು (ಬ್ಲ್ಯಾಕ್ ಫಂಗಸ್) ಕಾಣಿಸಿಕೊಂಡಿದೆ. ಅವರೆಲ್ಲ ಇಲ್ಲಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಂಕಿನಿಂದ ಚೇತರಿಸಿಕೊಂಡು ಮನೆಗೆ ತೆರಳಿದವರಲ್ಲಿ ಶಿಲೀಂಧ್ರ ಸೋಂಕಿನ ಲಕ್ಷಣಗಳು ಕಾಣಿಸಿವೆ. ಅವರು ಆರಂಭದಲ್ಲೇ ಚಿಕಿತ್ಸೆಗೆ ದಾಖಲಾಗಿದ್ದಾರೆ ಎಂದು ಕಿಮ್ಸ್‌ನ ಇಎನ್‌ಟಿ ವಿಭಾಗದ ಮುಖ್ಯಸ್ಥ ಡಾ.ರವೀಂದ್ರ ಗದಗ 'ಪ್ರಜಾವಾಣಿ'ಗೆ ತಿಳಿಸಿದರು.

ಗಣಿ ಇಲಾಖೆಯಿಂದ ಆಮ್ಲಜನಕ ಟ್ಯಾಂಕರ್: ಮುರುಗೇಶ ನಿರಾಣಿ

ಪ್ರಜಾವಾಣಿ ವಾರ್ತೆ



ಮುರುಗೇಶ ನಿರಾಣಿ

ಬೆಂಗಳೂರು: ವಿವಿಧ ಜಿಲ್ಲೆಗಳಲ್ಲಿ ಆಮ್ಲಜನಕದ ಬೇಡಿಕೆ ಪೂರೈಸಲು ಪ್ರತಿ ಕಂದಾಯ ವಿಭಾಗಕ್ಕೆ ತಲಾ 2 ಕ್ರಯೋಜೆನಿಕ್ ಆಮ್ಲಜನಕ ಟ್ಯಾಂಕರ್ ಹಾಗೂ ಎರಡು ಜಿಲ್ಲಾಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ಧರಿಸಿದೆ.

ಇಲಾಖೆ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ನಿರ್ದೇಶಕ ಪಿ.ಆರ್. ರವೀಂದ್ರ ಸಮ್ಮುಖದಲ್ಲಿ ಶನಿವಾರ ಸಭೆ ನಡೆಸಿದ ಗಣಿ ಸಚಿವ ಮುರುಗೇಶ ನಿರಾಣಿ, ಕೆಲವು ಪ್ರಮುಖ ತೀರ್ಮಾನಗಳನ್ನು ಕೈಗೊಂಡಿದ್ದಾರೆ.

ನಾಲ್ಕು ಕಂದಾಯ ವಿಭಾಗಗಳಿಗೆ ತಲಾ ಎರಡು ಟ್ಯಾಂಕರ್ ಹಾಗೂ ಕರಾವಳಿ ಪ್ರದೇಶಕ್ಕೆ ಹೆಚ್ಚುವರಿಯಾಗಿ ಎರಡು ಟ್ಯಾಂಕರ್‌ಗಳನ್ನು ನೀಡಲಾಗುವುದು. ಇದರ ಜವಾಬ್ದಾರಿಯನ್ನು ಪ್ರಾದೇಶಿಕ ಆಯುಕ್ತರಿಗೆ ವಹಿಸಲಾಗುವುದು ಎಂದು ಸಭೆಯ ಬಳಿಕ ನಿರಾಣಿ ತಿಳಿಸಿದರು.

ಒಂದು ಕಂದಾಯ ವಿಭಾಗದ ಎರಡು ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಕರಾವಳಿ ಭಾಗದ ಎರಡು ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪಿಸಲಾಗುವುದು. ಯಾವ ಜಿಲ್ಲೆಗೆ ತುರ್ತು ಅಗತ್ಯವಿದೆ ಎಂಬುದರ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ, ತೀರ್ಮಾನ ಕೈಗೊಳ್ಳುವ ಹೊಣೆಯನ್ನು ಇಲಾಖೆಯ ವಿಭಾಗದ ಮಟ್ಟದ ಸಮಿತಿಗೆ ನೀಡಲಾಗಿದೆ ಎಂದು ವಿವರಿಸಿದರು.

1000 ಆಮ್ಲಜನಕ ಸಾಂದ್ರಕಗಳನ್ನು ಸಂಗ್ರಹಿಸಿ ಎಲ್ಲಾ ಜಿಲ್ಲೆಗಳ ಸರ್ಕಾರ ಆಸ್ಪತ್ರೆಗಳಿಗೆ ಹಾಗೂ ಪಲ್ಸ್ ಆಕ್ಸಿಮೀಟರ್‌ಗಳನ್ನು ಸಂಗ್ರಹಿಸಿ ಇವುಗಳನ್ನು ಗ್ರಾಮ ಪಂಚಾಯಿತಿ ಆರೋಗ್ಯ ಸಮಿತಿಗಳಿಗೆ ನೀಡಲಾಗುವುದು ಎಂದರು.

'ಲಾಕ್‌ಡೌನ್ ವಿಸ್ತರಣೆ: ಸಿ.ಎಂ ತೀರ್ಮಾನವೇ ಅಂತಿಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೇ 24ರ ಬಳಿಕ ಲಾಕ್‌ಡೌನ್ ವಿಸ್ತರಣೆ ಮಾಡಬೇಕೇ ಎಂಬ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ತವ್ಯ ನಿರತ ಪೊಲೀಸರು ಹಾಗೂ ಆಹಾರದ ಅಗತ್ಯ ಇರುವವರಿಗೆ ಊಟ ಪೂರೈಸುವ ಇಸ್ಕಾನ್ ಅಕ್ಷಯ ಪಾತ್ರೆ ಯೋಜನೆಗೆ ಶನಿವಾರ ಚಾಲನೆ ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಲಾಕ್ ಡೌನ್ ವಿಸ್ತರಣೆ ಕುರಿತು ಈವರೆಗೂ ಸರ್ಕಾರದ ಮಟ್ಟದಲ್ಲಿ ಅಧಿಕೃತ ಚರ್ಚೆ ನಡೆದಿಲ್ಲ ಎಂದರು.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯಲ್ಲಿರುವ ತಜ್ಞರ ಜತೆಗೆ ಮುಖ್ಯಮಂತ್ರಿ ಚರ್ಚೆ ನಡೆಸಲಿದ್ದಾರೆ. ಆ ಸಂದರ್ಭದಲ್ಲಿ ಪರಿಸ್ಥಿತಿ ಹಾಗೂ ತಜ್ಞರ ಸಲಹೆ ಆಧರಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು.

ಇದಕ್ಕೆ ಮುನ್ನ ಆಹಾರ ಪೊಟ್ಟಣಗಳನ್ನು ವಿತರಿಸಿ ಮಾತನಾಡಿದ ಬೊಮ್ಮಾಯಿ, 'ಲಾಕ್ ಡೌನ್ ಸಂದರ್ಭದಲ್ಲಿ ಯಾರೊಬ್ಬರೂ ಆಹಾರ ಇಲ್ಲದೇ ನರಳಬಾರದು ಎಂಬುದು ಸರ್ಕಾರದ ಆಶಯ. ಹಿಂದೆ ಲಾಕ್ ಡೌನ್ ಮಾಡಿದಾಗ ಇಸ್ಕಾನ್ ಸಂಸ್ಥೆ ಸರ್ಕಾರದ ಜತೆ ಕೈಜೋಡಿಸಿತ್ತು. ಈಗಲೂ ಸಹಕಾರ ನೀಡುವಂತೆ ನಾನು ನೀಡಿದ ಮನವಿಗೆ ಸಂಸ್ಥೆ ಸ್ಪಂದಿಸಿದೆ. ಪ್ರತಿದಿನ 1000 ಪೊಲೀಸ್ ಸಿಬ್ಬಂದಿಗೆ ಊಟದ ವ್ಯವಸ್ಥೆಯನ್ನು ಇಸ್ಕಾನ್ ಮಾಡುತ್ತಿದೆ' ಎಂದರು.



ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಹಾಗೂ ಬಡವರಿಗೆ ಊಟ ಪೂರೈಸಲು ಇಸ್ಕಾನ್ ಆರಂಭಿಸಿರುವ ಕಾರ್ಯಕ್ರಮಕ್ಕೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಶನಿವಾರ ಚಾಲನೆ ನೀಡಿದರು. ಶಾಸಕ ಉದಯ ಗರುಡಾಚಾರ್, ಅಕ್ಷಯ ಪಾತ್ರೆ ಪ್ರತಿಷ್ಠಾನದ ಅಧ್ಯಕ್ಷ ಮಧು ಪಂಡಿತ್ ದಾಸ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಇದ್ದರು – ಪ್ರಜಾವಾಣಿ ಚಿತ್ರ

ಕೇಂದ್ರದಿಂದ ರಾಜ್ಯಕ್ಕೆ 3 ಆಮ್ಲಜನಕ ಟ್ಯಾಂಕರ್: ಜೋಶಿ

ಹುಬ್ಬಳ್ಳಿ: ವಿದೇಶದಿಂದ ತರಿಸಿರುವ ತಲಾ 25 ಮೆಟ್ರಿಕ್ ಟನ್ ಸಾಮರ್ಥ್ಯದ ಮೂರು ಆಮ್ಲಜನಕ ಟ್ಯಾಂಕರ್‌ಗಳನ್ನು ಕೇಂದ್ರ ರಾಜ್ಯಕ್ಕೆ ಮಂಜೂರು ಮಾಡಿದ್ದು, ಶೀಘ್ರ ಹುಬ್ಬಳ್ಳಿ ತಲುಪಲಿವೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಧಾರವಾಡ ಜಿಲ್ಲೆಗೆ ಒಂದು, ಹಾವೇರಿ, ಗದಗ ಜಿಲ್ಲೆಗೆ ಒಂದು ಹಾಗೂ ಬೆಳಗಾವಿ ಜಿಲ್ಲೆಗೆ ಒಂದನ್ನು ಬಳಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋವಿಡ್: 'ವೈರಾನಾರ್ಮ್' ಔಷಧ ಪ್ರಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಖೋಡೆ ಉದ್ಯಮ ಸಮೂಹವು ಗಿಡ ಮೂಲಿಕೆಗಳನ್ನು ಬಳಸಿ ರೋಗನಿರೋಧಕ ಶಕ್ತಿ ಹೆಚ್ಚಿಸುವ 'ವೈರಾನಾರ್ಮ್' ಔಷಧ ಸಂಶೋಧಿಸಿದೆ. ಇದನ್ನು ವಿಕ್ಟೋರಿಯಾ ಆಸ್ಪತ್ರೆ ಸೇರಿದಂತೆ ವಿವಿಧೆಡೆ 250 ಮಂದಿ ಕೋವಿಡ್ ಪೀಡಿತರ ಮೇಲೆ ಪ್ರಯೋಗ ನಡೆಸಲಾಗಿದೆ.

ಅಲ್ತಿಯಾ ಡಿ.ಆರ್.ಎಫ್ ಮತ್ತು ಲೈಫ್ ಸೈನ್ಸಸ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಮೂರು ಹಂತಗಳ ವೈದ್ಯಕೀಯ ಪ್ರಯೋಗವು ಯಶಸ್ವಿಯಾಗಿ ನಡೆದಿದೆ.



ಸಾಂದರ್ಭಿಕ ಚಿತ್ರ

ಮಾತ್ರೆ ರೂಪದ ಈ ಔಷಧ ವನ್ನು ಖೋಡೆ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಸ್ವಾಮಿ ಖೋಡೆ, ಸಂಶೋಧಕ ಡಾ.ಕೆ.ಜಿ. ಪದ್ಮನಾಭನ್, ಕ್ಲಿನಿಕಲ್ ಟ್ರಯಲ್‌ನ ಪ್ರಧಾನ ಮೇಲ್ವಿಚಾರಕ ಡಾ. ರಾಧಾ ಶ್ಯಾಮ್ ನಾಯ್ಕ್ ಶನಿವಾರ ಬಿಡುಗಡೆ ಮಾಡಿದರು.

'ಪ್ರಯೋಗದಲ್ಲಿ ಕೋವಿಡ್ ಪೀಡಿತರನ್ನು ಎರಡು ಗುಂಪುಗಳಾಗಿ ವಿಂಗಡಿಸಿ, 125 ಮಂದಿಗೆ 'ವೈರಾನಾರ್ಮ್' ಔಷಧ ನೀಡಲಾಯಿತು. ಇನ್ನೊಂದು ಗುಂಪಿನ 125 ಮಂದಿಗೆ ನೀಡಲಿಲ್ಲ. ಇದನ್ನು ಪಡೆದವರು ಉತ್ತಮವಾಗಿ ಚೇತರಿಸಿಕೊಂಡಿರುವುದು ವೈದ್ಯಕೀಯ ವಿಶ್ಲೇಷಣೆಗಳಿಂದ ದೃಢಪಟ್ಟಿದೆ' ಎಂದು ತಿಳಿಸಿದರು.

42 ಶಿಕ್ಷಕರ ಸಾವಿಗೆ ಆಡಳಿತವೇ ಹೊಣೆ: ಡಿಕೆಶಿ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಬೆಂಗಳೂರು: 'ಉಪ ಚುನಾವಣೆಗೆ ಬಸವಕಲ್ಯಾಣದಲ್ಲಿ ಚುನಾವಣೆ ಕರ್ತವ್ಯದಲ್ಲಿ ಭಾಗಿ ಯಾಗಿದ್ದ 42 ಶಿಕ್ಷಕರು ಕೊರೊನಾ ದಿಂದ ಮೃತಪಟ್ಟಿರುವುದು ನಮ್ಮೆಲ್ಲರ ಅಪರಾಧ. ಇದಕ್ಕೆ ಚುನಾವಣೆ ನಡೆಸಿ ದವರೇ ಹೊಣೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶನಿವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸೋಂಕು ಹೆಚ್ಚುತ್ತಿರುವುದರಿಂದ ಚುನಾವಣೆ ಮುಂದೂಡಿ ಎಂದು ಸರ್ಕಾರ ಹೇಳಿದ್ದರೆ, ಆಯೋಗ ಚುನಾವಣೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕೆಲವರಿಗೆ ಆತುರವಾಗಿ ಚುನಾವಣೆ ಮಾಡಬೇಕಿತ್ತು. ಅದಕ್ಕೆ ಶಿಕ್ಷಕರನ್ನು ಬಲಿ ಕೊಟ್ಟಿದ್ದಾರೆ' ಎಂದು ದೂರಿದರು.

'ನನ್ನನ್ನೂ ಸೇರಿ ನಾವು ರಾಜಕೀಯ ಪಕ್ಷದವರು ಅಂತರ ಕಾಪಾಡಲು ಸಾಧ್ಯವಾಗಲಿಲ್ಲ. ನಾವು ಜನರನ್ನು ಸಂಘಟಿಸಿ ಮತ ಪಡೆಯುವ ಅಮಲಿನಲ್ಲಿದ್ದೆವು. ಆದರೆ, ಚುನಾವಣೆ ಕೆಲಸ ಮಾಡಿದ ಶಿಕ್ಷಕರಿಗೆ ಸರ್ಕಾರ ರಕ್ಷಣೆ ನೀಡಬಹುದಾಗಿತ್ತು' ಎಂದರು.

ಪರೀಕ್ಷೆ ಇಳಿಕೆ ಸರಿಯಲ್ಲ: 'ಕೊರೊನಾ ಸೋಂಕು ಪ್ರಕರಣ ಸಂಖ್ಯೆ ಕಡಿಮೆ ತೋರಿಸಲು ಪರೀಕ್ಷೆ ಪ್ರಮಾಣ ಕಡಿಮೆ ಮಾಡಿರುವುದು ಸರ್ಕಾರವೇ ಜನರನ್ನು ಹತ್ಯೆ ಮಾಡುವ ನಿರ್ಧಾರ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಹೆಚ್ಚಿನ ಪ್ರಮಾಣದಲ್ಲಿ ಪರೀಕ್ಷೆ ನಡೆಸಲು ಐಸಿಎಂಆರ್ ಹೇಳಿದೆ. ಸರ್ಕಾರ ಶೇ 50ರಷ್ಟು ಪರೀಕ್ಷೆ ಕಡಿಮೆ ಮಾಡಲು ಎಲ್ಲ ಆಸ್ಪತ್ರೆಗಳಿಗೆ ಸೂಚಿಸಿದೆ. ಸರ್ಕಾರ ಹೆಚ್ಚಿನ ಪರೀಕ್ಷೆ ನಡೆಸಬೇಕು. ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ್ ಅವರು ಕೋವಿಡ್ ಕಾರ್ಯಪಡೆಯ ಹೊಣೆ ವಹಿಸಿಕೊಂಡ ಬಳಿಕ ಈ ಆದೇಶ ನೀಡಲಾಗಿದೆ' ಎಂದು ದೂರಿದರು.

ಶ್ರೀನಿವಾಸ್‌ಗೆ ಬೆಂಬಲ: 'ದೆಹಲಿ ಪೊಲೀಸರು ರಾಷ್ಟ್ರೀಯ ಯುವ ಕಾಂಗ್ರೆಸ್ ಕಚೇರಿಗೆ ನುಗ್ಗಿ, ಯುವ ಕಾಂಗ್ರೆಸ್ ಅಧ್ಯಕ್ಷರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಕೇಂದ್ರ ಸರ್ಕಾರದ ಈ ನಡೆ ಖಂಡನೀಯ. ಶ್ರೀನಿವಾಸ್ ಅವರು ರಾಜಕೀಯ ಕೆಲಸ ಮಾಡುತ್ತಿಲ್ಲ. ಬದಲಿಗೆ ದೇಶದ ಜನರ ಸೇವೆಗೆ ಶ್ರಮಿಸುತ್ತಿದ್ದಾರೆ. ಮಾನವೀಯ ಸೇವೆ ಮಾಡುತ್ತಿದ್ದಾರೆ' ಎಂದರು.

ಲಸಿಕೆ ಖರೀದಿಗೆ ಪಿ.ಎಂ ಕೇರ್ಸ್‌ಫಂಡ್ ಬಳಕೆ: 'ಸುಪ್ರೀಂ'ನಲ್ಲಿ ಪಿಐಎಲ್

ಪ್ರಜಾವಾಣಿ ವಾರ್ತೆ



ನವದೆಹಲಿ: ಪಿ.ಎಂ ಕೇರ್ಸ್ ಫಂಡ್‌ನಡಿ ಲಭ್ಯವಿರುವ ಹಣವನ್ನು ಕೋವಿಡ್–19 ಲಸಿಕೆ, ಆಮ್ಲಜನಕ ಘಟಕಗಳ ಸ್ಥಾಪನೆ ಹಾಗೂ ಅಗತ್ಯ ವೈದ್ಯಕೀಯ ಪರಿಕರಗಳ ಖರೀದಿಗಾಗಿ ಬಳಕೆ ಮಾಡುವಂತೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ವಕೀಲ ವಿಪ್ಲವ ಶರ್ಮ ಎಂಬುವವರು ಈ ಅರ್ಜಿ ಸಲ್ಲಿಸಿದ್ದಾರೆ.

'ಎಲ್ಲ ಖಾಸಗಿ, ಚಾರಿಟಬಲ್ ಆಸ್ಪತ್ರೆಗಳು ವೈದ್ಯಕೀಯ ಆಮ್ಲಜನಕ ಕೇಂದ್ರಗಳನ್ನು ಅಳವಡಿಸಬೇಕು, ಆ ಮೂಲಕ ರೋಗಿಗಳಿಗೆ ಉತ್ತಮ ಗುಣಮಟ್ಟದ ಆಮ್ಲಜನಕ ಸಿಗುವುದನ್ನು ಖಾತರಿಪಡಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಬೇಕು ಎಂದೂ ಅವರು ಕೋರಿದ್ದಾರೆ.

'ಎಲ್ಲ ನಗರಗಳಲ್ಲಿ ವಿದ್ಯುತ್ ಹಾಗೂ ಇತರ ಚಿತಾಗಾರಗಳನ್ನು ಸ್ಥಾಪಿಸಬೇಕು. ಈಗಿರುವ ಚಿತಾಗಾರ, ಸ್ಮಶಾನಗಳನ್ನು ಸುಧಾರಿಸಲು ಕ್ರಮ ಕೈಗೊಳ್ಳುವಂತೆಯೂ ಸೂಚಿಸಬೇಕು' ಎಂದೂ ವಿಪ್ಲವ ಶರ್ಮ ಅರ್ಜಿಯಲ್ಲಿ ಕೋರಿದ್ದಾರೆ.

ಮನೆಮನೆಗೆ ತೆರಳಿ ಪರೀಕ್ಷೆಗೆ ಸೂಚನೆ

ಒಂದನೇ ಪುಟದಿಂದ

'ಸೋಂಕು ದೃಢ ಪ್ರಮಾಣ ಅಧಿಕವಾಗಿರುವ ಜಿಲ್ಲೆಗಳಲ್ಲಿ ಕಂಟೈನ್ಮೆಂಟ್ ವಲಯಗಳನ್ನು ಸ್ಥಾಪಿಸಲು ಒತ್ತು ನೀಡಬೇಕು. ಹೋಂ ಐಸೋಲೇಷನ್ ಹಾಗೂ ಚಿಕಿತ್ಸೆಗೆ ಸಂಬಂಧಿಸಿದ ಮಾರ್ಗ ಸೂಚಿಗಳು ಗ್ರಾಮೀಣ ಭಾಗದ ಜನರಿಗೆ ಸರಳವಾಗಿ ಅರ್ಥವಾಗುವಂತಿರಬೇಕು. ಪ್ರಾತ್ಯಕ್ಷಿಕೆ ಮೂಲಕ ಅವರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನವಾಗಬೇಕು. ಈ ಕಾರ್ಯದಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ತೊಡಗಿಸಿಕೊಳ್ಳಬೇಕು' ಎಂದೂ ಮೋದಿ ಅಧಿಕಾರಿಗಳಿಗೆ ಸೂಚಿಸಿದರು.

'ಗ್ರಾಮೀಣ ಪ್ರದೇಶಗಳಲ್ಲಿ ಆಮ್ಲಜನಕದ ಪೂರೈಕೆಯನ್ನು ಖಾತ್ರಿಪಡಿಸುವ ವಿತರಣಾ ಯೋಜನೆಯನ್ನು ರೂಪಿಸಬೇಕು. ಆಮ್ಲಜನಕ ಸಾಂದ್ರಕ, ವೆಂಟಿಲೇಟರ್‌ಗಳ ನಿರ್ವಹಣೆ, ಅವುಗಳ ಬಳಕೆ ಕುರಿತು ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಬೇಕು' ಎಂದರು.

'ಪರೀಕ್ಷೆಯಲ್ಲಿ ಹೆಚ್ಚಳ': ಮಾರ್ಚ್ ತಿಂಗಳ ಆರಂಭದಲ್ಲಿ ವಾರಕ್ಕೆ ಸುಮಾರು 50 ಲಕ್ಷ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಈಗ ವಾರಕ್ಕೆ ಸುಮಾರು 1.3 ಕೋಟಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ದೇಶದಲ್ಲಿ ಸೋಂಕಿತರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ ಮತ್ತು ಕೋವಿಡ್–19 ನಿಂದ ಚೇತರಿಕೆ ದರವೂ ಹೆಚ್ಚುತ್ತಿದೆ ಎಂದು ಅಧಿಕಾರಿಗಳು ಪ್ರಧಾನಿಗೆ ಮಾಹಿತಿ ನೀಡಿದರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 16-5-1996

● **ವಾಜಪೇಯಿ ಹೊಸ ಪ್ರಧಾನಿ:ಇಂದು ಪ್ರಮಾಣ**

ನವದೆಹಲಿ, ಮೇ 15 (ಪಿಟಿಐ): ಭಾರತೀಯ ಜನತಾ ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ಭಾರತದ 11ನೇ ಪ್ರಧಾನ ಮಂತ್ರಿಯಾಗಿ ನಾಳೆ ಮಧ್ಯಾಹ್ನ 12 ಗಂಟೆಗೆ ಅಧಿಕಾರ ಸ್ವೀಕರಿಸಲಿದ್ದಾರೆ.

ರಾಷ್ಟ್ರಪತಿ ಭವನದ ಅಶೋಕ ಹಾಲ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ವಾಜಪೇಯಿ ಹಾಗೂ 10 ಮಂದಿ ಸದಸ್ಯರಿಗೆ ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ. ಏಕೈಕ ದೊಡ್ಡ ಪಕ್ಷದ ನಾಯಕರಾದ ವಾಜಪೇಯಿ ಅವರನ್ನು ಸರ್ಕಾರ ರಚಿಸುವಂತೆ ರಾಷ್ಟ್ರಪತಿ ಶರ್ಮಾ ಅವರು ಇಂದು ಔಪಚಾರಿಕವಾಗಿ ಆಹ್ವಾನ ನೀಡಿದರು. ಮೇ 31ರ ಒಳಗೆ ಸದನದಲ್ಲಿ ಬಹುಮತ ಸಾಬೀತು ಪಡಿಸುವಂತೆ ಕೇಳಿದ್ದಾರೆ.

50 ವರ್ಷಗಳ ಹಿಂದೆ — ಭಾನುವಾರ, 16-5-1971

● **ಪಕ್ಷದ ಅಧಿಕಾರ ಸ್ಥಾನಗಳಿಗೆ 'ಹಳೇ ತಲೆಗಳ' ಸ್ಪರ್ಧೆ ಇಲ್ಲ**

ಮುನ್ಷಿನಗರ, ಮೇ 15– ಪಕ್ಷದ 'ಹಳೇ ತಲೆಗಳು' ಅಧ್ಯಕ್ಷ ಸ್ಥಾನವನ್ನೊಳಗೊಂಡು ಯಾವುದೇ ಚುನಾಯಿತ ಹುದ್ದೆಗಳಿಗೆ ಸ್ಪರ್ಧಿಸುವುದಿಲ್ಲವೆಂದು ಸಂಸ್ಥಾ ಕಾಂಗ್ರೆಸ್ಸಿನ ಅಧ್ಯಕ್ಷ ಎಸ್. ನಿಜಲಿಂಗಪ್ಪನವರು ಇಂದು ಇಲ್ಲಿ ಪಕ್ಷದ ಯುವಕರಿಗೆ ತಿಳಿಸಿದರು.

ಇದು 'ತಮ್ಮ ಹಿರಿಯ ಸಹ ಕಾರ್ಯಕರ್ತರ ಭಾವನೆ ಮತ್ತು ಅಭಿಪ್ರಾಯವೆಂದು' ವರ್ಣಿಸಿದ ನಿಜಲಿಂಗಪ್ಪನವರು ಈ ಮಹಾನ್ ಸಂಸ್ಥೆಯನ್ನು ನಡೆಸಿಕೊಂಡು ಹೋಗುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಸಮರ್ಥರಾಗುವಂತೆ ಯುವಕರಿಗೆ ತರಬೇತಿ ನೀಡುವುದರಲ್ಲಿ ಮಾತ್ರ ಪಕ್ಷದ ಹಿರಿಯರು ಆಸಕ್ತರಾಗಿದ್ದಾರೆಂದು ನುಡಿದರು.

ಒಣ ದ್ರಾಕ್ಷಿ ವ್ಯಾಪಾರ, ವಹಿವಾಟಿಗೆ ಹುಳಿ ಹಿಂಡಿದ ಕೋವಿಡ್ ಲಾಕ್‌ಡೌನ್

ಒಣಗಿದ 'ದ್ರಾಕ್ಷಿ' ಬೆಳೆಗಾರ

• ಬಸವರಾಜ್ ಸಂಪಳ್ಳಿ

ವಿಜಯಪುರ: ಉತ್ತರ ಕರ್ನಾಟಕ ಭಾಗದ ವಿಜಯಪುರ, ಬಾಗಲಕೋಟೆ, ಬೆಳಗಾವಿ ಮತ್ತು ಗದಗ ಹಾಗೂ ಕೊಪ್ಪಳ ಜಿಲ್ಲೆಯ ಕೆಲ ಭಾಗಗಳ ಸುಮಾರು 30 ಸಾವಿರ ದ್ರಾಕ್ಷಿ ಬೆಳೆಗಾರರು ಕೋವಿಡ್ ಲಾಕ್‌ಡೌನ್ ಪರಿಣಾಮ ಒಣದ್ರಾಕ್ಷಿ ಮಾರಾಟ ಮಾಡಲಾಗದೆ ಸಮಸ್ಯೆಗೆ ಸಿಲುಕಿದ್ದಾರೆ.

ಆರು ಜಿಲ್ಲೆಗಳ ವ್ಯಾಪ್ತಿಯ 24 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ವರ್ಷ ಉತ್ಪಾದನೆಯಾಗಿರುವ 1.20 ಲಕ್ಷ ಟನ್ ಒಣದ್ರಾಕ್ಷಿಯಲ್ಲಿ ಅರ್ಧಕ್ಕೂ ಹೆಚ್ಚು ಇನ್ನೂ ಮಾರಾಟವಾಗದೇ ಕೋಲ್ಡ್ ಸ್ಟೋರೇಜ್‌ಗಳಲ್ಲಿ ಸಂಗ್ರಹವಾಗಿದೆ.

ಲಾಕ್‌ಡೌನ್‌ಗೂ ಪೂರ್ವದಲ್ಲಿ ಪ್ರತಿ ಕೆ.ಜಿ. ಒಣದ್ರಾಕ್ಷಿಗೆ ಕನಿಷ್ಠ ₹150ರಿಂದ ಗರಿಷ್ಠ ₹ 300ರ ವರೆಗೂ ದರ ಲಭಿಸಿತ್ತು. ಹೋದವರ್ಷ ಬೆಳೆಗಾರರು ಸಂಪೂರ್ಣ ನಷ್ಟ ಅನುಭವಿಸಿದ್ದರು. ಈಗ ಕೋವಿಡ್ ಲಾಕ್‌ಡೌನ್ ಒಣ ದ್ರಾಕ್ಷಿ ವ್ಯಾಪಾರ, ವಹಿವಾಟು ಸ್ಥಗಿತಗೊಳ್ಳುವಂತೆ ಮಾಡಿದೆ.

ರಾಜ್ಯದಲ್ಲಿ ವಾರ್ಷಿಕ ಸುಮಾರು ₹ 3 ಸಾವಿರ ಕೋಟಿ ಮೊತ್ತದ ಒಣದ್ರಾಕ್ಷಿ ವಹಿವಾಟಾಗುತ್ತದೆ. ಆದರೂ ನೆರೆಯ ಮಹಾರಾಷ್ಟ್ರ ಮಾರುಕಟ್ಟೆಯನ್ನು ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿ ರಾಜ್ಯದ ಬೆಳೆಗಾರರದ್ದಾಗಿದೆ. ಒಣದ್ರಾಕ್ಷಿಗೆ ಶೇ 5ರಷ್ಟು ಜಿಎಸ್‌ಟಿ ಇರುವುದರಿಂದ ಇದರ ಲಾಭ ಮಹಾರಾಷ್ಟ್ರದ ಪಾಲಾಗುತ್ತಿದೆ.

ವಿಜಯಪುರ ಸೇರಿ ನೆರೆಯ ಮಹಾರಾಷ್ಟ್ರದ ತಾಸಗಾಂವ್, ಸಾಂಗ್ಲಿ, ಪಂಢರಾಪುರ ಒಣದ್ರಾಕ್ಷಿಯ ಪ್ರಮುಖ ಮಾರುಕಟ್ಟೆಗಳಾಗಿವೆ. ಕೋವಿಡ್ ಎರಡನೇ ಅಲೆಯಿಂದಾಗಿ ಮಹಾರಾಷ್ಟ್ರದಲ್ಲಿ ಎರಡು ತಿಂಗಳಿಂದ ಜನತಾ ಕರ್ಫ್ಯೂ ಜಾರಿಯಲ್ಲಿರುವುದರಿಂದ ಮಾರುಕಟ್ಟೆ ಸಂಪೂರ್ಣ ಬಂದ್ ಆಗಿದೆ. ವಿಜಯಪುರದಲ್ಲೂ ಒಂದು ತಿಂಗಳಿಂದ ಒಣದ್ರಾಕ್ಷಿ ಇ–ಟ್ರೇಡಿಂಗ್ ಪ್ರಕ್ರಿಯೆ ಸ್ಥಗಿತವಾಗಿದೆ. ಮಾರುಕಟ್ಟೆಯೂ ಇಲ್ಲ, ಬೆಲೆಯೂ ಇಲ್ಲದೇ ಒಣದ್ರಾಕ್ಷಿ ಬೆಳೆಗಾರರು ಕಂಗಾಲಾಗಿದ್ದಾರೆ.



ವಿಜಯಪುರದ ಇ–ಟ್ರೇಡಿಂಗ್ ಮಾರುಕಟ್ಟೆಯಲ್ಲಿ ರೈತರು ಮಾರಾಟಕ್ಕೆ ಜೋಡಿಸಿಟ್ಟಿರುವ ಒಣ ದ್ರಾಕ್ಷಿ (ಪ್ರಜಾವಾಣಿ ಸಂಗ್ರಹ ಚಿತ್ರ)

ಒಣದ್ರಾಕ್ಷಿಯ ಸಂಗ್ರಹಕ್ಕೆ ಅಗತ್ಯ ಶೀತಲಿಕರಣ ಘಟಕಗಳು (ಕೋಲ್ಡ್ ಸ್ಟೋರೇಜ್) ರಾಜ್ಯದಲ್ಲಿ ಇಲ್ಲ. ಮಹಾರಾಷ್ಟ್ರದ ತಾಸಗಾಂವ್, ಸಾಂಗ್ಲಿ, ಪಂಢರಾಪುರವನ್ನೇ ಆಶ್ರಯಿಸಬೇಕಾಗಿದೆ. ತಿಂಗಳಿಗೆ ಪ್ರತಿ ಟನ್ ಒಣದ್ರಾಕ್ಷಿಗೆ ₹700 ರಿಂದ ₹1 ಸಾವಿರ ಬಾಡಿಗೆ ನೀಡಬೇಕಿದೆ.

ನೆಪಮಾತ್ರಕ್ಕೆ: ವಿಜಯಪುರದಲ್ಲಿ ಇ–ಟ್ರೇಡಿಂಗ್ ಮಾರುಕಟ್ಟೆ ನೆಪಮಾತ್ರಕ್ಕೆ ಎಂಬಂತಿದ್ದು, ಏಳೆಂಟು ಪ್ರಬಲ ವ್ಯಾಪಾರಿಗಳ ಕಪಿಮುಷ್ಠಿಯಲ್ಲಿ ಸಿಲುಕಿದೆ. ಹೊರರಾಜ್ಯದ ವ್ಯಾಪಾರಿಗಳು ಪಾಲ್ಗೊಳ್ಳದಂತೆ ತಡೆದಿದ್ದು, ಗುಣಮಟ್ಟದ ಒಣದ್ರಾಕ್ಷಿಗೆ ಸೂಕ್ತ ಮಾರುಕಟ್ಟೆ ಲಭಿಸುತ್ತಿಲ್ಲ. ನೆರೆಯ ಮಹಾರಾಷ್ಟ್ರದ ಮಾರುಕಟ್ಟೆಯತ್ತ ಬೆಳೆಗಾರರು ಮುಖ ಮಾಡುವಂತಾಗಿದೆ ಎಂದು ಕರ್ನಾಟಕ ರಾಜ್ಯ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ್ ನಾಂದ್ರೇಕರ್ ಆರೋಪಿಸುತ್ತಾರೆ.

ಇಲ್ಲಿಯ ಗುಣಮಟ್ಟದ ಒಣದ್ರಾಕ್ಷಿಗೆ ಒಂದು ಬ್ರ್ಯಾಂಡ್‌ನ ಅಗತ್ಯವಿದೆ. ಜೊತೆಗೆ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿಗೆ ಹೆಚ್ಚಿನ ಅನುದಾನದ ಅಗತ್ಯವಿದೆ ಎನ್ನುತ್ತಾರೆ ಅವರು. ಹಸಿ ದ್ರಾಕ್ಷಿ (ಟೇಬಲ್ ಗ್ರೇಪ್ಸ್) ಮಾರಾಟಕ್ಕೆ ಈ ಬಾರಿ ತೊಂದರೆಯಾಗಿಲ್ಲ. ಪ್ರತಿ ಕೆ.ಜಿ.ಗೆ ₹ 25ರಿಂದ ₹ 60ರ ವರೆಗೂ ಬೆಳೆಗಾರರಿಗೆ ಲಭಿಸಿದೆ. ಕೊನೆ ಕೊಯ್ಲಿನ ವೇಳೆ ಕೋವಿಡ್ ಎರಡನೇ ಅಲೆ ಆರಂಭವಾಗಿ ಮಾರುಕಟ್ಟೆಯಲ್ಲಿ ದ್ರಾಕ್ಷಿಗೆ ಬೇಡಿಕೆ ಕಡಿಮೆಯಾದರೂ ಹೇಳಿಕೊಳ್ಳುವಷ್ಟು ನಷ್ಟ ಆಗಲಿಲ್ಲ ಎನ್ನುತ್ತಾರೆ ವಿಜಯಪುರದ ದ್ರಾಕ್ಷಿ ಬೆಳೆಗಾರ ರಿಜ್ವಾನ್ ಜಹಗೀರದಾರ್.

ತೋಟದಲ್ಲೂ ಕೊಳೆಯಲಿಲ್ಲ, ರಸ್ತೆಗೂ ಚೆಲ್ಲಲಿಲ್ಲ

• ಮನೋಹರ್ ಎಂ.

ಬೆಂಗಳೂರು: ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಕಳೆದ ವರ್ಷದಂತೆ ಈ ಬಾರಿ ದ್ರಾಕ್ಷಿ ಬೆಳೆ ತೋಟದಲ್ಲೇ ಕೊಳೆಯಲಿಲ್ಲ, ರಸ್ತೆಗೂ ಚೆಲ್ಲಲಿಲ್ಲ. ಈಗಿನ ಲಾಕ್‌ಡೌನ್ ಜಾರಿಗೂ ಮುನ್ನವೇ ಬಹುತೇಕ ದ್ರಾಕ್ಷಿ ಮಾರುಕಟ್ಟೆ ಸೇರಿತ್ತು.

'ಲಾಕ್‌ಡೌನ್‌ಗೂ ಮುನ್ನವೇ ಶೇ 75ರಷ್ಟು ಹಣ್ಣು ತೋಟದಿಂದ ಖಾಲಿಯಾಗಿತ್ತು. ಇನ್ನೇನು ಕೊನೆಯ ಹಂತದ ದ್ರಾಕ್ಷಿ ಕಟಾವು ಮಾಡಬೇಕು ಎನ್ನುವಷ್ಟರಲ್ಲಿ ಮತ್ತೆ ಲಾಕ್‌ಡೌನ್ ಜಾರಿಯಾಯಿತು. ಗ್ರಾಹಕರಿಗೆ ಸಂಜೆಯವರೆಗೆ ಖರೀದಿಸಲು ಅನುಮತಿ ನೀಡದೆ ಇರುವುದರಿಂದ ದ್ರಾಕ್ಷಿಗೆ ದ್ರಾಕ್ಷಿ ಬೆಳೆಗಾರರಿಗೆ ಪೆಟ್ಟು ಬಿದ್ದಿದೆ' ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದ್ರಾಕ್ಷಿ ಬೆಳೆಗಾರ ಮುನಿಶಾಮಪ್ಪ.

'ಈ ಬಾರಿ 500 ಟನ್ ದ್ರಾಕ್ಷಿ ವಹಿವಾಟು ನಡೆಸುವ ಗುರಿ ಇತ್ತು. ಆದರೆ, ತೀವ್ರಗೊಂಡ ಎರಡನೇ ಅಲೆಯಲ್ಲೂ ಈವರೆಗೆ 160 ಟನ್ ದ್ರಾಕ್ಷಿ ಮಾರಾಟವಾಗಿದೆ' ಎಂದು ಕರ್ನಾಟಕ ರಾಜ್ಯ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ 'ಪ್ರಜಾವಾಣಿ'ಗೆ ತಿಳಿಸಿದರು.

ತೋಟಗಾರಿಕೆ ಬೆಳೆಗಾರರಿಗೆ ಸ್ಪಂದಿಸಿದ ಸಹಾಯವಾಣಿ; ಹೂ ಬೆಳೆಗಾರರಿಗೆ ಸಿಕ್ಕಿಲ್ಲ ಮಾರುಕಟ್ಟೆ

3,991 ರೈತರಿಂದ ಕರೆ; ಮಾರುಕಟ್ಟೆ–ಬೆಲೆಗೆ ಮೊರೆ

• ಡಿ.ಬಿ.ನಾಗರಾಜ

ಮೈಸೂರು: ಲಾಕ್‌ಡೌನ್ ಅವಧಿಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಬೆಳೆಗಾರರ ನೆರವಿಗೆ ಮುಂದಾಗಲು, ತೋಟಗಾರಿಕೆ ಇಲಾಖೆಯು ರಾಜ್ಯದ 30 ಜಿಲ್ಲೆಗಳಲ್ಲಿರುವ ತನ್ನ ಕಚೇರಿಗಳಲ್ಲಿ ಸಹಾಯವಾಣಿ ಆರಂಭಿಸಿದೆ.

ರಾಜ್ಯ ಮಟ್ಟದ ಸಹಾಯವಾಣಿಯೊಂದು ಬೆಂಗಳೂರಿನಿಂದ ಕಾರ್ಯನಿರ್ವಹಿಸುತ್ತಿದೆ. ಬೆಳಿಗ್ಗೆ 8ರಿಂದ ಸಂಜೆ 7ರ ವರೆಗೆ ಸಹಾಯವಾಣಿಯು ಬೆಳೆಗಾರರ ನೆರವಿಗೆ ಲಭ್ಯವಿದೆ.

ಮೇ 13, ಗುರುವಾರದವರೆಗೂ 30 ಜಿಲ್ಲೆಗಳಲ್ಲಿನ ಸಹಾಯವಾಣಿಗೆ 3,548 ಬೆಳೆಗಾರರು ಕರೆ ಮಾಡಿ, ಸಮಸ್ಯೆ ಹೇಳಿಕೊಂಡಿದ್ದಾರೆ. ರಾಜ್ಯ ಸಹಾಯವಾಣಿಗೆ 443 ಕೃಷಿಕರು ಕರೆ ಮಾಡಿದ್ದಾರೆ ಎಂದು ಇದರ ಉಸ್ತುವಾರಿ ಹೊಣೆ ಹೊತ್ತಿರುವ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರೊಬ್ಬರು ತಿಳಿಸಿದರು.

'ಹಿಂದಿನ ವರ್ಷ ಕೃಷಿ ಇಲಾಖೆಯೊಂದಿಗೆ ಅಗ್ರಿ ವಾರ್ ರೂಂ ಮಾಡಿದ್ದೆವು. ಈ ಬಾರಿ ನಮ್ಮ ಇಲಾಖೆಯಿಂದ ಏಪ್ರಿಲ್ ಅಂತ್ಯದಲ್ಲೇ ಸಹಾಯವಾಣಿ ಆರಂಭಿಸಿದ್ದೇವೆ. ಅಂತರರಾಜ್ಯ ಸಾಗಾಟಕ್ಕೆ ಅಡ್ಡಿ ಇಲ್ಲದಿರುವುದರಿಂದ ಬೆಳೆಗಾರರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಮಸ್ಯೆ ಆಗಿಲ್ಲ. ಆದರೆ ಬೇಡಿಕೆ ಕಡಿಮೆ ಆಗಿರುವುದರಿಂದ ಸೂಕ್ತ ದರ ಸಿಗುತ್ತಿಲ್ಲ' ಎಂದು ಅವರು ಹೇಳಿದರು.



ಸಹಾಯವಾಣಿ ಕಣ್ಣೊರೆಸುವ ತಂತ್ರ. ಯಾವೊಬ್ಬ ಅಧಿಕಾರಿಯೂ ಬೆಳೆಗಾರರ ಜಮೀನಿಗೆ ಭೇಟಿ ನೀಡುತ್ತಿಲ್ಲ. ಕೇರಳ ಮಾದರಿಯಲ್ಲಿ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು

ಬಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ಅಧ್ಯಕ್ಷ

'ಇದುವರೆಗೆ ಕರೆ ಮಾಡಿದ ಬಹುತೇಕ ಬೆಳೆಗಾರರು, ಮಾರುಕಟ್ಟೆ ಮತ್ತು ಧಾರಣೆ ಕುಸಿತದ ಸಮಸ್ಯೆಯನ್ನೇ ಪ್ರಸ್ತಾಪಿಸಿದ್ದಾರೆ. ಮಾವು, ಬಾಳೆ, ಟೊಮೆಟೊ, ಕಲ್ಲಂಗಡಿ, ಕರಬೂಜ, ತರಕಾರಿ ಹಾಗೂ ಹೂವು ಬೆಳೆಗಾರರು ಕರೆ ಮಾಡಿ ತಮ್ಮ ಸಮಸ್ಯೆ ಹೇಳಿಕೊಂಡಿದ್ದಾರೆ' ಎಂದರು.

'ಪ್ರತಿಯೊಬ್ಬರ ಮಾಹಿತಿ ದಾಖಲಿಸಿಕೊಂಡಿದ್ದು, ಮಾರಾಟಕ್ಕೆ ಹತ್ತಿರದ ಮಾರುಕಟ್ಟೆಯನ್ನು ಸೂಚಿಸಿದ್ದೇವೆ. ಕೆಲವೊಬ್ಬರಿಗೆ ವ್ಯಾಪಾರಿಗಳ ಸಂಪರ್ಕವನ್ನೂ ಮಾಡಿಕೊಟ್ಟಿದ್ದೇವೆ. ನಮ್ಮ ಹಾಪ್‌ಕಾಮ್ಸ್‌ಗಳಿಗೂ ಅಗತ್ಯವಿದ್ದಷ್ಟು ಖರೀದಿಸಿದ್ದೇವೆ. ಎಪಿಎಂಸಿಗೂ ಕಳುಹಿಸಿಕೊಟ್ಟಿದ್ದೇವೆ. ಆಯಾ ಭಾಗದ ಸಂಬಂಧಿಸಿದ ಅಧಿಕಾರಿಗಳಿಗೂ ಮಾಹಿತಿ ನೀಡಿ, ಬೆಳೆಗಾರರಿಗೆ ಸ್ಪಂದಿಸುವಂತೆ ಸೂಚನೆ ನೀಡಿದ್ದೇವೆ. ಇದು ಬಹುತೇಕ ಬೆಳೆಗಾರರಿಗೆ ವರವಾಗಿದೆ. ಆದರೆ ಹೂವಿನ ಬೆಳೆಗಾರರಿಗೆ ಮಾರುಕಟ್ಟೆ ಒದಗಿಸಲಾಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ರೈತರಿಗೆ ಎಫ್‌ಪಿಒ ನೆರವು

• ಚಂದ್ರಶೇಖರ ಆರ್

ದಾವಣಗೆರೆ ಜಿಲ್ಲೆಯಲ್ಲಿ ಕೊರೊನಾ ಕಾರಣ ತೋಟಗಾರಿಕೆ ಬೆಳೆಗಳಿಂದ ನಷ್ಟ ಅನುಭವಿಸುತ್ತಿರುವ ರೈತರಿಗೆ ಹಲವು ಎಫ್‌ಪಿಒಗಳು ಬೀಜ, ಗೊಬ್ಬರ, ಕೃಷಿ ಉಪಕರಣ ಮಾರಾಟ ಮಾಡುವ ಮೂಲಕ ನೆರವಾಗುತ್ತಿವೆ.

ದಾವಣಗೆರೆ ತಾಲ್ಲೂಕಿನ ಹೆಬ್ಬಾಳದ ವಿಶ್ವಬಂಧು ತೋಟಗಾರಿಕಾ ಬೆಳೆಗಳ ರೈತ ಉತ್ಪಾದಕ ಕಂಪನಿ ಬೆಳೆಗಳಿಗೆ ಮಾರುಕಟ್ಟೆ ಒದಗಿಸುತ್ತಿದೆ. ಈ ಎಫ್‌ಪಿಒ ಪ್ರತಿದಿನ ಹಣ್ಣು, ತರಕಾರಿಗಳನ್ನು ರೈತರಿಂದ ಉತ್ತಮ ಬೆಲೆ ಖರೀದಿ ಮಾಡಿ ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ಕಲ್ಲಂಗಡಿ, ಮಾವು, ಟೊಮೆಟೊ, ಮೆಣಸಿನಕಾಯಿ ಸೇರಿ ಈ ಭಾಗದಲ್ಲಿ ಸಿಗುವ ತರಕಾರಿಗಳನ್ನು ಮಾರುಕಟ್ಟೆ ಬೆಲೆಗಿಂತ ₹ 1 ಹೆಚ್ಚಿಗೆ ನೀಡಿ ರೈತರಿಂದ ಖರೀದಿ ಮಾಡುತ್ತಿದೆ.

'ವಿಶ್ವಬಂಧು ರೈತ ಉತ್ಪಾದಕ ಕಂಪನಿಯಲ್ಲಿ 1000ಕ್ಕೂ ಹೆಚ್ಚು ನೋಂದಾಯಿತ ರೈತರಿದ್ದು, 500ಕ್ಕೂ ಹೆಚ್ಚು ಜನ ರೈತರಿಗೆ ಈಗಾಗಲೇ ನೆರವು ನೀಡಿದ್ದೇವೆ. ಈ ಬಾರಿ ಮಾವು, ಕಲ್ಲಂಗಡಿಯನ್ನು ರೈತರಿಂದ ಹೆಚ್ಚು ಖರೀದಿಸಿದ್ದೇವೆ. ಲಾಭದ ನಿರೀಕ್ಷೆ ಇಲ್ಲ. ಕಂಪನಿ ನೌಕರರಿಗೆ ವೇತನ ಸಿಕ್ಕರೆ ಸಾಕು. ರೈತರಿಗೆ ನೆರವು ನೀಡುವುದು ಪ್ರಮುಖ ಉದ್ದೇಶ' ಎನ್ನುತ್ತಾರೆ ಕಂಪನಿ ಸಿಇಒ ರುದ್ರೇಶ್.

ಮಾವು ಬೆಳೆಗಾರರ ಹುಲಿ ಮೇಲಿನ ಸವಾರಿ

• ಆರ್. ಜಿತೇಂದ್ರ

ರಾಮನಗರ: ಕೋವಿಡ್ ನಿರ್ಬಂಧಗಳ ಪರಿಣಾಮ ಮಾವು ತೋಪುಗಳಲ್ಲಿಯೇ ಕೊಳೆಯುವಂತಾಗಿದೆ. ಸಣ್ಣ ಪ್ರಮಾಣದ ಬೆಳೆಗಾರರು ಆರ್ಥಿಕ ಸಂಕಷ್ಟದ ಕುಲುಮೆಯಲ್ಲಿ ಬೇಯುತ್ತಿದ್ದಾರೆ. ಮಾವು ಮಾರಾಟವಾಗಿ ಹಣ ಕೈಸೇರದಿದ್ದರೆ ಬೆಳೆಗಾರರ ಬದುಕು ಮೂರಾಬಟ್ಟೆಯಾಗಲಿದೆ. ಮತ್ತೊಂದೆಡೆ ವ್ಯವಹಾರ ನಡೆಯದಿದ್ದರೆ ದಿವಾಳಿಯಾಗುವ ಆತಂಕ ವರ್ತಕರದ್ದು. ಕೊಯ್ಲಿಗೆ ಸಜ್ಜಾಗುತ್ತಿರುವ ಬೆಳೆಗಾರರ ಸ್ಥಿತಿಯು ಹುಲಿಯ ಮೇಲಿನ ಸವಾರಿಯಂತಿದೆ. ಕೆಳಗಿಳಿದರೂ ಅಪಾಯ; ಸವಾರಿ ಮಾಡುತ್ತಿದ್ದರೂ ಅಪಾಯ!

ರಾಜ್ಯದಲ್ಲಿ ಮೊದಲು ಮಾವು ಕೊಯ್ಲು ನಡೆಯುವುದು ರಾಮನಗರ ಜಿಲ್ಲೆಯಲ್ಲಿ. ಈ ವರ್ಷ ಕೊಯ್ಲು ಹೆಚ್ಚಾಗುವ ಹೊತ್ತಿಗೆ ಲಾಕ್‌ಡೌನ್ ಆರಂಭವಾಗಿದೆ. ಸದ್ಯ ಎಪಿಎಂಸಿಗಳಲ್ಲಿ ವಹಿವಾಟು ನಡೆದಿದ್ದು, ಹೆಚ್ಚಿನ ಪ್ರಮಾಣದ ಹಣ್ಣು ಮಹಾರಾಷ್ಟ್ರಕ್ಕೆ ಹೋಗಿದೆ. ಪಲ್ಪ್ ತಯಾರಿಕಾ ಕಾರ್ಖಾನೆಗಳು, ಕೆಲ ದಲ್ಲಾಳಿಗಳು ಮಾರುಕಟ್ಟೆ ಬಿಕ್ಕಟ್ಟನ್ನೇ ಬಂಡವಾಳ ಮಾಡಿಕೊಂಡು ಬೆಲೆ ಕುಸಿಯುವಂತೆ ಮಾಡಿದ್ದಾರೆ.

ಮಾವು ಅಭಿವೃದ್ಧಿ ನಿಗಮವು ಆನ್‌ಲೈನ್‌ನಲ್ಲಿ ಮಾರಾಟಕ್ಕೆ ವೇದಿಕೆ ಕಲ್ಪಿಸಿದ್ದು, ಅಂಚೆ ಮೂಲಕ ಗ್ರಾಹಕರಿಗೆ ತಲುಪಿಸುತ್ತಿದೆ. ಆದರೆ, ಇದರ ಪ್ರಮಾಣ ಅತ್ಯಲ್ಪ.

ರೈತ ಉತ್ಪನ್ನ ಕಂಪನಿಗಳು (ಎಫ್‌ಪಿಒ) ಮಾವು ಬೆಳೆಗಾರರ ನೆರವಿಗೆ ನಿಂತಿವೆ. ಅಮೆಜಾನ್, ಫ್ಲಿಪ್‌ಕಾರ್ಟ್‌ನಲ್ಲಿ ಮಾರಾಟಕ್ಕೆ ಮಾವು ಮಂಡಳಿ ಮಾತುಕತೆ ನಡೆಸಿತ್ತು. ಅದು ಕಾರ್ಯಗತವಾಗಿಲ್ಲ.

ಧಾರವಾಡ ಜಿಲ್ಲೆಯಲ್ಲಿ 'ಒಂದು ಜಿಲ್ಲೆ ಒಂದು ಬೆಳೆ' ಯೋಜನೆಯಡಿ ಆಯ್ಕೆಯಾಗಿರುವ ಬೆಳೆ ಮಾವು. ಆದರೆ, ಜಿಲ್ಲೆಯಲ್ಲಿ ಮಾವಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಮೌಲ್ಯವರ್ಧನೆ ಮಾಡುವ ಯೋಜನೆಯೂ ಅನುಷ್ಠಾನಗೊಂಡಿಲ್ಲ. ಜಿಲ್ಲೆಯಲ್ಲಿ ಮಾವಿನ ತಿರುಳು ತೆಗೆದು ಮೌಲ್ಯವರ್ಧನೆ ಮಾಡುವ ಎರಡು ಖಾಸಗಿ ಕಾರ್ಖಾನೆಗಳಿವೆ. ಇಲ್ಲಿ ಪ್ರತಿ ಕೆ.ಜಿ. ಮಾವಿನ ಹಣ್ಣಿಗೆ ₹ 25ರಿಂದ ₹ 30ರ ವರೆಗೆ ಬೆಲೆ ಇದೆ. ಧಾರವಾಡ ಬಳಿಯ ಚಿಕ್ಕಮಲ್ಲಿಗವಾಡದಲ್ಲಿ ತೆರೆದ ಮಾರುಕಟ್ಟೆಯಲ್ಲಿ ಮಾವು ಮಾರಾಟವಾಗುತ್ತದೆ. ತೊಟ್ಟು ಇರುವ ದೊಡ್ಡ ಗಾತ್ರದ ಕಾಯಿಗಳನ್ನು ಮಾತ್ರ ಖರೀದಿಸಲಾಗುತ್ತದೆ. ಕಾರ್ಖಾನೆಗಿಂತ ಪ್ರತಿ ಕೆ.ಜಿ.ಗೆ ₹ 10 ಹೆಚ್ಚು ಸಿಗುತ್ತದಷ್ಟೇ.

ಕೊಪ್ಪಳ ಜಿಲ್ಲೆಯ ಬೆಳೆಗಾರರ ಸ್ಥಿತಿಯೂ ಹೀಗೆಯೇ ಇದೆ. ಇಲ್ಲಿನ 'ಕೊಪ್ಪಳ ಕೇಸರ' ಮಾವು ಬ್ರ್ಯಾಂಡ್ ಆಗಿದ್ದು, ದೇಶ, ವಿದೇಶದಲ್ಲಿ ಪ್ರಸಿದ್ಧಿ ಪಡೆದಿದೆ. ಜಿಲ್ಲೆಯಲ್ಲಿ ಮೂರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶೇ 60ರಷ್ಟು ಬೆಳೆ ಬಂದಿದೆ. ತೋಟಗಾರಿಕೆ ಇಲಾಖೆಯಿಂದ ಬೆಳೆಗಾರರಿಗೆ ಪ್ರತಿ ಗುರುವಾರ ರೈತ ಸಂತೆಯಲ್ಲಿ ಮಾರಾಟಕ್ಕೆ ಅವಕಾಶ ನೀಡಲಾಗಿದೆ. ಲಾಕ್‌ಡೌನ್‌ನಿಂದಾಗಿ ಬೇರೆಡೆಗೆ ಪೂರೈಕೆ ಸಾಧ್ಯವಾಗುತ್ತಿಲ್ಲ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ವರ್ಷವೂ ಮಾವು ಬೆಳೆಗಾರರಿಗೆ ಲಾಕ್‌ಡೌನ್ ಬಿಸಿ ತಟ್ಟಿತ್ತು. ಆಗ ಚಿಂತಾಮಣಿಯ ಮಾವು ಬೆಳೆಗಾರರು ಕಂಪನಿಯೊಂದರ ಮೂಲಕ ವಿದೇಶಕ್ಕೂ ರಫ್ತು ಮಾಡಿಸಿದ್ದರು. ಈಗ ಮಾರಾಟದ್ದೇ ಸಮಸ್ಯೆ.



ಉದುರಿಸಿದ ಕಾಯಿಗಳನ್ನು ಕ್ರೇಟ್‌ಗೆ ತುಂಬುತ್ತಿರುವ ಕಾರ್ಮಿಕರು

ಆನ್‌ಲೈನ್ ವಹಿವಾಟಿಗೆ ಮೊರೆ

ರಾಜ್ಯದಲ್ಲೇ ಅತಿಹೆಚ್ಚು ಮಾವು ಬೆಳೆಯುವುದು ಕೋಲಾರದಲ್ಲಿ. ಜಿಲ್ಲೆಯಲ್ಲಿ ಮಾವು ಕೊಯ್ಲಿಗೆ ದಿನಗಣನೆ ಆರಂಭವಾಗಿದೆ. ಹಿಂದಿನ ವರ್ಷದಂತೆ ಈ ಬಾರಿಯೂ ರೈತರಿಗೆ ಮಾರುಕಟ್ಟೆ ಸಮಸ್ಯೆಯದ್ದೇ ಚಿಂತೆ.

ಜಿಲ್ಲೆಯ 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದ್ದು, ಸುಮಾರು 2.75 ಲಕ್ಷ ಟನ್ ಫಸಲು ನಿರೀಕ್ಷಿಸಲಾಗಿದೆ.

ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕೋವಿಡ್‌ನಿಂದಾಗಿ ಈ ಬಾರಿ ಆನ್‌ಲೈನ್ ಮೂಲಕ ಮಾವಿನ ವಹಿವಾಟು ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ರಾಜ್ಯ ಮಾವು ಅಭಿವೃದ್ಧಿ ನಿಗಮ ಮತ್ತು ಅಂಚೆ ಇಲಾಖೆ ಸಹಭಾಗಿತ್ವದಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಮಾವು ತಲುಪಿಸುವ ಪ್ರಯತ್ನ ನಡೆದಿದೆ. ಬೆಂಗಳೂರಿನ ಅಪಾರ್ಟ್‌ಮೆಂಟ್ ನಿವಾಸಿಗಳು ಮತ್ತು ಬೆಳೆಗಾರರ ನಡುವೆ ಸಂಪರ್ಕ ಕಲ್ಪಿಸಿ ಮಾವು ಮಾರಾಟಕ್ಕೆ ಉತ್ತೇಜನ ನೀಡಲು ಇಲಾಖೆ ಮುಂದಾಗಿದೆ.

ರೈತರಿಗೆ ಭಾರವಾದ ಪುಷ್ಪಕೃಷಿ

• ಸಂತೋಷ ಈ.ಚಿನಗುಡಿ

ಕಲಬುರ್ಗಿ: ಜಿಲ್ಲೆಯಲ್ಲಿ 1,194 ಹೆಕ್ಟೇರ್ ಪ್ರದೇಶದಲ್ಲಿ ಈ ಬಾರಿ ಪುಷ್ಪಕೃಷಿ ಮಾಡಲಾಗಿದ್ದು, ಫಸಲು ಸಹ ಹುಲುಸಾಗಿದೆ. ಆದರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗಿದೆ ಬೆಳೆಗಾರರ ಪರಿಸ್ಥಿತಿ. ಮಾರುಕಟ್ಟೆ ಇಲ್ಲದ ಕಾರಣ ಹಲವು ರೈತರು ಸಸಿಗಳನ್ನು ಬುಡಸಮೇತ ಕಿತ್ತೆಸೆಯುತ್ತಿದ್ದಾರೆ.

ಮಾರ್ಚ್‌ನಿಂದ ಮೇ ತಿಂಗಳಲ್ಲಿ ಹೆಚ್ಚಾಗಿ ಮದುವೆ, ಮುಂಜಿ, ಜಾತ್ರೆ–ಉತ್ಸವಗಳು, ಉರುಸ್‌ಗಳು ನಡೆಯುತ್ತಿದ್ದವು. ಕೊರೊನಾ ಹಾವಳಿಯ ಕಾರಣ ಎಲ್ಲವನ್ನೂ ನಿಷೇಧಿಸಲಾಗಿದೆ. ಹಾಗಾಗಿ, ಹೂವಿಗೆ ಬೇಡಿಕೆಯೇ ಇಲ್ಲ. ಗುಲಾಬಿ, ಚೆಂಡು ಹೂವು, ಸೇವಂತಿಯನ್ನು ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆದಿದ್ದಾರೆ.

ಹೂವನ್ನು ಪ್ರತಿದಿನ ಕೀಳಲೇಬೇಕು. ಇಲ್ಲದಿದ್ದರೆ ಮರುದಿನ ಮೊಗ್ಗು ಬಿಡುವುದಿಲ್ಲ. 'ಇಡೀ 11 ತಿಂಗಳಲ್ಲಿ ಎಷ್ಟು ಹೂವು ಮಾರಾಟವಾಗುತ್ತಿತ್ತೋ ಅಷ್ಟೇ ಪ್ರಮಾಣದ ಹೂವು ರಂಜಾನ್ ತಿಂಗಳೊಂದರಲ್ಲೇ ಬಿಕರಿಯಾಗುತ್ತಿತ್ತು. ಆದರೆ, ಈ ಬಾರಿ ಕೇಳುವವರೇ ಇಲ್ಲ. ಕಲಬುರ್ಗಿ ಮಾರುಕಟ್ಟೆಯಲ್ಲಿ ನಾನು ಪ್ರತಿ ದಿನ ₹ 30 ಸಾವಿರದ ಹೂವು ಮಾರಿಕೊಂಡು ಬರುತ್ತಿದ್ದೆ. ಆದರೆ, ಈಗ ₹ 500 ಕೂಡ ಆಗುತ್ತಿಲ್ಲ. ಸಗಟು ವ್ಯಾಪಾರಿಗಳು ಖರೀದಿಸಲು ಮುಂದೆ ಬರುತ್ತಿಲ್ಲ. ಬೆರಳೆಣಿಕೆಯಷ್ಟು ವ್ಯಾಪಾರಿಗಳು ಬಂದರೂ ಎಲ್ಲ ಹೂವನ್ನು ಕೆಜಿಗೆ ₹ 8ರಿಂದ ₹ 10ಕ್ಕೆ ಕೇಳುತ್ತಾರೆ. ಇದರಿಂದ ಮಾರುಕಟ್ಟೆಗೆ ಹೂ ಸಾಗಿಸಿದ ವಾಹನ ಖರ್ಚು ಕೂಡ ಬರುತ್ತಿಲ್ಲ' ಎನ್ನುತ್ತಾರೆ ಕಲಬುರ್ಗಿ ತಾಲ್ಲೂಕಿನ ಆಲಗೂಡ ರೈತ ಚಂದ್ರಕಾಂತ ಪೊಲೀಸ್ ಪಾಟೀಲ.

ತಿಪ್ಪೆ ಸೇರುತ್ತಿವೆ ತರಹೇವಾರಿ ಪುಷ್ಪ: ಚಿತ್ರದುರ್ಗ ಜಿಲ್ಲೆಯಲ್ಲಿ ಬೆಳೆದ ಹೂಗಳನ್ನು ಮಾರುಕಟ್ಟೆ ಇಲ್ಲದೇ ಅನೇಕ ರೈತರು ಬೀದಿ, ತಿಪ್ಪೆಗೆ ಸುರಿಯುತ್ತಿದ್ದಾರೆ. ಕಳೆದ ವರ್ಷದ ಲಾಕ್‌ಡೌನ್‌ಗಿಂತಲೂ ತೀವ್ರ ತರವಾದ ಸಮಸ್ಯೆಗೆ ಸಿಲುಕಿದ್ದಾರೆ.



ಕಲಬುರ್ಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಆಲಗೂಡು ಗ್ರಾಮದಲ್ಲಿ ಚಂದ್ರಕಾಂತ ಪೊಲೀಸ್ ಪಾಟೀಲ ಅವರು ತಮ್ಮ 10 ಎಕರೆಯಲ್ಲಿ ಬೆಳೆದ ಚೆಂಡುಹೂವನ್ನು ಬುಡಸಮೇತ ಕೀಳಿಸಿದರು

ತೋಟದಲ್ಲೇ ಕೊಳೆಯುತ್ತಿದೆ ಸೇವಂತಿಗೆ!

• ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲೆಯ ವಿವಿಧೆಡೆ ಕಟಾವಿಗೆ ಬಂದಿರುವ ಹೂವು ಕೀಳಲು ಕಾರ್ಮಿಕರು ಸಿಗದ ಕಾರಣ ಹೂವಿನ ಫಸಲು ತೋಟದಲ್ಲೇ ಕೊಳೆಯುತ್ತಿದೆ. ಮನೆ ಮಂದಿಯೇ ಸೇರಿ ಹೂವು ಕಿತ್ತು–ಕಟ್ಟಿ ಮಾರಿದರೂ ಬೆಲೆ ಇಲ್ಲದ ಪರಿಣಾಮ ಬೆಳೆಗಾರರು ಕಂಗಾಲಾಗಿದ್ದಾರೆ.

ಪಾಂಡವಪುರ, ಕೆ.ಆರ್.ಪೇಟೆ, ಮದ್ದೂರು ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೂವಿನ ಕೃಷಿ ಮಾಡಿದ್ದಾರೆ. ಅದರಲ್ಲೂ ಪಾಂಡವಪುರ ತಾಲ್ಲೂಕಿನಲ್ಲಿ ವಿವಿಧ ಬಣ್ಣಗಳ ಸೇವಂತಿಗೆ ಬೆಳೆಯುತ್ತಾರೆ. ಮೇನಾಗರ ಹಾಗೂ ಹಲವು ಹಳ್ಳಿಗಳ ರೈತರಿಗೆ ಹೂವಿನ ಬೆಳೆಯೇ ಪ್ರಮುಖ ಕೃಷಿಯಾಗಿದೆ. ಜೀವನಾಧರ ಸಹ. ಸದ್ಯ ಸೇವಂತಿಗೆ ಹಾಗೂ ಚೆಂಡು ಹೂವು ಕಟಾವಿಗೆ ಬಂದಿದೆ. 'ಮನೆಯಲ್ಲಿ ಇರುವ ಜನರೇ ಸೇರಿ ಹೂವು ಕಿತ್ತು, ಕಟ್ಟಿ ಮಾರಾಟ ಮಾಡಿದರೂ ಬೆಲೆ ಸಿಗುತ್ತಿಲ್ಲ. ಮಾರೊಂದಕ್ಕೆ ₹ 5– ₹ 6 ಬೆಲೆ ಇದೆ. ಖರ್ಚು ಮಾಡಿದ ಹಣವೂ ಬರುತ್ತಿಲ್ಲ. ಹೀಗಾಗಿ ಹೊಲದಲ್ಲೇ ಬಿಟ್ಟು ಕೊಳೆಸಲಾಗುತ್ತಿದೆ' ಎಂದು ಮೇನಾಗರ ಗ್ರಾಮದ ಪ್ರಕಾಶ್ ತಿಳಿಸಿದರು.

ಕೋವಿಡ್ ನಡುವೆ ರೈತರ ಯಶೋಗಾಥೆ

ಒಂದನೇ ಪುಟದಿಂದ

ಉಡುಪಿ, ಮಂಗಳೂರು ಸೇರಿ ಹಲವು ಜಿಲ್ಲೆಗಳ ದೇವಸ್ಥಾನಗಳಿಗೆ ಜಿಲ್ಲೆಯ ಸಾಂಬಾರು ಸೌತೆ ಸೇರಿ ತರಕಾರಿ ಬೆಳೆಗಳು ರವಾನೆಯಾಗುತ್ತಿದ್ದವು. ಈಗ ದೇವಾಲಯ ಮುಚ್ಚಿರುವ ಕಾರಣ ತರಕಾರಿಗೆ ಬೇಡಿಕೆ ಕಡಿಮೆಯಾಗಿದೆ ಎನ್ನುವುದು ಆಲೂರಿನ ರೈತ ಪರಮೇಶ್ ಅವರ ಬೇಸರ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಟೊಮೆಟೊ ಹೆಚ್ಚಿನ ಇಳುವರಿ ಬರುತ್ತಿದೆ. ಆದರೆ ಮಾರುಕಟ್ಟೆ ಸಿಗದೆ ಕೊಳೆಯುತ್ತಿದೆ. ಕೆಲವರು ದೂರದ ಹೊಸಪೇಟೆ, ವಿಜಯಪುರದ ಕಡೆಗೆ ಆಟೊ, ಲಾರಿ ಮೂಲಕ ಸಾಗಿಸುತ್ತಿದ್ದಾರೆ.

ಕ್ಯಾಪ್ಸಿಕಂ ಮಾರಿದ್ದು : ದಾವಣಗೆರೆ ತಾಲ್ಲೂಕಿನ ಮಿಟ್ಲಕಟ್ಟೆ ಸಮೀಪದ ಸತ್ಯನಾರಾಯಣ ಕ್ಯಾಂಪ್ ನಿವಾಸಿ ಆದರ್ಶಕುಮಾರ್ ಒಂದು ಎಕರೆ ಪ್ರದೇಶದಲ್ಲಿ ಪಾಲಿಹೌಸ್ ನಿರ್ಮಿಸಿ ದೊಣ್ಣೆ ಮೆಣಸಿನಕಾಯಿ (ಕ್ಯಾಪ್ಸಿಕಂ) ಬೆಳೆದು ಮಾರುಕಟ್ಟೆ ಇಲ್ಲದೇ ಸಂಕಷ್ಟ ಅನುಭವಿಸಿದ್ದರು. ಬಳಿಕ 'ಕ್ಯಾಪ್ಸಿಕಂ ಡೋರ್ ಡೆಲಿವರಿ ಸಿಗಲಿದೆ' ಎಂಬ ಮಾಹಿತಿಯನ್ನು ಮೊಬೈಲ್ ನಂಬರ್ ಸಮೇತ ತಮ್ಮ ಸ್ನೇಹಿತರ ನಂಬರ್‌ಗಳಿಗೆ ಫಾರ್ವರ್ಡ್ ಮಾಡಿ ಒಂದು ಕೆ.ಜಿಗೆ ₹ 50ರಂತೆ ಎರಡು ಕ್ವಿಂಟಲ್ ಮಾರಾಟ ಮಾಡಿ ನೆಮ್ಮದಿ ಕಂಡುಕೊಂಡರು.

ಸಂತೇಬೆನ್ನೂರು ಸಮೀಪದ ದೊಡ್ಡಬ್ಬಿಗೆರೆ ರೈತ ತಿಪ್ಪೇಸ್ವಾಮಿ ತಾವು ಬೆಳೆದ ಮಾವಿಗೆ ತಾವೇ ಮಾರುಕಟ್ಟೆ ಸೃಷ್ಟಿಸಿಕೊಂಡಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಅನಾನಸ್ ಬೆಳೆಯನ್ನು ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ ಅಡಿ ಆಯ್ಕೆ ಮಾಡಲಾಗಿದೆ. ಆದರೆ ಸ್ಥಳೀಯವಾಗಿ ಮಾರುಕಟ್ಟೆ ದೊರಕಿಸಲು ಸಾಧ್ಯವಾಗಿಲ್ಲ. ಈ ಬಾರಿ ಜಿಲ್ಲೆಯಲ್ಲಿ 2 ಸಾವಿರ ಹೆಕ್ಟೇರ್ ಅನಾನಸ್ ಬೆಳೆಯಲಾಗಿದೆ. ದೆಹಲಿ, ಪಂಜಾಬ್, ಹರಿಯಾಣ, ಮಹಾರಾಷ್ಟ್ರಗಳಿಗೆ ಸಾಗಣೆ ಮಾಡಲು ತೊಂದರೆಯಾಗಿಲ್ಲ. ಸ್ಥಳೀಯ ಜ್ಯೂಸ್ ಅಂಗಡಿಗಳು ಬಾಗಿಲು ಮುಚ್ಚಿದ ಕಾರಣ ಕೆಲವು ಬೆಳೆಗಾರರು ತೊಂದರೆ ಅನುಭವಿಸಿದ್ದಾರಷ್ಟೆ.

ರೈತರ 'ಸಂಜೀವಿನಿ' ಅಳದಂಗಡಿ ಕಂಪನಿ

• ಸಂಧ್ಯಾ ಹೆಗಡೆ

ಮಂಗಳೂರು: ಈ ಊರಿನ ಸುತ್ತಮುತ್ತಲ ರೈತರಿಗೆ ಉತ್ಪನ್ನಗಳ ಮಾರುಕಟ್ಟೆ ಹೇಗೆ ಎಂಬ ಚಿಂತೆಯಿಲ್ಲ. ಲಾಕ್‌ಡೌನ್, ಜನತಾ ಕರ್ಫ್ಯೂ ಸಂದರ್ಭದಲ್ಲಿ ಪೇಟೆ ಬಂದ್ ಆದರೂ, ಇವರು ಸರಾಗವಾಗಿ ಹಿತ್ತಲ ತರಕಾರಿ, ಗಾಣದ ಎಣ್ಣೆ, ಕೋಳಿಮಾಂಸವನ್ನು ಗ್ರಾಹಕರಿಗೆ ತಲುಪಿಸುತ್ತಾರೆ. ಈ ರೈತರ ನೆರವಿಗೆ ಬಂದಿದ್ದು ಅಳದಂಗಡಿ ರೈತ ಉತ್ಪಾದಕರ ಕಂಪನಿ. ರೈತರೇ ಸೇರಿ ಕಟ್ಟಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಈ ಸಂಸ್ಥೆ, ಲಾಕ್‌ಡೌನ್ ಸಂದರ್ಭದಲ್ಲಿ ಇನ್ನಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. 15 ಗ್ರಾಮಗಳ ವ್ಯಾಪ್ತಿಯನ್ನು ಒಳಗೊಂಡ ಸಂಸ್ಥೆ 1,000 ಸದಸ್ಯರನ್ನು ಹೊಂದಿದೆ. ರೈತರು ಹೊಲದಲ್ಲಿ ಬೆಳೆದ ಯಾವುದೇ ಬೆಳೆ ತಂದರೂ, ಅದು ಕನಿಷ್ಠ ಪ್ರಮಾಣದಲ್ಲಿದ್ದರೂ ಕಂಪನಿ ಅವರ ನೆರವಿಗೆ ಬರುತ್ತದೆ. ಇನ್ನೊಂದು ವಿಶೇಷವೆಂದರೆ ಇಲ್ಲಿ ಉತ್ಪನ್ನಗಳಿಗೆ ದರ ನಿರ್ಧರಿಸುವವರು ಕೃಷಿಕರೇ. 'ಮೊನ್ನೆಯಷ್ಟೇ ಮಂಗಳೂರಿನ ಗ್ರಾಹಕರೊಬ್ಬರು ತುರ್ತಾಗಿ 50 ಕೆ.ಜಿ. ತೆಂಗಿನ ಎಣ್ಣೆ ಬೇಕೆಂದು ಕರೆ ಮಾಡಿದರು. ರೈತರೊಬ್ಬರ ಬಳಿ ಇದ್ದ ಕೊಬ್ಬರಿ ತಂದು, ನಾವೇ ನಿಂತು, ಮಿಲ್‌ನಲ್ಲಿ ಎಣ್ಣೆ ಮಾಡಿಸಿ, ಶುದ್ಧ ತೆಂಗಿನೆಣ್ಣೆಯನ್ನು ಗ್ರಾಹಕರಿಗೆ ತಲುಪಿಸಿದೆವು. ಇನ್ನೊಬ್ಬರು 50 ಕೆ.ಜಿ ಬಾಳೆಹಣ್ಣು ಅಗತ್ಯವಿತ್ತು ಎಂದು ಬೇಡಿಕೆಯಿಟ್ಟರು. ನಮ್ಮ ಸದಸ್ಯರ ತೋಟದಲ್ಲಿ ಬೆಳೆದ ಬಾಳೆಕಾಯಿಯನ್ನು ಅವರಿಗೆ ಪೂರೈಕೆ ಮಾಡಿದೆವು. ಹೀಗೆ, ಬೇಡಿಕೆ ಮತ್ತು ಪೂರೈಕೆ ನಡುವಿನ ಸಾಧನವಾಗಿ ನಾವು ಕೆಲಸ ಮಾಡುತ್ತೇವೆ ಅಷ್ಟೆ' ಎಂದು ದೃಷ್ಟಾಂತ ವಿವರಿಸಿದರು ಕಂಪನಿಯ ಅಧ್ಯಕ್ಷ ಹರಿದಾಸ್ ಎಸ್.ಎಂ.

10 ಸಾವಿರ ಕೋಳಿ ಮರಿಗಳನ್ನು ಸ್ವ ಸಹಾಯ ಸಂಘದ ಸದಸ್ಯರಿಗೆ ಸಾಕಲು ನೀಡಲಾಗಿದೆ. ಎಲ್ಲೆಡೆ ನಾಟಿ ಕೋಳಿ ಮಾಂಸಕ್ಕೆ ₹ 450 ದರವಿದ್ದರೆ, ಅಳದಂಗಡಿ ರೈತ ಉತ್ಪಾದಕ ಸಂಸ್ಥೆ ₹ 200ಕ್ಕೆ ಮಾರಾಟ ಮಾಡುತ್ತದೆ. ಜೇನು ಸಾಕಣೆಯನ್ನು ಕಾರ್ಮಿಕರಿಗೆ ಕಲಿಸುವ ಮೂಲಕ 10 ಕ್ವಿಂಟಲ್ ಜೇನುತುಪ್ಪಕ್ಕೆ ಮಾರುಕಟ್ಟೆ ಕಲ್ಪಿಸಿದೆ.

ದಿನ ಭವಿಷ್ಯ

ಭಾನುವಾರ 16 ಮೇ 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಚತುರ್ಥಿ ಗಂ. 0-25 (ಬೆ. 6-11) ಭಾನುವಾರ ನಿತ್ಯ ನಕ್ಷತ ಆದ್ರೆ ಗಂ. 4-45 (ಬೆ. 7-55) ಶೂಲ ನಾಮ ನಾಮ ಯೋಗ ಗಂ 43-56 ಭದ್ರೆ ಕರಣ ಗಂ. 0-25 ವಿಷ ಗಂ. 36-34 ಅಮೃತಾಭಾವಃ : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-58 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 8

ಮೇಷ: ವೃತ್ತಿ ಬದುಕಿನಲ್ಲಿ ಬದಲಾವಣೆ ಬಯಸುವವರಿಗೆ ಅತ್ಯಂತ ಪ್ರಶಸ್ತವಾದ ಸಮಯ. ಅನಿರೀಕ್ಷಿತ ಅವಕಾಶಗಳು ಒದಗಿಬರುವ ಸಾಧ್ಯತೆ ಕಂಡುಬರುತ್ತಿದೆ.

ವೃಷಭ: ನಿಮ್ಮ ನೆಚ್ಚಿನ ಕ್ಷೇತ್ರಗಳಲ್ಲಿ ಅಭೂತಪೂರ್ವ ಸ್ಪರ್ಧೆಗಳನ್ನು ಎದುರಿಸುವಿರಿ. ಉನ್ನತಿ ನಿಮ್ಮ ಪಾಲಿಗೆ ಒದಗಿಬರಲಿದೆ. ಉತ್ತಮ ಕಾಲ ಸನ್ನಿಹಿತವಾಗಿದೆ.

ಮಿಥುನ: ನಿಮ್ಮ ಕಾರ್ಯಾನುಭವ ಮತ್ತು ಕ್ಷಮತೆಯಿಂದಾಗಿ ಉತ್ತಮ ಅವಕಾಶಗಳು ಒದಗಿಬರುವುದು. ಸಾಧಕ ಬಾಧಕಗಳನ್ನು ತೂಗಿ ನೋಡುವುದು ಉತ್ತಮ. ಮಗನಿಂದ ಶುಭ ವಾರ್ತೆ ಕೇಳುವಿರಿ.

ಕರ್ಕಾಟಕ: ನಿಮ್ಮ ಒಳ್ಳೆಯ ಕನಸುಗಳಿಗೆ ರೆಕ್ಕೆ ಪುಕ್ಕಗಳು ಮೂಡುವ ಸಾಧ್ಯತೆ ಕಂಡು ಬರುತ್ತಿದೆ. ಮನೆ ನಿರ್ಮಾಣ, ಆಸ್ತಿ ಖರೀದಿ ಮುಂದಾದವುಗಳು ಕೂಡಿಬರುವ ಸಾಧ್ಯತೆ. ಗಣಪತಿಯ ಆರಾಧನೆ ಉತ್ತಮ.

ಸಿಂಹ: ನಿಮ್ಮ ನಡೆ ನುಡಿಗಳಿಂದ ಉತ್ತಮ ಗೌರವ ಸಂಪಾದಿಸುವಿರಿ. ಬೇರೆಯವರ ಸಲಹೆಗಳನ್ನು ಕಡೆಗಣಿಸದಿರುವುದು ಒಳ್ಳೆಯದು. ಉತ್ತಮ ಯೋಜನೆಗಳನ್ನು ಕೈಗೊಳ್ಳಲು ಸಕಾಲ.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ಸಮಾಧಾನದಿಂದ ಕೆಲಸಗಳಲ್ಲಿ ಯಶಸ್ಸು ಕಾಣುವಿರಿ. ಸ್ಥಿರ ಸಂಪನ್ಮೂಲಗಳನ್ನು ಕಂಡುಕೊಳ್ಳುವಿರಿ. ಗುರುವಿನ ಆರಾಧನೆ ಶ್ರೇಯಸ್ಕರ

ತುಲಾ: ಹಿಂದಿನ ಉದ್ಯೋಗದಾತರಿಂದ ಅನಿರೀಕ್ಷಿತ ಕರೆಯ ಸಂಭವ. ಉದ್ಯೋಗ ಕ್ಷೇತ್ರದಲ್ಲಿ ಉತ್ತಮ ಸಂಬಂಧವನ್ನು ಹೊಂದುವಿರಿ. ದಿನದ ಅಂತ್ಯದಲ್ಲಿ ಸಹೋದ್ಯೋಗಿಗಳೊಂದಿಗೆ ಔತಣ ಕೂಟದ ಸಂಭವ.

ವೃಶ್ಚಿಕ: ಒತ್ತಡದ ಜೀವನದಿಂದ ಹೊರ ಬಂದು ಉತ್ಸಾಹದಿಂದ ಇರುವಿರಿ. ಸ್ನೇಹಿತರ ಅನಿರೀಕ್ಷಿತ ಆಗಮನದಿಂದ ಮನಸ್ಸಿಗೆ ನೆಮ್ಮದಿ. ಮನೆಯಲ್ಲಿ ಹಿತಕರ ವಾತಾವರಣ ನೆಲೆಸುವುದು.

ಧನು: ಅತ್ಯಪೂರ್ವ ಕ್ಷಣವೊಂದು ನಿಮಗೆ ಒದಗಿ ಬರಲಿದೆ. ಕುಟುಂಬದ ಸದಸ್ಯರೊಂದಿಗೆ ಅಪರೂಪದ ಹಿಂದಿನ ಕ್ಷಣಗಳನ್ನು ನೆನಪಿಸಿಕೊಳ್ಳುವಿರಿ. ಮಕ್ಕಳ ಆರೋಗ್ಯದ ಬಗ್ಗೆ ಎಚ್ಚರವಿರಲಿ. ಕ್ಷೇತ್ರ ದರ್ಶನದ ಭಾಗ್ಯ.

ಮಕರ: ವಿಪರೀತ ಕೆಲಸದ ನಡುವೆಯೂ ಮಾನಸಿಕ ಸ್ಥಿಮಿತ ನಿಮ್ಮದಾಗಲಿದೆ. ಸಹವರ್ತಿಗಳಲ್ಲಿ ಉತ್ಸಾಹ, ಹುರುಪು ತುಂಬುವಿರಿ. ದಿನದಂತ್ಯದಲ್ಲಿ ವಿಪರೀತ ದಣಿವು ಅರಿವಿಗೆ ಬರಲಿದೆ.

ಕುಂಭ: ಸಂಗಾತಿಯ ಸಮೀಪವೇ ಇದ್ದು ಮನದ ಆಸೆಯನ್ನು ಪೂರೈಸಿ. ನಿಮ್ಮ ಇಷ್ಟಕ್ಕೆ ಉತ್ತಮ ಸಹಕಾರ ದೊರೆಯಲಿದೆ. ನೆಮ್ಮದಿಯ ದಿನವಾಗಲಿದೆ. ಇಷ್ಟಾರ್ಥ ಸಿದ್ಧಿಗಾಗಿ ಪಕ್ಷಿಗಳಿಗೆ ಕಾಳುಗಳನ್ನು ನೀಡಿ.

ಮೀನ: ಕಾರ್ಯಕ್ಷೇತ್ರದಲ್ಲಿ ಹಿರಿಯ ಸಹೋದ್ಯೋಗಿಗಳು ಮತ್ತು ಸ್ನೇಹಿತರಿಂದ ಉತ್ತಮ ಸಹಕಾರ ದೊರೆಯಲಿದೆ. ಹಿರಿಯರಿಂದ ಬಂದ ಸಲಹೆಗಳನ್ನು ನಿರಾಕರಿಸದಿರಿ. ಸಂಗಾತಿಯೊಂದಿಗೆ ಮಧುರ ಬಾಂಧವ್ಯ ನಿಮ್ಮದಾಗಲಿದೆ.

ನಿಮ್ಮ ಜನ್ಮದಿನ 16-ಮೇ ಈ ದಿನವು ಅತ್ಯಂತ ಶುಭಕರವಾಗಿದ್ದು, ಉತ್ತಮ ಸಾಂಸಾರಿಕ ಜೀವನ ಒದಗಿ ಬರಲಿದೆ. ಸಂಗಾತಿಯ ಬಗೆಗಿನ ನಿರ್ಲಕ್ಷದಿಂದ ಸ್ವಲ್ಪಮಟ್ಟಿನ ಕಿರಿಕಿರಿ. ಪ್ರೀತಿ ವಿಶ್ವಾಸದಿಂದ ಎಲ್ಲರನ್ನೂ ಗೆಲ್ಲುವ ಅವಕಾಶ ತಪ್ಪಿಸಿಕೊಳ್ಳದಿರಿ. ಧನ ದಾಹದಿಂದ ಮನುಷ್ಯತ್ವವನ್ನು ಮರೆಯದಿರಿ. ರೈತಾಪಿ ವರ್ಗದವರಿಗೆ ಉತ್ತಮ ಬೆಳೆಯಿಂದಾಗಿ ಆದಾಯ ವೃದ್ಧಿ.

ಪದಬಂಧ 4598


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಾಪದ ಸಮಯದಲ್ಲೇ ಅತೀ ದುಃಖ (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
4.ಇದು ಅಂತರಂಗ ಸ್ಪರ್ಶಿಯಾದುದು (3)
5.ಅವನ ಕೆಟ್ಟಸ್ವಭಾವ! (4)
7.ಬರದಿಂದ ಕಂಗೆಟ್ಟವನಿಗೆ ನೀಡಿದ ಪಾನಕ (4)
9.ಈಗೆ ಕಣ್ಮರೆಯಾಗುವುದು (4)
10.ಗರತಿ ನೋಡುತ್ತಿರುವ ವರ್ಗ (4)
12.ಬಲು ವಾಚಾಳಿ ಈತ! (3)
14.ವ್ಯಂಗ್ಯದಿಂದ ಕೂಡಿದ ನಗೆ (4)
15. ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ

1.ಅತ್ತೆ ಹೇಳಿದ ವಿಳಾಸ! (2)
2.ಪಣ ಕಟ್ಟಿ ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
6. ವರನ ತಗಾದೆಯೇ ಇದು? (3)
8.ಬಹಳವೇ ಆತ್ಮೀಯರಾದ ನೆಂಟರ ಸಮೂಹ (3)
10.ಒಂಬತ್ತು ತಿಂಗಳಿದು (4)
11.ಈ ತರ ತೋರಿದ ಬೇಧಭಾವ! (4)
13.ದೇವತೆಗಳ ಒಡೆಯ (2)



4597ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1 ಸುರಂಗ ಮಾರ್ಗ
3 ಕುಲಾವಿ 5 ವ್ಯವಕಲನ 7 ಗರಳ
8 ಒಣಹರಟೆ
10 ಬಯಕೆ
11 ಹೊಸದಂಪತಿ
14 ಪನ್ನೀರು 15 ಸುಲಿಗೆಗಾರ

ಮೇಲಿಂದ ಕೆಳಕ್ಕೆ:
1 ಸುಶ್ರಾವ್ಯ 2 ಗಣಕ 4 ವಿರಳ
6 ಲಕ್ಷಣ 7 ಗಲಾಟೆ 8 ಒನಕೆ
9 ರಕ್ಕಸ 10 ಬಳಪ
12 ದಂಡಿಗೆ
13 ತಿಮಿರ

ಸುಡೊಕು 4984

	9	8			5		6	
2			4			8		5
	4	5			9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4983 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಮೆರಿಕ: ಸಲಹೆಗಾರರಾಗಿ ನೀರಾ ನೇಮಕ


ನೀರಾ ಟಂಡನ್

ವಾಷಿಂಗ್ಟನ್ (ಪಿಟಿಐ): ಭಾರತೀಯ ಸಂಜಾತೆ ನೀರಾ ಟಂಡನ್ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಹಿರಿಯ ಸಲಹೆಗಾರರಾಗಿ ನೇಮಕವಾಗಿದ್ದು, ಸೋಮವಾರ ಶ್ವೇತಭವನ ಪ್ರವೇಶಿಸಲಿದ್ದಾರೆ.

ನೀರಾ ಟಂಡನ್ ಅವರು ರಿಪಬ್ಲಿಕನ್ ಸೆನೆಟರ್‌ಗಳ ತೀವ್ರ ವಿರೋಧದಿಂದಾಗಿ ಎರಡು ತಿಂಗಳ ಹಿಂದಷ್ಟೇ ಶ್ವೇತ ಭವನದ ಬಜೆಟ್ ನಿರ್ವಹಣಾ ಕಚೇರಿಯ ನಿರ್ದೇಶಕಿ ಸ್ಥಾನದ ನಾಮನಿರ್ದೇಶನವನ್ನು ಹಿಂಪಡೆದಿದ್ದರು.

ಭಾರತೀಯ ಅಮೆರಿಕನ್ ನೀತಿ ತಜ್ಞೆ ಆಗಿರುವ ಟಂಡನ್ ಅವರು ಪ್ರಸ್ತುತ ಪ್ರಗತಿಪರ ಚಿಂತಕರ ಚಾವಡಿಯಾದ ಸೆಂಟರ್ ಫಾರ್ ಅಮೆರಿಕನ್ ಪ್ರೋಗ್ರೆಸ್ (ಸಿಎಪಿ) ಅಧ್ಯಕ್ಷೆ ಮತ್ತು ಸಿಇಒ ಕೂಡ ಆಗಿದ್ದಾರೆ.

ಮನೆ, ಅಂಗಡಿಗಳಲ್ಲಿ ಕಪ್ಪು ಬಾವುಟ ಹಾರಿಸಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧಾರ

26ರಂದು ರೈತರಿಂದ ಕರಾಳ ದಿನ

ನವದೆಹಲಿ (ಪಿಟಿಐ): ಇದೇ 26ರಂದು ಕರಾಳ ದಿನ ಆಚರಿಸಲು ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ 40 ರೈತ ಸಂಘಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ ತೀರ್ಮಾನಿಸಿದೆ. ದೆಹಲಿಯ ಗಡಿಗಳಲ್ಲಿ ರೈತರು ಪ್ರತಿಭಟನೆ ಆರಂಭಿಸಿ ಅಂದಿಗೆ ಆರು ತಿಂಗಳು ಪೂರ್ಣಗೊಳ್ಳಲಿದೆ.

ಜನರು ತಮ್ಮ ಮನೆ, ವಾಹನ ಮತ್ತು ಅಂಗಡಿಗಳಲ್ಲಿ ಕಪ್ಪು ಬಾವುಟ ಹಾರಿಸಬೇಕು ಎಂದು ರೈತ ಮುಖಂಡ ಬಲಬೀರ್ ಸಿಂಗ್ ರಾಜೇವಾಲ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಮನವಿ ಮಾಡಿದ್ದಾರೆ. ನರೇಂದ್ರ ಮೋದಿ ಅವರು ಪ್ರಧಾನಿ ಹುದ್ದೆಗೇರಿ ಇದೇ 26ಕ್ಕೆ ಏಳು ವರ್ಷ ತುಂಬುತ್ತದೆ ಎಂಬುದನ್ನು ರಾಜೇವಾಲ್ ಉಲ್ಲೇಖಿಸಿದ್ದಾರೆ. ಕರಾಳ ದಿನದಂದು ಮೋದಿ ಅವರ ಪ್ರತಿಕೃತಿ ದಹಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು ಎಂಬ ಬೇಡಿಕೆಯು ಸರ್ಕಾರದ ಕಿವಿಗೆ ಬಿದ್ದಿಲ್ಲ. ರಸಗೊಬ್ಬರ, ಡೀಸೆಲ್, ಪೆಟ್ರೋಲ್ ದರ ಏರಿಕೆಯಿಂದಾಗಿ ಕೃಷಿ ಮಾಡುವುದೇ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದ್ದಾರೆ.

ಸಾಮಾಜಿಕ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ವರ್ತಕರು ಮತ್ತು ಸಾರಿಗೆ ಕ್ಷೇತ್ರದ ಸಂಘಟನೆಗಳು ಕರಾಳ ದಿನವನ್ನು ಬೆಂಬಲಿಸಬೇಕು ಎಂದು ಅವರು ಕೋರಿದ್ದಾರೆ.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸಲು ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ರೈತರು 'ದೆಹಲಿ ಚಲೋ' ನಡೆಸಿದ್ದರು. ದಾರಿಯುದ್ದಕ್ಕೂ ಪೊಲೀಸರು ರೈತರನ್ನು ತಡೆಯಲು ಯತ್ನಿಸಿದ್ದರು. ಆದರೆ ಅದೆಲ್ಲವನ್ನೂ ದಾಟಿಕೊಂಡು ಕಳೆದ ವರ್ಷ ನವೆಂಬರ್ 26ರಂದು ರೈತರು ದೆಹಲಿ ಗಡಿಗಳಿಗೆ ತಲುಪಿದ್ದರು. ನಂತರದ ದಿನಗಳಲ್ಲಿ ದೆಹಲಿಯ ಟಿಕ್ರಿ, ಸಿಂಘು ಮತ್ತು ಗಾಜಿಪುರ ಗಡಿಗಳಿಗೆ ಸಾವಿರಾರು ರೈತರು ಬಂದು ಸೇರಿದ್ದರು.

ಮಿಷನ್ ಉತ್ತರ ಪ್ರದೇಶ, ಉತ್ತರಾಖಂಡ

ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರದ ಮೇಲೆ ಒತ್ತಡ ಹೇರುವುದಕ್ಕಾಗಿ 'ಮಿಷನ್ ಉತ್ತರ ಪ್ರದೇಶ ಮತ್ತು ಉತ್ತರಾಖಂಡ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

ಈ ಎರಡು ರಾಜ್ಯಗಳು ಅಲ್ಲದೆ ದೇಶದ ಎಲ್ಲೆಡೆಯೂ ರೈತರ ರ‍್ಯಾಲಿಗಳನ್ನು ನಡೆಸಲಾಗುವುದು. ಪ್ರತಿಭಟನೆಯಲ್ಲಿ ಭಾಗವಹಿಸಿರುವ ಎಲ್ಲ ಸಂಘಟನೆಗಳು ರ‍್ಯಾಲಿ ನಡೆಸಲಿವೆ ಎಂದು ಮೋರ್ಚಾ ಹೇಳಿದೆ.

ಮಹಿಳಾ ಸುರಕ್ಷಾ ಸಮಿತಿ

ಮಹಿಳಾ ಸುರಕ್ಷಾ ಸಮಿತಿಗಳನ್ನು ರಚಿಸಲಾಗುವುದು. ಅದರ ಸದಸ್ಯರ ಹೆಸರನ್ನು ಎರಡು ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಟಿಕ್ರಿ ಗಡಿಯಲ್ಲಿ ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ ಎಂಬ ಆರೋಪ ಕೆಲ ದಿನಗಳ ಹಿಂದೆ ಕೇಳಿ ಬಂದಿತ್ತು. ಈ ಮಹಿಳೆಯು ಕೋವಿಡ್‌ನಿಂದಾಗಿ ಹರಿಯಾಣದ ಆಸ್ಪತ್ರೆಯಲ್ಲಿ ಮೃತಪಟ್ಟರು.

ಪ್ರತಿಭಟನೆ ನಡೆಯುತ್ತಿರುವ ಎಲ್ಲ ಗಡಿಗಳಲ್ಲಿಯೂ ಮಹಿಳಾ ಸುರಕ್ಷಾ ಸಮಿತಿ ರಚನೆಯಾಗಲಿದೆ ಎಂದು ಮೋರ್ಚಾ ಹೇಳಿದೆ.


ಗಾಜಾ ಗುರಿಯಾಗಿಸಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹಾನಿಯಾಗಿರುವ ಕಟ್ಟಡಗಳು —ರಾಯಿಟರ್ಸ್ ಚಿತ್ರ

ಗಾಜಾದ ಮೇಲೆ ಇಸ್ರೇಲ್ ದಾಳಿ; ಏಳು ಮಂದಿ ಸಾವು

ಗಾಜಾ (ಎಪಿ): ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ನಡುವೆ ಯುದ್ಧದ ಕಾರ್ಮೋಡ ಮುಂದುವರಿದಿದ್ದು, ಗಾಜಾ ಪಟ್ಟಣವನ್ನು ಗುರಿಯಾಗಿಸಿ ಇಸ್ರೇಲ್ ಶನಿವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ಏಳು ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ.

ಹಮಾಸ್ ಸಂಘಟನೆಯೊಂದಿಗೆ ಈ ವಾರದ ಆರಂಭದಲ್ಲಿ ಭುಗಿಲೆದ್ದ ಸಂಘರ್ಷದಲ್ಲಿ ಭಾರಿ ಸಾವು ನೋವಿಗೆ ಕಾರಣವಾಗಿದೆ. ಈಗ ಪರಿಸ್ಥಿತಿ ಇನ್ನೂ ಬಿಗಡಾಯಿಸಿದೆ.

ಗಾಜಾ ಪಟ್ಟಿ ಮೇಲೆ ಇಸ್ರೇಲ್ ಸೇನೆಯು ಸತತ ದಾಳಿ ನಡೆಸುತ್ತಿದೆ. ಇನ್ನೊಂದೆಡೆ, ಇಸ್ರೇಲ್‌ನಲ್ಲಿ ಅರಬರು ಮತ್ತು ಯಹೂದಿಗಳ ನಡುವೆ ಸಂಘರ್ಷ ಏರ್ಪಟ್ಟಿದೆ.

ಸೋಮವಾರದಿಂದ ಈವರೆಗೆ ಆರಂಭವಾದ ಇಸ್ರೇಲ್ ದಾಳಿಗಳಿಂದ 31 ಮಕ್ಕಳು, 20 ಮಹಿಳೆಯರ ಸಹಿತ 126 ಮಂದಿ ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ. ಹಮಾಸ್ ನಡೆಸಿದ ದಾಳಿಗಳಲ್ಲಿ ಇಸ್ರೇಲ್‌ನಲ್ಲಿ 6 ವರ್ಷದ ಬಾಲಕ ಸಹಿತ 7 ಮಂದಿ ಮೃತಪಟ್ಟಿದ್ದಾರೆ.

ಪ್ರಧಾನಿ ಟೀಕಿಸಿ ಪೋಸ್ಟರ್: 15 ಮಂದಿ ಬಂಧನ

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆ ಅಭಿಯಾನಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಅವರನ್ನು ಟೀಕಿಸಿ ಪೋಸ್ಟ-ರ್‌ಗಳನ್ನು ಅಂಟಿಸಿದ್ದ ಆರೋಪದಡಿ ದೆಹಲಿ ಪೊಲೀಸರು 15 ಮಂದಿಯನ್ನು ಬಂಧಿಸಿದ್ದಾರೆ. ಜತೆಗೆ 17 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ' ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

'ಮೋದಿಜೀ ನಮ್ಮ ಮಕ್ಕಳ ಲಸಿಕೆಯನ್ನು ವಿದೇಶಗಳಿಗೆ ಏಕೆ ಕಳುಹಿಸಿದ್ದೀರಾ?' ಎಂದು ಬರೆದಿರುವ ಪೋಸ್ಟರ್‌ಗಳನ್ನು ದೆಹಲಿಯ ಹಲವೆಡೆ ಅಂಟಿಸಲಾಗಿತ್ತು. ಈ ಬಗ್ಗೆ ಹಿರಿಯ ಅಧಿಕಾರಿಗಳು ನಮ್ಮೊಂದಿಗೆ ಗುರುವಾರ ಮಾಹಿತಿ ಹಂಚಿಕೊಂಡರು. ಈ ಸಂಬಂಧ ಹೆಚ್ಚಿನ ದೂರುಗಳು ಬಂದರೆ, ಇನ್ನಷ್ಟು ಎಫ್‌ಐಆರ್‌ಗಳು ದಾಖಲಾಗುವ ಸಾಧ್ಯತೆಗಳಿವೆ. ಈಗಾಗಲೇ ತನಿಖೆ ಆರಂಭಿಸಿದ್ದೇವೆ' ಎಂದು ಅವರು ಹೇಳಿದರು.

'ನಗರದ ಹಲವು ಭಾಗಗಳಿಂದ 15 ಮಂದಿಯನ್ನು ಬಂಧಿಸಲಾಗಿದ್ದು, 17 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈಶಾನ್ಯ ದೆಹಲಿಯಲ್ಲಿ ಬಂಧಿಸಲ್ಪಟ್ಟ ಒಬ್ಬ ಆರೋಪಿಯು ತನಗೆ ಈ ಕೆಲಸ ಮಾಡಲು ₹500 ನೀಡಿದ್ದರು ಎಂದು ವಿಚಾರಣೆ ವೇಳೆ ಹೇಳಿದ್ದಾನೆ. ಈ ಪ್ರಕರಣ ಸಂಬಂಧ ಇನ್ನೊಬ್ಬ ವ್ಯಕ್ತಿಗಾಗಿ ಹುಡುಕಾಟ ನಡೆಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ಕೋವಿಡ್‌ನಿಂದ ಮೃತರ ಸಂಖ್ಯೆ ಕೇಂದ್ರ ಮರೆಮಾಚುತ್ತಿದೆ– ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ದೃಢಪಟ್ಟವರು ಹಾಗೂ ಈ ಸೋಂಕಿನಿಂದ ಮೃತಪಟ್ಟವರ ವಾಸ್ತವ ಸಂಖ್ಯೆಯನ್ನು ಕೇಂದ್ರ ಸರ್ಕಾರ ನೀಡುತ್ತಿಲ್ಲ. ಕೆಲವು ರಾಜ್ಯಗಳೊಂದಿಗೆ ಸೇರಿ ಕೇಂದ್ರ ಸರ್ಕಾರ ಈ ಮಾಹಿತಿಯನ್ನು ಮರೆಮಾಚುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಶನಿವಾರ ಆರೋಪಿಸಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಸುದ್ದಿಗೋಷ್ಠಿ ನಡೆಸಿದ ಅವರು , 'ಕಳೆದ ಮಾರ್ಚ್ 1ರಿಂದ ಮೇ 10ವರೆಗಿನ ಅವಧಿಯಲ್ಲಿ ಗುಜರಾತ್‌ನಲ್ಲಿ 1.23 ಲಕ್ಷ ಜನರು ಕೋವಿಡ್‌ನಿಂದ ಮೃತ-ಪಟ್ಟಿದ್ದಾರೆ. ಕಳೆದ ವರ್ಷದ ಇದೇ ಅವಧಿಯಲ್ಲಿ 58,000 ಜನರು ಮೃತಪಟ್ಟಿದ್ದಾರೆ ಎಂದು ಗುಜರಾತಿ ಮಾಧ್ಯಮವೊಂದು ವರದಿ ಮಾಡಿದೆ ಎಂದು ಹೇಳಿದರು.


ಪಿ.ಚಿದಂಬರಂ

'ಈ 71 ದಿನಗಳಲ್ಲಿ ಸಂಭವಿಸಿದ ಸಾವುಗಳ ಬಗ್ಗೆ ನಾವು ಸ್ವತಂತ್ರವಾಗಿ ಪರಿಶೀಲನೆ ನಡೆಸಿದ್ದೇವೆ. ಈ ವರ್ಷದ ಮಾರ್ಚ್ 1ರಿಂದ ಮೇ 10ರ ವರೆಗಿನ ಅವಧಿಯಲ್ಲಿ ಕೋವಿಡ್‌ನಿಂದಾಗಿ 4,218 ಜನರು ಮೃತಪಟ್ಟಿದ್ದಾರೆ ಎಂದು ಗುಜರಾತ್ ಸರ್ಕಾರದ ವರದಿ ಹೇಳುತ್ತದೆ' ಎಂದು ದೂರಿದರು.

'65,805 ಮರಣ ಪ್ರಮಾಣಪತ್ರ-ಗಳನ್ನು ವಿತರಣೆ ಮಾಡಲಾಗಿದೆ. ಆದರೆ, ರಾಜ್ಯ ಸರ್ಕಾರದ ಅಂಕಿ–ಅಂಶಗಳ ಪ್ರಕಾರ ಸತ್ತವರ ಸಂಖ್ಯೆ 4,218. ಈ ವ್ಯತ್ಯಾಸದ ಬಗ್ಗೆ ಸಂಬಂಧಪಟ್ಟವರು ವಿವರಣೆ ನೀಡಬೇಕು' ಎಂದು ಅವರು ಆಗ್ರಹಿಸಿದರು. 'ಬೇರೆ ಸಮಸ್ಯೆಗಳಿಂದಾ-ಗಿ ಇಷ್ಟೊಂದು ಜನರು ಮೃತಪಟ್ಟಿದ್ದಾರೆ ಎಂಬ ವಿವರಣೆ ಒಪ್ಪವಂಥದ್ದಲ್ಲ. ಮೃತರ ಸಂಖ್ಯೆಯಲ್ಲಿ ಹೆಚ್ಚಳವಾಗಲು ಕೋವಿಡ್–19 ಕಾರಣ ಎಂಬ ಬಲವಾದ ಸಂಶಯವನ್ನು ಕಾಂಗ್ರೆಸ್ ಹೊಂದಿದೆ' ಎಂದೂ ಹೇಳಿದರು.

ಕಾಂಗ್ರೆಸ್‌ನ ಈ ಆರೋಪಗಳನ್ನು ಗುಜರಾತ್ ಗೃಹ ಸಚಿವ ಪ್ರತಾಪ್‌ಸಿನ್ಹ ಜಡೇಜಾ ತಳ್ಳಿಹಾಕಿದ್ದಾರೆ.

'ಭಾರತದಲ್ಲಿನ ಕೋವಿಡ್ ಬಿಕ್ಕಟ್ಟು ಅತೀವ ಕಳವಳಕಾರಿ'

ವಿಶ್ವಸಂಸ್ಥೆ: ಭಾರತದಲ್ಲಿನ ಕೋವಿಡ್ ಬಿಕ್ಕಟ್ಟು ಅತೀವ ಕಳವಳಕಾರಿಯಾಗಿ ಮುಂದುವರಿದಿದ್ದು ಎರಡನೇ ಅಲೆ ಮೊದಲನೇಯದಕ್ಕಿಂತಲೂ ಹೆಚ್ಚು ಮಾರಕವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮುಖ್ಯಸ್ಥ ಟೆಡ್ರೋಸ್ ಅಧನಾಮ್ ಗೆಬ್ರೆಯೆಸಸ್ ಎಚ್ಚರಿಸಿದ್ದಾರೆ.

ದೇಶದ ಹಲವಾರು ರಾಜ್ಯಗಳ-ಲ್ಲಿನ ಪ್ರಕರಣಗಳು ಆತಂಕಕಾರಿಯಾಗಿ ಮುಂದುವರಿದಿದ್ದು, ಆಸ್ಪತ್ರೆಗಳಲ್ಲಿನ ಭರ್ತಿ ಮತ್ತು ಸಾವಿನ ಪ್ರಕರಣವನ್ನು ನೋಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಭಾರತದಲ್ಲಿ ಕೋವಿಡ್ ಬಿಕ್ಕಟ್ಟಿಗೆ ಡಬ್ಲ್ಯುಎಚ್‌ಒ ಸೂಕ್ತ ರೀತಿಯಲ್ಲೇ ಸ್ಪಂದಿಸಿದ್ದು, ಆಮ್ಲಜನಕ ಸಾಂದ್ರಕಗಳು, ಮಾಸ್ಕ್ ಹಾಗೂ ಇತರೆ ವೈದ್ಯಕೀಯ ಸಾಮಾಗ್ರಿಗಳನ್ನು ಪೂರೈಸಿದೆ ಎಂದು ತಿಳಿಸಿದ್ದಾರೆ.

ಕಟ್ಟಡ ಮೇಲ್ಛಾವಣಿ ಕುಸಿತ– 11 ಮಂದಿ ರಕ್ಷಣೆ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಉಲ್ಹಾಸ್‌ನಗರ ಪಟ್ಟಣದಲ್ಲಿ ಶನಿವಾರ ವಸತಿ ಕಟ್ಟಡದ ಮೇಲ್ಛಾವಣಿ ಕುಸಿದಿದ್ದು, ಕನಿಷ್ಠ 11 ಜನರನ್ನು ರಕ್ಷಿಸಲಾಗಿದೆ ಮತ್ತು ಐವರು ಸಿಕ್ಕಿಬಿದ್ದಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಧ್ಯಾಹ್ನ 1.40 ರ ಸುಮಾರಿಗೆ ಕ್ಯಾಂಪ್ ನಂಬರ್ 1 ರಲ್ಲಿ ನಾಲ್ಕು ಅಂತಸ್ತಿನ ವಸತಿ ಕಟ್ಟಡದ ಮೇಲ್ಛಾವಣಿ ಕುಸಿದಿದೆ. ನಾಲ್ಕನೇ ಮಹಡಿಯ ಮೇಲ್ಛಾವಣಿ ಕುಸಿದಿದ್ದರಿಂದ ಕೆಳಗಿನ ಮಹಡಿಗಳಿಗೂ ಧಕ್ಕೆಯಾಗಿದ್ದು, ಜನರು ಸಿಕ್ಕಿಬಿದ್ದಿದ್ದಾರೆ' ಎಂದು ಠಾಣೆ ಮಹಾನಗರ ಪಾಲಿಕೆಯ ಪ್ರಾದೇಶಿಕ ವಿಪತ್ತು ನಿರ್ವಹಣಾ ಕೋಶದ ಮುಖ್ಯಸ್ಥ ಸಂತೋಷ್ ಕದಮ್ ತಿಳಿಸಿದ್ದಾರೆ.

ಅಗ್ನಿಶಾಮಕ ದಳದವರು ಘಟನಾ ಸ್ಥಳಕ್ಕೆ ಧಾವಿಸಿ 11 ಜನರನ್ನು ರಕ್ಷಿಸಿ, ಅವರನ್ನು ಪ್ರಥಮ ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಕಟ್ಟಡದ ಅವಶೇಷಗಳನ್ನು ತೆರವುಗೊಳಿಸುವ ಹಾಗೂ ಸಿಕ್ಕಿಬಿದ್ದಿರುವ ಐವರನ್ನು ರಕ್ಷಿಸುವ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ್ ಇಲ್ಲ ಎನ್ನುವ ಕಾರಣಕ್ಕೆ ಲಸಿಕೆ ನಿರಾಕರಣೆ ಸಲ್ಲದು: ಯುಐಡಿಎಐ

ನವದೆಹಲಿ: ಆಧಾರ್ ಇಲ್ಲ ಎನ್ನುವ ಏಕೈಕ ಕಾರಣಕ್ಕಾಗಿ ಕೋವಿಡ್ ಲಸಿಕೆ ನೀಡುವುದು, ಆಸ್ಪತ್ರೆಗೆ ದಾಖಲಿಸುವುದು ಅಥವಾ ಚಿಕಿತ್ಸೆ ನೀಡುವುದನ್ನು ನಿರಾಕರಿಸುವಂತಿಲ್ಲ ಎಂದು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ) ಹೇಳಿದೆ. ಅಗತ್ಯ ಸೇವೆಯನ್ನು ನಿರಾಕರಿಸುವ ನೆಪವಾಗಿ ಆಧಾರ್ ದುರುಪಯೋಗ ಪಡೆಸಿಕೊಳ್ಳಬಾರದು ಎಂದೂ ಸ್ಪಷ್ಟಪಡಿಸಿದೆ.

ವೈದ್ಯ ಸಮೂಹದ ಜೊತೆ ಸಿ.ಎಂ ಹೃದಯಸ್ಪರ್ಶಿ ಸಂವಾದ

'ಮಾನವೀಯ ನೆಲೆಗಟ್ಟಿನಲ್ಲಿ ಸವಾಲು ಎದುರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವೀಯ ನೆಲೆಗಟ್ಟಿನ-ಲ್ಲಿ ಕೋವಿಡ್ ಸವಾಲುಗಳನ್ನು ಎದುರಿಸ-ಬೇಕಾಗಿದೆ. ಲಭ್ಯವಿರುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಬಳಸಬೇಕು' ಎಂದು ಕೋವಿಡ್ ಸಮರದಲ್ಲಿ ನಿರತ ವೈದ್ಯಾಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಿವಿಮಾತು ಹೇಳಿದರು.

ರಾಜ್ಯದುದ್ದಕ್ಕೂ ಇರುವ ವೈದ್ಯರ ಜೊತೆ ಶನಿವಾರ ವಿಡಿಯೊ ಸಂವಾದ ನಡೆಸಿದ ಅವರು, ಮನೋಸ್ಥೈರ್ಯ ಹೆಚ್ಚಿಸುವ ಜೊತೆಗೆ ಸಮಸ್ಯೆಗಳನ್ನು ಆಲಿಸಿದರು. ಈ ಹೃದಯಸ್ಪರ್ಶಿ ಸಂವಾದದಲ್ಲಿ ಕರ್ತವ್ಯದ ಸವಾಲುಗಳ ಬಗ್ಗೆ ಪ್ರಶ್ನಿಸಿ, ಆತ್ಮವಿಶ್ವಾಸ ತುಂಬಿದರು. ವೈದ್ಯ, ಅರೆ ವೈದ್ಯಕೀಯ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು 'ರಾಜ್ಯದ ಅಮೂಲ್ಯ ಆಸ್ತಿ' ಎಂದು ಬಣ್ಣಿಸಿದರು.

ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯ ಲಕ್ಷ್ಮೀಪತಿ, ಮನೆಗೇ ತೆರಳದೆ ಆಸ್ಪತ್ರೆ-ಯಲ್ಲೇ ಮೊಕ್ಕಾಂ ಹೂಡಿರುವ ವೈದ್ಯರು, ಸಿಬ್ಬಂದಿ ಸೇವೆಯನ್ನು ಮುಖ್ಯಮಂತ್ರಿಯ ಗಮನಕ್ಕೆ ತಂದರು. ಮಣಿಪಾಲದ ಶಶಿಕಿರಣ್ ಉಮಾಕಾಂತ್, ಅಂತಿಮ ವರ್ಷದ ವೈದ್ಯಕೀಯ ಹಾಗೂ ನರ್ಸಿಂಗ್ ವಿದ್ಯಾ-ರ್ಥಿಗಳಿಗೂ ತರಬೇತಿ ನೀಡುವ ಅವಶ್ಯಕತೆ ಇದೆ ಎಂದು ಮನವಿ ಮಾಡಿದರು.


ಯಡಿಯೂರಪ್ಪ

ಬಳ್ಳಾರಿಯ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ ಆಸ್ಪತ್ರೆಯ ಶ್ರೀನಿವಾಸುಲು, ಜಿಂದಾಲ್ ಸಂಸ್ಥೆ ಒದಗಿಸಿದ 1,000 ಹಾಸಿಗೆಯ ಆಸ್ಪತ್ರೆ-ಯನ್ನು ನಿರ್ವಹಿಸಲು ಕ್ರಮಕೈಗೊಳ್ಳಲಾ-ಗಿದೆ ಎಂದರು. 'ಲಸಿಕೆ ಪಡೆದಿದ್ದೀರಾ' ಎಂದು ವಿಜಯಪುರದ ಡಾ ಮೀನಾಕ್ಷಿ ಡಿ ಮುತ್ತಪ್ಪನವರ್ ಅವರನ್ನು ಪ್ರಶ್ನಿಸಿದ ಮುಖ್ಯ-ಮಂತ್ರಿ,'ನಿಮ್ಮ ಆರೋಗ್ಯವೂ ಮುಖ್ಯ' ಎಂದು ತಿಳಿ ಹೇಳಿದರು.

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಶರತ್ ಬಾಬು, 'ಜಿಲ್ಲೆಯಲ್ಲಿ ಇತ್ತೀಚಿಗೆ ಒತ್ತಡ ಕಡಿಮೆಯಾಗಿದ್ದು, ಇರುವ ಹಾಸಿಗೆಗಳು ಹಾಗೂ ಸೋಂಕಿತರಿಗೆ ಸಮಸ್ಯೆ ಇಲ್ಲ' ಎಂದರು. ಗೋಕಾಕದ ಅರವಳಿಕೆ ತಜ್ಞ ಮಹಾಂತೇಶ ಶೆಟ್ಟಪ್ಪನವರ್, ಗ್ರಾಮೀಣ ಮಟ್ಟದಲ್ಲಿ ಹೋಮ್ ಐಸೋಲೇಷನ್ ಹೆಚ್ಚಿಸುವ ಅಗತ್ಯದ ಬಗ್ಗೆ ಪ್ರಸ್ತಾಪಿಸಿದರು.

ಅರಕಲಗೂಡು ತಾಲ್ಲೂಕು ಆಸ್ಪತ್ರೆಯ ದೀಪಕ್, 'ಗ್ರಾಮೀಣ ಭಾಗದಲ್ಲಿ ಕೋವಿಡ್ ಸೋಂಕಿತರ ಪ್ರಮಾಣ ಶೇ 10ಕ್ಕೆ ಇಳಿಸುವ ಗುರಿ ಹೊಂದಲಾಗಿದೆ' ಎಂದರು. ಮೈಸೂರಿನ ಡಾ ತ್ರಿವೇಣಿ, ತಮಗೆ ಮತ್ತು ಮಗಳಿಗೆ ಸೋಂಕು ತಗುಲಿ ಇತ್ತೀಚಿಗೆ ಗುಣಮುಖರಾ-ಗಿದ್ದನ್ನು ಮುಖ್ಯಮಂತ್ರಿ ವಿಚಾರಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ತುಮಕೂರು ಜಿಲ್ಲಾ ಆಸ್ಪತ್ರೆಯ ಭಾನುಪ್ರಕಾಶ್, 'ತುಮಕೂರು ಜಿಲ್ಲೆ ಬೆಂಗಳೂರಿನ ಪ್ರತಿಬಿಂಬದಂತೆ ಇರುವುದರಿಂದ ಸೋಂಕಿತರ ಸಂಖ್ಯೆ ಹೆಚ್ಚಿದೆ' ಎಂದರು.

ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಕೆ.ವಿ. ತ್ರಿಲೋಕ ಚಂದ್ರ, ವಾರ್ತಾ ಇಲಾಖೆಯ ಆಯುಕ್ತ ಪಿ.ಎಸ್. ಹರ್ಷ ಇದ್ದರು.

ಮುಖ್ಯಮಂತ್ರಿಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ

ಲಸಿಕೆಗೆ ₹100 ಕೋಟಿ ಬಳಸಲು ಅವಕಾಶ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು, ಸಂಸದರಿಗೆ ನೀಡಲಾಗುವ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ತಲಾ ₹1 ಕೋಟಿಯಂತೆ ಒಟ್ಟು ₹100 ಕೋಟಿ ಬಳಸಿ ಜನರಿಗೆ ಲಸಿಕೆ ವಿತರಿಸಲು ಅವಕಾಶ ಕೊಡಬೇಕು ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ಪ್ರತಿನಿಧಿಸುವ ಶಾಸಕರು, ಸಂಸದರ ಕ್ಷೇತ್ರದ ಅಭಿವೃದ್ಧಿಗೆ ನೀಡಲಾಗುವ ಮೊತ್ತದಲ್ಲಿ ತಲಾ ₹1 ಕೋಟಿಯನ್ನು ಲಸಿಕೆಗಾಗಿ ಬಳಸಿದರೆ ₹90 ಕೋಟಿ ಆಗಲಿದೆ. ಪಕ್ಷದ ವತಿಯಿಂದ ₹10 ಕೋಟಿ ಸಂಗ್ರಹಿಸುತ್ತೇವೆ. ಒಟ್ಟು ಮೊತ್ತದಲ್ಲಿ ಲಸಿಕೆ ಖರೀದಿಸಿ, ಐಸಿಎಂಆರ್ ನಿಗದಿಪಡಿಸಿರುವ ನಿಯಮಗಳಂತೆ ಲಸಿಕೆ ನೀಡುತ್ತೇವೆ. ಇದಕ್ಕೆ ಅವಕಾಶ ಹಾಗೂ ಅನುಮೋದನೆ ನೀಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.


ಸಿದ್ದರಾಮಯ್ಯ

'ಲಸಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ಯಾಮಾರಿದೆ. ಸರ್ಕಾರ ತಪ್ಪು ಮಾಡಿದೆ ಎಂದು ಹೇಳಿದರೆ ಬಿಜೆಪಿಯ ಹಲವು ಮುಖಂಡರು ಜನರನ್ನು, ವಿರೋಧ ಪಕ್ಷಗಳನ್ನು ನಿಂದಿಸುತ್ತಾ ಕುಳಿತಿದ್ದಾರೆ. ಸರ್ಕಾರದ ಸ್ವಯಂಕೃತ ಅಪರಾಧದಿದಾಗಿ ಕತ್ತಲು ಆವರಿಸಿದೆ. ಈ ಹೊತ್ತಿನಲ್ಲಿ ಜವಾಬ್ದಾರಿಯುತ ಪ್ರತಿ ಪಕ್ಷವಾದ ನಾವು ಸುಮ್ಮನೇ ಕೈಕಟ್ಟಿ ಕೂರಲಾಗದು. ಈ ಕಾರಣಕ್ಕಾಗಿ ಲಸಿಕೆ ಯೋಜನೆ ಆರಂಭಿಸಲು ಮುಂದಾಗಿದ್ದೇವೆ' ಎಂದು ಹೇಳಿದ್ದಾರೆ.

'ವಿರೋಧ ಪಕ್ಷಗಳನ್ನು ಟೀಕಿಸುವ ಬಿಜೆಪಿ ಮುಖಂಡರು ಹಾಗೂ ಸ್ವತಃ ಪ್ರಧಾನಮಂತ್ರಿ-ಗಳು, 'ನಾವು ಕೊರೊನಾ ವಿರುದ್ಧದ ಯುದ್ಧ ಗೆದ್ದು ಬಿಟ್ಟಿದ್ದೇವೆ' ಎಂದು ನಾಲ್ಕು ತಿಂಗಳ ಹಿಂದೆ ಹೇಳಿದ್ದರು. ಈ ಮಾತುನಂಬಿದ ಜನರು, ದುಡಿಮೆಯಲ್ಲಿ ತೊಡಗಿಕೊಂಡರು. ಆಗಲೇ ಕೊರೊನಾದ ಎರಡನೇ ಅಲೆ ಬಂದು ಅಪ್ಪಳಿಸಿತು. ಅಸಂಖ್ಯಾತ ಜನರು ಮೃತಪಟ್ಟರು. ಈ ಸಾವುಗಳನ್ನು ಆಡಳಿತ ನಡೆಸುತ್ತಿರುವ ಸರ್ಕಾರಗಳೇ ಮಾಡಿದ ಕೊಲೆ ಎಂದರೆ ತಪ್ಪೇನು? ತಜ್ಞರು ನೀಡಿದ ಎಚ್ಚರಿಕೆ, ಸಲಹೆಗಳನ್ನು ಕಸದ ಬುಟ್ಟಿಗೆ ಎಸೆದು ಜನರನ್ನು ಕೊಂದವರೇ ಹೊರಬೇಕಲ್ಲವೇ?' ಎಂದೂ ಅವರು ಪ್ರಶ್ನಿಸಿದ್ದಾರೆ.

ಮಹಾರಾಷ್ಟ್ರ: 80 ಸಾವಿರ ದಾಟಿದ ಸಾವಿನ ಸಂಖ್ಯೆ


ಮುಂಬೈ: ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಮಹಾರಾಷ್ಟ್ರದಲ್ಲಿ ಕೋವಿಡ್–19ನಿಂದ 969 ಜನರು ಮೃತಪಟ್ಟಿದ್ದಾರೆ. ಇದರೊಂದಿಗೆ, ಸಾವಿಗೀಡಾದವರ ಸಂಖ್ಯೆ 80,512ಕ್ಕೇರಿದಂತಾಗಿದೆ.

ಇದೇ ಅವಧಿಯಲ್ಲಿ ಹೊಸದಾಗಿ 34,848 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 5.34 ಲಕ್ಷಕ್ಕೇರಿದಂತಾಗಿದೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 5 ಲಕ್ಷಕ್ಕಿಂತ ಕಡಿಮೆಯಾಗಿದ್ದು, 4,94,032 ಪ್ರಕರಣಗಳಿವೆ. 59,073 ಜನರು ಗುಣಮುಖರಾಗಿ ಮನೆಗೆ ತೆರಳಿದ್ದಾರೆ ಎಂದು ರಾಜ್ಯದ ಆರೋಗ್ಯ ಇಲಾಖೆ ತಿಳಿಸಿದೆ.

ನಿಧನ ವಾರ್ತೆ

ರಘುನಂದನ್ ಲಾಲ್ ಭಾಟಿಯಾ



ಅಮೃತಸರ (ಪಿಟಿಐ): ಹಿರಿಯ ಕಾಂಗ್ರೆಸ್ ನಾಯಕ, ಆರು ಬಾರಿ ಸಂಸದರಾಗಿದ್ದ ರಘುನಂದನ್ ಲಾಲ್ ಭಾಟಿಯಾ ಅವರು (100) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು ಎಂದು ಅವರ ಕುಟುಂಬದ ಸದಸ್ಯರೊಬ್ಬರು ತಿಳಿಸಿದರು.

'ಶುಕ್ರವಾರ ರಾತ್ರಿ ಅಮೃತಸರದ ಖಾಸಗಿ ಆಸ್ಪತ್ರೆಯಲ್ಲಿ ರಘುನಂದನ್ ಅವರು ಕೊನೆ ಉಸಿರೆಳೆದರು' ಎಂದು ಅವರು ಹೇಳಿದರು.

ರಘುನಂದನ್ ಅವರು ಅಮೃತಸರದಿಂದ ಆರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದ-ರು. 1972ರಲ್ಲಿ ಮೊದಲ ಬಾರಿ ಲೋಕಸಭೆಗೆ ಚುನಾಯಿತರಾಗಿದ್ದರು. ಬಳಿಕ 1980, 1985, 1992, 1996 ಮತ್ತು 1999ರಲ್ಲೂ ಕಾಂಗ್ರೆಸ್ ಪಕ್ಷದಿಂದ ಸಂಸದರಾಗಿ ಆಯ್ಕೆಯಾಗಿದ್ದರು.


1992ರಲ್ಲಿ ವಿದೇಶಾಂಗ ವ್ಯವಹಾರಗಳ ಇಲಾಖೆಯ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ ಅವರು, 2004ರಿಂದ 2008ರ ತನಕ ಕೇರಳ ಮತ್ತು 2008ರಿಂದ 2009ರ ತನಕ ಬಿಹಾರದ ರಾಜ್ಯಪಾಲರಾಗಿಯೂ ಕಾರ್ಯನಿ-ರ್ವಹಿಸಿದ್ದರು.

ಆಶಿಮ್ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತಮ್ಮ ಆಶಿಮ್ ಬ್ಯಾನರ್ಜಿ ಅವರು ಕೋವಿಡ್ -19ರ ಕಾರಣದಿಂದಾಗಿ ಶನಿವಾರ ನಿಧನರಾದರು.


ಅವರು ಕೋಲ್ಕತ್ತದ ಮೆಡಿಕಾ ಆಸ್ಪತ್ರೆ-ಯಲ್ಲಿ ತಿಂಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಆಶಿಮ್ ಅವರು 'ಕಾಳಿದಾ' ಎಂದೇ ಜನಪ್ರಿಯರಾಗಿದ್ದರು.

ತಿಂಗಳ ಹಿಂದೆ ಅವರಿಗೆ ಕೋವಿಡ್–19 ದೃಢಪಟ್ಟಿತ್ತು. ಅಂದಿನಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು ಎಂದು ವೈದ್ಯಕೀಯ ಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.



ರಾಗಿ ಪ್ರಪಂಚದ ದಂತಕಥೆ

9



ಶಾಸ್ತ್ರೀಜಿ... ಈ ಮಕ್ಕಳಿಗೆ ಇನ್ನು ಯಾರು ಗತಿ?


10



ಎಲ್ಲಾದ್ರೂ ಕಂಡಿದ್ದೀರಾ ಇಂಥ ವಾದ್ಯ?!

11

ಅಳುವ ಕಡಲೊಳು... ನಗೆಯ ಹಾಯಿದೋಣಿ



ಇಂದಿನ ಕೋವಿಡ್ ಕಾಲಘಟ್ಟದ ನಮ್ಮ ಸ್ಥಿತಿಯನ್ನು ಸಮರ್ಥವಾಗಿ ಪ್ರತಿಬಿಂಬಿಸಲು ಎಡ್ವರ್ಡ್ ಮಂಖ್‌ನ 'ಘನೀಭವಿಸಿದ ಭಯಭೀತಿಯ ಚೀತ್ಕಾರ'ದ ಕಲಾಕೃತಿಯಿಂದ ಮಾತ್ರ ಸಾಧ್ಯವೇನೋ. ಇಲ್ಲದಿದ್ದರೆ ಸತ್ಯಜಿತ್ ರಾಯ್ ಚಿತ್ರಿಸಿದಂತಹ ಅತೀವ ದುಃಖದ ಮಹೋಪಮೇಯವನ್ನು ಹೊಂದಿದ ದೃಶ್ಯರೂಪಕವಾದರೂ ಬೇಕಾದೀತು. ಈಗ ಸುತ್ತಲೂ ಇರುವುದು ನಮ್ಮ ಆತಂಕ, ನಮ್ಮ ನೋವು, ನಮ್ಮ ಯಾತನೆ, ನಮ್ಮ ಮಾನಸಿಕ ತುಮುಲ ಮತ್ತು ನಮ್ಮ ನಿಶ್ಶಬ್ದ ಚೀತ್ಕಾರ ಅಷ್ಟೆ. ಸದಾ ನೋಯುವ ಗಾಯದಂತೆ ಕಾಡುವ ಅಂತಹ ಅಳುವ ಕಡಲಿನ ಕುರಿತು ಹೀಗೊಂದು ಧ್ಯಾನ...

ಎಡ್ವರ್ಡ್ ಮಂಖ್‌ನ 'ದಿ ಶ್ರೀಕ್' ಕಲಾಕೃತಿ
ಕೃಪೆ: ವಿಕಿಕಾಮನ್ಸ್

ಅಳುವು ಸಹಜದ ಧರ್ಮ ಅಳಿಸುವುದು ಪರಧರ್ಮ

ಎಸ್. ದಿವಾಕರ್

ಮನೆಯಲ್ಲಿರಲಾಗದ, ಹೊರಗೆ ಹೆಜ್ಜೆಯಿಡಲಾಗದ ತ್ರಿಶಂಕು ಸ್ಥಿತಿ ನಮ್ಮದು. ಕಣ್ಣಿಗೆ ಕಾಣದ ಸಾಂಕ್ರಾಮಿಕವೊಂದು ತನ್ನ ದೈತ್ಯ ಪಾದಗಳನ್ನೂರಿ ಸಹಸ್ರ ಸಹಸ್ರ ಬಾಹುಗಳಿಂದ ನಮ್ಮೆಲ್ಲರನ್ನೂ ಬಂಧಿಸತೊಡಗಿದೆ. ಎಲ್ಲಿ ನೋಡಿದರೂ ಅಸಹಾಯಕತೆ, ನೋವು, ಯಾತನೆ, ಸಾವು. ಪರಿಸ್ಥಿತಿ ಹೀಗಿರುವಾಗ ಯಾರಿಗಾದರೂ ಅಳದೆ ಇರಲಾದೀತೆ?

ನನಗೀಗ ಪ್ರಸಿದ್ಧ ಜರ್ಮನ್ ಲೇಖಕ ಗ್ಯುಂಥರ್ ಗ್ರಾಸ್ ಬರೆದಿರುವ 'ದಿ ಟಿನ್ ಡ್ರಮ್' ಎಂಬ ಕಾದಂಬರಿ ನೆನಪಾಗುತ್ತಿದೆ. ಈ ಕಾದಂಬರಿಯ ನಾಯಕ ಆಸ್ಕರ್ ಮತ್ಜೆರಾತ್ ಒಂದು ಹುಚ್ಚಾಸ್ಪತ್ರೆಯಲ್ಲಿ ಇದ್ದುಕೊಂಡು ತನ್ನ ಸುತ್ತ ನಡೆಯುತ್ತಿರುವ ಭೀಕರ ಘಟನೆಗಳಿಗೆ ಪ್ರತಿಕ್ರಿಯಿಸುತ್ತಿರುವವನು. ಜರ್ಮನಿಯಲ್ಲಿ ನಾಜಿಗಳು ಪ್ರಬಲರಾಗುತ್ತಿದ್ದ ಸಮಯದಲ್ಲಿ ತನಗೆ ಮೂರು ವರ್ಷ ತುಂಬಿದ್ದೇ ತಾನು ಬೆಳೆಯಲೇಬಾರದೆಂದು ನಿರ್ಧರಿಸುವ ಈತ, ದೈಹಿಕವಾಗಿ ಬೆಳೆಯದಿದ್ದರೂ ಬೌದ್ಧಿಕವಾಗಿ ಬೆಳೆದುಬಿಡುವವನು; ಜೊತೆಗೆ ಬೇರೆ ಯಾರಿಗೂ ಸಾಧ್ಯವಾಗದಂತೆ ಕಿರಿಚಿಕೊಳ್ಳುವ, ಆ ಮೂಲಕ ಗಾಜುಗಳನ್ನು ಪುಡಿಗಟ್ಟುವ ಅತಿಮಾನುಷ ಶಕ್ತಿಯೊಂದನ್ನು ಬೆಳೆಸಿಕೊಳ್ಳುವವನು. ಗಾಜು ಪುಡಿಗಟ್ಟುವ ಅವನ ಆ ಶಕ್ತಿಯುಂಟಲ್ಲ, ಅದು ಕಣ್ಣು, ಕಿವಿ, ಪ್ರಜ್ಞೆಗಳನ್ನು ಕಳೆದುಕೊಂಡ ಒಂದು ವ್ಯವಸ್ಥೆಯನ್ನು ಬಡಿದೆಚ್ಚರಿಸುವ ಸಂಕೇತ. ಇರಲಿ, ಇದು ಹೇಳಿಕೇಳಿ ಕಾದಂಬರಿ. ಆದರೆ ನಮ್ಮ ಅಳುವಿಗೆ ಅಥವಾ ರೋದನಕ್ಕೆ ಅಂಥ ಶಕ್ತಿಯಾದರೂ ಎಲ್ಲಿದೆ? ಸದ್ಯ ನಮಗೆ 'ಅಳುವು ಸಹಜದ ಧರ್ಮ; ಅಳಿಸುವುದು ಪರಧರ್ಮ'!

ಸತ್ಯಜಿತ್ ರಾಯ್ ಅವರ 'ಪಥೇರ್ ಪಾಂಚಾಲಿ' ಚಿತ್ರದ ಕೊನೆಯಲ್ಲಿರುವ ಒಂದು ದಾರುಣ ದೃಶ್ಯವನ್ನು ತೆಗೆದುಕೊಳ್ಳಿ. ಮನೆಯ ಯಜಮಾನ ಹರಿಹರ್ ಕಾಶಿಯಿಂದ ಹಿಂತಿರುಗುವ ಹೊತ್ತಿಗೆ ಅವನ ಮನೆ ಹಾಳುಬಿದ್ದಿರುತ್ತದೆ. ಅವನ ಮಗಳು ದುರ್ಗಾ ನ್ಯುಮೋನಿಯಾದಿಂದ ಸತ್ತಿರುತ್ತಾಳೆ. ಹೆಂಡತಿ ಸರ್ಬಜಯಾ ಅತೀವ ದುಃಖದಲ್ಲಿರುತ್ತಾಳೆ. ಸತ್ಯಜಿತ್ ರಾಯ್ ಅವಳ ಮಿತಿಮೀರಿದ ದುಃಖವನ್ನು ಹೇಗೆ ದೃಶ್ಯೀಕರಿಸಿದ್ದಾರೆಂದರೆ ಚಿತ್ರದಲ್ಲಿ ಆ ದುಃಖಭಾವ ಸರ್ಬಜಯಾಳ ಧ್ವನಿಯಲ್ಲಿ ಅಭಿವ್ಯಕ್ತಗೊಳ್ಳುವುದಿಲ್ಲ; ಅದು ಅಭಿವ್ಯಕ್ತಗೊಳ್ಳುವುದು ಅವಳು ಆ ಎಂದು ಬಾಯಿ ತೆರೆದಿರುವ ಚಿತ್ರಿಕೆಯಲ್ಲಿ. ಶಹನಾಯ್ ತಾರಸ್ಥಾಯಿಯಲ್ಲಿ ನುಡಿಸಿರುವ ಕೆಲವು ಸ್ವರಗಳಿಂದಾಗಿ ಸರ್ಬಜಯಾಳ ಆ ರೋದನ ತೀವ್ರವಾಗಿರುವುದಲ್ಲದೆ ಅದೊಂದು ಸಾರ್ವತ್ರಿಕವೆನಿಸುವ ಹೃದಯಸ್ಪರ್ಶಿ ಅನುಭವವಾಗಿಯೂ ಮಾರ್ಪಟ್ಟಿದೆ.

ಚಿತ್ರೀಕರಣದ ಸಮಯದಲ್ಲಿ ಈ ಸನ್ನಿವೇಶ ರಾಯ್ ಅವರ ಮನಸ್ಸಿನಲ್ಲಿರಲಿಲ್ಲ. ಹಿಂದಿನ ದಿನ ಅವರು ಸರ್ಬಜಯಾ ಪಾತ್ರಧಾರಿ ಕರುಣಾ ಬ್ಯಾನರ್ಜಿಯವರಿಗೆ ಆ ಸಂದರ್ಭವನ್ನು ವಿವರಿಸುವ ಒಂದು ಚೀಟಿ ಕಳಿಸಿ, ಅದರಲ್ಲಿ 'ಅಳುವುದರಿಂದ ನಿನ್ನ ಮುಖ ವಿರೂಪಗೊಳ್ಳಬಹುದೆಂಬ ಅಂಜಿಕೆ ಬೇಡ. ಒಂದುವೇಳೆ ವಿರೂಪಗೊಂಡರೂ ಚಿಂತೆ ಇಲ್ಲ. ನಿನಗೆ ಹೇಗೆ ಸ್ವಾಭಾವಿಕವೆನ್ನಿಸುತ್ತದೋ ಹಾಗೆ ಅಳು' ಎಂದು ಬರೆದಿದ್ದರಂತೆ. ಆದರೆ ಎಡಿಟಿಂಗ್ ಕೊಠಡಿಯಲ್ಲಿ ಅವರಿಗೆ ಧ್ವನಿಗಷ್ಟೇ ಸಾಧ್ಯವಿರದ ಒಂದು ವಿಶೇಷ, ತೀವ್ರತಮ ಗುಣ ಆ ದೃಶ್ಯಕ್ಕೆ ಅಗತ್ಯವೆಂದು ತೋರಿತು. ಸಂಗೀತವನ್ನು ಸೇರಿಸಿದ ಮೇಲೆ ಕರುಣಾರ ಅಳುದನಿಯನ್ನೂ ಇರಿಸಿಕೊಂಡರೆ ಹೇಗೆ? ಸಂಗೀತ ಮತ್ತು ಅಳು ಪರಸ್ಪರ ಪರಿಣಾಮಕಾರಿ ಆಗುವುದಿಲ್ಲವೆಂದು ತೋರಿತು. ಹಾಗೆಂದು ಅವರು ಕರುಣಾ ಅವರಿಗೆ ಹೇಳಲಿಲ್ಲವಂತೆ. ಸಿನಿಮಾ ನೋಡಿದಾಗ ಆಕೆಗೆ ಆಶ್ಚರ್ಯವಾಯಿತು, ತುಸು ನಿರಾಶೆಯೂ ಆಯಿತು. ಆದರೇನು, ರಾಯ್ ಅವರ ಕಲ್ಪನೆ ಅತೀವ ದುಃಖಕ್ಕೊಂದು ಮಹೋಪಮೆಯಾಯಿತಷ್ಟೆ.

ಈ ದೃಶ್ಯವನ್ನು ರೂಪಿಸುವ ಮುನ್ನ ರಾಯ್ ಅವರ ಮನಸ್ಸಿನಲ್ಲಿ ಎಡ್ವರ್ಡ್ ಮಂಖ್‌ನ 'ದಿ ಶ್ರೀಕ್' ಎಂಬ ಪೇಂಟಿಂಗ್ ಇದ್ದಿರಲಾರದು. ಆದರೆ ಅವರು ಸ್ವತಃ ಕಲಾವಿದರಾಗಿದ್ದರಿಂದ ಯಾವುದಾದರೊಂದು ಪುಸ್ತಕದಲ್ಲಿ ಆ ಪೇಂಟಿಂಗಿನದೊಂದು ಪ್ರಿಂಟನ್ನಾದರೂ ನೋಡಿದ್ದಿರಬೇಕು; ಹಾಗೆ ನೋಡಿದ್ದು ಅವರ ಸುಪ್ತಪ್ರಜ್ಞೆಯಲ್ಲೆಲ್ಲೋ ಅನುರಣಿಸುತ್ತಿದ್ದಿರಲಿಕ್ಕೆ ಸಾಕು.

ನಾರ್ವೆಯ ಕಲಾವಿದ ಎಡ್ವರ್ಡ್ ಮಂಖ್ 1893-1895ರ ಅವಧಿಯಲ್ಲಿ ಚಿತ್ರಿಸಿದ ಪೇಂಟಿಂಗ್ 'ದಿ ಶ್ರೀಕ್'. ಇದರ ನಾಲ್ಕು ಅವತರಣಿಕೆಗಳಿವೆ - ಲಿಥೋಗ್ರಾಫ್, ಟೆಂಪೆರಾ, ಪ್ಯಾಸ್ಟಲ್ ಮುಂತಾದ ಮಾಧ್ಯಮಗಳಲ್ಲಿ. ವಿನ್ಸೆಂಟ್ ವ್ಯಾಂಗೊ ತನ್ನ 'ದಿ ಸ್ಟಾರಿ ನೈಟ್' ಪೇಂಟಿಂಗಿನಲ್ಲಿ ಉಪಯೋಗಿಸಿದ ಹಾಗೆ ಮಂಖ್ ಕೂಡ ಈ ಪೇಂಟಿಂಗಿನಲ್ಲಿ ತೀವ್ರವೇಗದ ಚಲನೆಯನ್ನು ಉಂಟುಮಾಡುವುದಕ್ಕಾಗಿ ಸುಳಿ ಸುತ್ತುವ ರೇಖೆಗಳನ್ನು ಉಪಯೋಗಿಸಿದ್ದಾನೆ. ಇಲ್ಲಿರುವ ಸೇತುವೆ, ಎಡಭಾಗದಲ್ಲಿರುವ ಇನ್ನೆರಡು ಮಾನವ ರೂಪಗಳು, ದೂರದಲ್ಲಿ ನೀರಲ್ಲಿರುವ ಬೋಟುಗಳು, ಎಲ್ಲವೂ ಪೆಡಸಾದ ರೇಖೆಗಳಲ್ಲಿವೆ. ಎಡ ಭಾಗದ ಎರಡು ಮಾನವ ರೂಪಗಳು ಸರಳವಾಗಿವೆ, ಅಮೂರ್ತವಾಗಿವೆ. ಆದರೂ ಅವು ಅಷ್ಟೇನೂ ವಿರೂಪಗೊಳ್ಳದೆ ಮುಖ್ಯ ಮಾನವ ರೂಪವನ್ನು ಪ್ರತ್ಯೇಕಿಸುವಂತಿವೆ.

ವಿಶಿಷ್ಟ ಭಾವನೆಯನ್ನೂ ನಾಟಕೀಯ ಅಭಿವ್ಯಕ್ತಿಯನ್ನೂ ಸಾಧಿಸುವುದಕ್ಕಾಗಿ ಮಂಖ್ ಇಲ್ಲಿ ಉಪಯೋಗಿಸಿರುವ ಬಣ್ಣಗಳು ವಾಸ್ತವಿಕತೆಗಿಂತ ಮಿಗಿಲಾಗಿ ವಿಚಾರವೊಂದನ್ನು ಸ್ಫುರಿಸುವಂತಿವೆ. ಹಿನ್ನೆಲೆಯಲ್ಲಿ ಸೂರ್ಯಾಸ್ತಕ್ಕಾಗಿ ಬಳಕೆಯಾಗಿರುವುದು ಢಾಳಾದ ಕೆಂಪು, ಕಿತ್ತಳೆ ಬಣ್ಣಗಳು; ಉಳಿದೆಲ್ಲಕ್ಕೂ ಮಂಕಾದ ನೀಲಿ, ಹಸಿರು, ನೇರಳೆ ಮತ್ತು ಬೂದು ಬಣ್ಣಗಳು. ಮತ್ತೆ ಬಣ್ಣಗಳ ಈ ತಾರತಮ್ಯವೇ ಸೂರ್ಯಾಸ್ತದ ಕಡುಗೆಂಪಿನ ತೀವ್ರತೆಯನ್ನೂ ಸೇತುವೆಯ ಮೇಲಿರುವ ಪೈಶಾಚಿಕ ರೂಪದ ಭೀಕರ ನಾಟಕೀಯತೆಯನ್ನೂ ಸ್ಪಷ್ಟಪಡಿಸುವಂತಿದೆ.

ಮಂಖ್ ತನ್ನ ಜೀವಿತ ಕಾಲದಲ್ಲಿ ಖಿನ್ನತೆ, ನಿರಾಶೆ, ಕಾಯಿಲೆಗಳಿಂದ ಬಳಲಿದವನು. ಐದನೇ ವಯಸ್ಸಿಗೆ ಅವನ ತಾಯಿ, ಹದಿಮೂರನೆಯ ವರ್ಷಕ್ಕೆ ಅವನ ಒಬ್ಬ ಸೋದರಿ ಕ್ಷಯರೋಗಕ್ಕೆ ಬಲಿಯಾದರು. ಇನ್ನೊಬ್ಬ ಸೋದರಿ ಮಾನಸಿಕ ವ್ಯಾಧಿಯಿಂದ ಹುಚ್ಚಾಸ್ಪತ್ರೆಗೆ ಸೇರಿದಳು. ಅವನ ತಂದೆಯಾದರೋ, ದಬ್ಬಾಳಿಕೆಯ ಪ್ರತಿರೂಪ. ಇದು ಸಾಲದೆಂಬಂತೆ ಕಲಾರಸಿಕರು ಅವನ ಅದುವರೆಗಿನ ಚಿತ್ರಗಳನ್ನು ಇಷ್ಟಪಟ್ಟಿರಲಿಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಪೇಂಟಿಂಗು ಅವನದೇ ಯಾತನಾಮಯ ಮನಸ್ಸಿನ ಪ್ರತಿಫಲನ ಎನ್ನಬಹುದೇನೊ.

ಈ ಪೇಂಟಿಂಗು ಪ್ರಸಿದ್ಧವಾಗಿರುವುದಕ್ಕೆ ಇದರಲ್ಲಿರುವ ಕಾಲಾತೀತ ಧ್ವನಿಯೂ ಕಾರಣವಾಗಿರಬಹುದು. ನಾವೆಲ್ಲರೂ ಒಂದಲ್ಲ ಒಂದು ಕಾಲದಲ್ಲಿ ಚಿಂತೆಯನ್ನೋ ವ್ಯಾಕುಲತೆಯನ್ನೋ ಅನುಭವಿಸಿದವರೇ ಅಲ್ಲವೆ? ಅಂಥ ಅನುಭವವನ್ನು ಇಮ್ಮಡಿಸುವಂತಿರುವ ನಮ್ಮ ಈ ಕಾಲದಲ್ಲಿ ಕೂಡ ಈ ಪೇಂಟಿಂಗು ನಿರಂತರವಾದ ಭಯಭೀತಿಯ ಚೀತ್ಕಾರವೊಂದರಲ್ಲಿ ಘನೀಭವಿಸಿದಂತಿರುವ ನಮ್ಮನ್ನೇ ನಮಗೆ ತೋರಿಸಿಕೊಡುವಂತಿದೆ. ಇದರಲ್ಲಿರುವುದು ನಮ್ಮ ಆತಂಕ, ನಮ್ಮ ನೋವು, ನಮ್ಮ ಯಾತನೆ, ಮಾನಸಿಕ ತುಮುಲ, ನಮ್ಮ ನಿಶ್ಶಬ್ದ ಚೀತ್ಕಾರ.

ಈ ಪೇಂಟಿಂಗಿನ ರೂಪರೇಖೆ ಸಿದ್ಧವಾಗುವುದಕ್ಕೆ ಒಂದು ವರ್ಷ ಮುಂಚೆಯೇ ಮಂಖ್‌ಗೆ ಇದರ ಅಂತರಾರ್ಥದ ದರ್ಶನವಾಗಿತ್ತು. ಅವನು 1892ರ ಜನವರಿ 22ರಂದು ತನ್ನ ಡೈರಿಯಲ್ಲಿ ಬರೆದಿಟ್ಟ ಕವನ ಇದು:

ನಡೆಯುತ್ತಿದ್ದೆ ಗೆಳೆಯರಿಬ್ಬರ ಜೊತೆ
ಮುಳುಗುತ್ತಿರುವಾಗ ಸೂರ್ಯ; ಇದ್ದಕಿದ್ದಂತೆ
ಕೆಂಪೇರಿತು ಆಕಾಶ ನೆತ್ತರಿನಂತೆ.
ಹೇಳಿಕೊಳ್ಳಲಾಗದಷ್ಟು ಸುಸ್ತೋ ಸುಸ್ತು ನನಗೆ;
ನಿಂತುಕೊಂಡುಬಿಟ್ಟೆ ಒರಗಿಕೊಂಡು ಬೇಲಿಗೆ.
ನೀಲಿಗಟ್ಟಿದ ಕಪ್ಪು ಕಡಲ ತೀರದ ಮೇಲೆ
ಚಾಚುತ್ತಿರುವ ಬೆಂಕಿ, ನೆತ್ತರಿನ ನಾಲಗೆ.
ಹೊರಟುಹೋದರು ಗೆಳೆಯರು ಮುಂದೆ ಮುಂದೆ
ಉಳಿದೇಬಿಟ್ಟೆ ಅಂಜಿಕೆಯಿಂದ ನಡುಗುತ್ತ ಹಿಂದೆ ಹಿಂದೆ
ಅದಾಗ ಕೇಳಿಸಿತೊಂದು ಅನಂತಾನಂತ ಸ್ಫೋಟ
ನಿಸರ್ಗದೊಂದು ಚೀತ್ಕಾರ, ಬಹು ಭಯಂಕರ ಕಿರಿಚಾಟ

ಮಂಖ್‌ನ ಕಾಲದಲ್ಲಿ ಪ್ರಚಲಿತವಾಗಿದ್ದದ್ದು ಸಂಕೇತವಾದೀ ಶೈಲಿಯ ಕಲಾಪಂಥ. ಆದರೂ ಅವನು ಈ ಪೇಂಟಿಂಗಿನಲ್ಲಿ ವಾಸ್ತವವಾದೀ ಶೈಲಿಯನ್ನು ಬಿಟ್ಟುಕೊಟ್ಟು, ಅವಾಸ್ತವಿಕವೆನಿಸುವ ಶೈಲಿಯೊಂದನ್ನು ಅನುಸರಿಸುವ ಮೂಲಕ ಅಸ್ತಿತ್ವವಾದೀ ಕ್ಷೋಭೆಯ ಕ್ಷಣವೊಂದನ್ನು ಹಿಡಿದುಕೊಟ್ಟ. ಇದು ಮುಂದೆ ಅಭಿವ್ಯಕ್ತಿವಾದೀ (ಎಕ್ಸ್‌ಪ್ರೆಶನಿಸಂ) ಕಲಾಪಂಥಕ್ಕೆ ಬುನಾದಿಯಾಯಿತು.

ಪ್ರಪಂಚದ ಜೀವಕೋಟಿಯಲ್ಲಿ ಮನುಷ್ಯನೊಬ್ಬನೇ ಅಳುತ್ತಾನಂತೆ. ಆದರೂ ಅನೇಕ ಭಾಷೆಗಳಲ್ಲಿ 'ಮೊಸಳೆ ಕಣ್ಣೀರು' ಎಂಬ ರೂಪಕವಿದೆ. (ಅಮೆರಿಕದ ಅಧ್ಯಕ್ಷನಾಗಿದ್ದ ಲಿಂಡನ್ ಜಾನ್ಸನ್ನನ 'ಅನುಕಂಪ'ವನ್ನು ಲೇವಡಿಮಾಡಿದ ವ್ಯಂಗ್ಯಚಿತ್ರ ಬಹು ಪ್ರಸಿದ್ಧ). ಮೊಸಳೆ ಕಣ್ಣೀರಿನ ಸತ್ಯಾಸತ್ಯತೆಯನ್ನು ಕಂಡುಹಿಡಿಯುವುದಕ್ಕಾಗಿ ಅಮೆರಿಕದ ವೈಜ್ಞಾನಿಕ ಸಂಶೋಧಕರೊಬ್ಬರು ಬಗೆಬಗೆಯ ಮೊಸಳೆಗಳ ಕಣ್ಣುಗಳಿಗೆ ಈರುಳ್ಳಿಯ ರಸ ಬಿಟ್ಟು ನೋಡಿದರು. ಆದರೆ ಮೊಸಳೆಗಳ ಕಣ್ಣುಗಳಲ್ಲಿ ಮಾತ್ರ ಒಂದೇ ಒಂದು ಹನಿ ಒಸರಲಿಲ್ಲ!

11ನೇ ಪುಟಕ್ಕೆ...



ರಾಯ್ ಅವರ ಕಲ್ಪನೆಯಲ್ಲಿ ಅತೀವ ದುಃಖಕ್ಕೊಂದು ಮಹೋಪಮೆಯಾದ ಪಥೇರ್ ಪಾಂಚಾಲಿ ಸಿನಿಮಾದ ಸರ್ಬಜಯಾ (ಕರುಣಾ) ಅಳುವಿನ ನೋಟ...

ಕಲಾಕೃತಿ ಸೌಜನ್ಯ: hifipublic.com

ಕೊರೊನೋತ್ತರ ಶಕೆಯಲ್ಲಿ...

ಎಂ.ಎಸ್.ನರಸಿಂಹಮೂರ್ತಿ

ಸುನಾಮಿಗೆ ಉಕ್ಕಿ ಹರಿಯಲು ಕಲಿಸಿದವರು ಯಾರು? ಅಗ್ನಿಪರ್ವತಕ್ಕೆ ಸ್ಫೋಟಿಸಲು ತಿಳಿಸಿದವರು ಯಾರು? ಕೊರೊನಾ ಇದೇ ಟೈಪು! ಅದಕ್ಕೆ ಅರಸನ ಅಂಕೆಯಿಲ್ಲ, ಸಾವಿನ ಸಂಖ್ಯೆಯಿಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಪ್ಲೇಗು, ಮಲೇರಿಯಾಗಳು ಜನರಿಗೆ ಸಾಂಕ್ರಾಮಿಕ ಪಿಡುಗುಗಳಾಗಿದ್ದವು. ಸ್ವಾತಂತ್ರ್ಯೋತ್ತರದಲ್ಲಿ ಕೊರೊನಾ ಅದೇ ರೀತಿ ಆಟ ಆಡಿಸಿದೆ. ಉಕ್ಕಿ ಹರಿಯುವ ಯೌವನವಿರುವ ಹದಿಹರೆಯದವರ ಹುಚ್ಚು ಪ್ರೀತಿಗೆ ಬ್ರೇಕ್ ಹಾಕಿದೆ. ವೀಕೆಂಡ್ ಪಾರ್ಟಿಗಳಲ್ಲಿನ ಮೋಜು, ಮಸ್ತಿಗೆ ಲಾಕ್ ಹಾಕಿದೆ. ಡ್ರಿಂಕಿನ ಜೊತೆಗೆ ಡ್ರಗ್ ಸೇರಿ ರಾಂಗ್ ಕನೆಕ್ಷನ್‌ಗಳು ಕಾಣಿಸಿಕೊಂಡಿದ್ದನ್ನು ಸದೆ ಬಡಿದಿದೆ. ಅವಕಾಶ ಸಿಕ್ಕಾಗ ತಬ್ಬಿ ನಿಲ್ಲುವ ಬಿಸಿಯುಸಿರಿನ ತರುಣ ತರುಣಿಯರಿಗೆ ಪಾಠ ಹೇಳಲು ಕೊರೊನಾ ಪ್ರತ್ಯಕ್ಷವಾಗಿದೆ. ಇದು ಕೆಲವರ ಅಂಬೋಣ.

ಕೊರೊನಾ ಬಂದ ನಂತರ ಜನಜೀವನ ಬದಲಾಗ್ತಿದೆ. ಅದರಿಂದ ಕಲಿತಿದ್ದು ಬಹಳ ಇದೆ. ಪರಸ್ಪರ ಸ್ನೇಹ, ಸೌಹಾರ್ದ, ಹಂಚಿ ತಿನ್ನುವ ಗುಣ ಇತ್ಯಾದಿಗಳನ್ನು ಕೊರೊನಾ ಕಲಿಸಿಕೊಟ್ಟಿದೆ. ಆದರೆ ಅನೇಕ ತಿಂಗಳು ಮನೆಯಲ್ಲೇ ಇದ್ದು ಬಿದ್ದು ಎದ್ದು ವರ್ಕ್ ಫ್ರಂ ಹೋಮ್ ಎಂದು ಲ್ಯಾಪ್‌ಟಾಪ್‌ಗೆ ಅಂಟಿಕೊಂಡವರಿಗೆ ಮನೆಯ ವಾತಾವರಣ ಅಲ್ಲೋಲ ಕಲ್ಲೋಲ ಮಾಡಿದ್ದೂ ಉಂಟು.

ಸಾಮಾಜಿಕ ಜಾಲತಾಣದಲ್ಲಿ ಮೊನ್ನೆ ಒಂದು ಜೋಕ್ ಕಂಡೆ.

ವಿಶ್ವದ ಶ್ರೀಮಂತ ಬಿಲ್ ಗೇಟ್ಸ್ 27 ವರ್ಷ ಪ್ರತಿನಿತ್ಯ ಆಫೀಸಿಗೆ ಹೋಗುತ್ತಿದ್ದರು. ಆಗ ಅವರು ಆರಾಮವಾಗಿದ್ದರಂತೆ. ಕೊರೊನಾದಿಂದ ಒಂದುವರ್ಷ ವರ್ಕ್ ಫ್ರಂ ಹೋಮ್ ಮಾಡಿದಾಗ ತಮ್ಮ ದೀರ್ಘ ದಾಂಪತ್ಯಕ್ಕೆ ತಿಲಾಂಜಲಿ ಕೊಟ್ಟು ಬಿಲ್ ಸೆಟಲ್ ಮಾಡಿ ಗೇಟುಗಳ ತೆರೆದರಂತೆ! ಕೊರೊನಾ ಹೆಣ್ಣು-ಗಂಡಿನ ಪ್ರೀತಿಯ ನಡುವೆ ಅಡ್ಡಗೋಡೆಯಾಗಿ ಬಂದಿದ್ದು ಸತ್ಯವಿರಬಹುದು.

ಸ್ವಾತಂತ್ರ್ಯ ಹೋರಾಟದಲ್ಲಿ ಇಂಗ್ಲಿಷರ ಲಾಠಿ ಏಟುಗಳಿಂದ ತಪ್ಪಿಸಿಕೊಂಡ ದೇಶಭಕ್ತರೇ ಇರಲಿಲ್ಲ ಎನ್ನಬಹುದು. ಈಗಲೂ ಅಷ್ಟೇ. ಕೊರೊನಾ ಸಮಯದಲ್ಲಿ ಬೇಡವೆಂದರೂ ಹೊರಗಡೆ ಅಲೆದಾಡಿ ಪೊಲೀಸರ ಲಾಠಿ ಏಟಿನ ರುಚಿ ಕಾಣದ ವ್ಯಕ್ತಿಗಳೇ ಇಲ್ಲ. ಬೀದಿಗೊಂದು ಬೀಟು, ಮನೆಗೊಂದು ಏಟು!


ವರ್ಕ್ ಫ್ರಂ ಹೋಮ್ ಎಂಬ ಕಾನ್ಸೆಪ್ಟ್ ವಿದೇಶದಲ್ಲಿ ಈ ಮೊದಲೇ ಜನಪ್ರಿಯವಾಗಿತ್ತು. ಕೊರೊನಾ ಬಂದ ಮೇಲೆ ನಮ್ಮಲ್ಲೂ ಚಾಲ್ತಿಗೆ ಬಂತು. ಬಟ್ಟೆ ಒಗೆದು ಕೊಡುವ ಭಾಗ್ಯಮ್ಮ, ಪಾತ್ರೆ ಬೆಳಗುವ ಪಾತಮ್ಮ ಸಹ ವರ್ಕ್ ಫ್ರಂ ಹೋಮ್ ಬಯಸಿದ್ದಾರೆ.

ಕೊರೊನಾ ದಾಳಿಯಿಂದಾಗಿ ಸಾಮಾಜಿಕ ವ್ಯವಸ್ಥೆಗಳೇ ಬದಲಾದವು.

ಅನೇಕ ಸಿನಿಮಾ ಥಿಯೇಟರ್‌ಗಳು ಮಾಲ್‌ಗಳಾದವು. ಮದುವೆ ಛತ್ರಗಳು ಆಸ್ಪತ್ರೆಗಳಾದವು. ಬಂಧು, ಸ್ನೇಹಿತರು ದೂರವಾದರು. ಮದುವೆ, ಸಂಸ್ಕಾರ ಮೊದಲಾದ ಕಾರ್ಯಕ್ರಮಗಳಿಗೆ ಬಂಧು-ಸ್ನೇಹಿತರು ಬಾರದೆ ದೂರ ಉಳಿದರು.

ಕೆಲವು ಸಾಮಗ್ರಿಗಳ ವ್ಯಾಪಾರ ನಿಂತೇ ಹೋಯಿತು. ಹೆಣ್ಣು ಸೌಂದರ್ಯ ಪ್ರಿಯೆ. ಗಂಡಿನ ಕಣ್ಣಿಗೆ ಸುಂದರವಾಗಿ ಕಾಣಲು ಆಕೆ ಮಾಡುವ ಖರ್ಚು ಅಷ್ಟಿಷ್ಟಲ್ಲ. ಲೆಕ್ಕವಿಲ್ಲದಷ್ಟು ಕ್ರೀಮುಗಳು, ಲೋಷನ್ನುಗಳನ್ನು ಬಳಸುತ್ತಾಳೆ. ಏಳು ದಿನಗಳಲ್ಲಿ ಬೆಳ್ಳಗಾಗುವ ತಯಾರಿ ನಡೆಸುತ್ತಾಳೆ. ಕಂಡ ಕಂಡ ಸೋಪು ಹಚ್ಚಿಕೊಂಡು ವಿಶ್ವಸುಂದರಿ ಆಗುವ ಬಯಕೆ ಹೊಂದಿರುವವರೂ ಇದ್ದಾರೆ. ಈಗ ಕಾಸ್ಮೆಟಿಕ್ ಐಟಮ್‌ಗಳಿಗೆ ಡಿಮ್ಯಾಂಡೇ ಇಲ್ಲ. ಯಾವ ಸೌಂದರ್ಯವರ್ಧಕ ಹಚ್ಚಿಕೊಂಡರೂ ಮುಖ ತೋರಿಸುವಂತಿಲ್ಲ. ಲಿಪ್‌ಸ್ಟಿಕ್ ಬಣ್ಣ ತೋರಿಸಲು ಲಿಪ್ ಮೇಲೆ ಬೆಳಕು ಬೀಳುವುದೇ ಇಲ್ಲ. ನೋಡಿ ಆಸ್ವಾದಿಸುವ ಕಣ್ಣುಗಳೂ ಇಲ್ಲ. ಯಾವ ತಪ್ಪೂ ಮಾಡದೆ ಮುಖ ಮರೆಮಾಚುವ ಪರಿಸ್ಥಿತಿ ಬಂದಿದ್ದು ಕೊರೊನಾದಿಂದ. ಇದರಿಂದಾಗಿ ಸೌಂದರ್ಯ ಸಾಧನಗಳನ್ನು ತಯಾರು ಮಾಡುವ ಸಂಸ್ಥೆ, ಕಾರ್ಖಾನೆಗಳಿಗೆ ಹೊಡೆತ ಬಿದ್ದಿದೆ.

10ನೇ ಪುಟಕ್ಕೆ...



ಕಲೆ: ಭಾವು ಪತ್ತಾರ್

ನಲ್ಲಮಲ್ಲ ಅರಣ್ಯದ ನಡುವಿನ ದಿಗುವಮೆಟ್ಟದಲ್ಲಿ ಆ ಚಿರತೆ ಸತ್ತು ಹಲವು ದಶಕಗಳ ಬಳಿಕ ಈ ತಂಡ, ಆ ಊರನ್ನು ಹುಡುಕಿಕೊಂಡು ಹೋಗಿದ್ದೇಕೋ?



ದಿಗುವಮೆಟ್ಟದ ಪ್ರವಾಸಿ ಬಂಗಲೆ. 'ಕೊಲೆಗಡುಕ'ನ ಬೇಟೆಗೆ ಬಂದಿದ್ದ ಕೆನೆತ್ ಆ್ಯಂಡರ್ಸನ್ ಈ ಬಂಗಲೆಯ ಅಟ್ಯಾಚ್ಡ್ ಬಾತ್‌ರೂಮಿನ ಕೋಣೆಯಲ್ಲಿ ತಂಗಿದ್ದ

ಚಿತ್ರಗಳು: ಪ್ರಕಾಶ ಕಂದಕೂರ



ಕಲಾಕೃತಿ ಸೌಜನ್ಯ: ಪುಸ್ತಕ ಪ್ರಕಾಶನ

ಚಿರತೆ ಬೇಟೆಯ ಹೆಜ್ಜೆ ಜಾಡಿನಲ್ಲಿ...

ಆನಂದತೀರ್ಥ ಪ್ಯಾಟಿ

ಚಿಕ್ಕಪುಟ್ಟ ನಿಲ್ದಾಣಗಳಲ್ಲಿ ಹತ್ತಾರು ಜನರನ್ನು ಹತ್ತಿಸಿಕೊಂಡು ಸಾಗುತ್ತಿದ್ದ ಪ್ಯಾಸೆಂಜರ್ ರೈಲು, ಸುರಂಗದೊಳಗೆ ಅದೆಂಥ ರಭಸದಿಂದ ಹೋಗುತ್ತಿತ್ತೆಂದರೆ ಒಳಗಿದ್ದವರು 'ಹೋ' ಎಂದು ಕಿರಿಚಿ ಗಲಭೆ ಎಬ್ಬಿಸುತ್ತಿದ್ದರು. ಅಂಥ ಮೂರು ಸುರಂಗಗಳನ್ನು ದಾಟಿ ದಿಗುವಮೆಟ್ಟ ನಿಲ್ದಾಣದಲ್ಲಿ ಇಳಿದಾಗ, ದಶಕಗಳ ಹಿಂದೆ ಅಲ್ಲಿದ್ದ 'ಕೊಲೆಗಡುಕ'ನನ್ನು ನೆನೆದು ಅರೆಕ್ಷಣ ಹೆದರಿಕೆಯಂತೂ ಆಯಿತು! ಹಾಗಿದ್ದರೂ ಕೆನೆತ್ ಇದ್ದಾನಲ್ಲ; ಭಯ ಯಾಕೆ ಎಂಬ ಸಮಾಧಾನವೂ ಮರುಕ್ಷಣ ಆವರಿಸಿಕೊಂಡಿತು.

ಹಾಗೆ ನೋಡಿದರೆ, 'ದಿಗುವಮೆಟ್ಟದ ಕೊಲೆಗಡುಕ'ನಾಗಲೀ ಅವನನ್ನು ಬೇಟೆಯಾಡಿದ ಕೆನೆತ್ ಆ್ಯಂಡರ್ಸನ್ನಾಗಲೀ ಭೌತಿಕವಾಗಿ ಉಳಿದುಕೊಂಡಿಲ್ಲ. ಆದರೆ ಅವರಿಬ್ಬರ ನೆನಪುಗಳ ಸುರುಳಿಯಲ್ಲಿ ಉಯ್ಯಾಲೆಯಾಡಲು ಮೂವರು ನಾಡಿನ ಮೂರು ದಿಕ್ಕುಗಳಿಂದ ಗುಂತಕಲ್ಲು ತಲುಪಿ, ಅಲ್ಲಿಂದ ದಿಗುವಮೆಟ್ಟಕ್ಕೆ ಬಂದಿಳಿದಿದ್ದೆವು. ತೆಲುಗು ಭಾಷೆ ಬಲ್ಲ ನಾಗೇಂದ್ರ ಪ್ರಸಾದ್, ಕಾಡಿನ ಫೋಟೊ ತೆಗೆಯುವ ಹುಚ್ಚು ಅಂಟಿಸಿಕೊಂಡಿದ್ದ ಪ್ರಕಾಶ- ಈ ಇಬ್ಬರಿಗೂ 'ದಿಗುವಮೆಟ್ಟದ ಕೊಲೆಗಡುಕ'ನ ಜಾಡಿನಲ್ಲಿ ಓಡಾಡುವ ಪರಿಯೇ ರೋಮಾಂಚನ ಮೂಡಿಸಿತ್ತು.

ಪುಸ್ತಕ ಪ್ರಕಾಶನದ 'ಕಾಡಿನ ಕಥೆಗಳು' ಮಾಲಿಕೆಯಲ್ಲಿ ನರಭಕ್ಷಕ ಚಿರತೆ ಹಾಗೂ ಹುಲಿ ಬೇಟೆಯ ಕಥೆಗಳಿವೆ. ಮೂಲತಃ ಅವು ಕೆನೆತ್ ಆ್ಯಂಡರ್ಸನ್ ಬೇಟೆಯಾಡಿ ಬರೆದ ಕಥನಗಳು. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಅವುಗಳ ಭಾವಾನುವಾದವನ್ನು ಅಷ್ಟೇ ಅತ್ಯುತ್ತಮವಾಗಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿದ್ದ ಕೆನೆತ್, ಮೈಸೂರಿನಿಂದ ಶ್ರೀಶೈಲದವರೆಗೂ ಸಂಚರಿಸಿ, ನರಭಕ್ಷಕಗಳನ್ನು ಬೇಟೆಯಾಡಿದ್ದ. ಅವುಗಳ ರಸವತ್ತಾದ ಕಥನಗಳನ್ನು ಓದಿದ ಬಳಿಕ ಒಂದೆರಡು ತಾಣಗಳಿಗೆ ಮರುಭೇಟಿ ಕೊಡಬೇಕೆಂಬ ಆಸೆ ಮೂಡಿತ್ತು. ಅದರ ಫಲಶ್ರುತಿಯೇ 'ದಿಗುವಮೆಟ್ಟದ ಕೊಲೆಗಡುಕ'ನನ್ನು ಹುಡುಕುತ್ತ ಬಂದಿಳಿದಿದ್ದು.


ಆಂಧ್ರದ ನಲ್ಲಮಲ್ಲ ಅರಣ್ಯ ಶ್ರೇಣಿಯ ಅಂಚಿನಲ್ಲಿರುವ ದಿಗುವಮೆಟ್ಟ, ಪ್ರಕಾಶಂ ಜಿಲ್ಲೆಯಲ್ಲಿದೆ. ಇಲ್ಲಿ ನರಭಕ್ಷಕ ಚಿರತೆಯನ್ನು ಹೊಡೆಯಲು ಬಂದಿಳಿಯುವ ಕೆನೆತ್, ಸತತ ಎರಡು ದಿನ ಸುತ್ತಮುತ್ತ ಓಡಾಡಿ ರೈಲುಮಾರ್ಗದ ಸುರಂಗದ ಬಳಿ ಆ ಕಾರ್ಯದಲ್ಲಿ ಯಶಸ್ವಿಯಾಗುತ್ತಾನೆ. ಅದನ್ನು ತನ್ನ 'ಅಸಾಸಿನ್ ಆಫ್ ದಿಗುವಮೆಟ್ಟ' ಕಥನದಲ್ಲಿ ವಿವರವಾಗಿ ಬರೆದಿದ್ದಾನೆ.

ಈ ಬೇಟೆಯಲ್ಲಿ ಪ್ರಮುಖ ಪಾತ್ರವಹಿಸುವ ತಾಣಗಳು ಎರಡು: ಅರಣ್ಯ ಇಲಾಖೆಯ ಪ್ರವಾಸಿ ಬಂಗಲೆ (ಟಿ.ಬಿ) ಹಾಗೂ ರೈಲುಮಾರ್ಗಕ್ಕೆಂದು ಬೆಟ್ಟದುದ್ದಕ್ಕೂ ಕೊರೆದ ಸುರಂಗ. ದಿಗುವಮೆಟ್ಟ ನಿಲ್ದಾಣದಲ್ಲಿ ಇಳಿದು, ಟಿ.ಬಿ.ಯತ್ತ ಹೊರಟಾಗ ಕಂಡಿದ್ದು ಬಿದಿರ ಸಾಮಗ್ರಿ ತಯಾರಿಸುತ್ತಿದ್ದ ಚಂಚೂ ಬುಡಕಟ್ಟು ಜನರು. ಅದೂ ಬರೀ ಲಂಗೋಟಿಯಲ್ಲಿ! 'ಅರೆ, ಕೆನೆತ್ ಅವತ್ತೂ ಇದನ್ನೇ ಪ್ರಸ್ತಾಪಿಸಿದ್ದಾನಲ್ಲ' ಎಂದು ಅಚ್ಚರಿಪಡುತ್ತ ಟಿ.ಬಿ ಕಾಂಪೌಂಡ್ ಪ್ರವೇಶಿಸಿದಾಗ ಶತಮಾನಗಳ ಇತಿಹಾಸಕ್ಕೆ ಸಾಕ್ಷಿಯಾಗಿದ್ದ ಹಳೆಯ ಕಟ್ಟಡ ಎದುರಾಯಿತು. 'ಈ ಬಂಗಲೆಯಲ್ಲಿಯೇ ಕೆನೆತ್ ವಾಸ್ತವ್ಯ ಹೂಡಿದ್ದ' ಎಂದು ಎರಡು ಕೊಠಡಿಗಳ ಪೈಕಿ ಒಂದನ್ನು ಪ್ರಸಾದ್ ತೋರಿಸಿದ. ಕೆನೆತ್ ತನ್ನ ಸಾಮಗ್ರಿ ಬಿಚ್ಚಿಟ್ಟು, ಆ ರೂಮಿನ ಅಟ್ಯಾಚ್ಡ್ ಬಾತ್‌ರೂಮಿನಲ್ಲಿ ಸ್ನಾನ ಮಾಡಿಬಂದು ಕುರ್ಚಿ ಮೇಲೆ ಕೂತು ಸಿಗರೇಟ್ ಸೇದುತ್ತ ಒಂದು ಮಗ್ ಚಹಾ ಹೀರುವ ಸದ್ದು ಕೇಳಿಸಿದಂತಾಯಿತು!

9ನೇ ಪುಟಕ್ಕೆ...

ರಾಗಿಪ್ರಪಂಚದ ದಂತಕಥೆ

ಎಂ.ಎಸ್. ಶೇಖರ್



ಜಗತ್ತಿನ ಶ್ರೇಷ್ಠ ಆಹಾರದ ಸಾಲಿನಲ್ಲಿ ನಿಲ್ಲುವಂತಹ ಧಾನ್ಯ ರಾಗಿ. ಅಂತ ಧಾನ್ಯದ ಉತ್ಕೃಷ್ಟ ತಳಿಗಳ ಜನಕ ರಾಗಿಲಕ್ಷ್ಮಣಯ್ಯ ಅವರ ಶತಮಾನೋತ್ಸವದ ಸಂದರ್ಭ ಇದು. ಜಗತ್ತಿನ ಬಹುತೇಕ ಶ್ರಮಸಮುದಾಯಗಳ ಬಹುಮುಖ್ಯ ಆಹಾರ ರಾಗಿಗೆ ಹೊಸ ಪ್ರಪಂಚವನ್ನೇ ತೆರೆದು ತೋರಿದವರು ಅವರು. ಕರ್ನಾಟಕದ ಮಣ್ಣಿನಲ್ಲಿ ಹುಟ್ಟಿ ಬೆಳೆದು ಸಾಧನೆಗೈದ ಈ ರಾಗಿ ಸಂತನ ಹೆಸರು ರಾಗಿ ಪ್ರಪಂಚದಲ್ಲಿ ಅಮರವಾಗಿರಲಿದೆ...

ಕಲೆ: ಗುರು ನಾವಳ್ಳಿ

ಜನ್ಮಶತಾಬ್ದಿ

ದಕ್ಷಿಣ ಭಾರತ ಹಾಗೂ ಮಧ್ಯ ಈಶಾನ್ಯ ಭಾರತದ ಬಯಲುಸೀಮೆಯ ಪ್ರಧಾನ ಬೆಳೆ ರಾಗಿ. ಕನಕದಾಸರ 'ರಾಮಧಾನ್ಯ ಚರಿತೆ'ಯೂ ಸೇರಿದಂತೆ ಹಲವೆಡೆ ರಾಗಿಯ ಬಗ್ಗೆ ಅನೇಕ ಐತಿಹ್ಯಗಳಿವೆ. 'ಹೊಟ್ಟೆತುಂಬ ಹಿಟ್ಟು ಬಾಯ್ತುಂಬ ಅನ್ನ' ಎಂಬ ಗಾದೆ ಮಾತಿನಂತೆ, ಬಹುಸಂಖ್ಯಾತ ಶ್ರಮಿಕರ ತೋಳು ತೊಡೆಗಳ ಶಕ್ತಿಯ ಎದೆಗುಂಡಿಗೆಗಳ ಪ್ರಧಾನ ಆಹಾರ ರಾಗಿಯೇ ಆಗಿದೆ. ರಾಗಿ ಬಳಕೆಯ ಪ್ರಮಾಣ ಹೆಚ್ಚಾಗುತ್ತಾ ಹೋದಂತೆ ಅದರ ಸ್ಟಾರ್ ವ್ಯಾಲ್ಯೂ ಕೂಡ ಹೆಚ್ಚಾಗುತ್ತಿದೆ. ವಿಶ್ವದ ತಳಿತಜ್ಞರ ಅಧ್ಯಯನದ ಪ್ರಕಾರ, ಇಂಡಿಯಾ-ಆಫ್ರಿಕಾ ದೇಶಗಳೇ ರಾಗಿಯ ಮೂಲ. ಪ್ರಮುಖವಾಗಿ ಇಂಡಿಯಾವೇ ರಾಗಿಯ ತವರೂರು ಎಂಬುದಕ್ಕೆ ಹಲವಾರು ಗುರುತರ ಪುರಾವೆಗಳಿವೆ.

ಕೊಟ್ಟಿಗೆಯ ಗೊಬ್ಬರದಲ್ಲಿ ಬೆಳೆಯುತ್ತಿದ್ದ ಸಾಂಪ್ರದಾಯಿಕ ರಾಗಿಯ ಬಿಳಿಕುಳ್ಳ, ಕರೆಚವಲ ಎಂಬ ಹಳೆಯ ತಳಿಗಳು ಎಕರೆಗೆ ಕೊಟ್ಟಣ, ಏರು ಲೆಕ್ಕದಲ್ಲಿ ಬಿತ್ತನೆ ಬೆಳೆಯಾಗಿದ್ದವು. ನಂತರ ಕಾರ್‍ರಾಗಿ ಎಂಬುದು ಚಲನೆಗೆ ಬಂತು. ಬರುಬರುತ್ತ ದನದ ಗೊಬ್ಬರದ ಜೊತೆಗೆ, ಸೀಮೆಗೊಬ್ಬರ ಹಾಕಿ, ಹೊಸ ತಳಿಯ ಬಗೆಬಗೆಯ ಇಂಡಾಫ್ ರಾಗಿಗಳು ಚಾಲನೆಗೆ ಬಂದವು. ರಾಗಿ ಉತ್ಪಾದನಾ ಪ್ರಮಾಣವು ಗಣನೀಯವಾಗಿ ಹೆಚ್ಚುತ್ತಾ ಹೋಯಿತು.

ಇಂತಹ ಇಂಡಾಫ್ ರಾಗಿಯ ಹಲವು ತಳಿಗಳನ್ನು ಕಂಡುಹಿಡಿದ ಸಂಶೋಧಕ ಮಾತ್ರ ಜನಸಮುದಾಯಕ್ಕೆ ಸರಿಯಾಗಿ ಗೊತ್ತೇ ಆಗಲಿಲ್ಲ. ಎಲೆಮರೆಕಾಯಿಯಂತೆ, ತಮ್ಮ ಸರಳ, ಸಂತ ವ್ಯಕ್ತಿತ್ವ ಮತ್ತು ಪ್ರವೃತ್ತಿಯಿಂದ ರಾಗಿಯನ್ನೇ ಹಾಸಿಹೊದ್ದು, ಅದನ್ನೇ ಉಸಿರಾಗಿಸಿಕೊಂಡು ರಾಗಿಭೀಷ್ಮನಾಗಿ, ರಾಗಿವಿಜ್ಞಾನಿಯಾಗಿ, ರಾಗಿಪ್ರಪಂಚದ ದಂತಕಥೆಯಾದ ಆ ವ್ಯಕ್ತಿಯೇ ರಾಗಿ ತಳಿಯ ಮಹಾನ್ ಸಂಶೋಧಕ ರಾಗಿಲಕ್ಷ್ಮಣಯ್ಯ.

ಲಕ್ಷ್ಮಣಯ್ಯ ಅವರು, ಮೈಸೂರು ಜಿಲ್ಲೆಯ ಹಾರೋಹಳ್ಳಿಯಲ್ಲಿ 1921ರ ಮೇ 15ರಂದು ದಲಿತ ರೈತ ಕುಟುಂಬದಲ್ಲಿ ಜನಿಸಿದರು. ತಾಯಿ ಚನ್ನಮ್ಮ. ತಂದೆ ಚಲುವಯ್ಯ. ಹೊಲವನ್ನೇ ಉತ್ತು ಹಾಸಿಹೊದ್ದು ಉಣ್ಣುವ ರೈತ ಕುಟುಂಬ ಇವರದು. ಲಕ್ಷ್ಮಣಯ್ಯ ಅವರು ತಮ್ಮ ಹುಟ್ಟೂರು ಹಾರೋಹಳ್ಳಿಯಲ್ಲಿ ಮರಳ ಮೇಲೆ ಅಕ್ಷರ ತಿದ್ದುವ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರು. ನಂತರ ಮೈಸೂರಿನ ಉಚಿತ ವಸತಿ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ವಿದ್ಯಾರ್ಥಿ ದೆಸೆಯಿಂದಲೇ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಚರಕದಿಂದ ನೂಲುವುದನ್ನು ಕಲಿತರು. ಹಾಸನ ಸರ್ಕಾರಿ ಪ್ರೌಢಶಾಲೆಯನ್ನು ಸೇರಿ ತಮ್ಮ ಪ್ರೌಢಶಿಕ್ಷಣವನ್ನು ಮುಗಿಸಿದರು. ಆಗ ಎಚ್.ವೈ.ಶಾರದಾಪ್ರಸಾದ್ ಅವರು ಇವರ ಸಹಪಾಠಿಯಾಗಿದ್ದರು. ಆನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ವ್ಯಾಸಂಗ ಮಾಡಿದರು. ಅಲ್ಲಿ ಕುವೆಂಪು, ಎಸ್.ವಿ.ಪರಮೇಶ್ವರಭಟ್ಟ ಅವರು ಇವರ ಗುರುಗಳಾಗಿದ್ದರು.

ಓದುವುದರಲ್ಲಿ ಮುಂದಿದ್ದ ಮೌನಸಂವೇದನೆಯ ಲಕ್ಷ್ಮಣಯ್ಯ ಅವರು ಮುಂದೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಸ್ಯಶಾಸ್ತ್ರ ಪ್ರಧಾನವಾದ ವಿಷಯದಲ್ಲಿ ಅಧ್ಯಯನ ಮಾಡಿ ಬಿ.ಎಸ್ಸಿ ಪದವೀಧರರಾದರು. ಎಂ.ಎಸ್ಸಿ ಮಾಡುವ ಉತ್ಸಾಹ, ಅವಕಾಶ ಇತ್ತಾದರೂ ಮನೆಯ ಆರ್ಥಿಕ ಸ್ಥಿತಿಗನುಗುಣವಾಗಿ 1942ರಲ್ಲಿ ಭಾರತೀಯ ರೈಲ್ವೆ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಆದರೆ ತಮ್ಮ ಪ್ರವೃತ್ತಿಗೆ ಒಗ್ಗದ ಆ ವೃತ್ತಿಗೆ ರಾಜೀನಾಮೆ ನೀಡಿದರು.

ಅಷ್ಟೊತ್ತಿಗಾಗಲೇ ಲಕ್ಷ್ಮಣಯ್ಯ ಅವರ ಎದೆಯ ಗೂಡೊಳಗೆ ರಾಗಿ ಕಾಳುಗಳು ಹರಳುಗಟ್ಟುತ್ತಿದ್ದವು. 1945ರಲ್ಲಿ ಲಕ್ಷ್ಮಮ್ಮ ಅವರೊಂದಿಗೆ ವಿವಾಹವಾದರು. ರಾಗಿ ಕುಟುಂಬದ ಮೋಹದ ಕಡೆ ಮುಖ ಮಾಡುತ್ತಿರುವಾಗಲೇ ರಾಜ್ಯ ಕೃಷಿ ಇಲಾಖೆಯ ವ್ಯವಸ್ಥಾಪಕ ಹುದ್ದೆ ಬೀರೂರಿನಲ್ಲಿ ದೊರೆಯಿತು. ಆ ವರ್ಷವೇ ಮಂಡ್ಯದ ವಿ.ಸಿ ಫಾರಂಗೆ ಕಿರಿಯ ಸಹಾಯಕ ವಿಜ್ಞಾನಿಯಾಗಿ ವರ್ಗಾವಣೆಯೂ ಆಯಿತು. ಹುಚ್ಚು ಅನ್ನುವಷ್ಟು ರಾಗಿ ತಳಿ ಪ್ರೇಮವಿಟ್ಟುಕೊಂಡಿದ್ದ ಲಕ್ಷ್ಮಣಯ್ಯ ಅವರು, ತಪಸ್ಸಿನಂತೆ ರಾಗಿ ತಳಿಗಳ ಬಗ್ಗೆ ಅಧ್ಯಯನದಲ್ಲಿ ನಿರತರಾದರು. ಅವರ ಧ್ಯಾನಸ್ಥ ತಲ್ಲೀನತೆಯ ಸಂಶೋಧನೆಯ ಫಲವೇ 'ಅರುಣ', 'ಉದಯ', 'ಪೂರ್ಣ', 'ಅನ್ನಪೂರ್ಣ', 'ಕಾವೇರಿ' ಎಂಬ ವಿವಿಧ ರಾಗಿ ತಳಿಗಳು.

ಕಿರಿಯ ಸಹಾಯಕ ವಿಜ್ಞಾನಿಯಾಗಿದ್ದ ಲಕ್ಷ್ಮಣಯ್ಯ ಅವರು ತಮ್ಮ ತೀವ್ರಾಸಕ್ತಿ, ಗಾಢವಾದ ಶ್ರದ್ಧೆ, ಅಪರಿಮಿತ ಶ್ರಮದಿಂದ ಏಕವ್ಯಕ್ತಿ ಸೇನಾನಿಯಾಗಿ ಮಾಡಿದ್ದ ಕೆಲಸದ ಬಗ್ಗೆ ಅಂಜುತ್ತಲೇ ತಮ್ಮ ಹಿರಿಯ ವಿಜ್ಞಾನಿಗಳ ಗಮನಕ್ಕೆ ತಂದರು. ಕೆಲವರು ಅಸಹನೆಯಿಂದ ಅಸಡ್ಡೆ ತೋರಿದರು, ಕುಹಕವಾಡಿದರು. ಆದರೆ, ಧೃತಿಗೆಡದ ಲಕ್ಷ್ಮಣಯ್ಯನವರು ರಾಗಿ ಪ್ರಪಂಚದಲ್ಲಿಯೇ ದಿಟ್ಟ ಹೆಜ್ಜೆ ಇಡುತ್ತ ಸಾಗಿದರು.

ಮುಂದೆ ಕೃಷಿ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗುವ ಅವಕಾಶವಿದ್ದರೂ ಲಕ್ಷ್ಮಣಯ್ಯನವರು ಆಯ್ದುಕೊಂಡಿದ್ದು ರಾಗಿ ತಳಿ ಸಂಶೋಧನೆಗೆ ಅನುಕೂಲವಾದ ಕೃಷಿ ವಿಶ್ವವಿದ್ಯಾಲಯದ ಉದ್ಯೋಗವನ್ನೇ. ಹಳ್ಳಿಹಳ್ಳಿಗಳನ್ನು ಸುತ್ತುತ್ತ ಹಳೆಯ ರಾಗಿ ತಳಿಗಳನ್ನು ಸಂಗ್ರಹಿಸುತ್ತ, ತಮ್ಮ ರಾಗಿಪ್ರಪಂಚದಲ್ಲಿ ತನ್ಮಯರಾಗಿ ಅಧ್ಯಯನ ನಿರತರಾದರು. ಲಕ್ಷ್ಮಣಯ್ಯ ಅವರಿಗೆ ಅರ್ಹತೆ ಆಧಾರದ ಮೇಲೆ ಗೆಜೆಟೆಡ್ ಅಧಿಕಾರಿ ಹುದ್ದೆಗೆ ಪ್ರಮೋಷನ್ ನೀಡಿ, ಹುದ್ದೆ ಲಭ್ಯವಿದ್ದ ಕಾಳುಮೆಣಸು ವಿಭಾಗಕ್ಕೆ ಹಾಕಿದರೆ, 'ಪ್ರಮೋಷನ್ ಕೊಟ್ಟರೆ ರಾಗಿ ಸಂಶೋಧನೆಯಲ್ಲೇ ಕೊಡಿ. ಅದೇ ನನ್ನ ಉಸಿರು. ಇಲ್ಲವಾದರೆ ಬಡ್ತಿಯೇ ಬೇಡ' ಎಂದಿದ್ದರು!

ಲಕ್ಷ್ಮಣಯ್ಯನವರ ಪ್ರತಿಭೆಯಿಂದ ಕೃಷಿಕ್ಷೇತ್ರಕ್ಕೆ ಅಸಾಧಾರಣ ಕೊಡುಗೆ ಸಿಗುತ್ತದೆ ಎಂದು ಬಲ್ಲ ಕೃಷಿ ವಿಶ್ವವಿದ್ಯಾಲಯದ ಉನ್ನತ ಅಧಿಕಾರಿಗಳಾಗಿದ್ದ ಡಾ.ಮಲ್ಲೇರಾಜೇಅರಸು ಅವರು, ಅವರಿಗೆ ಇಂಗ್ಲೆಂಡಿನಲ್ಲಿ ಫೆಲೋಷಿಪ್ ಸಿಗುವಂತೆ ಮಾಡಿ ಉನ್ನತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿದ್ದರು. ಆಗ ಲಕ್ಷ್ಮಣಯ್ಯ ಅವರು, 'ಅದು ಕೋಲ್ಡ್ ಕಂಟ್ರಿ ಸರ್. ಇಂಗ್ಲೆಂಡಿನಲ್ಲಿ ರಾಗಿ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ನನಗೆ ಡಿಗ್ರಿ, ಶಿಷ್ಯವೇತನ ಏನೂ ಬೇಡ' ಎಂದು ವಿನಯದಿಂದಲೇ ತಿರಸ್ಕರಿಸಿದ್ದರು. ಅಲ್ಲದೆ ಇಂಟರ್‌ಮೀಡಿಯಟ್ ಓದುವಾಗ ತಮ್ಮ ಜೊತೆಗಾರರಾಗಿದ್ದ, ಆಗಿನ ಕೃಷಿಮಂತ್ರಿ ಬಿ.ರಾಚಯ್ಯನವರನ್ನು ಖುದ್ದು ಭೇಟಿ ಮಾಡಿ, 'ನಾನು ಇಂಗ್ಲೆಂಡಿಗೆ ಹೋಗುವುದಿಲ್ಲ. ನನ್ನ ಉಸಿರಿರುವತನಕ ರಾಗಿ ಕ್ಷೇತ್ರದಲ್ಲಿಯೇ ಮುಂದುವರಿಯಲು ಅವಕಾಶ ಕೊಡಿ' ಎಂದು ಕೇಳಿಕೊಂಡಿದ್ದರು.

ಅಮೆರಿಕದ ರಾಕ್‌ಫೆಲ್ಲರ್ ಸಂಸ್ಥೆಯು ಪ್ರಪಂಚದ ವಿವಿಧ ದೇಶಗಳಲ್ಲಿ ದೇಸಿ ತಳಿಗಳನ್ನು ಸಂಗ್ರಹಿಸಿ ಸಂಶೋಧನೆ ನಡೆಸಲು ಕಾರ್ಯಯೋಜನೆಯೊಂದನ್ನು ರೂಪಿಸಿತ್ತು. ಅದರ ಭಾಗವಾಗಿ ಆಫ್ರಿಕಾದಿಂದ ರಾಗಿಯ 900 ತಳಿಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಕಳುಹಿಸಲು ಕುಲಪತಿ ಕೆ.ಸಿ.ನಾಯಕ್ ಅವರನ್ನು ಸಂಪರ್ಕಿಸಿತ್ತು. ಹಿರಿಯರಾಗಿ ರಾಗಿ ತಳಿತಜ್ಞ ಮಲ್ಲಣ್ಣ ಅವರಿದ್ದರೂ ಹುದ್ದೆಯಲ್ಲಿ ಕಿರಿಯ ಸಸ್ಯ ವಿಜ್ಞಾನಿಯಾಗಿದ್ದ ಲಕ್ಷ್ಮಣಯ್ಯ ಅವರ ಹೆಸರಿಗೆ ಆ ತಳಿಗಳು ಬರುವಂತೆ ಕುಲಪತಿಯವರು ವ್ಯವಸ್ಥೆ ಮಾಡಿದ್ದರು.

ಅಮೆರಿಕದಿಂದ ಜಾಯಿಕಾಯಿ ಪೆಟ್ಟಿಗೆಯಲ್ಲಿ ಬಂದ ಆ ತಳಿಗಳನ್ನು ದೇವರಿಗೆ ಸಮಾನವೆಂದು ಪರಿಗಣಿಸಿದ ಲಕ್ಷ್ಮಣಯ್ಯ ಅವರು, ಮಂಡ್ಯ ವಿ.ಸಿ.ಫಾರಂನಲ್ಲಿ ಹಗಲು ರಾತ್ರಿ ಎನ್ನದೆ ಕೈಯ್ಯಾರೆ, ಮನಸಾರೆ ತೀವ್ರವಾಗಿ ಹಚ್ಚಿಕೊಂಡು ಎಲ್ಲವನ್ನೂ ವಿಂಗಡಿಸಿಕೊಂಡು, ತಲ್ಲೀನರಾಗಿ ತಳಿ ಕಟ್ಟುತ್ತಾ ಜೋಪಾನ ಮಾಡಿದರು.

'ಚೆಂದುಳ್ಳಿ ಹೆಣ್ಣಿಗೆ ಒಡವ್ಯಾಕೆ ಹೊಸರಾಗಿ ಹಿಟ್ಟೀಗೆ ಹೆಸರ್‍ಯಾಕೆ' ಎಂಬ ಜಾನಪದ ಲೋಕದ ಮಾತಿನ ಮೂಲಕ ಸಾಂಸ್ಕೃತಿಕ ಅನನ್ಯತೆಯನ್ನು ಪಡೆದಿರುವ, ವೈಜ್ಞಾನಿಕವಾಗಿ ಅಕ್ಕಿಗಿಂತ ಹತ್ತಾರುಪಟ್ಟು ಪ್ರೋಟೀನ್, ನಾರಿನಂಶ, ಕಬ್ಬಿಣಾಂಶ, ಕ್ಯಾಲ್ಸಿಯಂ, ಸೋಡಿಯಂ ಖನಿಜಗಳನ್ನು ಒಳಗೊಂಡಿರುವ, ಪ್ರಪಂಚದ ಮಿಲೆಟ್ ಗುಂಪಿನ ಬೆಳೆಗಳಲ್ಲಿ ಜೋಳ ಮತ್ತು ಸಜ್ಜೆಯ ನಂತರದ ಸ್ಥಾನ ಗಳಿಸಿರುವ ರಾಗಿಯನ್ನು ಇಡೀ ಪ್ರಪಂಚದಲ್ಲಿ ಲಕ್ಷ್ಮಣಯ್ಯನವರಷ್ಟು ಹಚ್ಚಿಕೊಂಡವರಿಲ್ಲ.

ಋತುಮಾನಗಳಿಗೆ ಅನುಗುಣವಾದ, ವಾಯುಮಾನಗುಣಕ್ಕೆ ಅನುಗುಣವಾದ ತಳಿಗಳನ್ನು ಲಕ್ಷ್ಮಣಯ್ಯನವರು ಕಂಡು ಹಿಡಿದರು. ತಾವು ನಿವೃತ್ತಿಯಾಗುವವರೆಗೆ ಆಫ್ರಿಕಾ ಮತ್ತು ಇಂಡಿಯಾದ ರಾಗಿಗಳಲ್ಲಿ ಆನುವಂಶಿಕವಾಗಿ ಅಂತರವಿರುವುದನ್ನು ಹೆಜ್ಜೆಹೆಜ್ಜೆಗೂ ಗಾಢವಾಗಿ ಅಧ್ಯಯನ ಮಾಡಿ, ಇಂಡಿಯಾ ಮತ್ತು ಆಫ್ರಿಕಾದ ತಳಿಗಳನ್ನು ಬೆಸೆದು ಸಮ್ಮಿಲನಗೊಳಿಸಿ, ಸಂಕರಗೊಳಿಸಿ ಅಪಾರ ಶ್ರಮದಿಂದ ಕೆಂಪುರಾಗಿ, ಕಪ್ಪುರಾಗಿ ತಳಿಗಳನ್ನು ಸಹ ಕಂಡುಹಿಡಿದರು. ಇಂಡಿಯಾ-ಆಫ್ರಿಕಾ ಈ ಎರಡು ದೇಶಗಳಿಗೂ ನ್ಯಾಯಯುತವಾಗಿ ಸಲ್ಲಬೇಕಾಗಿರುವುದನ್ನು ಚಿಂತಿಸಿ 'ಇಂಡಾಫ್' ಎಂದು ಹ್ರಸ್ವಗೊಳಿಸಿ, ಆ ತಳಿಗಳಿಗೆ 'ಇಂಡಾಫ್' ರಾಗಿ ಎಂದು ಹೆಸರಿಸಿದರು. ಈ ತಳಿಗಳು ರಾಗಿ ಪ್ರಪಂಚದಲ್ಲಿ ಅಚ್ಚಳಿಯದೆ ಉಳಿದು ರಾಗಿ ಕ್ರಾಂತಿಗೆ ಕಾರಣವಾದವು.

ಪ್ರಪಂಚದ ರೈತಾಪಿಲೋಕಕ್ಕಂತೂ ಈ ರಾಗಿ ತಳಿಗಳು ಸಂಜೀವಿನಿಯಾಗಿ ಕಂಡವು. ಲಕ್ಷ್ಮಣಯ್ಯನವರು ತಾವು ಕಂಡು ಹಿಡಿದ ಈ ರಾಗಿ ತಳಿಗಳಿಗನುಗುಣವಾಗಿ ಇಂಡಾಫ್-1, 2, 3, 4, 5, 6, 7, 8, ಹೀಗೆ ಹೆಸರಿಡುತ್ತ ಹೋದರು. ಉತ್ತಮ ನೀರಾವರಿಯಲ್ಲಿ ಇಂಡಾಫ್-5 ಎಕರೆಗೆ 65 ಕ್ವಿಂಟಲ್ ಬೆಳೆದು ದಾಖಲೆಯನ್ನು ನಿರ್ಮಿಸಿತು.

ಪಕ್ಕಾ ಗಾಂಧಿವಾದಿಯಾಗಿದ್ದ ಲಕ್ಷ್ಮಣಯ್ಯನವರು ಬಿರುದುಬಾವಲಿಗಳಿಗೆ ಹಾತೊರೆಯುವ ಪ್ರವೃತ್ತಿಯವರಾಗಿರಲಿಲ್ಲ. ಎರಡು ಸಲ ಕರ್ನಾಟಕ ಸರ್ಕಾರವು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿದೆ. ತನ್ನ ಆವರಣದಲ್ಲಿ ಲಕ್ಷ್ಮಣಯ್ಯನವರ ಪ್ರತಿಮೆಯನ್ನು ಅನಾವರಣಗೊಳಿಸಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಆಗಿನ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ಘಟಿಕೋತ್ಸವಕ್ಕೆ ಆಹ್ವಾನಿಸಲು ಹೋಗಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉನ್ನತ ಅಧಿಕಾರಿ ವರ್ಗದವರು, ವಿಶ್ವವಿದ್ಯಾಲಯದ ಪ್ರಾಮುಖ್ಯತೆಯ ಬಗ್ಗೆ ಮಾಹಿತಿ ನೀಡುತ್ತಿದ್ದರಂತೆ, ಕಲಾಂ ಸಾಹೇಬರು ತಕ್ಷಣಕ್ಕೆ ಏನೂ ಪ್ರತಿಕ್ರಿಯೆ ನೀಡದೆ, ಇಂಟರ್‌ನೆಟ್ ನೋಡಿ, 'ಏನ್ರೀ ನಿಮ್ಮ ಯೂನಿವರ್ಸಿಟಿ ಇಂಡಿಯಾದ ಎರಡನೇ ಹೆಸರಾಂತ ಯೂನಿವರ್ಸಿಟಿ ಅಂತೀರಿ, ವೆಬ್‌ಸೈಟ್ ಅಪ್‌ಡೇಟ್ ಆಗಿಲ್ಲ; ರಾಗಿಲಕ್ಷ್ಮಣಯ್ಯನವರ ಫೋಟೊ ಇಲ್ಲ. ಮೊದಲು ಹೋಗಿ ಸರಿ ಮಾಡಿಕೊಂಡು ಬನ್ನಿ' ಎಂದು ಹೇಳಿ ಕಳುಹಿಸಿದ್ದರಂತೆ.


ಸನ್ಮಾನಗಳಿಗೆ ಕೊರಳೊಡ್ಡುವುದರಿಂದ ಎಂದೂ ಗಾವುದ ದೂರವಿದ್ದ ಪಿ.ಲಂಕೇಶ್ ಅವರು, ಅಪರೂಪಕ್ಕೆ 1988ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ವತಿಯಿಂದ ರಾಗಿಲಕ್ಷ್ಮಣಯ್ಯನವರಿಗೆ ಸನ್ಮಾನ ಸಮಾರಂಭ ಏರ್ಪಡಿಸಿದ್ದಾಗ ಆ ಸಮಾರಂಭದಲ್ಲಿ ಭಾಗಿಯಾಗಿ, ಅವರ ಸಾಧನೆಯ ಬಗ್ಗೆ ಮೆಚ್ಚಿ ಮಾತನಾಡಿರುವುದು ಬಹು ಹೆಮ್ಮೆಯ ಸಂದರ್ಭವೇ ಆಗಿದೆ.

ರಾಗಿ ತಳಿ ವಿಜ್ಞಾನವನ್ನು ಒಂದು ಕಲೆಯಾಗಿ ಅನುಭವಿಸಿ, ರಾಗಿಯ ನರನಾಡಿಗಳನ್ನು, ಹೃದಯಬಡಿತವನ್ನು ಅದರ ಕರುಳಾಗಿ ಮಿಡಿದು ಪ್ರೀತಿ ಸ್ಪರ್ಶದಿಂದ, ಸಂಶೋಧನೆ ನಡೆಸಿದ ರಾಗಿ ಕರ್ಮಯೋಗಿ ಲಕ್ಷ್ಮಣಯ್ಯನವರು 1993ರ ಮೇ 14ರಂದು ರಾಗಿ ಪ್ರಪಂಚದಿಂದ ಶಾಶ್ವತವಾಗಿ ಕಣ್ಮರೆಯಾದರು. 'ನನ್ನ ದೇಹವನ್ನು ಊಳುವಾಗ ಎದೆಯ ಮೇಲೆ ಹಿಡಿ ತುಂಬ ರಾಗಿಯನ್ನಿರಿಸಿ ಮಣ್ಣು ಮುಚ್ಚಿಬಿಡಿ' ಎನ್ನುವುದು ಅವರ ಕೊನೆಯ ಆಸೆ. ಅವರದು ಎಂಥಾ ರಾಗಿ ಮೋಹ, ಎಂಥಾ ರಾಗಿ ಕರುಳು ಎನ್ನುವುದು ಇದರಿಂದ ಗೊತ್ತಾಗುತ್ತದೆ. ಪ್ರಪಂಚದ ಕೃಷಿಕ್ಷೇತ್ರದಲ್ಲಿ ಅಪಾರ ಸಾಧನೆಗೈದ ಮಹನೀಯರಿದ್ದಾರೆ. ಆದರೆ ಅವರ್‍ಯಾರೂ ಒಂದು ಧಾನ್ಯದ ಹೆಸರಿನಲ್ಲಿ ಹೆಸರಾದವರಲ್ಲ. ಮುಗ್ಧತೆಯ ರೂಪಕದಂತಿದ್ದ ರಾಗಿಲಕ್ಷ್ಮಣಯ್ಯ ಅವರಿಗೆ ಆ ಒಂದು ಅಪರೂಪದ ಖ್ಯಾತಿ ಸಿಕ್ಕಿರುವುದು ಪ್ರಕೃತಿ ದ್ಯೋತಕವೇ ಆಗಿದೆ. ❖

ಚಿರತೆ ಬೇಟೆಯ ಹೆಜ್ಜೆ...



ದೊಡ್ಡ ಸೇತುವೆಯುದ್ದಕ್ಕೂ ಕಂದಿಗೆ ಹಾಕಿರುವ ಸ್ಲೀಪರುಗಳ ಮೇಲೆ ಕೆನೆತ್‌ನಂತೆಯೇ ಒಂದೊಂದೇ ಹೆಜ್ಜೆಯಿಡುತ್ತಾ, ಕೆಳಗಿನ ಪ್ರಪಾತ ಕಂಡು ಹೆದರುತ್ತಾ...



ಕೆನೆತ್ ಮತ್ತು ಅಲೀಮ್ ಅವರು 'ಗೊತ್ತು ಕುಳಿತು' ಚಿರತೆಯನ್ನು ಕೊಂದ ಸುರಂಗದ ಬಾಯಿಯ ಮೇಲ್ಭಾಗ



ಬಂಗಲೆಯ ದಕ್ಷಿಣ ದಿಕ್ಕಿನಲ್ಲಿ ಸಿಕ್ಕ ಮಿಸ್‌ಛೀಫ್‌ನ ಗೋರಿ

8ನೇ ಪುಟದಿಂದ...

ನಾವು ಅತೀವ ಆಸಕ್ತಿಯಿಂದ ನೋಡಬಯಸಿದ್ದು 'ಮಿಸ್‌ಛೀಫ್'. 1911ರಲ್ಲಿ ಬ್ರಿಟಿಷ್ ಅಧಿಕಾರಿಯೊಬ್ಬ ಇಲ್ಲಿ ವಾಸ್ತವ್ಯ ಹೂಡಿದ್ದಾಗ ಆತನ ನಾಯಿ 'ಮಿಸ್‌ಛೀಫ್' ಮೇಲೆ ಚಿರತೆಯೊಂದು ದಾಳಿ ಮಾಡಿತ್ತು. ಅವತ್ತು ಆ ಅಧಿಕಾರಿ ತನ್ನ ನಾಯಿಯನ್ನು ಉಳಿಸಲು ಬಂದೂಕಿನಿಂದ ಗುಂಡು ಹಾರಿಸಿದಾಗ, ಚಿರತೆ ಜತೆಗೆ ನಾಯಿಯೂ ಬಲಿಯಾಗಿತ್ತು. ಆ ದುಃಖದ ನೆನಪಿನಲ್ಲಿ ಅದನ್ನು ಹೂಳಿ, ಗೋರಿ ನಿರ್ಮಿಸಿದ್ದ. ಅದರ ಮೇಲೆ 'MISCHIEF, LITTLE SHADOW A FRIEND 21.8.1911' ಎಂದು ಬರೆಸಿದ.

ಬಂಗಲೆಯ ದಕ್ಷಿಣ ಭಾಗಕ್ಕಿದೆ ಎಂಬ ಮಾಹಿತಿಯನ್ನು ಹಿಡಿದು, ಹುಡುಕಾಟ ನಡೆಸಿದ ನಿಮಿಷದಲ್ಲೇ ಗೋರಿಯೊಂದು ಕಾಣಿಸಿತು. ತುಸು ಶಂಕೆಯಿಂದ ಅದರ ಮೇಲಿದ್ದ ತರಗೆಲೆಗಳನ್ನು ಸರಿಸಿದಾಗ ಶಿಲೆಯ ಮೇಲಿನ ಬರಹ ಗೋಚರಿಸಿತು! ಶತಮಾನಗಳಷ್ಟು ಹಳೆಯದಾದ ನೆನಪುಗಳ ಜತೆಗೆ ಅಲೀಮ್ ತಂಗಿಯ ಮಗಳು 'ಪ್ಯಾರಿ' ಕೂಡ ಕಾಣಿಸಿಕೊಂಡಳು.

ಪ್ರವಾಸಿ ಮಂದಿರದ ಮೇಟಿ ಅಲೀಮ್ ಖಾನ್‌ಗೆ ಇಬ್ಬರು ಪತ್ನಿಯರು. ಜತೆಗೆ, ಗಂಡನನ್ನು ಕಳೆದುಕೊಂಡ ಅಲೀಮ್‌ನ ತಂಗಿ ಅದೇ ಮನೆಗೆ ಬಂದಳು. ಮಿಸ್‌ಛೀಫ್ ಹಾಗೂ ಗೋರಿಯ ಕಥೆ ಕೇಳಿದ್ದ ಅಲೀಮ್‌ನ ಸೊಸೆ ಪ್ಯಾರಿ, ನಿತ್ಯವೂ ಕಾಡಿನಿಂದ ಹೂಗಳನ್ನು ತಂದು ಗೋರಿ ಮೇಲೆ ಇಡುತ್ತಿದ್ದಳು. ಒಂದು ಇಳಿಸಂಜೆ ಹೀಗೆ ಹೂವು ಇಡಲು ಹೋದ ಪ್ಯಾರಿಯನ್ನು ನರಭಕ್ಷಕ ಚಿರತೆ ಹೊತ್ತೊಯ್ದಿತ್ತು. ಆ ಕ್ಷಣವೇ ಬೆಂಗಳೂರಿನಿಂದ ಹೊರಟು ದಿಗುವಮೆಟ್ಟಕ್ಕೆ ಬಂದಿಳಿದು, ಚಿರತೆಯನ್ನು ಬೇಟೆಯಾಡಲು ಹೊಂಚು ಹಾಕುತ್ತಾನೆ ಕೆನೆತ್. ರಾತ್ರಿ ಹೊತ್ತು ಈ ಗೋರಿಯ ಮೇಲೆ ಬಂದೂಕಿನೊಂದಿಗೆ ಕೂತು ಕಾಯುವ ಆತನಿಗೆ ಯಶಸ್ಸು ಸಿಗುವುದಿಲ್ಲ. ಆದರೆ ಅದೇ ಸಮಯಕ್ಕೆ ಚಂಚೂ ಯುವಕನೊಬ್ಬ ರೈಲಿನ ಸುರಂಗದ ಬಾಯಿಯ ಬಳಿ ನರಭಕ್ಷಕನಿಗೆ ಬಲಿಯಾಗಿರುವ ಸುದ್ದಿ ತಿಳಿಯುತ್ತದೆ. ತನ್ನ ಯೋಜನೆ ಅಲ್ಲೇ ಕೈಬಿಟ್ಟು, ನಸುಕಿನ ಜಾವ ಅಲೀಮ್ ಜತೆ ಸೇರಿಕೊಂಡು ಯುವಕನ ಹತ್ಯೆಯಾದ ಸ್ಥಳಕ್ಕೆ ಹೊರಡುತ್ತಾನೆ. ಅಳಿದುಳಿದ ಶರೀರವನ್ನು ತಿನ್ನಲು ಬರುವ ನರಭಕ್ಷಕನನ್ನು ಹೊಂಚು ಹಾಕಿ ಬೇಟೆಯಾಡುವುದು ಕೆನೆತ್ ತಂತ್ರ.

ನಾವೂ ಆ ತಾಣದತ್ತ ಹೊರಟೆವು. ಸ್ಥಳೀಯರ ಜತೆ ದುಭಾಷಿ ಪ್ರಸಾದ್ ನಡೆಸಿದ ಸಂಭಾಷಣೆಯಿಂದ ಆ ಸುರಂಗ ನಾಲ್ಕೈದು ಕಿಲೊಮೀಟರ್ ದೂರ ಎಂಬುದು ತಿಳಿಯಿತು.

ಅಲ್ಲಿ ಚಂಚೂ ಯುವಕ ಬಲಿಯಾಗುವ ಕೆಲವು ದಿನಗಳ ಮೊದಲು ರೈಲ್ವೆ ಇಲಾಖೆಯ ಗ್ಯಾಂಗ್‌ಮನ್ ನರಭಕ್ಷಕನಿಗೆ ಆಹುತಿಯಾಗಿದ್ದ. ಅದು ನಿಲ್ದಾಣಕ್ಕೆ ಸಮೀಪವಿದ್ದ ಕೈಕಂಬದ (ಸಿಗ್ನಲ್ ಪೋಲ್) ಬಳಿ. ಅದಾಗಿ ತಿಂಗಳ ಬಳಿಕ ಇನ್ನೊಂದು ಬಲಿ. ರೈಲ್ವೆ ಇಲಾಖೆಯ ಇಬ್ಬರು ಕೆಲಸಗಾರರ ಪೈಕಿ ಒಬ್ಬನ ಕೆಲಸ ನೀರಿನ ಟ್ಯಾಂಕ್ ನಿರ್ವಹಣೆಯಾಗಿದ್ದರೆ, ಇನ್ನೊಬ್ಬನದು ಸಿಗ್ನಲ್ ಕಂಬದ ಮೇಲೇರಿ ಸೀಮೆಎಣ್ಣೆ ಹಾಕಿ, ದೀಪ ಹೊತ್ತಿಸಿ ಬರುವುದು. ಒಂದು ದಿನ ದೀಪ ಹಚ್ಚುವವನು ಕಂಬದ ಮೇಲಿನಿಂದ ಕೆಳಗೆ ಇಳಿದು ನೋಡಿದಾಗ, ಆತ ಇರಲೇ ಇಲ್ಲ! ಗಾಬರಿಯಿಂದ ಹುಡುಕಿದಾಗ, ದೂರದಲ್ಲಿ ಅರ್ಧ ಶವ ಕಂಡಿತು.

ಆ ಕೈಕಂಬ ಈಗ ಆಧುನಿಕ ರೂಪ ಪಡೆದಿದೆ. ಸೀಮೆಎಣ್ಣೆ ದೀಪದ ಬದಲಾಗಿ ವಿದ್ಯುತ್ ದೀಪ ಅಳವಡಿಕೆಯಾಗಿದೆ. ಉಳಿದಂತೆ ಅಗಾಧ ಪ್ರಮಾಣದ ಪೊದೆ ಹಾಗೆಯೇ ಉಳಿದಿದೆ. ಪಕ್ಕದಲ್ಲಿನ ನೀರಿನ ಟ್ಯಾಂಕ್ ಈಗಲೂ ಸುಸ್ಥಿತಿಯಲ್ಲಿದ್ದು, ಅದರ ಉಸ್ತುವಾರಿ ಓಬಯ್ಯ ಎಂಬ ವೃದ್ಧನದು. ಟ್ಯಾಂಕ್ ದಂಡೆಯ ಮೇಲೆ ಕುಳಿತು, ಓಬಯ್ಯನನ್ನು ಮಾತಿಗೆಳೆದೆವು. ಹುಲಿ, ಚಿರತೆಗಳು ಆಗಾಗ್ಗೆ ನೀರು ಕುಡಿಯಲು ಈ ಟ್ಯಾಂಕ್ ಹತ್ತಿರ ಬರುತ್ತಿದ್ದದ್ದನ್ನೂ, ನರಭಕ್ಷಕಗಳ ಕಾಟವನ್ನೂ ತಮ್ಮ ತಂದೆ ಬಣ್ಣಿಸುತ್ತಿದ್ದ ನೆನಪು ಅವರಲ್ಲಿ ಇತ್ತು. 'ಅಂಥ ನರಭಕ್ಷಕಗಳನ್ನು ಬ್ರಿಟಿಷರು ಬೇಟೆಯಾಡುತ್ತಿದ್ದರಂತೆ' ಎಂಬ ಮಾತು ಅವರಿಂದ ಬಂತು. ಆದರೆ ಖಚಿತವಾಗಿ ಕೆನೆತ್ ಆ್ಯಂಡರ್ಸನ್ ಹೊಡೆದುರುಳಿಸಿದ ನರಭಕ್ಷಕನ ಬಗ್ಗೆ ಏನೂ ಮಾಹಿತಿ ಇರಲಿಲ್ಲ.

ಅಲ್ಲಿಂದ 'ಕೊಲೆಗಡುಕ'ನನ್ನು ಬೇಟೆಯಾಡಿದ ಸುರಂಗಕ್ಕೆ ಚಿಕ್ಕದೊಂದು ಚಾರಣವೇ ನಡೆಯಿತು. ಅಲ್ಲಿಯವರೆಗೆ ರೈಲು ಹಳಿಗುಂಟ ನಡೆಯುವುದೊಂದು ಸಾಹಸವೇ ಸೈ. ದೊಡ್ಡ ಸೇತುವೆಯುದ್ದಕ್ಕೂ ಕಂಬಿಗೆ ಹಾಕಿರುವ ಸ್ಲಿಪರುಗಳ ಮೇಲೆ ಒಂದೊಂದೇ ಹೆಜ್ಜೆಯಿಡುತ್ತ, ಕೆಳಗೆ ಕಾಣುವ ಪ್ರಪಾತವನ್ನು ಕಂಡು ಹೆದರುತ್ತ ಉದ್ದನೆಯ ಸೇತುವೆ ದಾಟಿದೆವು (ಕೆನೆತ್ ಕೂಡ ಹೀಗೆಯೇ ದಾಟಿ, ಅದನ್ನು ಬರಹದಲ್ಲಿ ದಾಖಲಿಸಿದ್ದಾನೆ). ಒಂದೂವರೆ ತಾಸಿನ ಬಳಿಕ ಸುರಂಗ ಕಾಣಿಸಿತು. 'ಅಗೋ ಅದರ ಬಾಯಿಯ ಮೇಲ್ಭಾಗದಲ್ಲಿ ಕೆನೆತ್ ಕೂತಿದ್ದಾನೆ ನೋಡಿ; ಹಿಂದೆಯೇ ಅಲೀಮ್ ಕೂಡ ಕಾಣಿಸುತ್ತಿದ್ದಾನೆ' ಎಂದು ಪ್ರಕಾಶ್ 'ಆ ಸ್ಥಳ'ದತ್ತ ತೋರಿಸಿ ಭ್ರಮೆ ಮೂಡಿಸಿದರು!

ಚಂಚೂ ಯುವಕನನ್ನು ಅರ್ಧ ತಿಂದಿದ್ದ ನರಭಕ್ಷಕ ಮತ್ತೆ ಖಂಡಿತ ಅಲ್ಲಿಗೆ ಬರುತ್ತದೆ ಎಂಬ ನಂಬಿಕೆಯಿಂದ ಕೆನೆತ್ ಹಾಗೂ ಅಲೀಮ್ ಈ ಸುರಂಗದ ಬಳಿ ಬಂದು, 'ಗೊತ್ತು ಕೂರಲು' (ಬೇಟೆಯಾಡಲು ಹೊಂಚು ಹಾಕುವ) ಜಾಗ ಹುಡುಕುತ್ತಾರೆ. ಸುರಂಗದೊಳಗೆ ಕುಳಿತರೆ, ಹಿಂದಿನಿಂದ ಅದು ದಾಳಿ ಮಾಡಬಹುದು ಎಂದು ಊಹಿಸಿ, ಅದರ ಬಾಯಿಯ ಮೇಲ್ಭಾಗದಲ್ಲಿ ಕಲ್ಲು ರಾಶಿ ಮಾಡಿ, ಚಿಕ್ಕ ಕೋಟೆ ಕಟ್ಟಿಕೊಂಡು ತಲೆ ಇಳಿಜಾರು ಮಾಡಿಕೊಂಡು ಕಾಯಲು ಶುರು ಮಾಡುತ್ತಾರೆ. ನಿಧಾನವಾಗಿ ಕತ್ತಲು ಕವಿಯುತ್ತದೆ.

ಶವ ಭಕ್ಷಿಸಲು ಸುರಂಗದೊಳಗಿನಿಂದ ಚಿರತೆ ಬರುತ್ತದೆ ಎಂದು ಕಾಯುತ್ತಿದ್ದ ಕೆನೆತ್‌ಗೆ ಗಾಬರಿ ಮೂಡಿಸಿದ್ದು ನರಭಕ್ಷಕ ಬೆಟ್ಟದ ಮೇಲಿನಿಂದ ತಮ್ಮ ಮೇಲೆ ಜಿಗಿದಾಗಲೇ! ಆತ ಬರೆಯುತ್ತಾನೆ: 'ಮುಂದೇನಾಯ್ತೆಂದು ಸ್ಪಷ್ಟವಾಗಿ ಗೊತ್ತಿಲ್ಲ. ಅಲೀಮ್ 'ಹೋ' ಎಂದು ಕೂಗಿ ನೆಗೆದು ಹಾರಿದ. ನಾನು ಟಾರ್ಚ್ ಹಾಕಿ, ನೆಗೆಯುತ್ತಿದ್ದ ಚಿರತೆಯ ಬಾಯೊಳಗೇ ಗುಂಡು ಹಾರಿಸಿ ಪಕ್ಕಕ್ಕೆ ಉರುಳಿದೆ. ಚಿರತೆ ಭಯಂಕರವಾಗಿ ಗರ್ಜಿಸಿ, ನಮ್ಮಿಬ್ಬರ ನಡುವೆ ಉರುಳಿ ಸುರಂಗದ ಮೇಲಿನಿಂದ ಕಂಬಿಯ ಮೇಲೆ ದೊಪ್ಪನೆ ಬಿತ್ತು. ಇವೆಲ್ಲ ಅಸ್ಪಷ್ಟ. ಆಗ ಸಂಭವಿಸಿದ್ದು ದೊಡ್ಡ ಗೊಂದಲ ಮಾತ್ರ.'

ಮಟಮಟ ಮಧ್ಯಾಹ್ನ ಆ ಜಾಗದಲ್ಲಿ ನಿಂತು, ಕೆನೆತ್ ವಿವರಣೆ ನೆನೆಸಿಕೊಂಡಂತೆಲ್ಲ ಮೈ ಜುಂ ಎಂದಿತು. ಬೆಟ್ಟವನ್ನು ಭೇದಿಸಿದ್ದ ಸುರಂಗದ ಆ ತುದಿಯ ಬೆಳಕಲ್ಲಿ ಏನೋ ಕದಲಿದಂತಾಗಿ ಅದು ಮತ್ತೊಂದು ನರಭಕ್ಷಕ ಇರಬಹುದೇ ಎಂಬ ಭೀತಿಯೂ ಮೂಡಿತು. ಆದರೆ ನೆಲ ನಡುಗಿಸುತ್ತ ಪ್ಯಾಸೆಂಜರ್ ರೈಲೊಂದು ಅತ್ತಲಿಂದ ಈ ಕಡೆ ಧಾವಿಸುತ್ತಿತ್ತು. ಅವತ್ತು ಮಧ್ಯರಾತ್ರಿ ಕಂಬಿಯ ಪಕ್ಕದಲ್ಲಿ ಸತ್ತ ಚಿರತೆಯ ಎದುರಿನಲ್ಲಿ ಇಬ್ಬರು ಟೀ ಕುಡಿಯುತ್ತಿರುವುದನ್ನು ನೋಡಿ ಪ್ಯಾಸೆಂಜರ್ ರೈಲಿನ ಚಾಲಕ ಅಚ್ಚರಿಪಟ್ಟಿದ್ದ. ರೈಲುನಿಲ್ಲಿಸಿ, ಸತ್ತ ಚಿರತೆಯನ್ನೂ ಅಲೀಮ್- ಕೆನೆತ್‌ರನ್ನೂ ದಿಗುವಮೆಟ್ಟಕ್ಕೆ ಕರೆದೊಯ್ಯಲು ಸಂತಸದಿಂದ ಒಪ್ಪಿದ್ದ.

ಆ ಘಟನೆ ನಡೆದ ಎಷ್ಟೋ ದಶಕಗಳ ಬಳಿಕ, ನರಭಕ್ಷಕ ನಡೆಸಿದ ಅಟಾಟೋಪದ ತಾಣಗಳನ್ನೂ ಅದನ್ನು ಕೆನೆತ್ ಹೊಡೆದುರುಳಿಸಿದ ಜಾಗವನ್ನೂ ನೋಡಬಂದ ನಮ್ಮನ್ನು ಈ ಪ್ಯಾಸೆಂಜರ್ ರೈಲಿನ ಚಾಲಕ ಶಂಕೆಯಿಂದ ಗಮನಿಸಿದ. ರೈಲು ನಿಲ್ಲಿಸಿ ವಿಚಾರಿಸಿ, ಇಲ್ಲಿಗೆ ಬಂದಿದ್ದು ಯಾಕೆಂದು ತಿಳಿದಿದ್ದರೆ ಆತನಲ್ಲಿ ಯಾವ ಭಾವನೆ ಮೂಡುತ್ತಿತ್ತೋ?! ❖

ಮುನ್ನೋಟ 16-05-2021 ರಿಂದ 22-05-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆರ್ಥಿಕ ಸಂಕಷ್ಟಗಳು ದೂರವಾಗಿ ಸ್ವಲ್ಪ ನೆಮ್ಮದಿಯನ್ನು ಕಾಣುವಿರಿ. ಹೊಸ ರೀತಿಯ ಸಂಪಾದನೆಯ ಮೂಲದತ್ತ ಗಮನ ಹರಿಸುವಿರಿ. ಹಿರಿಯ ಅಧಿಕಾರಿಗಳ ಭೇಟಿಯಿಂದ ಕೆಲಸಗಳಲ್ಲಿ ಇದ್ದ ಅಡಚಣೆಗಳು ನಿವಾರಣೆಯಾಗಿ ಕೆಲಸಗಳು ಮುನ್ನಡೆಯುತ್ತವೆ. ಕುಶಲಕರ್ಮಿಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ನುರಿತ ತಂತ್ರಜ್ಞರಿಗೆ ಬೇಡಿಕೆ ಬಂದು ಹೆಚ್ಚಿನ ಸಂಭಾವನೆ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬಹಳ ಪರಿಶ್ರಮ ವಹಿಸಿದ್ದ ಕೆಲಸಗಳಲ್ಲಿ ಈಗ ಫಲಿತಾಂಶಗಳು ಬರಲಾರಂಭಿಸುತ್ತವೆ. ವ್ಯವಹಾರದಲ್ಲಿ ಇದ್ದ ಅವಿಶ್ವಾಸಗಳು ನಿವಾರಣೆಯಾಗಿ ಪರಸ್ಪರ ವಿಶ್ವಾಸ ವೃದ್ಧಿಯಾಗುತ್ತದೆ. ಅನಿರೀಕ್ಷಿತ ಬೆಳವಣಿಗೆಗಳಿಂದ ವ್ಯವಹಾರದ ವಿಸ್ತರಣೆ ಆಗುವ ಸಂದರ್ಭಗಳಿವೆ. ನಾಸ್ತಿಕ ಸ್ವಭಾವದಿಂದ ಆಸ್ತಿಕ ಸ್ವಭಾವಕ್ಕೆ ಬದಲಾಗಲು ಯತ್ನಿಸುವಿರಿ. ಧಾರ್ಮಿಕ ಮುಖಂಡರಿಂದ ಹೊಗಳಿಕೆಯನ್ನು ಪಡೆಯುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮನಸ್ಸಿನಲ್ಲಿ ಬಹಳ ಹುಮ್ಮಸ್ಸು ಇರುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ನಿಮ್ಮ ಮೇಲೆ ವಿಶೇಷ ಮಮಕಾರ ಹೊಂದಿರುವವರು ಅಧಿಕ ಸಹಾಯ ಮಾಡುತ್ತಾರೆ. ಭೂಮಿಯ ವ್ಯವಹಾರಕ್ಕೆ ಸಂಬಂಧಪಟ್ಟ ಕೆಲಸಗಳು ಶೀಘ್ರ ಗತಿಯಲ್ಲಿ ಆಗುತ್ತವೆ. ಹೆಣ್ಣು ಮಕ್ಕಳ ಆರೋಗ್ಯದಲ್ಲಿ ಗಮನಾರ್ಹ ಚೇತರಿಕೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮ ಅತ್ಯಗತ್ಯ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕಲಾತ್ಮಕ ಜೀವನವನ್ನು ರೂಢಿಸಿಕೊಳ್ಳಲು ಈಗ ಉತ್ತಮಕಾಲ. ಕೃಷಿಕರಿಗೆ ಆದಾಯದಷ್ಟೇ ಖರ್ಚು ಇರುತ್ತದೆ. ಪತ್ರಿಕಾ ಪ್ರತಿನಿಧಿಗಳಿಗೆ ಸಾಮಾಜಿಕ ಸಂಸ್ಥೆಗಳಿಂದ ಗೌರವ ಪ್ರಾಪ್ತಿಯಾಗುತ್ತದೆ. ತಂತ್ರಜ್ಞರು ವಿವಿಧ ಪ್ರಯೋಗಗಳಲ್ಲಿ ಪ್ರಗತಿಯನ್ನು ಸಾಧಿಸುವರು. ನಿರೀಕ್ಷಿತ ಮಟ್ಟದ ಸಾಧನೆಯನ್ನು ಮಾಡಿ ಹಣವನ್ನು ಉಳಿತಾಯ ಮಾಡುವಿರಿ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆಯನ್ನು ಕಾಣಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವೃತ್ತಿಯಲ್ಲಿ ಪ್ರತಿಸ್ಪರ್ಧಿಗಳ ಸವಾಲನ್ನು ಎದುರಿಸಿ ಗೆಲ್ಲಲೇಬೇಕಾದ ಅನಿವಾರ್ಯತೆ ಇದೆ. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅಭ್ಯಾಸ ಮಾಡುವುದು ಉತ್ತಮ. ಕೆಲವು ಸತ್ಕಾರ್ಯಗಳಲ್ಲಿ ಭಾಗವಹಿಸುವಿರಿ. ಹಿರಿಯರ ಮಾತನ್ನು ಧಿಕ್ಕರಿಸುವುದು ನಿಮಗೆ ತೊಂದರೆ ತರಬಹುದು. ಆಸ್ತಿಯನ್ನು ಖರೀದಿ ಮಾಡಲು ಈಗ ಸಕಾಲವಲ್ಲ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದುಃಖ ದುಮ್ಮಾನಗಳು ಮರುಕಳಿಸುವ ಸಾಧ್ಯತೆಗಳಿವೆ. ಮನಸ್ಸಿಗೆ ಸಂಬಂಧಪಟ್ಟ ವಿಷಯಗಳಾದರೂ ದೇಹದ ಆರೋಗ್ಯದ ಕಡೆ ಗಮನ ಇರಲಿ. ಹಣಕಾಸಿನ ವಿಷಯದಲ್ಲಿ ಎಚ್ಚರವಹಿಸಿರಿ. ಆರ್ಥಿಕ ರಂಗದಲ್ಲಿ ಬಹಳ ನಿಧಾನ ಚೇತರಿಕೆಯನ್ನು ಕಾಣಬಹುದು. ಅದಿರು ವ್ಯಾಪಾರಸ್ಥರಿಗೆ ಉತ್ತಮ ಲಾಭವಿರುತ್ತದೆ. ಕೆಲವು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನಿರೀಕ್ಷಿತ ಲಾಭವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಮಕ್ಕಳಿಂದ ನಿಮಗೆ ಸಹಾಯ ದೊರೆಯುತ್ತದೆ. ಔಷಧಿ ತೆಗೆದುಕೊಳ್ಳುವಾಗ ಮುಂಜಾಗ್ರತೆ ಅಗತ್ಯ. ಭವಿಷ್ಯದ ಬಗ್ಗೆ ಅತಿಯಾದ ಚಿಂತನೆ ಹಾಗೂ ಅತಿಯಾಗಿ ಹಣಕೂಡಿಡುವುದು ನಿಮಗೆ ತಲೆನೋವು ತರಬಹುದು. ಕುಟುಂಬ ಸದಸ್ಯರೊಡನೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ನಿಮಗೆ ಅನುಕೂಲ ತರುತ್ತದೆ. ಪತ್ರಿಕಾ ವರದಿಗಾರರು ಉತ್ಪ್ರೇಕ್ಷಿತ ವರದಿಯನ್ನು ಮಾಡದಿರುವುದು ಉತ್ತಮ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಹಿರಿಯ ಅಧಿಕಾರಿಗಳ ಸಹಾಯದಿಂದ ಕೆಲಸಕಾರ್ಯಗಳಲ್ಲಿ ಪ್ರಗತಿಯಾಗಲಿದೆ. ನಿಮ್ಮ ಪಾಡಿಗೆ ನೀವು ಇದ್ದರೂ ವಿವಾದಗಳು ನಿಮ್ಮನ್ನು ಸುತ್ತುವರಿಯುತ್ತವೆ, ಈ ಬಗ್ಗೆ ಎಚ್ಚರದಿಂದಿರಿ. ಆದರೆ ಆತ್ಮಸ್ಥೈರ್ಯ ಕಳೆದುಕೊಳ್ಳಬೇಡಿ. ಸ್ವಲ್ಪಕಾಲದ ನಂತರ ಎಲ್ಲವೂ ಸರಿಯಾಗುತ್ತದೆ. ವಾಹನ ಚಾಲಕರು ಸ್ವಲ್ಪ ಜಾಗ್ರತೆ ವಹಿಸಬೇಕಾಗುತ್ತದೆ.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಕ್ರೀಡಾಪಟುಗಳಿಗೆ ಸರ್ಕಾರದಿಂದ ಸೂಕ್ತ ಸಹಾಯ ಮತ್ತು ತರಬೇತಿ ದೊರೆಯುತ್ತದೆ. ಬ್ಯಾಂಕ್ ಸಾಲಕ್ಕಾಗಿ ಓಡಾಡುತ್ತಿದ್ದವರಿಗೆ ಈಗ ಸಾಲ ಸಿಗುವ ಸಾಧ್ಯತೆಗಳಿವೆ. ಹೊಸ ಪಾಲುದಾರಿಕೆ ವ್ಯವಹಾರಕ್ಕಾಗಿ ಆಹ್ವಾನ ಬರುತ್ತದೆ. ಅದರ ಆಗುಹೋಗುಗಳನ್ನು ಪರಿಶೀಲಿಸಿ ಮುನ್ನಡೆಯಿರಿ. ಉದ್ಯೋಗದಲ್ಲಿ ಸ್ಥಿರತೆಯನ್ನು ಕಾಣಬಹುದು. ಕಲಾವಿದರಿಗೆ ಅನುಕೂಲಕರವಾದ ವಾತಾವರಣ ದೊರೆಯುತ್ತದೆ. ಗುಡಿಕೈಗಾರಿಕೆಯನ್ನು ಮಾಡುವವರಿಗೆ ಸಾಕಷ್ಟು ಸಹಾಯಧನ ಒದಗಿಬರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಗಮನಹರಿಸುವಿರಿ. ಹಣಕಾಸಿನ ಬಗ್ಗೆ ಅತಿಯಾದ ಚಿಂತೆ ಬೇಡ. ಕೈಗಾರಿಕೋದ್ಯಮಿಗಳಿಗೆ ಇದ್ದ ಕಾರ್ಮಿಕರ ಸಮಸ್ಯೆಗಳು ದೂರವಾಗುತ್ತವೆ. ಹದಗೆಟ್ಟ ಹಿರಿಯರ ಆರೋಗ್ಯ ಸುಧಾರಿಸುತ್ತದೆ. ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸರಿಯಾಗಿ ಆಲೋಚನೆ ಮಾಡಿರಿ. ಕೆಲವು ಹಿರಿಯರಿಗೆ ಬೆನ್ನುನೋವು ಕಾಡಬಹುದು. ವೃತ್ತಿಯಲ್ಲಿ ನಿಮ್ಮ ಪರಿಶ್ರಮಕ್ಕೆ ಬೆಲೆ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರಿಗೆ ಗೌರವ ಸನ್ಮಾನಗಳು ದೊರೆಯುವ ಸಾಧ್ಯತೆಗಳಿವೆ. ಹೋಟೆಲ್ ಉದ್ಯಮಿಗಳಿಗೆ ನಿಧಾನವಾಗಿ ವ್ಯಾಪಾರ ಹೆಚ್ಚುತ್ತದೆ. ಯುವಕರು ಹಣ ಸಂಪಾದನೆಗಾಗಿ ಅಡ್ಡದಾರಿ ಹಿಡಿಯುವುದು ಬೇಡ. ವಸ್ತ್ರ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಲಾಭ ಬರುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವವರಿಗೆ ಸಹಾಯ ಹರಿದು ಬರುತ್ತದೆ. ಅರಸಿ ಬಂದ ಕಾರ್ಯವನ್ನು ಮುಂದೂಡುವುದು ಬೇಡ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹಿರಿಯರ ಆರೋಗ್ಯದಲ್ಲಿ ಎಚ್ಚರಿಕೆ ಅಗತ್ಯ. ಅನಿರೀಕ್ಷಿತ ಧನಾಗಮನದ ಸಾಧ್ಯತೆ ಇದೆ. ತೈಲ ವ್ಯಾಪಾರಿಗಳಿಗೆ ವ್ಯವಹಾರ ವಿಸ್ತರಣೆಯಾಗುವ ಸಾಧ್ಯತೆಗಳಿವೆ. ಕೌಟುಂಬಿಕ ಬಿಕ್ಕಟ್ಟಿನ ಕುರಿತು ಚರ್ಚೆಯಾಗುತ್ತದೆ. ಸಂಗಾತಿಯಿಂದ ಸಾಕಷ್ಟು ಸಮಾಧಾನದ ಮಾತುಗಳು ಕೇಳಿಬರುತ್ತವೆ. ಮಕ್ಕಳಿಗಾಗಿ ಮನೆಯಲ್ಲಿ ಪುಷ್ಪಳ ಭೋಜನದ ತಯಾರಿ ನಡೆಯುತ್ತದೆ. ಕಾರ್ಮಿಕರನ್ನು ಒದಗಿಸುವ ಸಂಸ್ಥೆಗಳಿಗೆ ವ್ಯವಹಾರ ವಿಸ್ತರಣೆಯಾಗುತ್ತದೆ. ವೈದ್ಯರುಗಳಿಗೆ ಹೆಚ್ಚಿನ ಗೌರವ ದೊರೆಯುವ ಸಾಧ್ಯತೆಗಳಿವೆ.

ಪದಬಂಧ 2687



ಮೇಲಿನಿಂದ ಕೆಳಕ್ಕೆ
1. ಸುಲಭವಾದ ನಡಿಗೆ 5
2. ನಾಮಮಾತ್ರದಿಂದ ಪ್ರಚಲಿತನಾದವ 5
3. ರಸದೊಳಗೆ ತಲೆಕೆಳಕಾದ ಯುದ್ಧ 3
4. ಆಟವಾಡುವ ಸಾರ್ವತ್ರಿಕ ಸ್ಪರ್ಧೆ 4
5. ಕರುಣಾ ಸ್ವಭಾವ 4
7. ಹಿರಿಯ ಹೆಣ್ಣಿಗೆ ಅನರ್ಘ್ಯ ಪೂಸಿನ ಪಟ್ಟ 5
10. ಕೇವಲ ಕೆಲವೇ ಗಳಿಗೆಗಳು ಉಳಿಯುವ ಸಂತೋಷ ಸಂತೃಪ್ತಿ 5
11. ನೀಲಮೇಘದ ವರ್ಣದ ಹಿಂದಿ ತಾಯಿ 3
13. ಭೀಕರತೆಯ ಕಪ್ಪು ಛಾಯೆ 3
15. ಇಂಪಾಗಿ ಕೇಳಿಸುವ ಆಲಾಪನೆ 5
16. ಪ್ರಕಾಶಮಾನ ದಾರಿ 5
17. ಕಾವ್ಯಬ್ರಹ್ಮ ಬೇಂದ್ರೆಯ ಬಿರುದು 4
18. ಕೋಲು ಹಿಡಿವ ಮಿತ್ರ 4
21. ಜಿಂಕೆ ಜಾತಿಗೆ ಸೇರಿದ ಸಾರಂಗ 3

ಎಡದಿಂದ ಬಲಕ್ಕೆ
1. ನಿರ್ಧಾರಗಳಿಗೆ ಪೂರಕವಾಗಿ ಆಗಿಂದಾಗ್ಗೆ ಕಿವಿಮಾತು ಹೇಳುವವ 5
4. ಕೊಂಬೆ ಕೊಂಬೆಗೂ ಬೇರು ಬಿಡುವ ವೃಕ್ಷ 5
6. ಭಯಂಕರವಾದ ಹೋರಾಟ 5
8. ಕೊಬ್ಬಿ ಬೆಳೆದ ಗಂಡು ಕೋತಿ 3
9. ದೇಶವನ್ನು ಕಾಪಾಡಲು ರಚಿಸಿದ ನಿಯಮ ಕಟ್ಟಳೆ 5
12. ಕಸಿವಿಸಿಯಲ್ಲಿ ಕತ್ತರಿಸಿ ಜೋಡಿಸಿದ್ದು ಹಿಂದುಮುಂದಾಗಿದೆ 2
14. ಮಕಾರವನ್ನು ಮತ್ತೆ ಮತ್ತೆ ಹೇಳಿದರೆ ತಾಯಿಯ ಸೋದರ ಸಿಗುತ್ತಾನೆ 2
16. ವ್ಯಕ್ತಿ, ವಿಷಯ, ವೃಕ್ಷ ಇವುಗಳ ಏಳಿಗೆಯ ಸ್ಥಿತಿ 5
19. ಮಹಾಪ್ರಾಣದ ದುಷ್ಟ 3
20. ನೋವು, ಅಳು ಸಮುದ್ರದಂತೆ ಮಡುಗಟ್ಟಿದೆ 5
22. ಡಿಗರಿಯಿಂದ ಹೆಸರನ್ನು ಅಲಂಕರಿಸಿಕೊಂಡವ 5
23. ಕಾದಂಬರಿ ಕ್ಷೇತ್ರದಲ್ಲಿ ಗಳಗಳನೆ ಬರೆದು ಖ್ಯಾತಿ ಪಡೆದ ಪ್ರವರ್ತಕ 5

ಪದಬಂಧ ಉತ್ತರ -2686

ಮೇಲಿಂದ ಕೆಳಕ್ಕೆ
1.ಪರೀಕ್ಷೆ 2.ನರಮಾನವ 3.ನಂದಿಗ್ರಾಮ 4.ನಿರಾತಂಕ 6.ಸರಸ 8.ದಮನಕ 10.ಜನಿವಾರ 11.ಕದಂಬ 16.ನೋಟಗಾರ 17.ಮಹಾಪ್ರಾಣ 18. ನಡಿಗೆ

ಎಡದಿಂದ ಬಲಕ್ಕೆ
1.ಪವನ 3.ನಂದಿನಿ 5.ರಥಬೀದಿ 6.ಸಮೀಕ್ಷೆ 7.ಮದಕರಿ 9.ಸಮಾಜಸೇವಕ 12.ಬಸವಕಲ್ಯಾಣ 15.ಮನೋರಮ 18.ನಡುಕ 19.ಪ್ರಾಣವಾಯು 20.ರಮಣ 21.ಗಡಿಗೆ

ಶಾಸ್ತ್ರೀಜಿ... ಈ ಮಕ್ಕಳಿಗೆ ಇನ್ನು ಯಾರು ಗತಿ?

ಆಡಿಟ್ ಡಿಪಾರ್ಟ್‌ಮೆಂಟ್‌ನಲ್ಲಿ ನೌಕರಿ ಮಾಡಿ ನಿವೃತ್ತಿ ಹೊಂದಿದ ರಾಮಕೃಷ್ಣ ಶಾಸ್ತ್ರಿಗಳು ರಾಜ್ಯದ ವಿವಿಧ ಭಾಗಗಳ ಬಡ ಮಕ್ಕಳಿಗೆ ನೀಡುತ್ತಿದ್ದ ನೆರವಿನ ಲೆಕ್ಕವನ್ನು ಇಟ್ಟವರಾರು? ನೂರಾರು ವಿದ್ಯಾರ್ಥಿಗಳ ಎಂಬಿಬಿಎಸ್, ಎಂಜಿನಿಯರಿಂಗ್ ಸೇರಿದಂತೆ ಉನ್ನತ ವ್ಯಾಸಂಗದ ಕನಸು ನನಸಾಗಲು ಕಾರಣರಾಗಿದ್ದ ಈ ನಿಸ್ವಾರ್ಥ ಜೀವಿ ಇನ್ನು ನೆನಪು ಮಾತ್ರ...


ಪತ್ನಿಯೊಂದಿಗೆ ರಾಮಕೃಷ್ಣ ಶಾಸ್ತ್ರಿ

ಜಯಂತ ಕೆ.ಎಸ್.

ಕೆಲವು ದಿನಗಳ ಹಿಂದೆ ಧಾರವಾಡ ಜಿಲ್ಲೆಯ ಹಳ್ಳಿಯಿಂದ ನನ್ನ ಮೊಬೈಲಿಗೆ ಒಂದು ಕರೆ ಬಂತು. 'ಸರ್, ನಾನು ಪವಿತ್ರಾ, ಬೆಂಗಳೂರಿನ (ರಾಮಕೃಷ್ಣ) ಶಾಸ್ತ್ರಿಗಳ ಫೋನ್ ಸ್ವಿಚ್ಡ್ ಆಫ್ ಆಗಿದೆ. ಎಂಟು ದಿನದಿಂದ ಕರೆ ಮಾಡುತ್ತಿದ್ದೇನೆ. ವಾರದಲ್ಲಿ ಎರಡು ಬಾರಿಯಾದರೂ ಅವರು ಕಾಲ್ ಮಾಡಿ ನಮ್ಮ ಆರೋಗ್ಯ ಮತ್ತು ಅಭ್ಯಾಸದ ಬಗ್ಗೆ ಕೇಳುತ್ತಿದ್ದರು, ಏನಾಯಿತು ಸರ್ ಅವರಿಗೆ' ಎಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಪವಿತ್ರಾಳನ್ನು ಸಮಾಧಾನ ಮಾಡಿ, ನನಗೆ ಗೊತ್ತಿದ್ದವರೊಬ್ಬರನ್ನು ವಿಚಾರಿಸಿದಾಗ ತಿಳಿಯಿತು, ಶಾಸ್ತ್ರಿಗಳು ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆಂದು. ಪವಿತ್ರಾಳದು ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡ ಐವರು ಹೆಣ್ಣುಮಕ್ಕಳ ಕಡು ಬಡತನದ ಕುಟುಂಬ. ಈಕೆ ಶಿವಮೊಗ್ಗದಲ್ಲಿ ಸರ್ಕಾರಿ ಕೋಟಾದಲ್ಲಿ ಬಿಎಎಂಎಸ್ ಸೀಟು ಪಡೆದು ಅಂತಿಮ ವರ್ಷದಲ್ಲಿ ಕಲಿಯುತ್ತಿದ್ದಾಳೆ. ಕಳೆದ ಆರು ವರ್ಷಗಳಿಂದ ಅವಳ ಶಿಕ್ಷಣದ ವೆಚ್ಚವನ್ನೆಲ್ಲ ಶಾಸ್ತ್ರಿಗಳೇ ನೋಡಿಕೊಳ್ಳುತ್ತಿದ್ದರು. ಮಾತ್ರವಲ್ಲ, ಅವಳ ಇಬ್ಬರು ತಂಗಿಯರ ವಿದ್ಯಾಭ್ಯಾಸಕ್ಕೂ ಸಹಾಯ ಮಾಡುತ್ತಿದ್ದರು. ಅವರ ಮನೆಯಲ್ಲಿ ಯಾರಿಗೇ ಆರೋಗ್ಯ ಸರಿ ಇಲ್ಲ ಎಂದರೂ ಬೆಂಗಳೂರಿನಲ್ಲಿ ಹೋಮಿಯೋಪಥಿ ವೈದ್ಯರನ್ನು ಸಂಪರ್ಕಿಸಿ ಔಷಧಿಯನ್ನು ಕೊರಿಯರ್ ಮೂಲಕ ಕಳಿಸಿ ಕೊಡುತ್ತಿದ್ದರು. 'ಹಳ್ಳಿಗೆ ಕೊರಿಯರ್ ತಲುಪುವುದು ತಡವಾಗುತ್ತದೆ. ಹಾಗಾಗಿ ನಿಮ್ಮ ವಿಳಾಸಕ್ಕೆ ಕಳಿಸುತ್ತೇನೆ, ದಯವಿಟ್ಟು ಅವರಿಗೆ ತಲುಪಿಸಿ' ಎಂದು ಫೋನ್ ಮಾಡಿ ನನಗೆ ವಿನಂತಿಸುತ್ತಿದ್ದರು. ಖರ್ಚಿಗಾಗಿ ಅವರ ಅಕೌಂಟ್‌ಗೆ ಹಣವನ್ನೂ ಹಾಕುತ್ತಿದ್ದರು.

'ಪವಿತ್ರಾ ಬಿಎಎಂಎಸ್ ಮುಗಿಸುತ್ತಿದ್ದಾಳೆ. ಅವಳ ಹೌಸ್‌ಮನ್‌ಶಿಪ್‌ಗೆ ಸ್ವಾಮೀಜಿಯೊಬ್ಬರ ಸಹಾಯದಿಂದ ಮೈಸೂರಿನ ಪ್ರಸಿದ್ಧ ಆಸ್ಪತ್ರೆಯೊಂದರಲ್ಲಿ ವ್ಯವಸ್ಥೆ ಮಾಡಿದ್ದೇನೆ. ಅವಳ ಹೌಸ್‌ಮನ್‌ಶಿಪ್ ಮುಗಿದ ನಂತರ ಅಲ್ಲಿಯೇ ಅವಳನ್ನು ವೈದ್ಯಳನ್ನಾಗಿ ನೇಮಿಸಿಕೊಳ್ಳುವ ಭರವಸೆಯೂ ಸಿಕ್ಕಿದೆ. ಅವಳ ಜೀವನ ಸೆಟಲ್ ಆದ ಹಾಗಾಯಿತು' ಎಂದು ಫೋನ್‌ನಲ್ಲಿ ಸಂತೋಷ ಹಂಚಿಕೊಂಡಿದ್ದರು. ಕಳೆದ ಆರು ವರ್ಷಗಳಿಂದ ಪವಿತ್ರಾಳ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದರೂ ಒಮ್ಮೆಯೂ ಪರಸ್ಪರ ಭೇಟಿಯಾಗಿರಲಿಲ್ಲ. ಕೋವಿಡ್ ಕಡಿಮೆ ಆದ ಮೇಲೆ ಧಾರವಾಡಕ್ಕೆ ಬರುತ್ತೇನೆ, ಆಗ ಆ ಮಕ್ಕಳನ್ನೆಲ್ಲ ಭೇಟಿಯಾಗೋಣ ಎಂದಿದ್ದ ಶಾಸ್ತ್ರಿಗಳು, ಕೋವಿಡ್ ಕಾರಣದಿಂದಲೇ ಮೊನ್ನೆ ಕೊನೆಯುಸಿರು ಎಳೆದರು ಎಂದು ತಿಳಿಯಿತು.

'ಶಾಸ್ತ್ರಿಯವರು ಸಾಮಾನ್ಯ ಮನುಷ್ಯರಲ್ಲ. ಅವರು ನಿಜವಾಗಿಯೂ ನಮ್ಮೆಲ್ಲರ ಪಾಲಿನ ಭಗವಂತ. ಅವರನ್ನು ನಾವು ಯಾರೂ ನೋಡಿಲ್ಲ. ಆದರೂ ಅವರು ನಮಗೆ ಆರು ವರ್ಷದಿಂದ ಸಹಾಯ ಮಾಡುತ್ತಿದ್ದರು. ನಮ್ಮೆಲ್ಲರ ವಿದ್ಯಾಭ್ಯಾಸದ ಬಗ್ಗೆ ಚಿಂತಿಸುತ್ತಿದ್ದರು. ಅವರ ಆರೋಗ್ಯ ಸರಿ ಇಲ್ಲ ಎಂದಾಗ ಎಲ್ಲಾ ದೇವರಲ್ಲೂ ಅವರು ಗುಣಮುಖರಾಗಲೆಂದು ಬೇಡಿಕೊಂಡಿದ್ದೆ. ಆದರೆ ಆ ದೇವರು ಅವರನ್ನ ನಮ್ಮಿಂದ ಕಿತ್ತುಕೊಂಡು ನಮ್ಮನ್ನೆಲ್ಲ ಅನಾಥರನ್ನಾಗಿ ಮಾಡಿದ' ಎನ್ನುತ್ತಾಳೆ ಶಿವಮೊಗ್ಗದಲ್ಲಿ ಬಿಎಎಂಎಸ್ ಓದುತ್ತಿರುವ ಪವಿತ್ರಾ ದಿಂಡೂರ.

ಸ್ಮರಣೆ

ಶಾಸ್ತ್ರಿಗಳು ಸರ್ಕಾರಿ ಆಡಿಟ್ ಡಿಪಾರ್ಟ್‌ಮೆಂಟ್‌ನಲ್ಲಿ ನೌಕರಿ ಮಾಡಿ ನಿವೃತ್ತಿ ಹೊಂದಿದವರು. ಬೆಂಗಳೂರಿನಲ್ಲೇ ನಿವೃತ್ತ ಜೀವನ ನಡೆಸುತ್ತಿದ್ದ ಅವರು ರಾಜ್ಯದಾದ್ಯಂತ ನೂರಾರು ಬಡಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದರು. ತಮಗೆ ಬರುತ್ತಿದ್ದ ಪೆನ್ಷನ್ ಹಣದ ಬಹುತೇಕ ಮೊತ್ತವನ್ನು ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ವ್ಯಯಿಸುತ್ತಿದ್ದರು. 'ನಾನೂ ಬಡತನದಲ್ಲೇ ಬೆಳೆದವನು. ನನ್ನ ವಿದ್ಯಾಭ್ಯಾಸಕ್ಕೆ ಎಚ್.ನರಸಿಂಹಯ್ಯ ಸಹಾಯ ಮಾಡಿದ್ದರು. ಹಾಸ್ಟೆಲ್‌ನಲ್ಲಿ ಜಾಗ ಇಲ್ಲದ್ದರಿಂದ ತಮ್ಮ ಕೊಠಡಿಯಲ್ಲೇ ಇರಿಸಿಕೊಂಡಿದ್ದರು. ವಿದ್ಯಾಭ್ಯಾಸ ಮುಗಿಸಿ ಸರ್ಕಾರಿ ನೌಕರಿಯನ್ನೂ ಪಡೆದುಕೊಂಡೆ. ಬಡಮಕ್ಕಳ ಕಷ್ಟ ಏನು ಅಂತ ನನಗೆ ಗೊತ್ತು. ಕೈಲಾದಷ್ಟು ಮಕ್ಕಳಿಗೆ ಸಹಾಯ ಮಾಡಿ ಆ ಮೂಲಕ ನರಸಿಂಹಯ್ಯ ಅವರ ಋಣ ತೀರಿಸುತ್ತೇನೆ' ಎಂದು ತಮ್ಮನ್ನು ಪರಿಚಯಿಸಿಕೊಂಡಿದ್ದರು.

ರಾಜ್ಯದ ಎಲ್ಲ ಭಾಗಗಳ ನೂರಾರು ವಿದ್ಯಾರ್ಥಿಗಳು ಅವರ ಸಹಾಯದಿಂದ ಓದುತ್ತಿದ್ದರು. ಅವರಲ್ಲೀಗ ಅನಾಥ ಭಾವ. 'ನಾನು ಬಡ ಕುಟುಂಬದಲ್ಲಿ ಜನಿಸಿದ ಹುಡುಗಿ. ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ ನನ್ನ ತಂದೆ ತೀರಿಹೋದರು. ನಾನು ಮತ್ತು ನನ್ನ ಕುಟುಂಬ ದುಃಖದಲ್ಲಿದ್ದಾಗ ನಮಗೆ ಧೈರ್ಯನೀಡಿ ಸಾಂತ್ವನ ಹೇಳಿದ ಹೃದಯವಂತ ವ್ಯಕ್ತಿ ಶಾಸ್ತ್ರಿಗಳು. ಅವರು ನನಗೆ ಸಾಂತ್ವನ ಅಷ್ಟೇ ಹೇಳಿಲ್ಲ, ಆತ್ಮಸ್ಥೈರ್ಯ ತುಂಬಿ ಆರ್ಥಿಕವಾಗಿಯೂ ಸಹಾಯ ಮಾಡಿದರು. ಅವರ ಸಹಾಯದ ಋಣಭಾರ ನನ್ನ ಮೇಲಿದೆ' ಎಂದು ಗದ್ಗದಿತವಾಗಿ ಹೇಳುತ್ತಾಳೆ ಧಾರವಾಡದಲ್ಲಿ ಬಿ.ಇ ಓದುತ್ತಿರುವ ಪಲ್ಲವಿ ಕುರವಿನಕೊಪ್ಪ.

'ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ನಮ್ಮೂರು. ಶಾಸ್ತ್ರಿಗಳು ನಮ್ಮ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ ಸ್ವಂತ ಮಕ್ಕಳ ಹಾಗೆ ನೋಡಿಕೊಳ್ಳುತ್ತಿದ್ದರು. ಕಳೆದ ವರ್ಷ ಕೋವಿಡ್ ಕಾರಣದಿಂದ ನಮ್ಮ ಕುಟುಂಬ ಸಂಕಷ್ಟ ಎದುರಿಸುತ್ತಿದ್ದಾಗ ನಮಗೆ ಧೈರ್ಯ ತುಂಬಿ, ದಿನಸಿ ಕೊಳ್ಳಲು ನಮ್ಮ ಅಕೌಂಟಿಗೆ ಹಣ ಹಾಕಿದ್ದರು. ಅವರ ನಿಧನದ ಸುದ್ದಿ ತಿಳಿದ ನನ್ನ ತಂದೆ, ನಾನು ನಿನಗೆ ಜನ್ಮ ಕೊಟ್ಟಿರಬಹುದು, ಆದರೆ ನಿಜವಾದ ತಂದೆಯ ಜವಾಬ್ದಾರಿ ನಿರ್ವಹಿಸಿದವರು ಶಾಸ್ತ್ರಿಗಳು ಎಂದು ದುಃಖಿಸುತ್ತಿದ್ದಾರೆ...' ಬಳ್ಳಾರಿಯಲ್ಲಿ ಎಂಎಸ್ಸಿ ಓದುತ್ತಿರುವ ನೀಲವೇಣಿ ಕಣ್ಣೀರು ಹಾಕುತ್ತಾಳೆ.


ರಾಮಕೃಷ್ಣ ಶಾಸ್ತ್ರಿ

'ತಾಯಿ ಬಿಟ್ಟು ಬೇರೆ ಯಾರೂ ಇಲ್ಲದ ನನಗೆ ನಿಮ್ಮ ಜೊತೆ ನಾನಿದ್ದೇನೆ ಎಂದು ಧೈರ್ಯ ತುಂಬುತ್ತಿದ್ದರು. ಬೇರೆ ಬೇರೆ ವಿದ್ಯಾರ್ಥಿ ವೇತನದ ಮಾಹಿತಿ ಹುಡುಕಿ ನಮ್ಮ ಕಡೆಯಿಂದ ಅರ್ಜಿಹಾಕಿಸಿ ವಿದ್ಯಾರ್ಥಿವೇತನ ಬರುವಂತೆ ಶತ ಪ್ರಯತ್ನ ಮಾಡುತ್ತಿದ್ದರು. ವಾರಕ್ಕೊಮ್ಮೆ ಮನೆಗೆ ಕರೆಸಿಕೊಂಡು ಎಲ್ಲಾ ವಿಚಾರಿಸಿ, ಬೇಕಾದ ನೆರವನ್ನೂ ಒದಗಿಸುತ್ತಿದ್ದರು' ಎಂದು ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿರುವ ಶಿವಾನಂದ ಸುಣಗಾರ ಹೇಳುತ್ತಾನೆ. 'ನಾನು ಇಂದು ವೈದ್ಯಳಾಗಲು ಶಾಸ್ತ್ರಿಗಳೇ ಕಾರಣ. ಅವರ ಆರ್ಥಿಕ ನೆರವಿನಿಂದಲೇ ನಾನು ಎಂಬಿಬಿಎಸ್ ಓದಲು ಸಾಧ್ಯವಾಯಿತು. ನನ್ನಂತೆ ನೂರಾರು ಮಕ್ಕಳು ಅವರಿಂದ ಸಹಾಯ ಪಡೆದಿದ್ದಾರೆ' ಎಂದು ಮೈಸೂರಿನಲ್ಲಿ ಎಂ.ಡಿ ಓದುತ್ತಿರುವ ಗಂಗಮ್ಮ ಕೆ. ಉಮ್ಮಳಿಸಿ ಬರುತ್ತಿದ್ದ ದುಃಖ ತಡೆಯುತ್ತಾ ವಿವರಿಸುತ್ತಾಳೆ.

'ಒಮ್ಮೆ ನಮ್ಮ ಮನೆಗೆ ಕೋಲಾರ ಜಿಲ್ಲೆಯ ಒಬ್ಬ ಅನಾಥ ಹುಡುಗಿ ಬಂದಿದ್ದಳು. ಎಸ್‌ಎಸ್‌ಎಲ್‌ಸಿ ಮುಗಿಸಿದ್ದ ಅವಳು ನಾನು ನಿಮ್ಮ ಮನೆಯಲ್ಲಿ ಕೆಲಸ ಮಾಡುತ್ತೇನೆ. ನನಗೆ ನೀವು ಸಂಬಳ ಕೊಡಬೇಡಿ, ನಾನು ವಿದ್ಯಾಭ್ಯಾಸ ಮುಂದುವರೆಸುವುದಕ್ಕೆ ಸಹಾಯ ಮಾಡಿ ಎಂದು ಬೇಡಿಕೊಂಡಳು. ಅವಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದೆ. ಅವಳು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿ ಅಲ್ಲಿಯೇ ಎಂ.ಡಿ ಮಾಡುತ್ತಿದ್ದಾಳೆ. ಜೀವನದಲ್ಲಿ ಇದಕ್ಕಿಂತ ಸಂತೋಷ ಇನ್ನೇನು ಬೇಕು? ಅವಳ ಮದುವೆ ಒಂದು ಮಾಡಿದರೆ ನನ್ನ ಜವಾಬ್ದಾರಿ ಮುಗಿಯಿತು' ಎಂದು ಶಾಸ್ತ್ರಿಗಳು ಹೇಳಿದ್ದರು.

ಯಾವುದೇ ಬಡಮಗು ಶಿಕ್ಷಣ ಪಡೆಯಲು ಒದ್ದಾಡುತ್ತಿದೆ ಎಂದು ತಿಳಿದರೆ ತಕ್ಷಣ ಅವರು ನೆರವಿಗೆ ಧಾವಿಸುತ್ತಿದ್ದರು. ಬಡಮಕ್ಕಳಿಗೆ ಅವರಿಂದ ಸಹಾಯವಾಗುವಂತೆ ನೋಡಿಕೊಂಡವರು ಸಹ ಈಗ ದುಃಖದಲ್ಲಿದ್ದಾರೆ. 'ಶಾಸ್ತ್ರಿಗಳು ಬಡಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದರ ಜೊತೆಗೆ ಪ್ರತಿಯೊಬ್ಬರ ಜೀವನಕ್ಕೆ ಒಂದು ಪ್ರೇರಣೆಯಾಗಿದ್ದರು. ನಾನು ಅವರಿಗೆ ಸಹಾಯ ಕೇಳಿ ಪರಿಚಯಿಸಿದ ಐವರು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಅಂತಹ ಪುಣ್ಯಾತ್ಮನನ್ನು ಕಳೆದುಕೊಂಡಿದ್ದೇವೆ' ಎಂದು ವಿವೇಕಾನಂದ ಎನ್‌ಕರೇಜ್‌ಮೆಂಟ್ ಗ್ರೂಪ್‌ನ ಚಿದಂಬರ ಶಾಸ್ತ್ರಿ ಹೇಳುತ್ತಾರೆ.

ಒಮ್ಮೆ ಮಾತ್ರ ನಾನು ಅವರನ್ನು ಭೇಟಿಯಾಗಿದ್ದು. ವಾರಕ್ಕೊಮ್ಮೆಯಾದರೂ ಫೋನ್ ಮಾಡಿ, 'ನೀವು ಆರೋಗ್ಯ ಕಾಪಾಡಿಕೊಳ್ಳಿ, ಇನ್ನೂ ಹೆಚ್ಚು ದಿನ ಬಡಮಕ್ಕಳಿಗೆ ಸಹಾಯ ಮಾಡುವಂತೆ ಆಗಬೇಕು' ಎಂದು ಹೇಳುತ್ತಿದ್ದ ಶಾಸ್ತ್ರಿಗಳು, ತಮ್ಮ ಸ್ವಂತಕ್ಕಾಗಿ ಏನೂ ಯೋಚಿಸಿದವರಲ್ಲ. ಬಡಮಕ್ಕಳಿಗೆ ಸಹಾಯ ಬೇಕು ಎಂದು ಯಾರೇ ಕೇಳಿದರೂ ಅವರ ವಿವರ ಕಳಿಸಿ ಎಂದು ಸಹಾಯ ಮಾಡುತ್ತಿದ್ದ ಶಾಸ್ತ್ರಿಗಳು, ಅದೆಷ್ಟು ಮಕ್ಕಳಿಗೆ ಪಾಲಕರಾಗಿ ಜವಾಬ್ದಾರಿ ನಿರ್ವಹಿಸಿದರು. ತಮ್ಮ ಕೊನೆಯ ಉಸಿರಿರುವವರೆಗೂ ಇತರರ ಒಳಿತಿಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದ ಮಹಾನ್ ಶಕ್ತಿಯಾಗಿದ್ದವರು ಅವರು. ಇಂತಹ ಅಪೂರ್ವ ವ್ಯಕ್ತಿಯ ಸಂಪರ್ಕ ನಮಗೆ ಆದದ್ದೇ ನಮ್ಮ ಅದೃಷ್ಟ. ಕೋವಿಡ್ ಇಂಥವರನ್ನೂ ಕರೆದೊಯ್ದು ಹಲವರ ಬಾಳಿನಲಿ ಕತ್ತಲೆ ಮೂಡಿಸಿದೆ.

ಯಕ್ಷಗಾನ ಬೆಳೆದು ಬಂದ ಇತಿಹಾಸ

ಗ.ನಾ.ಭಟ್ಟ

ಯಕ್ಷಗಾನ ಕಲೆಗೆ, ಅದರ ಸಾಹಿತ್ಯದ ನೆಲೆಯಲ್ಲಿ, ಅದಕ್ಕೊಂದು ದೊಡ್ಡ ಚರಿತ್ರೆಯೇ ಇದೆ. ಅದನ್ನು ದಾಖಲಿಸುವತ್ತ ಇದುವರೆಗೆ ಆಗದ ಕೆಲಸ ಇದೀಗ ಆಗಿದೆ. ಅದು ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಿಂದ. ಕಬ್ಬಿನಾಲೆ ಅವರು 2010ರಲ್ಲಿ 'ಕರ್ನಾಟಕ ಯಕ್ಷಗಾನ ಕವಿಚರಿತ್ರೆ' ಎಂಬ ಕೃತಿಯನ್ನು ನಮ್ಮ ಮುಂದೆ ಇಟ್ಟದ್ದರು. ಈಗ ಅವರು, 'ಯಕ್ಷಗಾನ ಸಾಹಿತ್ಯ ಚರಿತ್ರೆ' ಎಂಬ ಬೃಹತ್ ಕೃತಿಯನ್ನು ಕೊಟ್ಟಿದ್ದಾರೆ.

'ಕನ್ನಡ ಸಾಹಿತ್ಯಾಭ್ಯಾಸವು ಸಾಮಾನ್ಯವಾಗಿ ಪರಿಚಯ- ವಿಮರ್ಶೆ- ಸಂಶೋಧನೆ ಮತ್ತು ದಾಖಲಾತಿ ಎಂಬ ನಾಲ್ಕು ಮುಖಗಳಲ್ಲಿ ನಡೆಯುತ್ತಿರುವುದು ಹೊಸಕಾಲದ ಪದ್ಧತಿ' ಎಂದು ಈ ಕೃತಿಗೆ ಮುನ್ನುಡಿ ಬರೆದ ಡಾ.ಪಾದೇಕಲ್ಲು ವಿಷ್ಣುಭಟ್ಟರು ಅಭಿಪ್ರಾಯಪಟ್ಟಂತೆ ಕಬ್ಬಿನಾಲೆಯವರ ಈ ಕೃತಿಯೂ ಅದೇ ದಿಕ್ಕಿನಲ್ಲಿ ಸಾಗಿದೆ. ಅಷ್ಟೇ ಅಲ್ಲ, ಅದಕ್ಕೆ ಸಾಕಷ್ಟು ಅಧಿಕೃತತೆಯನ್ನೂ ಲೇಖಕರು ಒದಗಿಸಿದ್ದಾರೆ. ಯಕ್ಷಗಾನ ಸಾಹಿತ್ಯದ ಉಗಮ ಮತ್ತು ವಿಕಾಸ, ಪಡುವಲಪಾಯ-ಪ್ರಸಂಗ ಸಾಹಿತ್ಯ, ಮೂಡಲಪಾಯ -ಪ್ರಸಂಗ ಸಾಹಿತ್ಯ, ಯಕ್ಷಗಾನದಲ್ಲಿ ಪ್ರಯೋಗಶೀಲತೆ, ಮೌಖಿಕ ಸಾಹಿತ್ಯ, ಸಂಶೋಧನೆ ಮತ್ತು ವಿಮರ್ಶೆ, ಪ್ರಮುಖ ಕವಿಗಳು- ಹೀಗೆ ಒಟ್ಟು ಏಳು ಅಧ್ಯಾಯಗಳಲ್ಲಿ ಸಾಗುವ ಈ ಕೃತಿ ಯಕ್ಷಗಾನದ ಒಟ್ಟು ಸ್ವರೂಪವನ್ನು ಒಂದೇ ತೆಕ್ಕೆಗೆ ಪರಿಚಯಿಸಿಬಿಡುತ್ತದೆ.

ಸನ್ನಿವೇಶಕ್ಕೆ ಅನುಗುಣವಾಗಿ ಆಯಾ ವಸ್ತು-ಪದಾರ್ಥಗಳ ಬಗ್ಗೆ, ಪ್ರಸಂಗಕೃತಿಗಳ ಬಗ್ಗೆ, ಪ್ರಯೋಗಶೀಲತೆಗಳ ಬಗ್ಗೆ, ಮೌಖಿಕ ಸಾಹಿತ್ಯದ ಬಗ್ಗೆ, ಕವಿಗಳ ಬಗ್ಗೆ ಹೊಸ ಬೆಳಕು ಚೆಲ್ಲುವ ಕಿರು ಪರಿಚಯ, ವಿಮರ್ಶೆ ಮಾಡಿರುವುದು ಆಯಾ ಕೃತಿಗಳಿಗೆ, ವ್ಯಕ್ತಿಗಳಿಗೆ, ಕಲಾವಿದರಿಗೆ ಸಿಕ್ಕ ಬಹುದೊಡ್ಡ ಮನ್ನಣೆ. ಅದನ್ನು ಕಬ್ಬಿನಾಲೆಯವರು ಬಹು ಸುಂದರವಾಗಿ, ಮನೋಜ್ಞವಾಗಿ ಒಂದು ಕುಸುರಿ ಕೆಲಸ ಎಂಬಂತೆ ಮಾಡಿದ್ದಾರೆ.

'ಯಕ್ಷಗಾನ ಸಾಹಿತ್ಯದ ಉಗಮ ಮತ್ತು ವಿಕಾಸ'ದೊಂದಿಗೆ ಆರಂಭವಾಗುವ ಅವರ ಈ ಕೃತಿ ಯಕ್ಷಗಾನ ಹಾಡಿನ ಜಾಡು ಎಲ್ಲಿಂದ ಮೊದಲ್ಗೊಂಡಿತು? ಅದಕ್ಕೆ ಭಕ್ತಿಪಂಥ, ದಾಸಸಾಹಿತ್ಯಗಳ ಕೊಡುಗೆ ಏನು? ಅವು ಹೇಗೆ ಕೆಲಸ ಮಾಡಿವೆ? ವಿವಿಧ ಛಂದೋಬಂಧಗಳು ಹೇಗೆ ಹಾಸುಹೊಕ್ಕಾಗಿವೆ? ಎಂಬಿತ್ಯಾದಿ ಸಂಗತಿಗಳನ್ನು ಚರ್ಚಿಸಿದೆ.



ಪು: 508
₹500

ಯಕ್ಷಗಾನ ಸಾಹಿತ್ಯ ಚರಿತ್ರೆ
ಲೇ: ಡಾ.ವಸಂತ ಭಾರದ್ವಾಜ್
ಪ್ರ: ಯಜ್ಞಲಕ್ಷ್ಮೀ ಪ್ರಕಾಶನ, ಮೈಸೂರು

ಯಕ್ಷಗಾನದ ಹಾಡಿನಲ್ಲಿ ಅಂದರೆ ಯಕ್ಷಗಾನ ಸಾಹಿತ್ಯದಲ್ಲಿ ಆರತಿಹಾಡು, ಸೋಬಾನೆ ಹಾಡುಗಳ ಚೆಲುವು, ಗಾದೆ ಮಾತು, ಭಾಷಾಪ್ರಯೋಗದ ಸೌಂದರ್ಯ, ಭಾವಗೀತಾತ್ಮಕತೆ, ಮಾರ್ಗ-ದೇಸಿಗಳ ಸಮ್ಮಿಶ್ರ ಸೌಂದರ್ಯ, ಶಬ್ದಾಲಂಕಾರ, ಅರ್ಥಾಲಂಕಾರಗಳ ಬೆಡಗು, ರೂಪಕ-ಪ್ರಹೇಲಿಕೆಗಳ ಮೆರವಣಿಗೆ ಹೇಗೆ ಪ್ರಭಾವಿಸಿವೆ ಎಂಬುದನ್ನು ಚರ್ಚಿಸಲಾಗಿದೆ. ಎಲ್ಲವನ್ನೂ ಹೀರಿಕೊಂಡು ಅದು ಹೇಗೆ ಶ್ರೀಮಂತವಾಯಿತು ಮತ್ತು ಅವೆಲ್ಲವೂ ಯಕ್ಷಗಾನ ಸಾಹಿತ್ಯದಲ್ಲಿ ಹೇಗೆ ನಿಹಿತವಾಗಿದ್ದವು ಅನ್ನುವುದನ್ನು ಸಾಕ್ಷ್ಯಾಧಾರಗಳೊಂದಿಗೆ ತೌಲನಿಕವಾಗಿ ಓದುಗರ ಮುಂದಿಡಲಾಗಿದೆ.

ಹಾಗೆಯೇ ಪಡುವಲಪಾಯ ಯಕ್ಷಗಾನ ಪ್ರಸಂಗಸಾಹಿತ್ಯವನ್ನು ಎತ್ತಿಕೊಂಡ ಕಬ್ಬಿನಾಲೆಯವರು ಅವು ಯಾವ ಯಾವ ಪ್ರದೇಶಗಳಲ್ಲಿ ಪ್ರದರ್ಶನಗೊಳ್ಳುತ್ತವೆ ಎಂದು ಹೇಳುತ್ತಾ ಅವುಗಳನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜನಪದೀಯ, ಕಾಲ್ಪನಿಕ ಎಂದು ಐದು ವಿಧಗಳಾಗಿ ವಿಂಗಡಿಸುತ್ತಾರೆ. ರಾಮಾಯಣಾಧಾರಿತ ಪ್ರಸಂಗಗಳೇ 150ರಷ್ಟು ಇವೆ ಎಂದು ದಾಖಲಿಸುತ್ತಾರೆ.

ಇದೇ ರೀತಿ ಭಾರತ, ಭಾಗವತಗಳನ್ನಾಧರಿಸಿ ಬಂದ ಪ್ರಸಂಗಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುತ್ತಾ ಕೃಷ್ಣಾರ್ಜುನ ಕಾಳಗ, ರಾಮಾಂಜನೇಯ, ದ್ರೌಪದೀ ಪ್ರತಾಪ, ಚಕ್ರಚಂಡಿಕಾ, ವೀರನಾರೀ ಅಪ್ರಮೇಯೀ, ಭಾನುಮತೀ ನೆತ್ತ ಮೊದಲಾದ ಪ್ರಸಂಗಗಳು ಪುರಾಣಗಳ ಯಾವುದೋ ಒಂದು ಎಳೆಯನ್ನು ಇಟ್ಟುಕೊಂಡು, ಅವು ಕವಿಯ ಪ್ರತಿಭೆಯಲ್ಲಿ ಹೇಗೆ ಕಲ್ಪನೆಯ ವಿಸ್ತಾರವನ್ನು ಪಡೆದುಕೊಂಡು, ಸಾಹಿತ್ಯಾತ್ಮಕವಾಗಿಯೂ ಮೌಲ್ಯವನ್ನು ಉಳಿಸಿಕೊಂಡು, ಜನಮಾನಸದಲ್ಲಿ ಪ್ರತಿಷ್ಠಾಪನೆಗೊಂಡಿವೆ ಮತ್ತು ಜನಪ್ರಿಯವಾಗಿವೆ ಅನ್ನುವುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಇನ್ನು ಜೈನಪುರಾಣ, ಬೌದ್ಧಧರ್ಮ, ಇತಿಹಾಸ, ಸಾಮಾಜಿಕ, ಜಾನಪದ ಪ್ರಸಂಗಗಳೊಂದಿಗೆ ಶಂಕರ, ರಾಮಾನುಜ, ಮಧ್ವ, ರಾಘವೇಂದ್ರ, ಕ್ರಿಸ್ತ ಮೊದಲಾದ ಮಹಾಪುರುಷರ ಕುರಿತಾಗಿ ಬಂದ ಪ್ರಸಂಗಗಳನ್ನು ಅವರು ಕಲೆಹಾಕಿದ್ದನ್ನು ನೋಡಿದರೆ ಯಕ್ಷಗಾನ ಸಾಹಿತ್ಯ ಚರಿತ್ರೆಯ ವಿರಾಟ್ ಸ್ವರೂಪ ಗೋಚರಿಸುತ್ತದೆ. ಜೊತೆಗೆ ವಿಸ್ಮಯವೂ ಆಗುತ್ತದೆ.

ಪಡುವಲಪಾಯ ಯಕ್ಷಗಾನದಲ್ಲಿ 'ಕ್ಷೇತ್ರ ಮಹಾತ್ಮೆ'ಗಳಿಗೇ ಒಂದು ವಿಶೇಷ ಸ್ಥಾನವಿದೆ. ಬಹುಪಾಲು ಎಲ್ಲಾ ಕ್ಷೇತ್ರಗಳ ಮಹಾತ್ಮೆಯೂ ಬಯಲಾಟವಾಗಿ ಪ್ರದರ್ಶನಗೊಂಡಿದೆ. ಅದಕ್ಕೆ ಕಾರಣ ಎಲ್ಲಾ ಮೇಳಗಳೂ ಯಾವುದಾದರೊಂದು ದೇವಸ್ಥಾನದ ದೇವರ ಹೆಸರಲ್ಲಿ ಸಂಸ್ಥಾಪನೆಗೊಂಡು ತಿರುಗಾಟಕ್ಕೆ ಹೊರಡುತ್ತವೆ. ಅಂತಹ ಸಂದರ್ಭದಲ್ಲಿ ಆಯಾ ದೇವರ ಮಹಿಮೆಯನ್ನು ಪ್ರಚುರಪಡಿಸುವುದು, ಭಕ್ತಿಯಿಂದ ನಡೆದುಕೊಳ್ಳುವುದು ಕಲಾವಿದರಿಗೂ, ಮೇಳದ ಯಜಮಾನರಿಗೂ ಹೆಮ್ಮೆಯ ಸಂಗತಿ. ಆ ಕಾರಣಕ್ಕಾಗಿಯೇ ಅವು ಶ್ರದ್ಧಾ-ಭಕ್ತಿಯಿಂದ ಪ್ರದರ್ಶನಗೊಂಡಿವೆ.

ಒಳನೋಟ

ಇಡಗುಂಜಿ, ಕಟೀಲು, ಬಪ್ಪನಾಡು, ಧರ್ಮಸ್ಥಳ, ಮಧೂರು ಹೀಗೆ ಮೂವತ್ತಕ್ಕೂ ಹೆಚ್ಚು ಕ್ಷೇತ್ರ ಮಹಾತ್ಮೆಗಳನ್ನು ಗುರುತಿಸಿದ್ದಾರೆ ಕಬ್ಬಿನಾಲೆಯವರು. ಹೀಗೆ ಒಂದೆಡೆ ಕ್ಷೇತ್ರ ಮಹಾತ್ಮೆಗಳು, ಮತ್ತೊಂದೆಡೆ ಕಲಾವತಿ ಪರಿಣಯ, ಭಾಸವತಿ, ನಾಗಶ್ರೀ, ವಂಶವಲ್ಲರೀ, ಸಂಧ್ಯಾಸಾವೇರಿ ಮುಂತಾದ ಕಾಲ್ಪನಿಕ ಪ್ರಸಂಗಗಳು, ಜೊತೆಗೆ ಕೋಡ್ದಬ್ಬು ತನ್ನಿಮಾನಿಗ, ಅಮರಶಿಲ್ಪಿ ವೀರಕಲ್ಕುಡ, ಅಮರೇಂದ್ರಪದ ವಿಜಯ, ಕಾಯಕಲ್ಪ, ಶುಕ್ರಸಂಜೀವಿನೀ ಮೊದಲಾದ ಹೊಸ ಅಲೆಗಳ ಪ್ರಸಂಗಗಳು ಹೀಗೆ ಯಕ್ಷಗಾನ ಸಾಹಿತ್ಯ ಚರಿತ್ರೆಗೆ ಸಿಗದೇ ಇದ್ದ ಸಾಹಿತ್ಯವೇ ಇಲ್ಲ. ಲೇಖಕರು ಇವೆಲ್ಲವನ್ನೂ ಒಂದೆಡೆ ಸಂಕಲಿಸಿ ದಾಖಲಿಸಿದ್ದಾರೆ.

ಈ ಕೃತಿಯ ಮೂರನೆಯ ಅಧ್ಯಾಯದಲ್ಲಿ 'ಮೂಡಲಪಾಯ -ಪ್ರಸಂಗ ಸಾಹಿತ್ಯ' ಕುರಿತಾಗಿ ಬಂದಿದೆ. ಅದರ ಬೇರೆ ಬೇರೆ ಪ್ರಕಾರಗಳಾದ ಮೂಡಲಪಾಯ, ದೊಡ್ಡಾಟ, ಸಣ್ಣಾಟ, ಘಟ್ಟದ ಕೋರೆ, ಶ್ರೀಕೃಷ್ಣ ಪಾರಿಜಾತಗಳನ್ನು 'ಪಡುವಲಪಾಯ ಪ್ರಸಂಗ ಸಾಹಿತ್ಯ' ಪರಿಚಯದ ದಾರಿಯಲ್ಲೇ ಮಾಡಿಕೊಟ್ಟಿದ್ದಾರೆ.

'ಯಕ್ಷಗಾನದಲ್ಲಿ ಪ್ರಯೋಗಶೀಲತೆ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಮಾರಾವತಾರ, ಕಾರಂತರ ಬ್ಯಾಲೆ, ಅಷ್ಟಾವಧಾನ ಮತ್ತು ಕಾವ್ಯ-ಚಿತ್ರ-ಗಾನ-ನಾಟ್ಯ, ಏಕವ್ಯಕ್ತಿಪ್ರದರ್ಶನ, ಇತರ ಭಾಷೆಯಲ್ಲಿ ಯಕ್ಷಗಾನ, ವಿಶಿಷ್ಟ ಪ್ರಸಂಗಗಳು ಎಂಬ ಶೀರ್ಷಿಕೆಗಳಲ್ಲಿ ಅವೆಲ್ಲದರ ಐತಿಹಾಸಿಕ ಹಿನ್ನೆಲೆ, ಕವಿ-ಕಾವ್ಯ ಪರಿಚಯ, ಕೆಲವು ಕೃತಿಗಳ ಸ್ವಾರಸ್ಯಕರ ಘಟ್ಟ, ಪದ್ಯಗಳ ಚಮತ್ಕಾರ ಮುಂತಾದುವನ್ನು ಸಂಕ್ಷಿಪ್ತವಾಗಿ ಪರಿಚಯಿಸಿ ಅವುಗಳ ಮೇಲೆ ಪ್ರೀತ್ಯಾದರ, ಗೌರವ ಹುಟ್ಟುವಂತೆ ಮಾಡಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಬಂದ 'ಮೌಖಿಕ ಸಾಹಿತ್ಯ' ಕುರಿತಾದ ವಿಶ್ಲೇಷಣೆ 'ತಾಳಮದ್ದಳೆ'ಯ ವಿಶ್ಲೇಷಣೆ ಎಂದು ಪ್ರತ್ಯೇಕ ಹೇಳಬೇಕಿಲ್ಲ. ಇಲ್ಲಿಯೂ ಕಬ್ಬಿನಾಲೆಯವರು ಅದರ ಉಗಮ, ವಿಕಾಸ ಎಂಬ ಸಂಶೋಧನೆಯ ನೆಲೆಯಲ್ಲಿ ಒಂದಿಷ್ಟು ಮಾತನಾಡುತ್ತಾ ತಾಳಮದ್ದಳೆಯ ಬೆಳವಣಿಗೆಯನ್ನು ನಾಲ್ಕು ಹಂತದಲ್ಲಿ ಗುರುತಿಸಿದ ಡಾ.ಎಂ. ಪ್ರಭಾಕರ ಜೋಶಿಯವರ ಅಭಿಪ್ರಾಯವನ್ನು ಇಲ್ಲಿ ಕ್ರೋಡೀಕರಿಸಿದ್ದಾರೆ. ಜೊತೆಗೇನೇ ಸೇಡಿಯಾಪು, ಕಾರಂತ, ತಕ್ಕಂಜೆ, ತೋಳ್ಪಾಡಿ, ಉಚ್ಚಿಲ ಮೊದಲಾದವರ ಅಭಿಪ್ರಾಯವನ್ನು ಉಲ್ಲೇಖಿಸಿದ್ದು ಈ ಕೃತಿಗೆ ನಿಜಕ್ಕೂ ಘನತೆ, ಗಾಂಭೀರ್ಯವನ್ನು ತಂದುಕೊಟ್ಟಿದೆ.

ಸಂಶೋಧನೆ ಮತ್ತು ವಿಮರ್ಶೆ, ಪ್ರಮುಖ ಕವಿಗಳು, ಉಪಸಂಹಾರ ಎಂಬ ಅಧ್ಯಾಯಗಳೊಂದಿಗೆ ಮುಕ್ತಾಯಗೊಳ್ಳುವ ಈ ಕೃತಿ ಯಕ್ಷಗಾನಪ್ರಪಂಚಕ್ಕೇ ಒಂದು ಅಮೂಲ್ಯ ಕೃತಿಯಾಗಿದೆ. ಕಬ್ಬಿನಾಲೆ ಅವರಿಗೆ ಹಾರ್ದಿಕ ಅಭಿನಂದನೆಗಳು.

ಕವಿತೆ

ರಮೇಶ ಅರೋಲಿ
ಬರೆದ ಕವಿತೆ
ದೇವರು ರಜೆಯಲಿರುವಾಗ...

ಊರು ಕೇರಿಗಳು ಉರಿದು ಹೋಗುತಾವ
ಹುತ್ತದ ಹಾವು ಗುಳೆ ಹೋಗುತಾವ
ನದಿ ನೀರಾಗ ಹೆಣ ತೇಲುತಾವ
ನಡುಬೀದಿಯಲಿ ಕಣಿ ಕೇಳುತಾವ
ಎಲ್ಲಿದ್ದೋ ದೇವ ನೀನೇನಾದೋ ದೇವ

ದ್ವಾಮೆ ಕೊಲ್ಲಲು ದೇಣಿಗೆ ಕೊಟ್ಟೇವಿ
ಹಸಿದ ಕೂಸಿಗೆ ಹಾಲನು ಇಟ್ಟೇವಿ
ಹರಹರ ಎಂದವ ಬರಿ ಮಾತಾಡಲು
ಆರಿಸಿ ತಂದವ ಅರಮನೆ ಸೇರಲು
ಎಲ್ಲಿದ್ದೋ ದೇವ ನೀನೇನಾದೋ ದೇವ

ಅರೆಸುಟ್ಟ ಈ ಹೆಣದ ಬಣಿವೆಗೆ
ಅತ್ತರ್ ಗಂಧ ಹಚ್ಚುವ ಘಳಿಗೆ
ಮತ ಹಾಕೋನು ಮಸಣವಾಸಿಯು
ಪಡೆದು ಬಂದವನೊ ಗದ್ದುಗೆವಾಸಿಯು
ಎಲ್ಲಿದ್ದೋ ದೇವ ನೀನೇನಾದೋ ದೇವ

ಸುಳ್ಳನು ಇಲ್ಲಿ ಸುಳ್ಳೆಂದವರ
ತುಟಿಯ ಹೊಲೆಯಲು ಸೂಜಿದಾರ
ದೇವರಾಣೆಗಿದು ಖರೆ ಅಂದವರ
ಸಮಾಧಿ ಮ್ಯಾಲೆ ಹೂವಿನ ಹಾರ
ಎಲ್ಲಿದ್ದೋ ದೇವ ನೀನೇನಾದೋ ದೇವ



ಮೊಬೈಲ್‌ನಲ್ಲಿ ಪೂರ್ಣ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಕಥೆ

ವಿಶ್ವನಾಥ ಎನ್. ನೇರಳಕಟ್ಟೆ
ಬರೆದ ಕಥೆ
ಅಂತರ್ಗಾಮಿ

'ರೀ, ನಿಮ್ಗೆ ಎಷ್ಟು ಸಲ ಹೇಳ್ಬೇಕ್ರಿ! ನನ್ಗೂ ಒಳ್ಳೆ ವಾಯ್ಸಿಲ್ಲ. ಒಳ್ಳೆ ವಾಯ್ಸಿರೋ ಯಾವ್ ಫ್ರೆಂಡೂ ನನ್ಗಿಲ್ಲ. ಆವಾಗಿಂದಾನೂ ಹೇಳ್ತಾನೇ ಇದ್ದೀನಿ, ಗೊತ್ತಾಗಲ್ವಾ? ಇನ್ನೊಂದ್ಸಲ ಕಾಲ್ ಮಾಡಿದ್ರೆ ಪೊಲೀಸ್ ಕಂಪ್ಲೇಂಟ್ ಕೊಡ್ಬೇಕಾಗುತ್ತೆ' ಹೇಳಿದ ಬೆನ್ನಿಗೇ ಫೋನ್ ಕಟ್. 'ಹಲೋ ಹಲೋ....' ಮುಂದ?

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕೊರೊನೋತ್ತರ ಶಕೆಯಲ್ಲಿ...

8ನೇ ಪುಟದಿಂದ...

ಕೊರೊನಾ ಬಂದು ಮನೆಯಲ್ಲೇ ಬಂದಿಯಾದ ಮೇಲೆ ಪರಿಸ್ಥಿತಿ ಬೇರೆಯಾಯಿತು. ಹಳೇ ನೈಟಿಗಳಲ್ಲೇ ಡೇ ಟೈಮಲ್ಲಿ ಓಡಾಡುವುದು ಮಹಿಳೆಯರಿಗೆ ಅಭ್ಯಾಸವಾಯಿತು. ಚೆಡ್ಡಿ, ತ್ರೀ-ಫೋರ್ತ್‌ನಲ್ಲೇ ಗಂಡಸರು ಕಾಲ ಕಳೆಯಲಾರಂಭಿಸಿದರು. ಹೊಸ ಬಟ್ಟೆಗಳಿಗೆ ಡಿಮ್ಯಾಂಡ್ ಕುಸಿಯಿತು. ಹೊಸ ಜೀನ್ಸನ್ನು ಅಲ್ಲಲ್ಲಿ ಹರಿದು ಧರಿಸಿ ಹೊಸ ವಿನ್ಯಾಸವೆಂದು ಮೆರೆಯುವ ಅವಕಾಶ ಸಹ ತಪ್ಪಿ ಹೋಯಿತು. ಇನ್ನುಮುಂದೆ ಯಾವ ಬ್ಯುಸಿನೆಸ್ ಮಾಡಿದರೆ ಒಳ್ಳೆಯದು? ಸೌಂದರ್ಯ ಸಾಧನಗಳ ಬದಲು ಪರ್‌ಫ್ಯೂಮ್‌ಗೆ ಬೆಲೆ ಬರಬಹುದು. ಏಕೆಂದರೆ, ಸ್ಯಾನಿಟೈಸರ್ ಹಾಕಿದ ಶರೀರ ಆಸ್ಪತ್ರೆಯ ವಾಸನೆಯನ್ನು ಹೊಮ್ಮಿಸುತ್ತದೆ. ಪರ್‌ಫ್ಯೂಮ್ ಸ್ವಲ್ಪ ಮಟ್ಟಿಗೆ ರಿಲೀಫ್ ಕೊಡಬಹುದು.

ತಲೆಗೆ ಬಣ್ಣ ಹಚ್ಚಿಕೊಂಡರೂ ಅದನ್ನು ನೋಡುವವರ್‍ಯಾರು? ಮಾಸ್ಕ್ ಒಳಗಿರುವ ಮೀಸೆ, ಗಡ್ಡಗಳನ್ನು ಟ್ರಿಂ ಮಾಡುವ ಸುದ್ದಿಗೇ ಬಹುಮಂದಿ ಹೋಗಿಲ್ಲ. ಗಡ್ಡ, ಮೀಸೆಗಳಲ್ಲಿ ಈ ಮೊದಲು ಅದೆಷ್ಟು ವಿನ್ಯಾಸಗಳು ಬರುತ್ತಿದ್ದವು. ಹೈವೇ ನಕ್ಷೆ ಬಿಡಿಸಿ ಸರ್ವಿಸ್ ರಸ್ತೆಗೆ ಕನೆಕ್ಷನ್ ಕೊಡುತ್ತಿದ್ದರು. ಈಗ ಏನೇ ಅಲಂಕಾರ ಮಾಡಿಕೊಂಡರೂ ಅದು 'ಮಾಸ್ಕ್' ಆಗುತ್ತದೆ.

ಮುಂದಿನ ದಿನಗಳಲ್ಲಿ ಮಾಸ್ಕ್ ಹೊಸ ರೂಪ ತಾಳುತ್ತದೆ. ತಲೆ, ಮುಖ ಮತ್ತು ಮೈಗೆ ರಕ್ಷಣೆ ಕೊಡುವ ಪುಲ್‌ಓವರ್ಸ್ ರೀತಿ ಅರಿವೆಗಳು ಬರಬಹುದು. ಕಣ್ಣು, ಮೂಗಿಗೆ ಮಾತ್ರ ಜಾಲರಿಯನ್ನು ಬಳಸುತ್ತಾರೆ. ಇವು ಪ್ಲಾಸ್ಟಿಕ್ ಜರಿ, ಬೆಳ್ಳಿ ಜರಿ ಮತ್ತು ಬಂಗಾರದ ಜರಿಗಳಾಗಿರುತ್ತವೆ. ಅವರವರ ಅಂತಸ್ತಿಗೆ ತಕ್ಕಂತೆ ಜರಿ ಮಾಸ್ಕ್! ತಲೆಯನ್ನು ಬುರುಕಿಯೊಳಗೆ ತುರುಕುತ್ತಾರೆ! ಇನ್ನು ದೇವಸ್ಥಾನಗಳಿಗೆ ಡಿಮ್ಯಾಂಡ್ ಇಲ್ಲವಾಗಿದೆ. ಮುಂದೆ ಹೊಸ ರೀತಿಯ ಪೂಜೆ, ತಾಯತಗಳು ಶುರುವಾಗ್ತವೆ. ಕೊರೊನಾವನ್ನು ಓಡಿಸಲು ಸಂಕಲ್ಪ ಮಾಡಿ ಪೂಜೆ ಮಾಡುವ ಶಾಸ್ತ್ರ ಈಗಾಗಲೇ ಬಂದಿದೆ. ಕೊರೊನಾ ರೋಗ ಬಂಧಿಸುವ, ಕೊರೊನಾ ಧ್ವಂಸಕಾರಕ ತಾಯತಗಳಿಗೆ ಇನ್ನು ಮುಂದೆ ಡಿಮ್ಯಾಂಡ್ ಬರುತ್ತದೆ. ಇದರಲ್ಲೂ ಬೆಳ್ಳಿ ತಾಯತ, ಬಂಗಾರದ ತಾಯತ ಎಂಬ ವರ್ಗೀಕರಣ. ಈ ತಾಯತಗಳನ್ನು ಕತ್ತಿಗೆ ಕಟ್ಟಿಕೊಂಡರೆ ಕಳ್ಳ ಹತ್ತಿರ ಬಂದರೂ ಕೊರೊನಾ ಬಳಿ ಸುಳಿಯುವುದಿಲ್ಲ.

ಹುಡುಗ-ಹುಡುಗಿಯರ ನಡುವೆ ಈ ಮೊದಲಿದ್ದ ಪ್ರೀತಿ, ರೇಗಿಸುವುದು, ಲೈನ್ ಹೊಡೆಯುವುದು, ವೇಲ್ ಎಳೆಯುವುದು ಈ ಕಷ್ಟಾಚಾರ ಮರೆತೇ ಹೋಗಿದೆ. ಲೈನ್ ಹೊಡೆಯುವ ಸಂಪ್ರದಾಯ ಮರೆಯಾಗುತ್ತಿದೆ. ಮುಖವನ್ನ, ತಲೆಯನ್ನ ಮುಚ್ಚಿಕೊಂಡು ನಡೆಯುತ್ತಿರುವ ವ್ಯಕ್ತಿ ಗಂಡೋ, ಹೆಣ್ಣೋ ಎಂಬುದೇ ಗೊತ್ತಾಗುವುದಿಲ್ಲ. ಇನ್ನು ಲೈನಿನ ರಿಸ್ಕ್ ಯಾಕೆ? ಕೊರೊನಾ ಬಂದ ಮೇಲೆ ಮಾಸ್ಕ್ ಒಳಗೆ ನಗುವುದೇ ಅಪರೂಪವಾಗಿದೆ. ಹೀಗಾಗಿ ಲಾಫ್ಟರ್ ಕ್ಲಬ್ಬುಗಳಿಗೆ ಡಿಮ್ಯಾಂಡ್ ಬರುತ್ತದೆ. ನಗಿಸುವವರಿಗೆ ನಗೆ ಲೇಖನಗಳಿಗೆ ವಿಪರೀತ ಬೇಡಿಕೆ ಬರಬಹುದು. ಕೈಗೆ ಸದಾ ಗ್ಲೌಸುಗಳನ್ನು ಹಾಕಿಕೊಳ್ಳುವ ಗೋಜಲು ತಪ್ಪಿಸಲು ಕರಗಿಸಿದ ಪ್ಲಾಸ್ಟಿಕ್ ದ್ರಾವಣದಲ್ಲಿ ಕೈ ಅದ್ದಿದರೆ ಸಾಕು, ಅದು ಗ್ಲೌಸ್ ಆಗಬಹುದಾದ ತಂತ್ರಜ್ಞಾನ ವೃದ್ಧಿಯಾಗುತ್ತದೆ.

ಕೊರೊನಾ ಸಂದರ್ಭದಲ್ಲಿ ಅನವಶ್ಯಕವಾಗಿ ಹೊರಗಡೆ ಬಂದವರಿಗೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ. ಇಂಥ ಲಾಠಿ ಏಟುಗಳಿಂದ ಮುಕ್ತಿ ಪಡೆಯಲು ಕೆಲವು 'ಆ್ಯಂಟಿ ಲಾಠಿ' ಜರ್ಕಿನ್‌ಗಳು ಇನ್ನುಮುಂದೆ ಬರುತ್ತವೆ. ಗುಂಡು ನಿರೋಧಕ ಜರ್ಕಿನ್ ರೀತಿ 'ಆ್ಯಂಟಿ ಲಾಠಿ' ಜರ್ಕಿನ್ನುಗಳು ಜನಪ್ರಿಯ ಆಗುತ್ತವೆ. ಪೊಲೀಸರು ಎಷ್ಟು ಬಡಿದರೂ ಮೈಗೆ ಏಟು ತಾಕದಂತೆ ಜರ್ಕಿನ್ ರಕ್ಷಿಸುತ್ತದೆ.

ಇನ್ನು ಭಾರತೀಯ ಸಂಪ್ರದಾಯದಂತೆ ಸೋಷಿಯಲ್ ಡಿಸ್ಟೆನ್ಸ್ ಇಟ್ಟುಕೊಂಡು ನಮಸ್ಕಾರ ಮಾಡುವ ಶೈಲಿಯನ್ನು ಈಗ ಲೋಕವೇ ಪಾಲಿಸುತ್ತಿದೆ. ಕೈ ಕುಲುಕುವ, ತಬ್ಬುವ, ಹಗ್ ಮಾಡಿಕೊಳ್ಳುವ, ಬಗ್ಗಿ ಕಾಲು ಮುಟ್ಟುವ ಸಂಪ್ರದಾಯಗಳು ಬಿಟ್ಟುಹೋಗಿವೆ. ಕೈ ಕುಲುಕುವ ಆಸೆ ಇದ್ದವರಿಗೆ ಕೃತಕವಾದ ಒಂದು ರಬ್ಬರ್ ಕೈಯನ್ನ ತಯಾರಿಸಿಕೊಡಲಾಗುತ್ತದೆ. ಈ ಕೈನ ಜೇಬಿನಲ್ಲಿ ಇಟ್ಟುಕೊಳ್ಳಬಹುದು. ಯಾರಾದರೂ ಎದುರಾದಾಗ ತಮ್ಮ ರಬ್ಬರ್ ಕೈ ತಾವೇ ಕುಲುಕಿ ಎದುರುಗಡೆ ಪಾರ್ಟಿಯತ್ತ ಎಸೆಯುತ್ತಾರೆ. ಅವರು ಅದನ್ನು ಕ್ಯಾಚ್ ಹಿಡಿದು ಆ ಕೈ ಕುಲುಕಿ ಮತ್ತೆ ವಾಪಸ್ ನಮಗೇ ಎಸೆಯುತ್ತಾರೆ. ರಬ್ಬರ್ ಕೈ ಒಳಗಿರುವ ಸ್ಯಾನಿಟೈಸರ್ ಹನಿಗಳಿಂದ ಷೇಕ್‌ಹ್ಯಾಂಡ್ ಸುರಕ್ಷಿತವಾಗಿರುತ್ತದೆ. ಫ್ಲೈಯಿಂಗ್ ಕಿಸ್ ಮಾದರಿ! ಗಂಡು-ಹೆಣ್ಣುಗಳು ಪ್ರೀತಿ ಮಾಡುವ ಮೊದಲು ಡಾಕ್ಟರ್ ಬಳಿ ಸಮಾಲೋಚನೆಗೆ ಹೋಗಬಹುದು. ಮುತ್ತು ಕೊಡುವುದು ಯಾವಾಗ, ಹೇಗೆ ಎಷ್ಟು ಕಾಲ ಕೊಡಬಹುದು? ತುಟಿಗಳಿಗೆ ಸ್ಯಾನಿಟೈಸರ್ ಬೇಕಾ? ತಬ್ಬಿಕೊಂಡ ನಂತರ ಸ್ನಾನ ಮಾಡಬೇಕಾ?

ಪಿಪಿಇ ಕಿಟ್ ಧರಿಸಿ ತಬ್ಬುವುದು ಒಳ್ಳೆಯದು ಎಂಬ ಸಲಹೆ ವೈದ್ಯರು ನೀಡುತ್ತಾರೆ. ಹನಿಮೂನ್‌ಗೆ ಗಂಡು-ಹೆಣ್ಣು ಬೇರೆ ಬೇರೆ ದಿನಗಳಲ್ಲಿ ಹೋಗಿ ಬರುವ ಸುರಕ್ಷಿತ ರೀತಿಗಳು ಚಾಲ್ತಿಗೆ ಬರಬಹುದು.

ಎಲ್ಲಕ್ಕಿಂತ ಮುಖ್ಯವಾಗಿ ಕೋವಿಡ್-19 ಬಂದ ನಂತರ ಜನಗಳು ವರ್ಷ ಮತ್ತು ಇಸವಿಗಳನ್ನ ಹೇಳುವ ರೀತಿ ಸಹ ಬದಲಾವಣೆ ಆಗುತ್ತದೆ. ಬಿ.ಸಿ ಎಂದರೆ ಬಿಫೋರ್ ಕೊರೊನಾ, ಎ.ಸಿ ಎಂದರೆ ಆಫ್ಟರ್ ಕೊರೊನಾ. ಕೊರೊನಾ ಬರುವ 20 ವರ್ಷ ಮುಂಚೆ ಹುಟ್ಟಿದೆ ಎನ್ನಲು 20 ಇಯರ್ಸ್ ಬಿ.ಸಿ. ಹುಟ್ಟಿದ್ದು ಎಂಬ ಹೊಸ ವ್ಯಾಖ್ಯಾನ ಬರಬಹುದು.

ಶತ ಶತಮಾನಗಳಿಂದ ಆಮ್ಲಜನಕವನ್ನು ಉಸಿರಾಡುತ್ತಾ ಇದ್ದೇವೆ. ಜೀವವಾಯು ಆಮ್ಲಜನಕ ಎಷ್ಟು ಮುಖ್ಯ ಎಂಬುದು ನಮಗೆ ಗೊತ್ತಾಗಿದ್ದು ಇತ್ತೀಚೆಗೆ. ಗಾಳಿಯನ್ನೂ ಖರೀದಿ ಮಾಡುವ ದಿನ ಬಂದಿದೆ. ಆದರೆ ನೆಮ್ಮದಿ, ಸಂತೋಷಗಳನ್ನು ಫ್ಯಾಕ್ಟರಿಯಲ್ಲಿ ತಯಾರಿಸಿ ಖರೀದಿ ಮಾಡುವ ಕೃತಕ ವಿಧಾನಗಳು ಇನ್ನೂ ಹುಟ್ಟಿಕೊಂಡಿಲ್ಲ.

ಭರವಸೆ ಮೂಡಿಸುವ ಪ್ರಬಂಧಗಳು

ವಿಮರ್ಶೆ



ಪು: 120
₹100

ಬ್ರೂನೊ ದಿ ಡಾರ್ಲಿಂಗ್
ಲೇ: ನಂದಿನಿ ಹೆದ್ದುರ್ಗ
ಪ್ರ: ತೇಜು ಪ್ರಕಾಶನ, ಬೆಂಗಳೂರು
ಸಂ: 9900195626

ನಂದಿನಿ ಹೆದ್ದುರ್ಗ ಅವರ 'ಬ್ರೂನೊ ದಿ ಡಾರ್ಲಿಂಗ್' ಹದಿನಾರು ಲಲಿತ ಪ್ರಬಂಧಗಳ ಸಂಕಲನ. ಶೀರ್ಷಿಕೆಯ ಅಡಿಯಲ್ಲಿ 'ಲವಲವಿಕೆಯ ಬರಹಗಳು' ಎಂದು ಕರೆಯಲಾಗಿದೆ. ಮುನ್ನುಡಿ ಮತ್ತು ಬೆನ್ನುಡಿಗಳಲ್ಲಿ ಇಲ್ಲಿನ ಬರಹಗಳನ್ನು ಲಲಿತ ಪ್ರಬಂಧಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

'An essay is lyric in prose', ಲಲಿತ ಪ್ರಬಂಧವು ಗದ್ಯದ ಭಾವಗೀತೆ ಎಂಬ ಮಾತೊಂದಿದೆ. ಈ ಮಾತು ಲಲಿತ ಪ್ರಬಂಧಗಳ ಸಾಹಿತ್ಯಿಕ ಮಹತ್ವವನ್ನು ಸೂಚಿಸುತ್ತದೆ. ಪ್ರಬಂಧದ ನಿರೂಪಣೆಯಲ್ಲಿ ಮಾತೇ ಬಂಡವಾಳ ಎಂಬುದು ನಿಜವಾದರೂ ಮಾತು ಬರವಣಿಗೆ ರೂಪ ಪಡೆಯುವಾಗ ಕಲಾತ್ಮಕವಾಗಿರುತ್ತದೆ. ಇದರಲ್ಲಿ ವ್ಯಂಗ್ಯ, ಹಾಸ್ಯ ಧ್ವನಿಗಳು ಹದವಾಗಿ ಬೆರೆತುಕೊಳ್ಳಬೇಕಾದುದು ಅಪೇಕ್ಷಣೀಯ.

ಪ್ರಬಂಧದಲ್ಲಿ ಬಂಧ ಶಿಥಿಲವಾಗಿದ್ದರೂ ಕವಿ, ಕಥೆಗಾರ, ಕಾದಂಬರಿಕಾರನಂತೆ ಭಾವಲಹರಿ ಮತ್ತು ವಿಚಾರಲಹರಿಗಳನ್ನು ಹರಿಯಬಿಡಬೇಕು. ಇತರ ಸಾಹಿತ್ಯ ಪ್ರಕಾರಗಳಲ್ಲಿರುವಂತೆ ಸದ್ಯತನ, ಸಾರ್ವತ್ರಿಕತೆ ಮತ್ತು ಸಾರ್ವಕಾಲಿಕತೆಗಳನ್ನೊಳಗೊಂಡ ಅಭಿವ್ಯಕ್ತಿಯ ಕ್ರಮವೊಂದು ಬೇಕೇ ಬೇಕಾಗುತ್ತದೆ. ಪ್ರಬಂಧದ ಮಾದರಿ ಬಯಸುವ ಈ ಗುಣಗಳ ಹಿನ್ನೆಲೆಯಲ್ಲಿ ನೋಡಿದಾಗ ನಂದಿನಿಯವರ ಪ್ರಬಂಧಗಳಲ್ಲಿ ಅಲ್ಲಲ್ಲಿ ಈ ಸೂಚನೆಗಳು ಗಟ್ಟಿಯಾಗಿ ಕಾಣುತ್ತವೆ.


ಮಾನವನ ಬದುಕನ್ನು ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು ಸಹ ಪ್ರತ್ಯಕ್ಷ ಇಲ್ಲವೆ ಪರೋಕ್ಷವಾಗಿ ರೂಪಿಸುತ್ತವೆ. ಅವುಗಳಿಗೂ ಮನುಷ್ಯನಿಗೂ ಇರುವ ಸಂಬಂಧ ಎಂತಹದ್ದು ಎಂಬುದನ್ನು ಇಲ್ಲಿನ ಕೆಲವು ಪ್ರಬಂಧಗಳು ಸೊಗಸಾಗಿ ಕಟ್ಟಿಕೊಟ್ಟಿವೆ. ಶಾಲು ಮತ್ತು ಸಬಲೆ, ಅಪ್ಪನೆಂಬೊ ಆಕಾಶ, ಏನು ಬಂದಿರಿ ಹದುಳವಿರುವಿರೋ, Don't comeಬಳಿ ಹುಳುವೆ ಪ್ರಬಂಧಗಳು ಬದುಕಿನ ವಿವಿಧ ಮುಖಗಳನ್ನು ಲಾಲಿತ್ಯಪೂರ್ಣವಾಗಿ ದರ್ಶನ ಮಾಡಿಸುವಲ್ಲಿ ಯಶ ಕಂಡಿವೆ. ಸಣ್ಣಪುಟ್ಟ ಸಂಗತಿಗಳನ್ನು ಆಕರ್ಷಕವಾಗಿ ನಿರೂಪಿಸುವ ಕೌಶಲವೂ ಲೇಖಕಿಗೆ ಸಿದ್ಧಿಸಿದೆ. ಹಾಗೆಯೇ, ಕೆಲವು ಕಡೆ ಪ್ರಬಂಧದ ಧ್ವನಿ ಕಡಿಮೆ ಇರುವುದನ್ನೂ ಇಲ್ಲಿ ಉಲ್ಲೇಖಿಸಲೇಬೇಕು.

ಭಾವಲಹರಿಯಷ್ಟೇ ಪ್ರಬಂಧದ ಲಕ್ಷಣವಲ್ಲ, ಅದರಲ್ಲಿ ಒಂದು ಎಳೆ ವಿಚಾರವೂ ಸೇರಿಕೊಂಡಿರಬೇಕು. ಇದು ಭಾಷೆಯನ್ನು ಬಳಸುವ ವಿಧಾನವನ್ನು ಅವಲಂಬಿಸಿರುತ್ತದೆ. ನಂದಿನಿ ಅವರ ಬರವಣಿಗೆಯನ್ನು ಗಮನಿಸಿದರೆ, ಅವರಿಂದ ಗಂಭೀರವಾದ ನೈತಿಕ ಸಮಸ್ಯೆಗಳ ಚಿಂತನೆ, ಒಳಿತು ಕೆಡುಕುಗಳ ಘರ್ಷಣೆಯನ್ನು ಪರಿಣಾಮಕಾರಿಯಾಗಿ ಹಿಡಿದಿಡಲು ಸಾಧ್ಯ ಎನ್ನುವುದು ಎದ್ದು ಕಾಣುತ್ತದೆ.

ಹಾಸ್ಯ, ಪದಲಾಲಿತ್ಯ, ಲವಲವಿಕೆಯೇ ಪ್ರಧಾನವಾಗಿಬಿಟ್ಟರೆ ಓದುಗನಿಗೆ ಆ ಕ್ಷಣಕ್ಕೆ ಮುದವನ್ನು ನೀಡಬಹುದು. ಆದರೆ ಪರಿಣಾಮಕಾರಿ ಆಗಿರುವುದಿಲ್ಲ. ಆದ್ದರಿಂದ ಲಲಿತ ಪ್ರಬಂಧಗಳೂ ಸಾಹಿತ್ಯಿಕ ಗುಣವನ್ನು ಒಳಗೊಂಡಿರಬೇಕು. ಈ ಸಂಕಲನದಲ್ಲಿರುವ ಕೆಲವು ಪ್ರಬಂಧಗಳಲ್ಲಿ ಆ ಗುಣ ಢಾಳಾಗಿ ಕಾಣಿಸುತ್ತದೆ. ಮುಂದೆ ಈ ಲೇಖಕಿ ಇನ್ನೂ ಹೆಚ್ಚಿನ ಪ್ರಬಂಧಗಳನ್ನು ಬರೆಯುತ್ತಾರೆ ಮತ್ತು ಅವುಗಳು ಮತ್ತಷ್ಟು ಪರಿಣಾಮಕಾರಿಯಾಗಿ ಹೊರಹೊಮ್ಮುತ್ತವೆ ಎಂಬ ಭರವಸೆಯನ್ನು ಇಲ್ಲಿನ ಬರಹಗಳ ಮೂಲಕ ಮೂಡಿಸುತ್ತಾರೆ.

ಡಿ.ಎಚ್.

ತಾರಪಾ ಎಲ್ಲಾದ್ರೂ ಕಂಡಿದ್ದೀರಾ ಇಂಥ ವಾದ್ಯ?!



ಹಳ್ಳಿಯ ಸುತ್ತಲಿನ ಕಾಡಿನಲ್ಲಿ ಸಿಗುವ ಸೋರೆಕಾಯಿ, ಬಿದಿರು, ತಾಳೆ ಮರದ ಎಲೆ ಹಾಗೂ ಜೇನುಗೂಡಿನ ಮೇಣ – ಇಷ್ಟೇ ಈ ವಾದ್ಯವನ್ನು ತಯಾರಿಸಲು ಬೇಕಾಗಿರುವ ಪರಿಕರಗಳು.

ತಾರಪಾ ನುಡಿಸುವಲ್ಲಿ ತಲ್ಲೀನರಾದ ಭಿಕ್ಲ್ಯಾ ಲಡ್ಕ್ಯಾ ಧಿಂಡಾ ಅಜ್ಜ....
ಕಲೆ: ಸುರೇಶ ಅರ್ಕಸಾಲಿ

ಪ್ರವೀಣ ಕುಲಕರ್ಣಿ

ಒಮ್ಮೆ ಹಾವಾಡಿಗರ ಪುಂಗಿಯಂತೆ, ಮತ್ತೊಮ್ಮೆ ಬಿಸ್ಮಿಲ್ಲಾ ಖಾನರ ಶಹನಾಯ್‌ನಂತೆ, ಮಗದೊಮ್ಮೆ ಯುರೋಪಿಯನ್ನರ ಬ್ಯಾಗ್‌ಪೈಪರ್‌ನಂತೆ ನಾದದ ಅಲೆ ಎಬ್ಬಿಸುವ ಈ ವಾದ್ಯ, ಆಕಾರದಲ್ಲೂ ಸೊಬಗಿನಲ್ಲೂ ಅವುಗಳನ್ನೆಲ್ಲ ಮೀರಿಸಿ ನಿಲ್ಲುವಂಥದ್ದು. ತನ್ನ ಮೇಲಿನ ಅಲಂಕಾರ ಹೆಚ್ಚಿದಂತೆಲ್ಲ ಮನುಷ್ಯನಿಗಿಂತಲೂ ಎತ್ತರವಾಗಬಲ್ಲ ಈ ವಾದ್ಯವನ್ನು ಊದುವಾಗ, ವಾದಕ ತನ್ನ ಕೊರಳಿಗೆ ಅದನ್ನು ಬಿಗಿದು ಕಟ್ಟಿಕೊಳ್ಳಬೇಕು. ಇಲ್ಲದಿದ್ದರೆ ಊದಲು ಬ್ಯಾಲೆನ್ಸ್ ಸಿಗುವುದಿಲ್ಲ. ನಾದದ ಅಲೆಯೂ ಏಳುವುದಿಲ್ಲ. ಆಗ ಹುಡುಗಿಯರಿಗೆ ಹೆಜ್ಜೆ ಹಾಕಲೂ ಆಗುವುದಿಲ್ಲ.

ನೆತ್ತಿಯ ಮೇಲೆ ನವಿಲಿನಾಕಾರದ ಮುಖವನ್ನೂ ಕೆಳಗೆ ತಾಳೆ ಎಲೆಗಳಿಂದ ಮಾಡಿದ ಅಗಲವಾದ ಕೊಳವೆಯನ್ನೂ ಹೊಂದಿದ ಈ ವಾದ್ಯವನ್ನು ನೋಡುವುದೇ ಒಂದು ಚೆಂದ. ಅಂದಹಾಗೆ, ವರ್ಲಿ ಬುಡಕಟ್ಟು ಜನರ ಸಾಂಪ್ರದಾಯಿಕ ಆಚರಣೆಗಳ ಅವಿಭಾಜ್ಯ ಅಂಗವಾಗಿರುವ ಈ ವಾದ್ಯದ ಹೆಸರು ತಾರಪಾ ಎಂದು. ಪುಂಗಿ, ಶಹನಾಯ್, ಕೊಳಲು, ಬ್ಯಾಗ್‌ಪೈಪರ್‌ನಂತೆ ತಾರಪಾ ಸಹ ಒಂದು 'ಊದುವ ವಾದನ'. ಯಾವುದೇ ವರ್ಲಿ ಕಲಾಕೃತಿಯಲ್ಲಿ, ಆ ಕಲೆಗಾರಿಕೆಯ ಠಸ್ಸೆ ಎಂಬಂತೆ, ತಾರಪಾ ಚಿತ್ರ ಇದ್ದೇ ಇರುವುದನ್ನು ಕಾಣಬಹುದು.

ಭಿಕ್ಲ್ಯಾ ಲಡ್ಕ್ಯಾ ಧಿಂಡಾ – ಈ ವಾದ್ಯವನ್ನು ತಯಾರಿಸಿ, ನುಡಿಸುವ ವರ್ಲಿ ಬುಡಕಟ್ಟಿನ ಕೊನೆಯ ಕುಡಿಗಳಲ್ಲಿ ಒಬ್ಬರು. ಅವರಿಗೀಗ ಬರಿ 85 ವರ್ಷ! ಅವರನ್ನು ಮಾತನಾಡಿಸಬೇಕಲ್ಲ ಎಂದು ಮುಂಬೈಯಲ್ಲಿರುವ ಗೆಳೆಯ ರಾಘವೇಂದ್ರನನ್ನು ಕೇಳಿದೆ. ಅವನಿಗೆ ಭಿಕ್ಲ್ಯಾ ಅವರನ್ನು ಸಂಪರ್ಕಿಸಲು ಅಸಾಧ್ಯವಾದರೂ ಆ ಮಹಾನ್ ಸಂಗೀತ ಕಲಾವಿದನನ್ನು ಸಂದರ್ಶಿಸಿ ಸಿದ್ಧಪಡಿಸಿದ್ದ ಸಾಕ್ಷ್ಯಚಿತ್ರವೊಂದನ್ನು ಕಳುಹಿಸಿಕೊಟ್ಟ. ಜತೆಗೆ ಅವರನ್ನು ಮಾತನಾಡಿಸಿ ಬಂದವರ ಸಂಪರ್ಕವೂ ಸಿಕ್ಕಿತು. ಹಾಗೆಯೇ ತಾರಪಾದೊಡನೆ ಹೆಜ್ಜೆ ಹಾಕುವುದೂ ಶುರುವಾಯಿತು.

'ನನ್ನ ಈ ಸಂಗೀತವು ನನ್ನ ನೆಲ ನನಗೆ ಕೊಟ್ಟಿರುವ ಕಾಣಿಕೆ. ಈ ಸಂಗೀತವೇ ನನ್ನ ಬದುಕು. ನನ್ನ ಬದುಕಿಗೆ ಬೇಕಾದ ಎಲ್ಲವನ್ನೂ ಅದು ಕೊಟ್ಟಿದೆ' ಎಂದೆನ್ನುವ ಭಿಕ್ಲ್ಯಾ, ಮಹಾರಾಷ್ಟ್ರದ ಕೊಂಕಣ ಪ್ರದೇಶದ ವಾಲ್ವಂಡಾ ಗ್ರಾಮದವರು. 'ನೀವು ತಾರಪಾ ನುಡಿಸಬೇಕೆಂದರೆ ಅದನ್ನು ನೀವೇ ತಯಾರಿಸಿಕೊಳ್ಳಬೇಕು. ಏಕೆಂದರೆ, ಬೇರೆ ವಾದ್ಯಗಳಂತೆ ಇದು ನಿಮಗೆ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ' ಎಂದೆನ್ನುವ ಈ ಅಜ್ಜ, ಸ್ವತಃ ವಾದ್ಯ ತಯಾರಕ, ವಾದಕ ಹಾಗೂ ವಾದನಕ್ಕೆ ತಕ್ಕಂತೆ ಹೆಜ್ಜೆ ಹಾಕುವುದನ್ನೂ ಕಲಿಸುವ ಸಾಧಕ.

ಹಳ್ಳಿಯ ಸುತ್ತಲಿನ ಕಾಡಿನಲ್ಲಿ ಸಿಗುವ ಸೋರೆಕಾಯಿ, ಬಿದಿರು, ತಾಳೆ ಮರದ ಎಲೆ ಹಾಗೂ ಜೇನುಗೂಡಿನ ಮೇಣ – ಇಷ್ಟೇ ಈ ವಾದ್ಯವನ್ನು ತಯಾರಿಸಲು ಬೇಕಾಗಿರುವ ಪರಿಕರಗಳು. ಅವುಗಳನ್ನೆಲ್ಲ ಸುತ್ತ ಹರಡಿಕೊಂಡು ಕುಳಿತ ಉದ್ದನೆಯ ಬಿಳಿಗಡ್ಡದ ಈ ಅಜ್ಜ, ಪ್ರಯೋಗಶಾಲೆಯೊಂದರಲ್ಲಿ ಯಾವುದೋ ಗಹನವಾದ ಪ್ರಯೋಗದಲ್ಲಿ ತಲ್ಲೀನರಾದ ವಿಜ್ಞಾನಿಯಂತೆ ಗೋಚರಿಸುತ್ತಾರೆ. ಮೊತ್ತಮೊದಲು ಬಿದಿರಿನಿಂದ ಕೊಳಲಿನಂತಹ ಎರಡು ಸಾಧನಗಳನ್ನು ಸಿದ್ಧಪಡಿಸಿಕೊಳ್ಳುವ ಈ ಅಜ್ಜ, ಅವೆರಡನ್ನೂ ಅಕ್ಕಪಕ್ಕ ಜೋಡಿಸಿ ಕಟ್ಟುತ್ತಾರೆ. ಕಟ್ಟಿದ ಮೇಲೆ ಒಮ್ಮೆ ಊದಿ ನೋಡುತ್ತಾರೆ. ಅವುಗಳಿಂದ ಕೀರಲು ಧ್ವನಿ ಹೊರಟ ಮೇಲೆ, 'ಇದೇ ನೋಡಿ ನಮ್ಮ ವಾದ್ಯದ ಧ್ವನಿಪೆಟ್ಟಿಗೆ. ಇಲ್ಲಿಂದ ಉಗಮವಾಗುವ ಧ್ವನಿಗೆ ಮಾರ್ದವತೆಯನ್ನು ತುಂಬುವುದು ಮೇಲಿನ ಸೋರೆಕಾಯಿ ಮತ್ತು ಕೆಳಗಿನ ತಾಳೆ ಎಲೆಯ ಕೊಳವೆ' ಎಂದು ವಿವರಿಸುತ್ತಾರೆ.


ಹೊಟ್ಟೆ ಬಗೆದು, ಒಳಗೆಲ್ಲ ಖಾಲಿಮಾಡಿದ ಮತ್ತು ಒಣಗಿದ, ಉದ್ದನೆಯ ಸೋರೆಕಾಯಿಯನ್ನು ವಾದ್ಯದ ಮೇಲ್ಭಾಗದಲ್ಲಿ ಜೋಡಿಸುತ್ತಾರೆ. ಗಾಳಿಯು ಸೋರದಂತೆ ಮೇಣದಿಂದ ಎಲ್ಲ ಕಡೆಗಳ ಬಿರುಕುಗಳನ್ನೂ ಮುಚ್ಚುತ್ತಾರೆ. ಅದಕ್ಕೆ ಮತ್ತೊಂದು ಸೋರೆಕಾಯಿಯನ್ನು ಜೋಡಿಸಿ ನವಿಲಿನ ಮುಖದ ಆಕಾರವನ್ನು ಕೊಡುತ್ತಾರೆ. ಅದರ ಮೇಲೆ ತುರಾಯಿ ಬೇರೆ! ಕೆಳತುದಿಯಲ್ಲಿ ತಾಳೆಮರದ ಎಲೆಗಳಿಂದ ಸುತ್ತುತ್ತಾ ದೊಡ್ಡ ಕೊಳವೆಯನ್ನು ಮಾಡುತ್ತಾರೆ. ನಾವು ಚಿಕ್ಕವರಿದ್ದಾಗ ತೆಂಗಿನ ಗರಿಯಿಂದ ಪೀಪಿ ಮಾಡುತ್ತಿದ್ದೆವಲ್ಲ, ಅದೇ ರೀತಿ. ಎಲೆ ಸುತ್ತುತ್ತಾ ಹೋದಂತೆ ಆ ಕೊಳವೆ ಗಾತ್ರ ಸಣ್ಣದರಿಂದ ದೊಡ್ಡದಾಗುತ್ತಾ ಸಾಗುತ್ತದೆ. ಆ ಕೊಳವೆಯನ್ನು ತುಸು ಬಾಗಿಸಿ, ದಾರದಿಂದ ಮಧ್ಯದ ಭಾಗಕ್ಕೆ ಕಟ್ಟುತ್ತಾರೆ. ಮೇಲೆ ನವಿಲಿನ ಗರಿಯನ್ನೂ ಸಿಕ್ಕಿಸುತ್ತಾರೆ. ಇಷ್ಟಾದರೆ ತಾರಪಾ ನುಡಿಸಲು ಸಿದ್ಧ.

ನವಿಲಿನಾಕಾರ ತೊಟ್ಟುಕೊಂಡು ಸಂಪೂರ್ಣ ಸಿದ್ಧವಾದ ತಾರಪಾ ವಾದ್ಯವನ್ನು ನುಡಿಸಲು ನಿಂತರೆ, ಆಹಾ... ಸ್ವರ್ಗ ಮೂರೇ ಗೇಣು! ಅದಕ್ಕೇ ಭಿಕ್ಲ್ಯಾ ಅಜ್ಜ ಹೇಳುತ್ತಾರೆ: 'ನಾನು ತಾರಪಾ ನುಡಿಸಲು ನಿಂತರೆ ಎದುರಿಗೆ ಇರುವ ಜನರಿಗೆ ಬೇರೆ ಆಯ್ಕೆಯೇ ಇರುವುದಿಲ್ಲ, ಕುಣಿಯುವುದೊಂದನ್ನು ಬಿಟ್ಟು.' ತಾವು ಬಾಳಿ ಬದುಕಿದ ನೆಲದ ಮೇಲೆ ಈ ಅಜ್ಜನಿಗೆ ಎಲ್ಲಿಲ್ಲದ ಪ್ರೇಮ. 'ನನ್ನ ನೆಲದ ಒಳಿತಿಗಾಗಿಯೇ ನಾನು ತಾರಪಾವನ್ನು ನುಡಿಸುವುದು. ದೇವರಿಗೆ ಅತ್ಯಂತ ಪ್ರಿಯವಾದ ವಾದನ ಇದಾಗಿದೆ. ಏಕೆಂದರೆ, ಆತಕೊಟ್ಟ ವಸ್ತುಗಳಿಂದಲೇ ಈ ವಾದ್ಯ ರೂಪುಗೊಂಡಿದೆ. ಲವಲೇಷದಷ್ಟೂ ಕೃತ್ರಿಮತೆ ಇದರಲ್ಲಿಲ್ಲ' ಎಂದು ಹೆಮ್ಮೆಯಿಂದ ಹೇಳುತ್ತಾರೆ.

ತಾರಪಾ ವಾದನದ ಊದುಗೊಳವೆ ಒಮ್ಮೆ ಭಿಕ್ಲ್ಯಾ ಅವರ ಬಾಯಿಯನ್ನು ಹೊಕ್ಕಿತೆಂದರೆ ಮುಗಿಯಿತು, ಗಂಟೆಗಟ್ಟಲೆ ವಿಶ್ರಾಂತಿ ಇಲ್ಲ. ಬಲೂನಿನಂತೆ ಬಾಯಿ ಉಬ್ಬಿಸಿ, ಊದುಗೊಳವೆಯೊಳಗೆ ಗಾಳಿಯನ್ನು ತೂರಿಸುತ್ತಲೇ ಇರಬೇಕು. ತಾರಪಾ ನೃತ್ಯದಲ್ಲಿ ಜೋರು 'ಆ್ಯಕ್ಷನ್' ಇರುವುದರಿಂದ ಅರೆಕ್ಷಣವೂ ಸುಧಾರಿಸಿಕೊಳ್ಳಲು ಅವಕಾಶ ಇರುವುದಿಲ್ಲ. ವಾದನವನ್ನು ಕತ್ತಿಗೆ ಬಿಗಿದು ಕಟ್ಟುವ ಕಾರಣ 'ಆ್ಯಕ್ಷನ್' ಮುಗಿಯುವವರೆಗೆ ಬಾಯಿಯಿಂದ ಊದುಗೊಳವೆ ತೆಗೆಯಲೂ ಆಗುವುದಿಲ್ಲ. ತಂಗಾಳಿ ಬೀಸುವಾಗ ಅಗ್ಗಿಷ್ಟಿಕೆಯ ಮುಂದೆ ವರ್ಲಿ ಯುವತಿಯರು ಒಬ್ಬರ ಸೊಂಟ ಒಬ್ಬರು ಹಿಡಿದುಕೊಂಡು ಹೆಜ್ಜೆ ಹಾಕತೊಡಗಿದಾಗ ತಾರಪಾ ವಾದ್ಯಗೋಷ್ಠಿ ತಾರಕಕ್ಕೇರುತ್ತದೆ. ಭಿಕ್ಲ್ಯಾ ಅಜ್ಜ, ತನಗೆ ವಯಸ್ಸು ಆಗಿರುವುದನ್ನೂ ಮರೆತು ಅತ್ತಿಂದಿತ್ತ ಹೆಜ್ಜೆ ಹಾಕುತ್ತಾ, ತಾರಪಾ ನುಡಿಸುತ್ತಾ, ಗೋಷ್ಠಿಗೆ ಒಂದು ಅಲೌಕಿಕವಾದ ಸೊಬಗನ್ನು ತುಂಬುತ್ತಾರೆ.

ಭಿಕ್ಲ್ಯಾ ಅಜ್ಜನ ಪಾಲಿಗೆ ಇದೊಂದು ದೈವೀ ಕಲೆ. ಅವರ ಮಾತುಗಳೂ ಅಷ್ಟೆ. ಶಾಲೆಯ ಮೆಟ್ಟಿಲನ್ನೇ ಏರದ ಈ ಅಜ್ಜ ತತ್ವಜ್ಞಾನಿಯಂತೆ ಮಾತನಾಡುತ್ತಾರೆ ಮತ್ತು ಕೇಳಿಸಿಕೊಳ್ಳುವವರು 'ಅಹುದು ಅಹುದು' ಎಂದು ತಲೆ ಆಡಿಸುವಂತೆ ಆ ಮಾತುಗಳು ಇರುತ್ತವೆ. 'ನನ್ನೂರು ನನಗೆ ಇರಲೊಂದು ಸೂರು ಕೊಟ್ಟಿದೆ. ಹೊಟ್ಟೆ–ಬಟ್ಟೆಗೆ ಕೊರತೆ ಮಾಡಿಲ್ಲ. ಬೇರೆ ವೈಭೋಗ ತೆಗೆದುಕೊಂಡು ನಾನೇನು ಮಾಡಲಿ' ಎಂದು ಕೇಳುತ್ತಾರೆ. 'ನನಗೀಗ 85 ವರ್ಷ. ಹಲ್ಲುಗಳು ಇನ್ನೂ ಗಟ್ಟಿಯಾಗಿವೆ. ಎಂದಿಗೂ ಉಸಿರಾಟದ ಸಮಸ್ಯೆ ಕಾಡಿಲ್ಲ. ಜ್ವರ ಎಂದರೆ ಏನೆಂಬುದು ನನಗೆ ಗೊತ್ತಿಲ್ಲ. ಏಳು ವರ್ಷದ ಮರಿಮೊಮ್ಮಗನೂ ಇದ್ದಾನೆ. ಇಂತಹ ತುಂಬು ಜೀವನ ನನ್ನದು. ತಾರಪಾದೊಂದಿಗಿನ ಬದುಕಿನ ಯಾನ ಸುಂದರವಾಗಿದೆ. ನನಗೆ ಎಲ್ಲವನ್ನೂ ಕೊಟ್ಟಿರುವ ದೇವರಿಗೆ ಈ ವಾದ್ಯವನ್ನು ನುಡಿಸುವುದೇ ನಾನು ಸಲ್ಲಿಸುವ ಪೂಜೆ' ಎನ್ನುತ್ತಾರೆ.

ನಮ್ಮ ರಾಜ್ಯದ ಕುಣಬಿ ಸಮುದಾಯದಲ್ಲೂ ತಾರಪಾದಂತಹ ವಾದ್ಯ ಬಳಕೆಯಲ್ಲಿತ್ತಂತೆ. ಆದರೆ, ಇತ್ತೀಚಿನ ದಶಕಗಳಲ್ಲಿ ಅದರ ಬಳಕೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿದ್ದು, ಈಗ ಜೋಯಿಡಾ ಭಾಗದಲ್ಲಿ ಹುಡುಕಿದರೂ ಈ ವಾದ್ಯ ಸಿಗುವುದಿಲ್ಲ.



ಭಿಕ್ಲ್ಯಾ ಅಜ್ಜನ ವಾದ್ಯ ತಯಾರಿಕೆ ಕಾರ್ಯಾಗಾರ



ತಾರಪಾ ವಾದ್ಯದ ಸಂಗ್ರಹಾಗಾರ

ಅಳುವು ಸಹಜದ ಧರ್ಮ

8ನೇ ಪುಟದಿಂದ...

ಪ್ರಸಿದ್ಧ ಮಾನವಶಾಸ್ತ್ರಜ್ಞ ಆಷ್ಲೀ ಮಾಂಟೆಗು ಬರೆದಿರುವ 'ಮ್ಯಾನ್ ಇನ್ ಪ್ರಾಸೆಸ್' ಎಂಬ ಪುಸ್ತಕದಲ್ಲಿ 'ವೈ ಮ್ಯಾನ್ ವೀಪ್ಸ್' ಎಂಬ ಅಧ್ಯಾಯವಿದೆ. ಅದರ ಸಾರಾಂಶ ಇಷ್ಟು: ಹುಟ್ಟಿದ ಮಗು ಸುಮಾರು ಹತ್ತು ವಾರ ತುಂಬುವವರೆಗೂ ಸಾಮಾನ್ಯವಾಗಿ ಅಳುವುದಿಲ್ಲ. ಆದ್ದರಿಂದ ಅಳು ಹುಟ್ಟಿನಿಂದಲ್ಲ, ತಡವಾಗಿ ಗಳಿಸಿಕೊಂಡ ವರ್ತನೆ. ಮಗುವಿಗೆ ಮೊದಲ ವರ್ಷ ಅಥವಾ ಅದಕ್ಕೂ ಹೆಚ್ಚು ಕಾಲ ಮಾತಾಡುವುದಕ್ಕೆ ಬರುವುದಿಲ್ಲ. ಆ ಅವಧಿಯಲ್ಲಿ ಅದು ತನ್ನ ಅಗತ್ಯಕ್ಕಾಗಿ ಅಳುವುದರ ಮೂಲಕವಷ್ಟೇ ಇತರರ ಗಮನ ಸೆಳೆಯಬಲ್ಲುದು.

ಅಳುವುದಿದೆಯಲ್ಲ, ಅದು ಭೌತಿಕ ಕಾರ್ಯಗಳ ಜೊತೆಗೆ ಒಂದು ಅತ್ಯಂತ ಮಹತ್ವದ ಸಂವಹನ ವಿಧಾನವೂ ಆಗಿದೆ. ನೋವಿನಿಂದ ಸುರಿಯುವ ಕಣ್ಣೀರಿಗೂ ಅತೀವ ಸಂತೋಷದಿಂದ ಸುರಿಯುವ ಆನಂದಬಾಷ್ಪಕ್ಕೂ ನಡುವೆ ಮನುಷ್ಯರು ಅಳುವುದಕ್ಕೆ ಕಾರಣವಾಗುವ ಸಂಗತಿಗಳ ಒಂದು ಸುದೀರ್ಘ ವ್ಯಾಪ್ತಿಯೇ ಇದೆ.

ಸಂದರ್ಭ ಯಾವುದೇ ಇರಲಿ, ಅಳುತ್ತಿರುವವರನ್ನು ಕಂಡಾಗ ನೋಡುವವರಲ್ಲಿ ಉಂಟಾಗುವುದು ಅನುಕಂಪ ಅಥವಾ ಸಹಾನುಭೂತಿ. ಅಳುವುದೆಂದರೆ ದುಃಖ ಯಾತನೆಗಳನ್ನು ವ್ಯಕ್ತಪಡಿಸುವ ಒಂದು ಶಕ್ತ ವಿಧಾನವಷ್ಟೇ ಅಲ್ಲ, ಬೇರೆಯವರ ಅನುಕಂಪವನ್ನೂ ನೆರವನ್ನೂ ಪಡೆದುಕೊಳ್ಳುವ ವಿಶಿಷ್ಟ ಮಾಧ್ಯಮವೂ ಹೌದು. ಆದ್ದರಿಂದ ಅಳುವಿನದು ಒಬ್ಬ ವ್ಯಕ್ತಿಯನ್ನು ಹೇಗೋ ಹಾಗೆ ಒಂದು ಸಮುದಾಯವನ್ನೂ 'ಮಾನವೀಯ'ಗೊಳಿಸುವ, ದಯಾಮಯಗೊಳಿಸುವ ಪರಿಣಾಮ. ಕೆಲವು ಸಮಾಜಗಳಲ್ಲಿ ಬಹಿರಂಗವಾಗಿ ಅಳುವುದು ನಿಷಿದ್ಧವಾಗಿರಬಹುದು. ಆದರೆ ಅಳುವೆನ್ನುವುದೊಂದು ಸಾಮಾಜಿಕವಾಗಿ ಪರಸ್ಪರ ಸಂಬಂಧವುಂಟುಮಾಡುವ ಶಕ್ತಿಯೆಂದು ಬಗೆದಿರುವ ನಮ್ಮಂಥ ದೇಶಗಳಲ್ಲಿ ಮನುಷ್ಯ ಮನುಷ್ಯರ ನಡುವೆ ಆಳವಾದ ಸ್ನೇಹಪರತೆ ಇರುವುದನ್ನು ಮರೆಯುವಂತಿಲ್ಲ.

ಒಂದು ವೇಳೆ ಅಂತಹ ಸ್ನೇಹಪರತೆ ಇಲ್ಲದಿದ್ದರೂ ಉಳ್ಳವರು ಕೆಲವರು ಅಳುವವರನ್ನು ನೇಮಿಸಿಕೊಂಡು ಅಳಿಸುವ ಪರಂಪರೆ ನಮ್ಮಲ್ಲಿದೆ. ಮಹಾಶ್ವೇತಾದೇವಿ ಅವರು ಬರೆದಿರುವ 'ರುಡಾಲಿ' ಹತಭಾಗ್ಯಳೊಬ್ಬಳ ಜೀವನವನ್ನು ಚಿತ್ರಿಸುವ ಕತೆ. ಶನಿಚರಿ ಎಂಬ ಈಕೆ ತನ್ನ ಹೆಸರೇ ಸೂಚಿಸುವಂತೆ ಶನಿವಾರ ಹುಟ್ಟಿದವಳು; ಆದ್ದರಿಂದ ಜೀವನದಲ್ಲಿ ಒಂದಿಷ್ಟು ಸುಖವೋ ಸಂಭ್ರಮವೋ ಇಲ್ಲದೆ ಬದುಕಬೇಕಾದವಳು. ಎಳೆಯ ವಯಸ್ಸಿನಲ್ಲೇ ತಬ್ಬಲಿಯಾಗುವ ಈಕೆ ತನ್ನ ಬಂಧುಗಳನ್ನು, ಗಂಡನನ್ನು, ಮಗನನ್ನು ಕಳೆದುಕೊಂಡ ಸಂದರ್ಭಗಳಲ್ಲಿ ಅಳುವುದಿಲ್ಲ. ಆದರೆ ಬದುಕುವುದಕ್ಕಾಗಿ ಉಳ್ಳವರ ಶವಸಂಸ್ಕಾರದ ಸಂದರ್ಭಗಳಲ್ಲಿ ಸಾರ್ವಜನಿಕವಾಗಿ ಎದೆಬಡಿದುಕೊಂಡು ಅಳುತ್ತಾಳೆ. ಅದೇ ಅವಳ ದಂಧೆಯಾಗುತ್ತದೆ. ಲೇಖಕಿ ಮಹಾಶ್ವೇತಾದೇವಿ ಪರಿಸ್ಥಿತಿಯ ವ್ಯಂಗ್ಯವನ್ನು ಸೂಕ್ಷ್ಮವಾಗಿ ಸೂಚಿಸುವ ಮೂಲಕ ಈ ಕತೆಯ ಭಾವತೀವ್ರತೆಯನ್ನು ಹೆಚ್ಚಿಸಿದ್ದಾರೆ.

ಈಗ ಅರ್ಜೆಂಟೀನಾದ ಸರ್‌ರಿಯಲಿಸ್ಟ್ ಕತೆಗಾರ, ಕಾದಂಬರಿಕಾರ ಹುಲಿಯೊ ಕೋರ್ತಜಾರ್ ರಚಿಸಿರುವ ಒಂದು ಗಪದ್ಯವನ್ನು ಓದಿ - ನನ್ನ ಅನುವಾದದಲ್ಲಿ:

ಅಳಬೇಕು ಹೇಗೆ?
ಈ ಕ್ಷಣ ಅಳುವಿನ ಕಾರಣವನ್ನು ಬದಿಗಿಟ್ಟು
ಗಮನ ಕೊಡೋಣ ಅಳುವುದರ ಬಗ್ಗೆ
ಅಳುವುದೆಂದರೆ ಹೇಗೆ
ಅದೂ ಸರಿಯಾಗಿ
ಭಾರೀ ಉದ್ವೇಗದಿಂದಲ್ಲ, ನಗುವಿಗೆ ಸಮನಾಗಲ್ಲ
ಕರಾರುವಾಕ್ಕಾಗಿ
ದಿನನಿತ್ಯದ ಅಳುವೆಂದರೆ ಮುಖ
ತುಸು ಹಿಂಡಿದಂತಾಗುತ್ತೆ, ಕಣ್ಣೀರಿನ ಜೊತೆ ಉಕ್ಕುಕ್ಕಿ
ಬರುತ್ತೆ ಮೂಗಲ್ಲಿ ತುಸುವೇ ತುಸು ನೀರು. ಅದೂ ಕೊನೆಗೆ.
ಯಾಕೆಂದರೆ ಜೋರಾಗಿ ಮೂಗು ಸೊರಗುಟ್ಟಿದ್ದೆ
ನಿಂತುಹೋಗುತ್ತೆ ಅಳು
ಅಳಬೇಕಾದರೆ ನೀವು ಯೋಚಿಸಬೇಕು ನಿಮ್ಮ ಬಗ್ಗೆ
ಹಾಗಿರದೆ ನೀವು ಹೊರಗಣ ಪ್ರಪಂಚವನ್ನೇ ನಂಬುವವರಾದರೆ
ಯೋಚಿಸಿ ಇರುವೆಗಳು ಮುತ್ತಿಕೊಂಡ
ಒಂದು ಬಾತುಕೋಳಿಯ ಬಗ್ಗೆ
ಅಥವಾ ಯಾರೂ ಯಾನಮಾಡಲಾಗದ
ಜಲಸಂಧಿಯ ಬಗ್ಗೆ
ಅಳುವ ವಿಷಯಕ್ಕೇ ಬರುವುದಾದರೆ ಎರಡೂ ಕೈಯಿಗಳಿಂದ
ಮುಖ ಮುಚ್ಚಿಕೊಳ್ಳಿ ಮುಚ್ಚಟೆಯಾಗಿ
ಮಕ್ಕಳು ತಮ್ಮ ಅಂಗಿಯ ತೋಳನ್ನು
ಮುಖಕ್ಕಿಟ್ಟುಕೊಂಡು ಅಳಬೇಕು ಸಾಧ್ಯವಾದರೆ
ರೂಮಿನೊಂದು ಮೂಲೆಯಲ್ಲಿ
ಅಳುವಿನ ಸರಾಸರಿ ಅವಧಿ ಮೂರು ನಿಮಿಷ


ಅಳುವೆನ್ನುವುದು ಮೂರು ನಿಮಿಷದಷ್ಟು ದೀರ್ಘವಾಗಿರಲಿ ಅಥವಾ ಮೂರು ಸೆಕೆಂಡಿನಷ್ಟು ಹ್ರಸ್ವವಾಗಿರಲಿ, ಅದು ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮ ಮಾತ್ರ ಅನೂಹ್ಯ, ಅಪಾರ. ಅದೊಂದು ರೀತಿ ಸದಾ ನೋಯುವ ಗಾಯದಂತೆ.

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ

ಡಬ್ಬ ಚಿಕ್ಕ ಕೇಶ್ರಸ್ಸು ಕಥೆಯ — ಮಾಯಾ ಪಾತ್ರೆ


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ರೈತನೊಬ್ಬ ಬಿತ್ತನೆ ಕಾರ್ಯ ಆರಂಭಿಸಲು ತನ್ನ ಹೊಲವನ್ನು ಉಳಲು ಹೋಗಿದ್ದ. ಊಳುವಾಗ ಅವನ ರಂಟೆಗೆ ಯಾವುದೋ ವಸ್ತು ಸಿಕ್ಕಿಹಾಕಿಕೊಂಡಂತೆ ಭಾಸವಾಯಿತು. ತೆಗೆದು ನೋಡಿದರೆ ಅಗಲವಾದ ಲೋಹದ ಪಾತ್ರೆ




ಲೋಹದ ಪಾತ್ರೆಯು ದೇವರು ತನಗೆ ಕರುಣಿಸಿದ ವರವೇ ಇರಬೇಕೆಂದು ಆತ ಮನೆಗೆ ಹೊತ್ತೊಯ್ದ. ಈ ಪಾತ್ರೆ ತನ್ನ ಬಡತನವನ್ನು ಹೇಗೆ ನೀಗಿಸೀತು ಎಂದು ಯೋಚಿಸುತ್ತಲೇ ಮನೆಯ ದಾರಿಯನ್ನು ಸವೆಸಿದ



ಮನೆಗೆ ಹೋಗಿ ಒಂದು ಮೂಲೆಯನ್ನು ಆ ಪಾತ್ರೆಯನ್ನು ಇಟ್ಟ. ಅದನ್ನು ಖಾಲಿ ಇಡುವುದೇಕೆ ಎಂದು ಅದರಲ್ಲಿ ಒಂದು ಮಾವಿನ ಹಣ್ಣು ಹಾಕಿದ. ನೋಡನೋಡುತ್ತಿದ್ದಂತೆ ಅದೇ ತರಹದ ನೂರಾರು ಹಣ್ಣುಗಳು ಸೃಷ್ಟಿಯಾದವು



ಬೇಕಾದುದನ್ನು ಸೃಷ್ಟಿಸಿಕೊಂಡು ರೈತ ಶ್ರೀಮಂತನಾದ. ರೈತನ ದಿಢೀರ್ ಶ್ರೀಮಂತಿಕೆ ಅಕ್ಕಪಕ್ಕದವರ ಕಣ್ಣು ಕುಕ್ಕಿಸಿತು. ಒಮ್ಮೆ ಕುತೂಹಲದಿಂದ ಕಿಟಕಿಯಿಂದ ನೋಡಿದಾಗ ಅವರಿಗೆ ಮಾಯಾ ಪಾತ್ರೆಯ ಗುಟ್ಟು ತಿಳಿಯಿತು



ಹೊಟ್ಟೆಕಿಚ್ಚಿನಿಂದ ಕರುಬಿದ ಅವರು ಹೋಗಿ ರಾಜನಿಗೆ ಸುದ್ದಿ ಮುಟ್ಟಿಸಿದರು. ಇಂತಹದ್ದೊಂದು ಪಾತ್ರೆ ಇರುವುದಾದರೆ ಅದು ತನ್ನಲ್ಲಿಯೇ ಇರಬೇಕು ಎಂದು ನಿರ್ಧರಿಸಿದ ರಾಜ, ಅದನ್ನು ತರುವಂತೆ ಆದೇಶಿಸಿದ



ಅರಮನೆಗೆ ಬಂದ ಪಾತ್ರೆಯನ್ನು ರಾಜ ಕುತೂಹಲದಿಂದ ನೋಡುವಾಗ ಅದರಲ್ಲಿ ಜಾರಿ ಬಿದ್ದುಬಿಟ್ಟ. ಕೂಡಲೇ ನೂರಾರು ರಾಜರು ಸೃಷ್ಟಿಯಾಗಿ ಒಬ್ಬರಿಗೊಬ್ಬರು ಬಡಿದಾಡಿಕೊಂಡು ಸತ್ತರು. ಅತೀ ಆಸೆ ಮಾಡಿದ ನಿಜ ರಾಜನೂ ಸತ್ತ

ಶಬ್ದಗಳಲ್ಲಿ ಸರಸ...

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಆದಿ–ಅಂತ್ಯ ಒಂದೇ ಇರುವ ಅಕ್ಷರಗಳಿಗೆ ಮಧ್ಯದಲ್ಲಿ ಇನ್ನೊಂದು ಅಕ್ಷರ ತುಂಬಿ ಪದ ಮಾಡಿ ಹೇಗಾದರೂ ಓದಿ.

1. ಕ __ ಕ
2. ಕ __ ಕ
3. ಕ __ ಕ
4. ಕ __ ಕ
5. ಕ __ ಕ
6. ಕ __ ಕ

2. ನಗುನಗುತ ಕಲಿ

MGR- ನೆನಪಿಟ್ಟುಕೊಂಡರೆ ಕರ್ನಾಟಕದ ಪಕ್ಷಿಧಾಮಗಳ ಹೆಸರನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು.

M = ಮಂಡಗದ್ದೆ
G = ಗುಡವಿ
R = ರಂಗನತಿಟ್ಟು

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಗ್ಗಿಯಲ್ಲಿ ಮೋಜು

ನೀವು ಯಾವುದೇ ಮಗ್ಗಿ ಬರೆಯಿರಿ. ನಂತರ ಮಗ್ಗಿಯ ಆರಂಭದ ಸಂಖ್ಯೆ ಮತ್ತು ಕೊನೆಯ ಸಂಖ್ಯೆ ಕೂಡಿರಿ. ನಂತರ ಮಗ್ಗಿಯ ಎರಡನೇ ಸಂಖ್ಯೆ ಹಾಗೂ ಕೊನೆಯಿಂದ 9ನೇ ಸಂಖ್ಯೆ ಕೂಡಿರಿ. ಹೀಗೆ ಮುಂದುವರಿದರೆ ಎಲ್ಲ ಸಂಖ್ಯೆಗಳ ಮೊತ್ತ ಒಂದೇ ಆಗಿರುತ್ತದೆ.

6, 12, 18, 24, 30, 36, 42, 48, 54, 60

→ 6+60 = 66
→ 12 + 54 = 66
→ 18+48 = 66
→ 24+42 = 66
→ 30+36 = 66

ಬೇರೆ ಬೇರೆ ಮಗ್ಗಿ ಬರೆದು ನೀವೂ ಆಡಿ ನೋಡಿ.

ಟ್ವೆಂಟಿ – 20 ಮ್ಯಾಚ್

ಚಿಹ್ನೆಗಳಿಗೂ ವಿವರಣೆಗೂ ಹೊಂದಿಸಿ

1.	∈	A.	ಕ್ಕಿಂತ ದೊಡ್ಡದು
2.	∠	B.	ಸೇರಿಲ್ಲ
3.	⊥	C.	ಅಸಮ
4.	□	D.	ನಡುವಿನ ಸಂಬಂಧ
5.	·	E.	ಏಕೆಂದರೆ
6.	Δ	F.	ವರ್ಗ
7.	▭	G.	ಸರ್ವಸಮ
8.	∴	H.	ಲಂಬಕೋನ
9.	%	I.	ತ್ರಿಕೋನ
10.	∩	J.	ಸಂಯೋಗ
11.	>	K.	ಸೇರಿದೆ
12.	:	L.	ದಶಮಾಂಶ ಬಿಂದು
13.	=	M.	ಕ್ಕಿಂತ ಕಡಿಮೆ
14.	∪	N.	ಆಯತ
15.	≡	O.	ಛೇದನ
16.	∵	P.	ಆದುದರಿಂದ
17.	≠	Q.	ಅನುಪಾತ
18.	∉	R.	ಪ್ರತಿಶತ
19.	S	S.	ಸಮ
20.	<	T.	ಕೋನ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ತು ಕ ಉ ಗಿ ದಿ
ಸು ಡು ಡಿ ಬೂ ಡಿ

- ( ) ೦ ( ) ತೆರಿಗೆ
- ( ) ೦ ( ) ಲಾಡು
- ( ) ೦ ( ) ಸಣ್ಣ ಚರಿಗಿ
- ( ) ೦ ( ) ಒಂದು ಸಿಹಿ ಪದಾರ್ಥ
- ( ) ೦ ( ) ತುಕಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಮೇ 9ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪುಟಾಣಿ ಪದಬಂಧ
1. ಗಂಜಿ, 2. ಗುಂಜಿ, 3. ಅಂಜು, 4. ಮಂಜು, 5. ನಂಜು

ಪದ ಒಗಟು...

1	2	3	4	5	6
ಸ	ರ	ಳ	ವಿ	ವಾ	ಹ

ಟ್ವೆಂಟಿ- 20 ಮ್ಯಾಚ್
1-B, 2-S, 3-R, 4-C, 5-T, 6-Q, 7-D, 8-A, 9-E, 10-P, 11-O, 12-F, 13-I, 14-G, 15-H, 16-N, 17-K, 18-M, 19-L, 20-J

ಗೊಂದಲ ಗಣಿತ
ಒಬ್ಬನಿಗೆ 5 ಚಾಕೊಲೇಟ್ ಮತ್ತೊಬ್ಬನಿಗೆ 7 ಚಾಕೊಲೇಟ್ ಕೊಟ್ಟಿದ್ದರು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ವೈಷ್ಣವಿ ಬನ್ನಿಗಿಡದ, ಶಿರೋಳ (ಗದಗ)



ನೇಸರ ವಿ.ಕೆ., ಹರಿಹರ



ಧೃತಿಗೌಡ ಎಚ್.ಎಲ್., ಹಾಸನ


ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಸುಶೀಲ್‌ಗೆ ಜಾಮೀನುರಹಿತ ವಾರಂಟ್

ನವದೆಹಲಿ (ಪಿಟಿಐ): ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದಿದ್ದ ಗಲಾಟೆ ಪ್ರಕರಣದಲ್ಲಿ ಭಾಗಿಯಾಗಿದ್ದರೆನ್ನಲಾದ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸುಶೀಲ್ ಕುಮಾರ್ ಮತ್ತು ಆರು ಜನರಿಗೆ ದೆಹಲಿ ನ್ಯಾಯಾಲಯವು ಶನಿವಾರ ಜಾಮೀನುರಹಿತ ವಾರಂಟ್ ಜಾರಿ ಮಾಡಿದೆ.



ಸುಶೀಲ್ ಕುಮಾರ್

'ಸುಶೀಲ್ ಮತ್ತು ಆರು ಜನರ ವಿರುದ್ಧ ಜಾಮೀನುರಹಿತ ವಾರಂಟ್ ಹೊರಡಿಸುವಂತೆ ನಾವು ಸಲ್ಲಿಸಿದ್ದ ಮನವಿಯನ್ನು ನ್ಯಾಯಾಲಯವು ಪುರಸ್ಕರಿಸಿದೆ. ನಿಯಮದ ಪ್ರಕಾರ ಕ್ರಮ ಜರುಗಿಸಲಾಗುವುದು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈಚೆಗೆ ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದ ಗಲಾಟೆಯಲ್ಲಿ 23 ವರ್ಷದ ಕುಸ್ತಿಪಟು ಸಾಗರ್ ರಾಣಾ ಸಾವಿಗೀಡಾಗಿದ್ದರು. ಇದರಲ್ಲಿ ಸುಶೀಲ್ ಭಾಗಿಯಾಗಿದ್ದಾರೆ ಎಂಬ ಆರೋಪ ಬಂದ ಹಿನ್ನೆಲೆಯಲ್ಲಿ ಅವರು ನಾಪತ್ತೆಯಾಗಿದ್ದಾರೆ. ಪೊಲೀಸರು 'ಲುಕ್ ಔಟ್' ನೋಟಿಸ್ ಹೊರಡಿಸಿದ್ದರು.


ಅಂತರರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಯ ಸದಸ್ಯ ನರಿಂದರ್ ಬಾತ್ರಾ ಅಭಿಮತ

ಒಲಿಂಪಿಕ್ಸ್ ಆಯೋಜನೆ ಸ್ಥೈರ್ಯದ ಸಂಕೇತ

ನವದೆಹಲಿ (ಪಿಟಿಐ): ಕೋವಿಡ್ ಏರುಗತಿಯಲ್ಲಿ ಸಾಗುತ್ತಿರುವುದರಿಂದ ಒಲಿಂಪಿಕ್ಸ್ ಕೂಟವನ್ನು ರದ್ದುಗೊಳಿಸಬೇಕು ಎಂಬ ಬೇಡಿಕೆ ಹೆಚ್ಚಾಗಿರುವುದು ನಿಜ. ಆದರೆ ಟೋಕಿಯೊ ಕೂಟವನ್ನು ಯಶಸ್ವಿಯಾಗಿ ನಡೆಸಿದರೆ ಕೋವಿಡ್‌ಗಿಂತ ನಾವು ಒಂದು ಹೆಜ್ಜೆ ಮುಂದಿರಿಸಿದ್ದೇವೆ ಎಂಬ ಸಂದೇಶವನ್ನು ಜಗತ್ತಿಗೆ ಸಾರಿದಂತಾಗುತ್ತದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಸದಸ್ಯ ನರಿಂದರ್ ಬಾತ್ರಾ ಅಭಿಪ್ರಾಯಪಟ್ಟಿದ್ದಾರೆ.


ನರಿಂದರ್ ಬಾತ್ರಾ

ಕಳೆದ ವರ್ಷ ನಡೆಯಬೇಕಾಗಿದ್ದ ಒಲಿಂಪಿಕ್ ಕೂಟವನ್ನು ಕೋವಿಡ್‌ನಿಂದಾಗಿ ಈ ವರ್ಷಕ್ಕೆ ಮುಂದೂಡಲಾಗಿದೆ. ಜುಲೈ 23ರಂದು ಕೂಟ ಆರಂಭವಾಗಲಿದೆ. ನಿಗದಿಯಂತೆ ಕೂಟ ನಡೆಯಲಿದೆ ಎಂದು ಭಾರತ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷರೂ ಆಗಿರುವ ನರಿಂದರ್ ಬಾತ್ರಾ ಸುದ್ದಿಸಂಸ್ಥೆಗೆ ಶನಿವಾರ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.




ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಬ್ರೆಜಿಲ್‌ನ ಕ್ರೀಡಾಪಟುಗಳು ರಿಯೊ ಡಿ ಜನೈರೊದಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಂಡರು –ರಾಯಿಟರ್ಸ್ ಚಿತ್ರ

'ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳ ಸುರಕ್ಷತೆಗೆ ಎಲ್ಲ ಬಗೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮೂಲಕ ಅವರಿಗೆ ಸ್ಪರ್ಧೆಗಳಲ್ಲಿ ಪರಿಪೂರ್ಣ ಸಾಮರ್ಥ್ಯ ಪ್ರದರ್ಶಿಸಲು ಸಾಧ್ಯವಾಗುವಂತೆ ಮಾಡಲಾಗುತ್ತಿದೆ' ಎಂದು ಅವರು ಹೇಳಿದರು. ಕೋವಿಡ್–19ರ ನಾಲ್ಕನೇ ಅಲೆ ಯಿಂದಾಗಿ ವಿಷಮ ಪರಿಸ್ಥಿತಿ ಇರುವ ಕಾರಣ ಒಲಿಂಪಿಕ್ಸ್ ರದ್ದುಗೊಳಿಸಬೇಕು ಎಂದು ಶುಕ್ರವಾರ ಮನವಿ ಸಲ್ಲಿಸಲಾಗಿದೆ. 3,50,000 ಮಂದಿ ಸಹಿ ಮಾಡಿರುವ ಪತ್ರವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಯ ಮುಖ್ಯಸ್ಥರು ಹಾಗೂ ಟೋಕಿಯೊ ಗವರ್ನರ್ ಯುರಿಕೊ ಕೊಯ್ಕೆ ಅವರಿಗೆ ಸಲ್ಲಿಸಲಾಗಿತ್ತು.

ಒಲಿಂಪಿಕ್ಸ್ ಆರಂಭವಾಗಲು 10 ವಾರಗಳು ಉಳಿದಿರುವಾಗ ಜಪಾನ್‌ನ ಮತ್ತಷ್ಟು ಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ. ಭಾರತ ಸೇರಿದಂತೆ 153 ದೇಶಗಳ ಜಪಾನ್ ಪ್ರವೇಶದ ಮೇಲೆ ಗುರುವಾರ ನಿರ್ಬಂಧ ವಿಧಿಸಲಾಗಿದೆ. ಇದರಿಂದ ಭಾರತದ ಕ್ರೀಡಾಪಟುಗಳ ಒಲಿಂಪಿಕ್ಸ್ ಪಾಲ್ಗೊಳ್ಳುವಿಕೆ ಮೇಲೆ ಪರಿಣಾಮ ಬೀರದು ಎಂದು ಬಾತ್ರಾ ಹೇಳಿದರು.

ಅನಿಶ್ಚಿತ ಸ್ಥಿತಿಗೆ ಕೊನೆ ಹಾಡಿ: ಫೆಡರರ್

ಬೆರಾಂಪೂರ್ (ರಾಯಿಟರ್ಸ್): ಟೋಕಿಯೊ ಒಲಿಂಪಿಕ್ಸ್‌ಗೆ ಸಂಬಂಧಿಸಿದ ಅನಿಶ್ಚಿತ ಸ್ಥಿತಿಗೆ ಅಂತ್ಯ ಹಾಡಬೇಕು ಎಂದು ಟೆನಿಸ್ ದಿಗ್ಗಜ ರೋಜರ್ ಫೆಡರರ್ ಆಗ್ರಹಿಸಿದ್ದಾರೆ. ಕೂಟ ನಡೆಯುತ್ತದೆಯೋ ಇಲ್ಲವೋ ಎಂದು ಇನ್ನೂ ಸ್ಪಷ್ಟವಾಗದೇ ಇರುವುದರಿಂದ ಇನ್ನೂ ದ್ವಂದ್ವದಲ್ಲಿರುವುದಾಗಿ 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಫೆಡರರ್ ಹೇಳಿದ್ದಾರೆ.


ಫೆಡರರ್

'ನಿಜ ಹೇಳುತ್ತಿದ್ದೇನೆ, ಒಲಿಂಪಿಕ್ಸ್ ಸಿದ್ಧತೆಗೆ ಸಂಬಂಧಿಸಿ ಏನು ಮಾಡಬೇಕು ಎಂದು ನನಗೆ ಇನ್ನೂ ತೋಚುತ್ತಿಲ್ಲ' ಎಂದು ಸ್ವಿಟ್ಜರ್ಲೆಂಡ್‌ನ ಟಿವಿ ಚಾನಲ್ ಒಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಡಬಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದ ಫೆಡರರ್ 2012ರ ಲಂಡನ್ ಒಲಿಂಪಿಕ್ಸ್‌ನ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು.

ಸುದ್ದಿ 2 ನಿಮಿಷ

ಟೆನಿಸ್: ಭಾರತ ಜೂನಿಯರ್ ತಂಡದಲ್ಲಿ ಕರ್ನಾಟಕದ ಕ್ರಿಶ್

ಬೆಂಗಳೂರು: ಕರ್ನಾಟಕದ ಕ್ರಿಶ್ ಅಜಯ್ ತ್ಯಾಗಿ ಐಟಿಎಫ್ ವಿಶ್ವ ಜೂನಿಯರ್ ಟೆನಿಸ್ ಚಾಂಪಿಯನ್‌ಷಿಪ್‌ನ (14 ವರ್ಷದೊಳಗಿನವರು) ಏಷ್ಯಾ ಒಷಾನಿಯಾ ಅಂತಿಮ ಅರ್ಹತಾ ಸುತ್ತಿನ ಟೂರ್ನಿಗೆ ಆಯ್ಕೆ ಮಾಡಲಾದ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಜೂನ್ 7ರಿಂದ 12ರವರೆಗೆ ಕಜಕಸ್ತಾನದ ನೂರ್ ಸುಲ್ತಾನ್‌ನಲ್ಲಿ ಈ ಟೂರ್ನಿ ನಡೆಯಲಿದೆ.

ಅಖಿಲ ಭಾರತ ಟೆನಿಸ್ ಸಂಸ್ಥೆಯ (ಎಐಟಿಎ) ಜೂನಿಯರ್ ಆಯ್ಕೆ ಸಮಿತಿಯು ಎರಡು ದಿನಗಳ ಹಿಂದೆ ಸಭೆ ಸೇರಿ ನಾಲ್ಕು ಮಂದಿಯ ತಂಡವನ್ನು ಆಯ್ಕೆ ಮಾಡಿದೆ. ಅವರಲ್ಲಿ ಕ್ರಿಶ್ ಕೂಡ ಒಬ್ಬರು. ರೇತಿನ್ ಪ್ರಣವ್ ಆರ್. ಎಸ್, ಮನಸ್ ಮನೋಜ್ ಧಾಮನೆ ಹಾಗೂ ತೇಜಸ್ ಅಹುಜಾ (ಕಾಯ್ದಿರಿಸಿದ ಆಟಗಾರ) ತಂಡದಲ್ಲಿ ಸ್ಥಾನ ಗಳಿಸಿದ ಇನ್ನುಳಿದ ಮೂವರಾಗಿದ್ದಾರೆ. ಸಾಜಿದ್ ಲೋಧಿ ತಂಡದ ನಾಯಕ.

ಕ್ರಿಶ್ ಅವರು ಸದ್ಯ 14 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ. ಮಾರ್ಚ್‌ನಲ್ಲಿ ಮುಂಬೈನಲ್ಲಿ ನಡೆದ ಟೂರ್ನಿಯಲ್ಲಿ ಅವರು ಈ ಕಿರೀಟ ಧರಿಸಿದ್ದರು.

'ಭಾರತ ತಂಡಕ್ಕೆ ಆಡುವುದು ಹೆಮ್ಮೆಯ ಸಂಗತಿ.ಕಠಿಣ ಪರಿಶ್ರಮ, ದೃಢನಂಬಿಕೆಯಿಂದ ಇದು ಸಾಧ್ಯವಾಗಿದೆ' ಎಂದು 13 ವರ್ಷದ, ಬೆಂಗಳೂರಿನ ಸಿಲ್ವರ್ ಓಕ್ ಇಂಟರ್‌ನ್ಯಾಶನಲ್ ಶಾಲೆಯ ವಿದ್ಯಾರ್ಥಿ ಕ್ರಿಶ್ ಹೇಳಿದ್ದಾರೆ.



ಟೆನಿಸ್: ಫೈನಲ್‌ಗೆ ನಡಾಲ್


ರಫೆಲ್ ನಡಾಲ್ ಆಟದ ವೈಖರಿ–ರಾಯಿಟರ್ಸ್ ಚಿತ್ರ

ರೋಮ್ (ಎಪಿ): ಒಂಬತ್ತು ಬಾರಿಯ ಚಾಂಪಿಯನ್ ರಫೆಲ್ ನಡಾಲ್ ಅವರು ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು. ಶನಿವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು 6–4, 6–4ರಿಂದ ಅಮೆರಿಕದ ರಿಲಿ ಒಪೆಲ್ಕಾ ಎದುರು ಗೆದ್ದರು. ಟೂರ್ನಿಯಲ್ಲಿ ಅವರು 12ನೇ ಬಾರಿ ಪ್ರಶಸ್ತಿ ಸುತ್ತಿಗೆ ತಲುಪಿದ ಸಾಧನೆ ಮಾಡಿದರು.

ಆವೆಮಣ್ಣಿನ ಅಂಗಣದಲ್ಲಿ ತಮ್ಮ 500ನೇ ಪಂದ್ಯವಾಡಿದ ಸ್ಪೇನ್‌ನ ನಡಾಲ್, 1 ತಾಸು 32 ನಿಮಿಷಗಳಲ್ಲಿ ಜಯಭೇರಿ ಮೊಳಗಿಸಿದರು.

ಎಟಿಪಿ ಮಾಸ್ಟರ್ಸ್ 1000 ಟೂರ್ನಿಗಳಲ್ಲಿ 36 ಪ್ರಶಸ್ತಿ ಗೆದ್ದು ನೊವಾಕ್ ಜೊಕೊವಿಚ್ ದಾಖಲೆ ಸರಿಗಟ್ಟುವ ಹಾದಿಯಲ್ಲಿದ್ದಾರೆ ನಡಾಲ್. ಭಾನುವಾರ ನಡೆಯುವ ಫೈನಲ್ ಹಣಾಹಣಿಯಲ್ಲಿ ಅವರು ಜೊಕೊವಿಚ್– ಲೊರೆಂಜೊ ಸೊನೆಗೊ ನಡುವಣ ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸುವರು.

ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಕ್ರಮಾಂಕದ ನೊವಾಕ್ ಜೊಕೊವಿಚ್ ಅವರು ಸ್ಟೆಫಾನೊಸ್ ಸಿಟ್ಸಿಪಾಸ್ ಅವರನ್ನು 4–6, 7–5, 7–5ರಿಂದ ಸೋಲಿಸಿದ್ದರು.

ಕ್ರಿಕೆಟ್ ವಲಯದಲ್ಲಿ ಪಿತೂರಿ: ರಾಮನ್

ನವದೆಹಲಿ (ಪಿಟಿಐ): ವ್ಯವಸ್ಥಿತ ಪಿತೂರಿಯ ಮೂಲಕ ಮಹಿಳಾ ಕ್ರಿಕೆಟ್ ತಂಡದ ಕೋಚ್ ಸ್ಥಾನದಿಂದ ತಮ್ಮನ್ನು ತೆಗೆದುಹಾಕಲಾಗಿದೆ ಎಂದು ಆರೋಪಿಸಿರುವ ಮಾಜಿ ಕೋಚ್ ಡಬ್ಲ್ಯು.ವಿ.ರಾಮನ್, ಇದನ್ನು ಕೊನೆಗಾಣಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ರಾಮನ್ ಬದಲಿಗೆ ರಮೇಶ್ ಪೊವಾರ್ ಅವರನ್ನು ಕೋಚ್ ಆಗಿ ನೇಮಕ ಮಾಡಲು ಬಿಸಿಸಿಐ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಗುರುವಾರ ನಿರ್ಧರಿಸಿತ್ತು. ಇದು ಶುಕ್ರವಾರ ವಿವಾದದ ಸ್ವರೂಪ ಪಡೆದುಕೊಂಡಿತ್ತು. ರಾಮನ್ ಅವರಿಗೆ ಅವಕಾಶ ಕೊಡದೇ ಇರಲು ಕೆಲವರ ವೈಯಕ್ತಿಕ ಹಿತಾಸಕ್ತಿ ಕಾರಣ ಎಂಬ ಆರೋಪ ಕೇಳಿಬಂದಿತ್ತು.

ಇದರ ಬೆನ್ನಲ್ಲೇ ಸಂಜೆ ವೇಳೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಅವರಿಗೆ ರಾಮನ್ ಪತ್ರ ಬರೆದಿದ್ದರು. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರಿಗೂ ಅದರ ಪ್ರತಿ ಕಳುಹಿಸಿದ್ದರು. ಪಿತೂರಿಯ ಬಗ್ಗೆ ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ ಎಂಬ ವಿಷಯ ಶನಿವಾರ ಬಹಿರಂಗಗೊಂಡಿದೆ. ತರಬೇತಿಯ ಗುಣಮಟ್ಟ ನಿರೀಕ್ಷೆಗೆ ತಕ್ಕಂತೆ ಇಲ್ಲ ಎಂಬುದನ್ನು ಬಿಟ್ಟು ಬೇರೆ ಯಾವುದೇ ಕಾರಣಕ್ಕೆ ತಮ್ಮನ್ನು ತೆಗೆದುಹಾಕಿದ್ದರೆ ಅದಕ್ಕಿಂತ ದೊಡ್ಡ ಪ್ರವಾದ ಬೇರೊಂದಿಲ್ಲ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.



ಡಬ್ಲ್ಯು.ವಿ.ರಾಮನ್ –ಪಿಟಿಐ ಚಿತ್ರ

'ನಾನು ತರಬೇತಿ ನೀಡುವ ರೀತಿ ಭಿನ್ನ ಅಗಿರಬಹುದು. ಇದನ್ನೇ ದೊಡ್ಡದು ಮಾಡಿ ಸಂಬಂಧಪಟ್ಟವರ ಗಮನ ಸೆಳೆದಿರುವ ಸಾಧ್ಯತೆ ಇದೆ. ಹೀಗೆ ಮಾಡುವುದನ್ನು ಬಿಟ್ಟು ಅದನ್ನು ಬಿಸಿಸಿಐ ಗಮನಕ್ಕೆ ತಂದಿದ್ದರೆ ಕೋಚ್ ಆಯ್ಕೆಗಾಗಿ ನಾನು ಹಾಕಿದ ಅರ್ಜಿಯ ಮೇಲೆ ಬೇರೆಯೇ ಪರಿಣಾಮ ಉಂಟಾಗುತ್ತಿತ್ತು. ನನ್ನ ಶೈಲಿಯ ಬಗ್ಗೆ ಯಾರಾದರೂ ತಿಳಿಯಲು ಬಯಸಿದರೆ ವಿವರ ನೀಡಲು ಸಿದ್ಧ ಇದ್ದೇನೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ವಿಷಯಕ್ಕೆ ವಿವಾದದ ರೂಪ ಕೊಡುವುದು ನನ್ನ ಉದ್ದೇಶವಲ್ಲ. ಆದರೆ ವಸ್ತುಸ್ಥಿತಿ ಬಿಸಿಸಿಐ ಗಮನಕ್ಕೆ ತರಬೇಕಾದುದು ನೈತಿಕ ಜವಾಬ್ದಾರಿ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಒಂದು ವೇಳೆ ಅಧ್ಯಕ್ಷರು ಬಯಸುವುದಾದರೆ ಈ ಪತ್ರ ನೆರವಿಗೆ ಬರಬಹುದು' ಎಂದು ರಾಮನ್ ಹೇಳಿದ್ದಾರೆ.

'ವೇದಾಗೆ ಸಾಂತ್ವನ ಹೇಳದ ಬಿಸಿಸಿಐ'

ಒಂದು ವಾರದ ಅಂತರದಲ್ಲಿ ತಾಯಿ ಮತ್ತು ಸಹೋದರಿಯನ್ನು ಕಳೆದುಕೊಂಡಿರುವ ವೇದಾ ಕೃಷ್ಣಮೂರ್ತಿ ಅವರಿಗೆ ಸಾಂತ್ವನ ಹೇಳದೆ ಭಾರತ ತಂಡವನ್ನು ಆಯ್ಕೆ ಮಾಡಿದ್ದು ಬೇಸರದ ಸಂಗತಿ ಎಂದು ಆಸ್ಟ್ರೇಲಿಯಾ ಮಹಿಳಾ ತಂಡದ ಮಾಜಿ ನಾಯಕಿ ಲಿಸಾ ಸ್ಥಳೇಕರ್ ಹೇಳಿದ್ದಾರೆ. ಇಂಗ್ಲೆಂಡ್‌ನಲ್ಲಿ ಟೆಸ್ಟ್, ಏಕದಿನ ಮತ್ತು ಟಿ20 ಸರಣಿಗಳನ್ನು ಆಡಲಿರುವ ಭಾರತ ತಂಡವನ್ನು ಶುಕ್ರವಾರ ಸಂಜೆ ಪ್ರಕಟಿಸಲಾಗಿತ್ತು. ಈ ಆಯ್ಕೆ ಪ್ರಕ್ರಿಯೆಗೂ ಮೊದಲು ಬಿಸಿಸಿಐ ವೇದಾ ಅವರೊಂದಿಗೆ ಮಾತುಕತೆಯನ್ನೇ ನಡೆಸಿಲ್ಲ. ಇದು ಸರಿಯಲ್ಲ' ಎಂದರು ಲೀಸಾ.


ಲಿಸಾ ಸ್ಥಳೇಕರ್

ಕ್ರಿಕೆಟ್: ಇಂಗ್ಲೆಂಡ್‌ಗೆ ನ್ಯೂಜಿಲೆಂಡ್ ತಂಡದ ಆಟಗಾರರು

ಆಕ್ಲಂಡ್ (ಪಿಟಿಐ): ಇಂಗ್ಲೆಂಡ್ ಎದುರಿನ ಎರಡು ಪಂದ್ಯಗಳ ಟೆಸ್ಟ್ ಸರಣಿ ಮತ್ತು ಭಾರತದ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಆಡಲು ನ್ಯೂಜಿಲೆಂಡ್ ತಂಡದ ಆಟಗಾರರು ಶನಿವಾರ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು.


ವಿಲಿಯಮ್ಸನ್

ಆತಿಥೇಯ ತಂಡದ ಎದುರಿನ ಸರಣಿಯ ಮೊದಲ ಪಂದ್ಯ ಜೂನ್ 2ರಂದು ಆರಂಭವಾಗಲಿದೆ. ಜೂನ್ 18ರಿಂದ ಸೌತಾಂಪ್ಟನ್‌ನಲ್ಲಿ ಡಬ್ಲ್ಯುಟಿಸಿ ಫೈನಲ್ ನಿಗದಿಯಾಗಿದೆ.

ಐಪಿಎಲ್ ಟೂರ್ನಿಯಲ್ಲಿ ಆಡಿದ್ದ ಕಿವೀಸ್ ತಂಡದ ನಾಯಕ ಕೇನ್ ವಿಲಿಯಮ್ಸನ್, ಕೈಲ್ ಜೆಮೀಸನ್ ಮತ್ತು ಮಿಚೆಲ್ ಸ್ಯಾಂಟ್ನರ್ ಅವರು ಸದ್ಯ ಮಾಲ್ಡಿವ್ಸ್‌ನಲ್ಲಿದ್ದು, ಅಲ್ಲಿಂದಲೇ ಇಂಗ್ಲೆಂಡ್‌ಗೆ ತೆರಳಲಿದ್ದಾರೆ.

ಭಾರತ ಆಟಗಾರರು ಜೂನ್ ಮೊದಲ ವಾರದಲ್ಲಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸುವ ಸಾಧ್ಯತೆಯಿದೆ. ಸದ್ಯ ಅವರು ಮುಂಬೈನಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ.

ಫುಟ್‌ಬಾಲ್: 19ರಂದು ಕತಾರ್‌ಗೆ ಭಾರತ ತಂಡದ ಆಟಗಾರರು


ನವದೆಹಲಿ (ಪಿಟಿಐ): 2022ರ ವಿಶ್ವಕಪ್ ಅರ್ಹತಾ ಪಂದ್ಯಗಳಿಗಾಗಿ ಸಿದ್ಧತೆ ನಡೆಸಲು ಭಾರತ ಫುಟ್‌ಬಾಲ್ ತಂಡವು ಇದೇ 19ರಂದು ಕತಾರ್‌ಗೆ ತೆರಳಲಿದೆ. ಜೂನ್ 3ರಿಂದ ನಡೆಯುವ ಪಂದ್ಯಗಳಿಗೆ ತಾಲೀಮು ನಡೆಸಲು ಭಾರತದ ಆಟಗಾರರಿಗೆ ಕತಾರ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಸಲ್ಲಿಸಿದ ಮನವಿಗೆ ಆ ರಾಷ್ಟ್ರವು ಸ್ಪಂದಿಸಿದೆ.

ಆಟಗಾರರಿಗೆ 10 ದಿನಗಳ ಕ್ವಾರಂಟೈನ್ ಅವಧಿಯಿಂದ ವಿನಾಯಿತಿ ನೀಡಬೇಕೆಂಬ ಮನವಿಗೂ ಕತಾರ್ ಒಪ್ಪಿದೆ. ಭಾರತ ತಂಡವು ವಿಶ್ವಕಪ್ ಅರ್ಹತೆಯಿಂದ ಈಗಾಗಲೇ ಹೊರಬಿದ್ದಿದೆ. ಆದರೆ 2023ರ ಏಷ್ಯಾಕಪ್ ಟೂರ್ನಿಯಲ್ಲಿ ಸ್ಥಾನ ಪಡೆಯಲು ಈ ಪಂದ್ಯಗಳನ್ನು ಆಡಲಿದೆ.

ಎಎಫ್‌ಸಿ ಕಪ್: ಕಿರಣ ಕುಲಕರ್ಣಿ ಡೋಪಿಂಗ್ ಅಧಿಕಾರಿ

ಬೆಂಗಳೂರು: ಜೋರ್ಡಾನ್‌ನ ಅಮಾನ್‌ನಲ್ಲಿ ಇದೇ 21ರಿಂದ ನಡೆಯಲಿರುವ ಎಎಫ್‌ಸಿ ಕಪ್ ಗುಂಪು ಹಂತದ ಟೂರ್ನಿಯಲ್ಲಿ ಡೋಪಿಂಗ್ ಅಧಿಕಾರಿಯಾಗಿ ಕ್ರೀಡಾವೈದ್ಯ, ಧಾರವಾಡದ ಕಿರಣ ಕುಲಕರ್ಣಿ ಅವರನ್ನು ನೇಮಕ ಮಾಡಲಾಗಿದೆ. ಸೋಮವಾರ ಅವರು ಕರ್ತವ್ಯಕ್ಕೆ ಹಾಜರಾಗುವರು.

ಈ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ ತಾಂತ್ರಿಕ ಅಧಿಕಾರಿಗಳ ಪೈಕಿ ಭಾರತದ ಏಕೈಕ ವ್ಯಕ್ತಿ ಕಿರಣ ಕುಲಕರ್ಣಿ. ಜೋರ್ಡಾನ್‌ನಿಂದ ಇಬ್ಬರು, ಇರಾನ್, ಶ್ರೀಲಂಕಾ, ಕತಾರ್ ಮತ್ತು ಫಿಲಿಪ್ಪೀನ್ಸ್‌ನಿಂದ ತಲಾ ಒಬ್ಬರು ನೇಮಕವಾಗಿದ್ದಾರೆ.


ಕಿರಣ ಕುಲಕರ್ಣಿ

28ರಂದು ಜಿಎಸ್‌ಟಿ ಮಂಡಳಿ ಸಭೆ

ಕೋವಿಡ್ ಲಸಿಕೆ, ಆಕ್ಸಿಜನ್ ಕಾನ್ಸನ್‌ಟ್ರೇಟರ್ ತೆರಿಗೆ ದರ ಕುರಿತು ಚರ್ಚೆ ಸಾಧ್ಯತೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯು ಇದೇ ತಿಂಗಳ 28ರಂದು ಸಭೆ ಸೇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ. ಕೋವಿಡ್‌ಗೆ ಸಂಬಂಧಿಸಿದ ಔಷಧಗಳು, ಆಕ್ಸಿಜನ್ ಕಾನ್ಸನ್‌ಟ್ರೇಟರ್ ಮತ್ತು ಲಸಿಕೆ ಮೇಲಿನ ತೆರಿಗೆ ದರಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಎಸ್‌ಟಿ ವ್ಯವಸ್ಥೆ ಯಿಂದ ರಾಜ್ಯಗಳಿಗೆ ಆಗಲಿರುವ ವರಮಾನ ಕೊರತೆಯನ್ನು ಯಾವ ರೀತಿ ತುಂಬಿಕೊಡಬಹುದು ಎನ್ನುವುದೂ ಚರ್ಚೆಯ ಮುಖ್ಯ ವಿಷಯ ಆಗಿರುವ ಸಾಧ್ಯತೆ ಇದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನೇತೃತ್ವದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಯಲಿದೆ.

ಜಿಎಸ್‌ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ಮೂರು ತಿಂಗಳಿಗೊಮ್ಮೆ ಮಂಡಳಿಯು ಸಭೆ ಸೇರುವುದು ಕಡ್ಡಾಯ. ಆದರೆ, ಅಕ್ಟೋಬರ್ 12ರ ಬಳಿಕ ಇದುವರೆಗೂ ಒಂದೇ ಒಂದು ಸಭೆ ನಡೆದಿಲ್ಲ. ಈ ಕುರಿತು ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ರಾಜ್ಯಗಳು ಈಚೆಗಷ್ಟೇ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದವು. ತುರ್ತು ಸಭೆ ಕರೆಯುವಂತೆ ಪಶ್ಚಿಮ ಬಂಗಾಳದ ಹಣಕಾಸು ಸಚಿವ ಅಮಿತ್ ಮಿತ್ರಾ ಅವರು ಸಚಿವೆ ನಿರ್ಮಲಾ ಅವರಿಗೆ ಪತ್ರವನ್ನೂ ಬರೆದಿದ್ದರು.

ಪರಿಹಾರ: ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಬಾಕಿಯಾಗಿ ಕೇಂದ್ರ ಸರ್ಕಾರವು ಹಿಂದಿನ ಹಣಕಾಸು ವರ್ಷದಲ್ಲಿ ₹ 70 ಸಾವಿರ ಕೋಟಿ ಬಿಡುಗಡೆ ಮಾಡಿದೆ. ವಿಶೇಷ ಸಾಲ ವ್ಯವಸ್ಥೆ ಅಡಿ ಬಿಡುಗಡೆ ಮಾಡಿರುವ ₹ 1.10 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತ ಇದಾಗಿದೆ.

2020–21ನೇ ಹಣಕಾಸು ವರ್ಷಕ್ಕೆ ಕೇಂದ್ರವು ಇನ್ನೂ ₹ 63 ಸಾವಿರ ಕೋಟಿ ಮೊತ್ತವನ್ನು ರಾಜ್ಯಗಳಿಗೆ ನೀಡಬೇಕಿದೆ.

ಸ್ಟಾರ್ ಯೂನಿಯನ್ ಡಾಯ್–ಇಚಿ ಲೈಫ್: ಅಭಯ್ ತಿವಾರಿ ಹೊಸ ಸಿಇಒ

ಬೆಂಗಳೂರು: ಸ್ಟಾರ್ ಯೂನಿಯನ್ ಡಾಯ್–ಇಚಿ ಲೈಫ್ ಇನ್ಶುರೆನ್ಸ್ ಕಂಪನಿಯ (ಎಸ್‌ಯುಡಿ ಲೈಫ್) ಹೊಸ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ಅಭಯ್ ತಿವಾರಿ ಅವರನ್ನು ನೇಮಿಸಲಾಗಿದೆ.

ಈ ನೇಮಕವು ಶನಿವಾರದಿಂದಲೇ ಜಾರಿಗೆ ಬಂದಿದೆ. ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಮತ್ತು ಜಪಾನ್‌ನ ಡಾಯ್–ಇಚಿ ಲೈಫ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಕಂಪನಿಗಳ ಜಂಟಿ ಕಂಪನಿ ಇದಾಗಿದೆ.


ಅಭಯ್ ತಿವಾರಿ

ಆಗಸ್ಟ್ 15ಕ್ಕೆ ಸಿಂಪಲ್ ಎನರ್ಜಿ ಕಂಪನಿಯ ಮೊದಲ ಇ–ಸ್ಕೂಟರ್

ಮುಂಬೈ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳನ್ನು (ಇವಿ) ತಯಾರಿಸುವ ನವೋದ್ಯಮ ಸಿಂಪಲ್ ಎನರ್ಜಿ, ಆಗಸ್ಟ್ 15ರಂದು ತನ್ನ ಮೊದಲ ಇ–ಸ್ಕೂಟರ್ ಬಿಡುಗಡೆ ಮಾಡುವುದಾಗಿ ಶನಿವಾರ ಹೇಳಿದೆ.

ಇ–ಸ್ಕೂಟರ್ ಬೆಲೆಯು ₹ 1.10 ಲಕ್ಷದಿಂದ ₹ 1.20 ಲಕ್ಷದವರೆಗೆ ಇರಲಿದೆ ಎಂದು ಕಂಪನಿ ತಿಳಿಸಿದೆ. ಹೊಸ ಇ–ಸ್ಕೂಟರ್ 4.8 ಕಿಲೋ ವಾಟ್ ಲೀಥಿಯಂ ಅಯಾನ್ ಬ್ಯಾಟರಿ ಹೊಂದಿರಲಿದ್ದು, ಇಕೊ ಮೋಡ್‌ನಲ್ಲಿ 240 ಕಿ.ಮೀ ಮತ್ತು ಗರಿಷ್ಠ ವೇಗ ಗಂಟೆಗೆ 100 ಕಿ.ಮೀ ಇರಲಿದೆ ಎಂದು ಹೇಳಿದೆ.

ಮೊದಲ ಹಂತದಲ್ಲಿ ಬೆಂಗಳೂರು ಮಾರುಕಟ್ಟೆಯನ್ನು ಪ್ರವೇಶಿಸಲಿದೆ. ಬಳಿಕ ಚೆನ್ನೈ ಮತ್ತು ಹೈದರಾಬಾದ್ ನಗರಗಳಲ್ಲಿ ಬಿಡುಗಡೆ ಆಗಲಿದೆ. ನಂತರ ಬೇರೆ ನಗರಗಳನ್ನೂ ಪ್ರವೇಶಿಸುವ ಯೋಜನೆಯನ್ನು ಹೊಂದಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ತಯಾರಿಕಾ ಘಟಕವನ್ನಷ್ಟೇ ಅಲ್ಲದೆ, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನೂ ಬೆಂಗಳೂರಿನಲ್ಲಿ ಹೊಂದಿದೆ. ಈ ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 112 ಕೋಟಿ ಬಂಡವಾಳ ಸಂಗ್ರಹಿಸಲು ಕಂಪನಿ ಉದ್ದೇಶಿಸಿದೆ. ಸ್ಕೂಟರ್ ಬಿಡುಗಡೆಗೂ ಮುನ್ನವೇ ಬೆಂಗಳೂರಿನಲ್ಲಿ ಚಾರ್ಜಿಂಗ್ ಕೇಂದ್ರಗಳನ್ನೂ ಸ್ಥಾಪಿಸುವ ಆಲೋಚನೆ ಇದೆ ಎಂದೂ ಕಂಪನಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ (ಸಕಲೇಶಪುರ)	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	9000-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340

ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	100-310
ದ್ವಿತಳಿ (ಬಿ.ವಿ)	211-399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10350	10150	10200	145 ಸೆಂಟ್ಸ್
ಎಸಿ	4145	3900	3900	
ಆರ್‌ಪಿ	5000	5000	5125	ಲಂಡನ್
ಆರ್‌ಸಿ	3000	2900	2930	1460 ಡಾಲರ್ಸ್

ಚಿನ್ನದ ಬಾಂಡ್: ನೀಡಿಕೆ ಬೆಲೆ ಗ್ರಾಂಗೆ ₹ 4,777

ಮುಂಬೈ (ಪಿಟಿಐ): 2021–22ನೇ ಸಾಲಿನ ಚಿನ್ನದ ಬಾಂಡ್‌ನ ಮೊದಲ ಕಂತು ಸೋಮವಾರ ಆರಂಭವಾಗಲಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿಕೆ ಬೆಲೆಯನ್ನು ಪ್ರತಿ ಗ್ರಾಂಗೆ ₹ 4,777ರಷ್ಟು ನಿಗದಿಪಡಿಸಿದೆ.

ಬಾಂಡ್ ಖರೀದಿಸಲು ಆನ್‌ಲೈನ್ ಮೂಲಕ ಹಣ ಪಾವತಿಸುವವರಿಗೆ ಪ್ರತಿ ಗ್ರಾಂಗೆ ₹ 50ರಂತೆ ವಿನಾಯಿತಿ ಸಿಗಲಿದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ನೀಡಿಕೆ ಬೆಲೆ ₹ 4,727 ಇರಲಿದೆ.

ಸೋಮವಾರದಿಂದ ಶುಕ್ರವಾರದವರೆಗೆ ಬಾಂಡ್ ಖರೀದಿಸಲು ಅವಕಾಶ ಇರಲಿದೆ. ಮೇ 25ರಂದು ಬಾಂಡ್ ವಿತರಣೆ ಆಗಲಿದೆ.

ಬ್ಯಾಂಕುಗಳು (ಕಿರು ಹಣಕಾಸು ಬ್ಯಾಂಕ್ ಮತ್ತು ಪೇಮೆಂಟ್ ಬ್ಯಾಕ್ಸ್ ಹೊರತುಪಡಿಸಿ), ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ.

ಕನಿಷ್ಠ ಹೂಡಿಕೆ 1 ಗ್ರಾಂ ಇರಲಿದೆ ಎಂದು ಸಚಿವಾಲಯವು ತಿಳಿಸಿದೆ. ಪ್ರಕಟಣೆಯ ಪ್ರಕಾರ, ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ.

ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಒಟ್ಟು ಆರು ಕಂತುಗಳಲ್ಲಿ ಚಿನ್ನದ ಬಾಂಡ್ ವಿತರಣೆ ನಡೆಯಲಿದೆ ಎಂದು ಆರ್‌ಬಿಐ ಹೇಳಿದೆ.



ಮುಂಬೈ ಧಾರಣೆ

ಶೇಂಗಾ 15-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1450 (1450)
ಪಾಮ್ ವಾರದ ಡೆಲಿವರಿ	1390 (1383)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,700 (47,550)
ಬೆಳ್ಳಿ ಕೆ.ಜಿ 70,600 (70,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1490 (1490)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1400(1385)